ಸಂತಾಪ ಸೂಚನೆ

ಅಧ್ಯಕ್ಷರು : ಸನ್ಮಾನ್ಯ ಸದಸ್ಯರೇ, ಸಾವು ಎಲ್ಲೇ ಸಂಭವಿಸಿದರೂ ಕೂಡ ಬಹಳ ನೋವಿನ ವಿಷಯ. ಶಾಶ್ವಾತವಾಗಿ ಅವರನ್ನು ನಮ್ಮಿಂದ ದೂರ ಕಳುಹಿಸತಕ್ಕಂಥ ಒಂದು ಸನ್ನಿವೇಶ. ಅದರಲ್ಲೂ ಈ ರೀತಿ ಆಕಸ್ಮಿಕಗಳು ನಡೆದು ಅನಿರೀಕ್ಷಿತವಾಗಿ ಸಾವಿಗೆ ತುತ್ತಾದಾಗ ಬಹಳ ಮನಸ್ಸಿಗೆ ನೋವಾಗುತ್ತದೆ. ಈ ದಿನ ಪ್ರಾತಃಕಾಲ ಯಲಹಂಕ ಮತ್ತು ಚನ್ನಸಂದ್ರ ಗ್ರಾಮಗಳ ಮಧ್ಯೆ ನಡೆದಿರುವ ಈ ಭೀಕರ ದುರಂತದಲ್ಲಿ ಆಕಸ್ಮಿಕ ಮರಣಕ್ಕೆ ತುತ್ತಾದ ಎಲ್ಲಾ ಗೌರವಾನ್ವಿತ ಜನಗಳ ಜ್ಞಾಪಕಾರ್ಥವಾಗಿ, ಆ ಕುಟುಂಬಗಳಿಗೆ ನಮ್ಮ ಗೌರವವನ್ನು ಸೂಚಿಸುವುದಕ್ಕೆ ಎಲ್ಲಾ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಸೂಚಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

(ಸಭೆಯು ಒಂದು ನಿಮಿಷ ಮೌನವನ್ನಾಚರಿಸಿತು)

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದದ್ದು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ನಾನು ಆಗಲೇ ವ್ಯಕ್ತಪಡಿಸಿದಂಥ ವಿಚಾರಗಳ ಬಗ್ಗೆ ತಾವು ಚಿಂತನೆ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಈ ರಾಜ್ಯಪಾಲರ ಭಾಷಣದ ವ್ಯವಸ್ಥೆಯನ್ನು ತಾವು ಅಧ್ಯಕ್ಷರುಗಳ ಸಮ್ಮೇಳನದಲ್ಲಿ ಈ ಚಿಂತನೆಯನ್ನು ವ್ಯಕ್ತಪಡಿಸಬೇಕು. ಈ ವ್ಯವಸ್ಥೆ ಇರಬೇಕೇ ಬೇಡವೇ ಎನ್ನುವುದನ್ನು ಸಮ್ಮೇಳನವೇ ನಿರ್ಧಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ನಾವು ನಮ್ಮ ರಾಜ್ಯಾಂಗದಲ್ಲಿ ಅನುಸರಿಸುತ್ತಾ ಇರತಕ್ಕದ್ದು, ಮದರ್ ಆಫ್ ದಿ ಪಾರ್ಲಿಮೆಂಟ್ ಬ್ರಿಟನ್ ಬೇಸಿಸ್ ಇರತಕ್ಕದ್ದು. ಅದನ್ನು ನಾವು ವ್ಯತ್ಯಾಸ ಮಾಡುವ ಹಾಗೆಯೇ ಇಲ್ಲ. ಅನಾವಶ್ಯಕವಾಗಿ ಇದರ ಬಗ್ಗೆ ಇಲ್ಲಿ ಚರ್ಚೆ ಬೇಕಾಗಿಲ್ಲ. ಗವರ್ನರ್ ಹುದ್ದೆ ಫಿಗರ್ ಹೆಡ್ ಆದರೂ ಕೂಡ ನಮ್ಮ ಪದ್ಧತಿ ಮದರ್ ಆಫ್ ಪಾರ್ಲಿಮೆಂಟ್ ಬ್ರಿಟನ್ ಪದ್ಧತಿ. ಅಲ್ಲಿ ಏನು ಅನುಸರಿಸಿಕೊಂಡು ಬಂದಿದ್ದಾರೋ ಆ ಪ್ರಕಾರ ಮಾಡುತ್ತಿದ್ದೇವೆ. ಇದು ಸರ್ಕಾರದ ಸ್ಟೇಟ್ಮೆಂಟ್, ಗವರ್ನರ್ದ್ದು ಅಲ್ಲ. ಗವರ್ನರ್ ಮಾಡುವ ಹಾಗೆ ಇಲ್ಲ. ಗವರ್ನರ್ ಸರ್ಕಾರದ ಪರವಾಗಿ ಸರ್ಕಾರದ ಪಾಲಿಸಿಯನ್ನು ಹೇಳುತ್ತಾರೆ. ಅದು ವ್ಯತ್ಯಾಸ ಆಗತಕ್ಕ ಅವಕಾಶ ಇಲ್ಲ. ಅದರ ಮೇಲೆ ಅನಾವಶ್ಯಕವಾಗಿ ಸುಮ್ಮನೇ ಚರ್ಚೆ ಮಾಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅನಾವಶ್ಯಕ, ಕಾಲ ಕಳೆಯುವುದು ನಾವು ನೀವು 1967ರಿಂದ ಇಲ್ಲಿ ಇದ್ದೇವೆ. ಅವಶ್ಯಕತೆ ಯಾವುದು, ಅನಾವಶ್ಯಕತೆ ಯಾವುದು ಎನ್ನುವುದನ್ನು ನಿರ್ಧಾರ ನಾವು ಎಷ್ಟೋ ಸಾರಿ ಮಾಡಿದ್ದೇವೆ. ನಮಗೂ ನಿಮಗೂ ಗೊತ್ತಿದೆ. ಒಂದು ಅವಶ್ಯಕತೆ ಇರುವುದು ಅನಾವಶ್ಯಕತೆ ಯಾವುದು ಎಂಬುದನ್ನು ನಾವು ಇಲ್ಲಿ ತೀರ್ಮಾನ ಮಾಡಿಕೊಂಡು ಬರುವುದಕ್ಕೆ ಆಗುವುದಿಲ್ಲ. ಯಾವುದು ಅವಶ್ಯಕತೆ, ಯಾವುದು ಅನಾವಶ್ಯಕತೆ ಏನೇನು ಹೇಳಬೇಕು ಎನ್ನುವುದನ್ನು ನಾವು ಮಾಡುವುದಕ್ಕೆ ಆಗುವುದಿಲ್ಲ. ಹೇಳತಕ್ಕದ್ದನ್ನು ಕೆಲವು ಹೇಳಲೇಬೇಕು, ಅದು ಅವಶ್ಯಕತೆ ಇದ್ದರೆ ತಾವು ತೆಗೆದುಕೊಳ್ಳಬಹುದು, ಅನಾವಶ್ಯಕತೆ ಇದ್ದರೆ ಬಿಟ್ಟುಬಿಡಬಹುದು. ಅದು ನಾನು ಹೇಳತಕ್ಕ ಪದಗಳು ಈ ಕಡತದಲ್ಲಿ ಆದರೂ ಹೋಗಲಿ. ಎಲ್ಲೂ ಹೋಗದೇ ಇದ್ದರೂ ಕಡತಕ್ಕೆ ಆದರೂ ಹೋಗಲಿ ಎನ್ನುವ ನಿರ್ಧಾರದಲ್ಲಿ ಇದನ್ನು ನಾನು ಹೇಳುತ್ತಿದ್ದೇನೆ. ನಾನೇನೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಇದನ್ನು ನಾನು

ತಮ್ಮ ಗಮನಕ್ಕೂ ತಂದಿದ್ದೇನೆ, ಹಾಗೂ ಅನೇಕ ಬಾರಿ ಹೇಳಿದ್ದೇನೆ. ಇದು ಪ್ರಶ್ನೆ. ನಾನು ಎರಡನೆಯ ಬಾರಿ ಅಂದರೆ 1967-72ರ ನಂತರ ಮತ್ತೆ ಈಗ ಚಾಮರಾಜನಗರ ಕ್ಷೇತ್ರದಿಂದ ಎರಡನೇ ಬಾರಿಗೆ ಆಯ್ಕೆ ಆಗಿದ್ದೇನೆ. ಆ ಎರಡನೇ ಬಾರಿಗೆ ಆಯ್ಕೆ ಮಾಡಿದಂತಹ ಚಾಮರಾಜನಗರಟ ಜನತೆಗೆ ನಾನು ಈ ಮೂಲಕ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಅದರಲ್ಲಿ ಒಂದು ಸತ್ಯ ಇದೆ. ಈ ರಾಜ್ಯದ ಬಹುತೇಕ ಪತ್ರಿಕೆಗಳಲ್ಲಿ ವಾಟಾಳ್ ನಾಗರಾಜ್ ಸತ್ತೇ ಹೋದ ಎಂದು ಬರೆದಿದ್ದರು. ಅಂದರೆ ಸೋತು ಹೋದ, ಇನ್ನು ಬರುವುದೇ ಇಲ್ಲ ಎಂದು. ನನಗೆ ಆಶ್ಚರ್ಯ, ಈ ತರಹ ಬರೆದರಲ್ಲಾ ಎಂದು, ಅವರ ಮೇಲೆ ಪ್ರೀತಿ, ವಿಶ್ವಾಸ, ನಾನು ಬದುಕಿದ್ದರೂ ಇಲ್ಲವೇ ಇಲ್ಲ ಎನ್ನತಕ್ಕ ವರದಿಗಳು ಎಲ್ಲಾ ಪತ್ರಿಕೆಗಳೂ ಬರೆದವು. ಆದರೆ ವಸ್ತುಸ್ತಿತಿಯೇ ಬೇರೆ, ವಿಮರ್ಶೆಯೇ ಬೇರೆ. ವಸ್ತುಸ್ಥಿತಿ ಪ್ರಾಮಾಣಿಕವಾಗಿ ಜನ ನನ್ನನ್ನು ಆಯ್ಕೆ ಮಾಡಿ ಕಳುಹಿಸಿದರು. ಆದ್ದರಿಂದ ವಿಮರ್ಚೆ ಇದರ ಬಗ್ಗೆ ಅಪಾರವಾದ ಚರ್ಚೆ ಮಾಡುವುದಕ್ಕೆ ಹೋದರೆ ಏನಾಗುತ್ತದೆ?

ಇಲ್ಲಿ ಕೆಲವರು ಸೋಲುವವರು ಗೆದ್ದಿದ್ದಾರೆ. ಗೆಲ್ಲುವವರು ಸೋತಿದ್ದಾರೆ. ಈ ತರಹ ವಿಮರ್ಷೆಗಳು. ಅದರಿಂದ ನನಗೆ ಅನಿಸುತ್ತದೆ. ವಿಮರ್ಶೆಯನ್ನು ಮೀರಿ ಅಲ್ಲಿನ ಮತದಾರರು ಮತಗಳನ್ನು ಚಲಾಯಿಸಿ ಈ ಸದನಕ್ಕೆ ಕಳುಹಿಸಿದ್ದಕ್ಕೋಸ್ಕರವಾಗಿ ನಾನು ಚಾಮರಾಜನಗರದ ಮತದಾರರನ್ನು ಅತ್ಯಂತ ಕಳಕಳಿಯಿಂದ ಈ ಸಭೆಯ ಮೂಲಕ ಅದರ ಪಾದಗಳಿಗೆ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಪ್ರಾಮಾಣಿಕವಾಗಿ ಅವರು ನನ್ನನ್ನು ಕಳುಹಿಸಿದ್ದಾರೆ. ನಾನು ಎಷ್ಟೋ ಪತ್ರಿಕೆಗಳನ್ನು ಓದಿದ್ದೇನೆ. ಅದರಲ್ಲಿ ಬರೆದಿರುವುದನ್ನು ಓದಿದರೆ, ನಮಗೆ ಏನಾದರೂ ರಕ್ತದ ಒತ್ತಡ ಇದ್ದರೆ ನಾವು ಹಾಗೆಯೇ ಬಿದ್ದು ಹೋಗಿ ಬಿಡಬೇಕು. ನಾನು ಪತ್ರಿಕೆ ನೋಡಿದೆ, ನನ್ನದು ಇಲ್ಲವೇ ಇಲ್ಲ, ನನ್ನದು ಮೂರು ಅಥವಾ ನಾಲ್ಕನೇ ಸ್ಥಾನ. ಮತ್ತು ಧರ್ಮಸಿಂಗ್ ಹಾಗೂ ಖರ್ಗೆಯವರು ಬರುವುದಕ್ಕೆ ಸಾಧ್ಯವೇ ಇಲ್ಲ ಎಂದು ಪತ್ರಿಕೆಯ ಮುಖಪುಟದಲ್ಲಿ ಬಂತು. ನಾನು ನೋಡಿದೆ ಬಹಳ ಜನಕ್ಕೆ ಹೀಗೆ ಆಯಿತು ಪರಿಸ್ಥಿತಿ ಎಂದು ಈ ರೀತಿಯ ವಿಮರ್ಶೆಗಳು. ಇದು ಒಂದೊಂದು ಸಾರಿ ವಿಮರ್ಶೆ ಬಗ್ಗೆ......

ಶ್ರೀ ಸಿ.ಎಂ. ಉದಾಸಿ : ನಮ್ಮಲ್ಲಿ ಗಾದೆ ಮಾತು ಇದೆ. ಚುನಾವಣೆಯಲ್ಲಿ ಗೆದ್ದವನು ಸೋತ, ಸೋತವನು ಸತ್ತ ಎಂದು. ಅದಕ್ಕೇನಾದರೂ ಆ ಅರ್ಥದಲ್ಲಿ ಮಾತನಾಡಿದರೇನೋ? ತಾವು ಗೆದ್ದು ಬಂದಿರುವುದು ನಮಗೆಲ್ಲಾ ಹೆಮ್ಮೆ ಆಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಅದರ ಬಗ್ಗೆ ವಿಶ್ಲೇಷಣೆ ಮಾಡದೇ ಮುಂದೆ ವಿಷಯಕ್ಕೆ ಬಂದರೆ ಚೆನ್ನಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ನನಗೆ ಏತಕ್ಕೆ ಭಯ ಆಯಿತು ಎಂದರೆ ಹೇಳಿದರೆ ಸುಮ್ಮನೇ ಒಂದು ಸತ್ಯವನ್ನು ನಿಮಗೆ ಹೇಳಿ ಬಿಡೋಣ. ನಾವು ಗೆಲ್ಲುತ್ತೇವೆ, ಗೆಲ್ಲುತ್ತೇವೆ ಎಂದು ಬರೆದರೆ ಒಂದಷ್ಟು ಹಣಕಾಸು ಕೊಡುತ್ತಾರೆ, ಚುನಾವಣೆಗಾದರೂ ಒಂದು ಸ್ವಲ್ಪ ಅನುಕೂಲ. ಸೋಲುತ್ತೇವೆಂದರೆ ಒಬ್ಬರೂ ಬರುವುದಿಲ್ಲ ಹತ್ತಿರಕ್ಕೆ. ಅದರಲ್ಲಿ ಪತ್ರಿಕೆಗಳ ಮೂಲಕ ಸೋಲುತ್ತಾರೆಂದು ಬಂದರೆ ದೂರವಾಣಿ ಮೂಲಕ ನಾವು ಎಲ್ಲಿದ್ದೇವೆಂದು ಯಾರಾದರೂ ಕೇಳಿದರೆ ಕೆಲವರು ಇಲ್ಲವೆಂದು ಅನಿಸಿಕೊಳ್ಳುತ್ತಾರೆ. ಗೆಲ್ಲುತ್ತೇವೆ ಎಂದರೆ ಹಿಂದೆ ಮುಂದೆ ಲೈನಾಗಿ ಇರುತ್ತಾರೆ. ನಿಮಗೆ ಏನು ಬೇಕು ಸ್ವಾಮಿ ನೋಟೀಸ್ ಮಾಡಿಸಿಕೊಡಬೇಕೇ. ಪೋಸ್ಟರ್ ಮಾಡಿಸಿಕೊಡಬೇಕಾಗಿ ಕಾರ್ ಬೇಕಾ ಎಂದು. ನನಗೆ ಮುಗಿಸೇ ಬಿಟ್ಟರು ಇವರು. ಯಾರಾದರೂ ನೋಟೀಸ್ ಗೀಟೀಸು ಕಾರ್ ಮಾಲೀಕರು ಬರುವವರು......

ಅಧ್ಯಕ್ಷರು : ನೀವು ಹೇಳುತ್ತಾ ಹೇಳುತ್ತಾ ಡಾ ಜೀವರಾಜ್ ಅವರ ಕಡೆ ಕೈ ತೋರಿಸುತ್ತಿದ್ದೀರಲ್ಲಾ, ಅವರು ಮಾಡಿದ್ದಾ ಇದನ್ನು?

ಶ್ರೀ ವಾಟಾಳ್ ನಾಗರಾಜ್ : ಜೀವರಾಜ್ ನನ್ನ ಆತ್ಮೀಯ ಮಿತ್ರರು.

ಅಧ್ಯಕ್ಷರು : ನೀವು ಕೈ ಆ ಕಡೆ ತೋರಿಸಿದಾಗ ನನಗೆ ಅನುಮಾನ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಜೀವರಾಜ್, ನಿಮಗೆಗಾಗಲೀ, ನಂಜೇಗೌಡರಿಗಾಗಲೀ, ಸಿದ್ದರಾಮಯ್ಯನವರಿಗಾಗಲೀ ಈ ಸದನದಲ್ಲಿ ನಾನು ಬರಬಾರದು ಎನ್ನತಕ್ಕ ಭಾವನೆ ಇಲ್ಲ, ವಾಟಾಳ್ ನಾಗರಾಜ್ ಇರಬೇಕು ಎನ್ನುವುದು ಎಲ್ಲರ ಭಾವನೆ ಇದೆ. ಆದರೆ, ಪತ್ರಿಕೆಗಳು ನನ್ನಂತಹವರಿಗೆ ಹೇಗಾದರೂ ರಕ್ಷಣೆ ಕೊಡದೆ ಹೋದರಲ್ಲಾ ಎನ್ನುವ ನೋವು. ಪತ್ರಿಕೆಯವರಿಗೆ ಅವರದೇ ಆದ ಸ್ವಾತಂತ್ರ್ಯವಿದೆ. ಅವರು ಯಾವುದೇ ವಿಷಯವನ್ನು ಮುಖಪುಟದಲ್ಲಿ ಹಾಕಬಹುದು, ಕೊನೇ ಪುಟದಲ್ಲಿ ಹಾಕಬಹುದು. ಅದರ ಬಗ್ಗೆ ನಾನು ಚರ್ಚಿಸುವುದಕ್ಕೆ ಹೋಗುವುದಿಲ್ಲ, ಆದರೆ, ಯಾರು ಮೂರನೇ ಸ್ಥಾನದಲ್ಲಿ ಸೋಲುತ್ತಾರೋ ಅವರನ್ನು ಮೊದಲನೇ ಸ್ಥಾನದಲ್ಲಿ ಹಾಕಿ, ಯಾರು ಮೊದಲನೇ ಸ್ಥಾನದಲ್ಲಿ ಗೆಲ್ಲುತ್ತಿದ್ದರೋ ಅವರು ಕೊನೆಗೆ ಸೋತು ಕೊನೇ ಸ್ಥಾನದಲ್ಲಿ ನನ್ನನ್ನು ಗೆಲ್ಲಿಸಿದರು. ಇನ್ನು ನಾನೇನು ಮಾಡಬೇಕು? ಸತ್ಯ ಹೇಳೋಣ. ಬೆಳಿಗ್ಗೆ ಎದ್ದು ಯಾರಾದರೊಬ್ಬರಿಗೆ ಫೋನ್ ಮಾಡಲೇಬೇಕು, ಇದು ಮುಚ್ಚುಮರೆಯಿಲ್ಲದೆ ಹೇಳುವ ಮಾತು. ಒಬ್ಬರೂ ಸಿಗಲಿಲ್ಲ, ತಮ್ಮ ಹತ್ತಿರ ನನಗಾದ ನೋವನ್ನು ತೋಡಿಕೊಳ್ಳುತ್ತಿದ್ದೇನೆ. ನಾನು ಎಂತಹ ಕಷ್ಟದ ಪರಿಸ್ಥಿತಿಯಲ್ಲಿದ್ದೆ ಎಂದರೆ, ನನ್ನನ್ನು ಪ್ರೀತಿಯಿಂದ ಬೆಳೆಸಿದ, ಹಗಲು-ರಾತ್ರಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದ, ಬೆಳಿಗ್ಗೆ ಎದ್ದರೆ ದೇವರಿಗೆ ಪೂಜೆ ಮಾಡಿ ನನ್ನನ್ನು ಹರಸುತ್ತಿದ್ದ ನನ್ನ ತಾಯಿಯನ್ನು ಕಳೆದುಕೊಂಡೆ. ಚುನಾವಣೆಗೆ ಇನ್ನು ಹದಿನೈದು ದಿವಸಗಳಿರುವಾಗ ಕೊನೇ ಗಳಿಗೆಯಲ್ಲಿ ನನ್ನ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದೆ. ನನ್ನ ತಾಯಿಯನ್ನು ಕಳೆದುಕೊಂಡಿದ್ದು ಒಂದು ಬಾರಿ ದುರಂತ. ಈ ರೀತಿಯಾದರೆ ಮತ್ತೊಂದು ದುರಂತ ನನ್ನ ಮುಂದಿನ ಭವಿಷ್ಯವೇನು ಎನ್ನುವ ಚಿತ್ರದಲ್ಲಿ ನಾನಿದ್ದಾಗ ಒಂದು ದಿವಸ ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ, ಓದುವುದಕ್ಕೆ ಹೋಗಲಿಲ್ಲ, ಪ್ರತಿ ಅಕ್ಷರ ಓದಿದರೆ ಕಷ್ಟವಾಗುತ್ತಿತ್ತು. ನನಗೆ ಒಬ್ಬರು ಹೇಳಿದರು. ನಿಮ್ಮ ಕ್ಷೇತ್ರದಲ್ಲಿ ಯಾರು ಸೋಲುತ್ತಿದ್ದಾರೋ ಅವರನ್ನು ಇಂದ್ರ-ಚಂದ್ರ ಎಂದು ಹೊಗಳಿ ಬರೆದಿದ್ದಾರೆ, ನಿಮ್ಮದೇನೂ ಇಲ್ಲ ಎಂದರು. ಈ ಪರಿಸ್ಥಿತಿ ಹೀಗಾದರೆ ಇನ್ನು ಚುನಾವಣಾ ವಿಮರ್ಶೆ ಮತ್ತೊಂದು ರೀತಿಯದು. ಈ ವಿಮರ್ಶೆಗಳ ಮೇಲೆ ಸರ್ಕಾರಗಳು ಬದಲಾವಣೆಯಾಗುವುದು ಅಥವಾ ಪಕ್ಷಗಳು ಬದಲಾವಣೆಯಾಗುವುದಾದರೆ, ಈ ದಿಶೆಯಲ್ಲಿ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಪತ್ರಿಕೆಗಳು ವಿಮರ್ಶೆ ಮಾಡಿದವು. ಏನೆಂದರೆ, ಸುಮಾರು 130ರಿಂದ 150 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುತ್ತದೆಂಬುದು. ಈ ವಿಮರ್ಶಾ ವರದಿ ನೋಡಿ ಉಳಿದ ಪಕ್ಷದವರಿಗೆ ನಡುಕ ಹುಟ್ಟಿರಬೇಕು. ಆಗ ನಾನು ಅಂದುಕೊಂಡೆ. ಇದೇನು ವಿಮರ್ಶೆ ಹೀಗೆ ಬಂದಿದೆಯಲ್ಲಾ! ನನಗಂತೂ ವೈಯಕ್ತಿಕವಾಗಿ ಮನಸ್ಸಿಗೆ ಸ್ವಲ್ಪ ನೋವಾಯಿತು. ಆದರೂ ನಾನು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೆ, ನಾನು ನನ್ನ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವುದರಿಂದ ಆ ಕ್ಷೇತ್ರದ ಜನ ನನ್ನನ್ನು ಎಂದಿಗೂ ಬಿಡುವುದಿಲ್ಲವೆನ್ನುವ ಸತ್ಯವನ್ನು ಚುನಾವಣಾ ಫಲಿತಾಂಶದಲ್ಲಿ ಎತ್ತಿ ತೋರಿಸಿದ್ದಾರೆ. ಆದುದರಿಂದ, ಈ ಸದನದ ಮೂಲಕ ನನ್ನ ಕ್ಷೇತ್ರದ ಮತದಾರರಾದ ಪ್ರಜೆಗಳಿಗೆ ಪ್ರಾಮಾಣಿಕವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾಗಿರುವುದು ನನ್ನ ಕರ್ತವ್ಯ. ನನ್ನ ಮಾತುಗಳು ಸದನದ ದಾಖಲೆ ಕಡತಕ್ಕೆ ಹೋಗಲಿ. ಆದರೆ ಅದು ಜನರಿಗೆ ತಲುಪುವುದು, ಬಿಡುವುದು ಬೇರೆ ಪ್ರಶ್ನೆ. ಅದರ ಬಗ್ಗೆ ವಾದ-ವಿವಾದ ಮಾಡಿಕೊಂಡು ಕುಳಿತುಕೊಳ್ಳುವುದು ಬೇಡ. ನನ್ನ ಹಣೆಬರಹ ನಿರ್ಧಾರವಾಗಿದೆ. ಸುಮಾರು 35

ವರ್ಷಗಳಿಂದಲೂ ಒಂದೇ ತತ್ತ್ವ, ಸಿದ್ಧಾಂತ ನೀತಿ, ಕನ್ನಡ, ಕರ್ನಾಟಕ, ಕನ್ನಡಭಾಷೆ, ಕನ್ನಡ ಜನ ಎನ್ನುವ ಗುಂಗಿನಲ್ಲಿಯೇ ಇದ್ದೇನೇ ವಿನಹ ಅತ್ತ, ಇತ್ತ ಅಲ್ಲಾಡಿಲ್ಲ. ಡಾ: ಜೀವರಾಜ್ ಅಳ್ವರವರು ನನ್ನನ್ನು ಒಂದು ಹತ್ತು ಬಾರಿಯಾದರೂ ಸಮ್ಮೋಹನಾಸ್ತ್ರ ಬಳಸಿ ನನ್ನನ್ನು ಬದಲಾವಣೆ ಮಾಡಬೇಕೆಂಬು ಪ್ರಯತ್ನ ಮಾಡಿದರು, ಆಗಲಿಲ್ಲ. ಹಾಗೆಯೇ ಗುಂಡೂರಾವ್ ರವರು, ದೇವರಾಜ ಅರಸುವರರು ಇನ್ನೂ ಅನೇಕರು ಪ್ರಯತ್ನ ಮಾಡಿದರು, ಯಾವುಮೂ ಸಾಧ್ಯವಾಗಲಿಲ್ಲ.

ಡಾ: ಜೀವರಾಜ್ ಆಳ್ವ : ನನಗೆ ಗೊತ್ತಿರುವಂತೆ ವಾಟಾಳ್ ನಾಗರಾಜ್‌ರವರು ಇನ್ನೂ ನಾಲ್ಕು ಬಾರಿ ಚುನಾವಣೆಯಲ್ಲಿ ಗೆದ್ದು ಬರುತ್ತಾರೆ, ಶಾಸಕರಾಗಿರುತ್ತಾರೆ. ಆದರೆ, ನನ್ನ ಆಸೆ ಏನೆಂದರೆ, ಅವರು ಬರೀ ಶಾಸಕರಾಗಿರದೆ ಒಂದು ಸಾರಿ ಮಂತ್ರಿಯಾಗಬೇಕೆಂಬುದು.

ಅಧ್ಯಕ್ಷರು : ನಿಮ್ಮ ಹತ್ತಿರ ಅಸ್ತ್ರವಿರುವುದು ಗೊತ್ತಿತ್ತು. ಆದರೆ, ಸಮ್ಮೋಹನಾಸ್ತ್ರ ಇರುವುದು ಗೊತ್ತಿರಲಿಲ್ಲ.

(ನಗು)

ಶ್ರೀ ಹೆಚ್.ಎನ್. ನಂಜೇಗೌಡ : ಪತ್ರಿಕೆಯಲ್ಲಿ ಬಂದಿದ್ದ ಚುನಾವಣಾ ಸಮೀಕ್ಷೆ ನೋಡಿ ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಭಾರಿ ನೊಂದುಕೊಂಡಿದ್ದಾರೆ. ಪಾಪ! ಬಹುಶಃ ಇಷ್ಟು ಆಗಬಹುದಿತ್ತು ಎಂದು ಅನ್ನಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಪತ್ರಿಕೆಯವರನ್ನು ಸೇರಿಸಬೇಕಾಗಿತ್ತು. ಏಕೆಂದರೆ ಕಾಂಗ್ರೆಸ್ ಪಕ್ಷ ಹೋಗುವುದೆಂದು ಗೊತ್ತಿತ್ತು. ನಮ್ಮ ಪಕ್ಷವನ್ನು ತಪ್ಪಿಸಿ ಜನತಾ ದಳವನ್ನು ಅಧಿಕಾರಕ್ಕೆ ತಂದವರು ಪತ್ರಿಕಾ ರಂಗದವರು. ಈಗ 'ಜನತಾ ದಳ' ಎನ್ನುವುದಕ್ಕಿಂತ 'ಪತ್ರಿಕಾರಂಗದ ಪಕ್ಷ' ಎಂದರೂ ಪರವಾಗಿರಲಿಲ್ಲ ಅದನ್ನೇ ನೀವು ಇದರಲ್ಲಿ ಸ್ವಲ್ಪ ಸೇರಿಸಬಹುದಿತ್ತು.

ಶ್ರೀ ಸಿದ್ಧರಾಮಯ್ಯ : ತಕರಾರು ಇರುವುದೇ ವಾಟಾಳ್ ನಾಗರಾಜ್‌ರವರಿಗೆ ಅದು ಪತ್ರಿಕೆಯವರು ಮಾಡಿದ ಚುನಾವಣಾ ಸಮೀಕ್ಷೆಯಲ್ಲಿ ಬಹಳ ಅಘಾತವಾಯಿತೆನ್ನುವುದೇ ಈಗಿರುವ ಅಂಶ ಮತ್ತು ಮಾನ್ಯ ನಂಜೇಗೌಡರು ಹೇಳಿರುವುದಕ್ಕೆ ಅದು ತದ್ವಿರುದ್ಧ ಆದ್ದರಿಂದ ನೀವು ತಿಳಿದುಕೊಂಡಿರುವುದು ಸರಿಯಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಅದೇನೆಂದರೆ ಒಂದೇ ಪತ್ರಿಕೆಯಲ್ಲಿ ಒಂದೇ ದಿನ ಬರುತ್ತದೆ. ರಾಮನಗರದಲ್ಲಿ ಅಭ್ಯರ್ಥಿಯ ಬಗ್ಗೆ ಬಾರಿ ಸಂತೋಷ, ಬಸವನಗುಡಿಯಲ್ಲಿ ಸ್ಥಳೀಯ ಅಭ್ಯರ್ಥಿ ಬಗ್ಗೆ ಒಲವು ಎಂದು. ನೀವು ಪತ್ರಿಕೆಯವರಿಂದ ಅಧಿಕಾರಕ್ಕೆ ಬಂದಿದ್ದೀರಿ. ಅದನ್ನು ಇಲ್ಲವೆಂದು ಹೇಳಿದರೆ ಯಾರೂ ಈ ರಾಜ್ಯದಲ್ಲಿ ಒಪ್ಪುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಂಜೇಗೌಡರು ಏನು ಹೇಳುತ್ತಾರೆ ಅದು ಸತ್ಯ. ಸಿಂಧ್ಯರವರಿಗೆ ಯಾವ ಆತಂಕವೂ ಇಲ್ಲ, ಸೋಮಣ್ಣನವರ ಗೆಲುವು ಖಚಿತ, ಅದೇ ರೀತಿ ನಮಗೂ ಒಂದು ಮಾತು ಬರೆದಿದ್ದರೆ ಏನಾಗುತ್ತಿತ್ತು?

ಡಾ: ಜೀವರಾಜ ಆಳ್ವ : ಅಧ್ಯಕ್ಷರೇ, ವಾಟಾಳ್‌ರವರದ್ದು ಈಗತಿಯಾದರೆ ನನ್ನ ಗತಿ ಇನ್ನೂ ಅಧೋಗತಿ. ನನ್ನದ್ದು ಓಟಿನ ಕೌಂಟಿಂಗ್ ಇನ್ನೂ ಪ್ರಾರಂಭವಾಗಿಯೇ ಇಲ್ಲ, ಆಗಲೆ ಪತ್ರಿಕೆಗಳಲ್ಲಿ ಜೀವರಾಜ ಆಳ್ವ ಸೋಲನ್ನು ಅನುಭವಿಸಿದ್ದಾರೆಂದು ಬಂತು.

ಅಧ್ಯಕ್ಷರು : ಒಂದೊಂದು ಸಲ ನಿಮ್ಮ ಬಗ್ಗೆ ಆ ರೀತಿ ಬರೆಯುವುದು ಒಳ್ಳೆಯದೇ ಬಿಡಿ ನೀವು ಹುಷಾರಾಗಿರುತ್ತೀರಿ.

ಮಾನ್ಯ ಸದಸ್ಯರೊಬ್ಬರು : ಪತ್ರಿಕೆಗಳಲ್ಲಿ ವಾಟಾಳ್‌ನಾಗರಾಜ್‌ರವರು ಅವರ ಕ್ಷೇತ್ರದಲ್ಲಿ ಪಿವಿಸಿ ಪೈಪುಗಳನ್ನು ತೆಗೆದುಕೊಂಡು ಹೋಗಿರುವುದು ಹಾಗೂ ಅದನ್ನು ಫೋಟೋ ತೆಗೆಸಿಕೊಂಡು ಪತ್ರಿಕೆಗಳಲ್ಲಿ ಹಾಕಿಸಿಕೊಂಡಿರುವುದರಿಂದ ಚುನಾವಣೆ ಬಗ್ಗೆ ಅವರು ಗೆಲ್ಲುತ್ತಾರೋ ಸೋಲುತ್ತಾರೋ ಎನ್ನುವ ಪತ್ರಿಕೆಗಳಲ್ಲಿ ಬರುವ ಅಗತ್ಯವಿರಲಿಲ್ಲ.

ಅಧ್ಯಕ್ಷರು : ನಿಮಗೆ ವ್ಯಾಪಕವಾದ ಪ್ರಚಾರ ಸಿಕ್ಕಿತ್ತು ಎಂಬುದು ಅವರ ಅಭಿಪ್ರಾಯ

ಶ್ರೀ ವಾಟಾಳ್ ನಾಗರಾಜ್ : ನಿಜ ಅದನ್ನು ನಾನು ತಳ್ಳಿಹಾಕುವುದಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಕೊಳವೆಗಳನ್ನು ತೆಗೆದುಕೊಂಡು ಹೋಗಿರುವುದು ನಿಜ. ಕೆಲಸ ಮಾಡಿರುವುದು ನಿಜ. ಕತ್ತೆ ದುಡಿದ ಹಾಗೆ ಬಹಳ ದುಡಿದ್ದೇನೆ. ಪ್ರತಿವಾರ ಹೋಗಿದ್ದೇನೆ. ಹಳ್ಳಿಹಳ್ಳಿಗೂ ಸುತ್ತಿದ್ದೇನೆ, ಇಷ್ಟೆಲ್ಲಾ ಆದರೂ ಪತ್ರಿಕೆಗಳಲ್ಲಿ ವಾಟಾಳ್‌ನಾಗರಾಜಗೆ ಮೂರನೇ ಸ್ಥಾನದಲ್ಲಿದ್ದಾರೆ ಎಂದು ಬಂದಿದೆ. ನನ್ನ ಹಣೆಬರಹ ಏನಾಗಬೇಕು ಅಧ್ಯಕ್ಷರೆ? ಇನ್ನೇನು ಬಂಗಾರಪ್ಪನವರ ಸರ್ಕಾರ ಬರಬಹುದೇನೋ ಎನ್ನುವ ಬಗ್ಗೆ ದೊಡ್ಡ ಪ್ರಚಾರ ಮಾಡಿದ್ದಾಗ, ಕೊನೆ ಕೊನೆಯಲ್ಲಿ ಜನತಾ ದಳ, ಜನತಾ ದಳವೆಂದು ಎಲ್ಲವನ್ನೂ ಒಟ್ಟಿಗೆ ಸೇರಿಬರೆದಿರಬೇಕೆನ್ನುವ ಭಾವನೆ ನಿರ್ಮಾಣವಾಯಿತಲ್ಲಾ, ಆದ್ದರಿಂದ ಈ ವಿಮರ್ಶೆಗಳು ನನಗೆ ಬಹಳ ನೋವು ತರುತ್ತದೆ. ಏಕೆಂದರೆ.

ಶ್ರೀ ಹೆಚ್.ಎನ್. ನಂಜೇಗೌಡ : ಪತ್ರಿಕೆಗಳವರು ಈ ಸಾರಿ ಜನತಾದಳಕ್ಕೆ ಪರವಾಗಿ ಮಾಡಿರುವುದನ್ನು band wagon syndrome ಎಂದು ಕರೆಯಬಹುದಲ್ಲವೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) ಅಧ್ಯಕ್ಷರೇ, ಇದರ ಬಗ್ಗೆ ವ್ಯಾಖ್ಯಾನ ಮಾಡುವುದು ಅನಾವಶ್ಯಕ. ಪತ್ರಿಕೆಗಳು ಜನತಾದಳಕ್ಕೆ ಎಷ್ಟು ಸೀಟು ಬರುತ್ತದೆಂದು ಬರೆದಿದ್ದಾರೆ, ಬೇರೆಯವರಿಗೆ ಎಷ್ಟು ಬರುತ್ತದೆಂದು ಬರೆದಿದ್ದಾರೆ ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಸೂಕ್ತವಲ್ಲ, ಹಿಂದೂಸ್ಥಾನದ ರಾಜಕಾರಣವನ್ನು ನಾನು ಸಾಕಷ್ಟು ತಿಳಿದುಕೊಂಡಿದ್ದೇನೆ. ನಿಮ್ಮ ಹಾಗೆಯೇ ಲೋಕಸಭೆಯಲ್ಲಿ ಹೋಗಿ ಕುಳಿತು ನೋಡಿದ್ದೇನೆ. ಇದು ಬಹುಶಃ ಕರ್ನಾಟಕಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಪತ್ರಿಕೆಗಳಿಗೆ ವ್ಯಾಖ್ಯಾನ ಮಾಡುವುದಕ್ಕೆ ಸ್ವಾತಂತ್ರ್ಯ ಇದೆ. ತಾವು ಇದನ್ನು ನಿನ್ನೆ ಹೇಳಿದ್ದೀರಿ ಪತ್ರಿಕೆಗಳವರು ಅದರ ಕರ್ತವ್ಯವನ್ನು ಮಾಡಿದ್ದಾರೆ. ಅದರ ಬಗ್ಗೆ ಈ ಸದನದಲ್ಲಿ ಅದರಲ್ಲೂ ರಾಜ್ಯಪಾಲರ ಭಾಷಣದ ಚರ್ಚೆಯನ್ನು ಬಹಳ ದೂರಕ್ಕೆ ಎಳೆಯುವುದು ಅವಶ್ಯಕತೆ ಇಲ್ಲ, ಅವರಿಗೆ ಸ್ವಾತಂತ್ರ್ಯವಿದೆ ಮಾಡಿದ್ದಾರೆ. ಹಿಂದೆ Devegowda will be the next Charan Singh of Karnataka ಎಂದು ಮುಖಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆಯಲಿಲ್ಲವೇ? ನಾವೂ ಸಹ ಇದನ್ನು ಹಿಂದೆಯೇ ನೋಡಿದ್ದೇವೆ. ಅದರೂ ಸಹ ಇಲ್ಲಿಗೆ ಬಂದು ಕುಳಿತಿದ್ದೇವೆ. ಆದ್ದರಿಂದ ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಬೇಡವೆಂದು ನನ್ನ ಅನಿಸಿಕೆ.

ಶ್ರೀ ವಾಟಾಳ್ ನಾಗರಾಜ್ : ಇದು ಮೂರನೇ ರಾಜ್ಯಪಾಲರ ಭಾಷಣವಾಗಿದ್ದರೆ ಬಿಟ್ಟು ಬಿಡುತ್ತಿದ್ದೆವು. ಇದು ಈಗತಾನೆ ಹೊಸ ಸರ್ಕಾರ ಬಂದು ಅದರಲ್ಲೂ ಮೊದಲನೆ ರಾಜ್ಯಪಾಲರ ಭಾಷಣ ಪ್ರಾರಂಭವಾಗಿರುವಾಗ, ರಾಜ್ಯದ ವಿಮರ್ಶೆ ಮಾಡುವಾಗ, ರಾಜ್ಯಪಾಲರ ಭಾಷಣದಲ್ಲಿ ಇದನ್ನು ಹೇಳಿದರೆ ತಪ್ಪೇನಾಗುವುದಿಲ್ಲ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಪಾಸಿಂಗ್ ರಿಮಾರ್ಕ್‌ನ ಮಾತನ್ನು ನೀವು ಹೇಳಿದ್ದುದು ಬೇರೆ ವಿಚಾರ. ಆದರೆ ಅದರ ಬಗ್ಗೆ ದೊಡ್ಡ ವ್ಯಾಖ್ಯಾನ ಏಕೆ?

ಶ್ರೀ ವಾಟಾಳ್‌ನಾಗರಾಜ್ : ನಾನು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಬಹಳ ಕಳಕಳಿಹೊಂದಿರುವವನು. ಅವರೆಲ್ಲರೂ ನಮ್ಮ ಅತ್ಯಂತ ಆತ್ಮೀಯ ಸ್ನೇಹಿತರು. ಇಷ್ಟೆಲ್ಲಾ ಇದ್ದರು ನನ್ನ ಮೇಲೆ ಹೀಗೆ ಬರೆದುಬಿಟ್ಟರಲ್ಲಾ ಎಂದು ನನಗೆ ನೋವು. ಬೇರೆ ಏನೂ ಇಲ್ಲ, ನಾವು ಅವರೂ ನೇರವಾಗಿ ಮಾತನಾಡಿಕೊಂಡು ಹೋಗೋಣ. ಇದರಲ್ಲಿ ಕದ್ದು, ಮುಚ್ಚು ಮರೆಯಿಂದ ಮಾತನಾಡುವ ಪ್ರಶ್ನೆ ಇಲ್ಲ. ಆದ್ದರಿಂದ ನಾನು ಇದನ್ನು ಹೇಳಿ, ಹೊಸ ಸರ್ಕಾರದ ಮೇಲೆ ಬೇರೆಯ ರೀತಿ ಆರೋಪ ಮಾಡಲು ಹೋಗುವುದಿಲ್ಲ. ಕಾರಣ ಈ ಸರ್ಕಾರ ಬಂದು ಎರಡುವಾರಗಳಾಗಿದೆ. ಈ ಸರ್ಕಾರ ಈಗ ತಾನೇ ಒಂದು ವ್ಯವಸ್ಥೆ ಮತ್ತು ಮುಂದಿ ಮಾರ್ಗದರ್ಶನ, ಯೋಜನೆಗಳನ್ನು ಮಾಡಿಕೊಳ್ಳಬೇಕಾಗಿದೆ. ಅವರು ಇನ್ನು ಒಂದು ಸರಿಯಾದ ವ್ಯವಸ್ಥೆಯಲ್ಲಿ ಕುಳಿತಿಲ್ಲ, ತಕ್ಷಣ ನಿಮ್ಮ ಸರ್ಕಾರ ಅದು ಮಾಡಿದೆ. ಇದು ಮಾಡಿದೆ ಎಂದು ಹೇಳಿದರೆ ಅದು ಸರಿಯಾದ ಮಾರ್ಗ ಅಲ್ಲ ಎಂದು ನಾನು ಅಂದು ಕೊಂಡಿದ್ದೇನೆ.

ಅಂದರೆ ಹೊಸ ಸರ್ಕಾರ ಬಂದಾಗಲೇಲ್ಲಾ ಈ ವಿಧಾನಸೌಧದಲ್ಲಿ ಮಂತ್ರಿಗಳಾದವರು ಅವರ ಕೊಠಡಿಗಳಿಗೆ ಪೂಜೆಗಳನ್ನು ಮಾಡಿಸುತ್ತಾರಲ್ಲಾ, ಇದು ಏನು ಇದು ನಮ್ಮ ಹಕ್ಕೋ, ಈ ಮಂತ್ರಿಗಳು ಕೊಠಡಿಗಳು ನಮಗೆ ಶಾಶ್ವತವೋ, ಇರಲಿ ನಿಮ್ಮ ಸಂಪ್ರದಾಯಕ್ಕೆ ನಾನು ಮಾತನಾಡುವುದಿಲ್ಲ, ಎಲ್ಲಾ ಮಂತ್ರಿಗಳ ಆಫೀಸ್ ಮುಂದೆ ಏನು ಹಾರ ತುರಾಯಿಗಳು, ಬೂದು ಗುಂಬಳಕಾಯಿ ಇದು ಏನು ನಮ್ಮ ಸ್ವಂತ ಮನೆಯೇ ಅಲ್ಲ ನಾವು ನಮ್ಮ ಮನೆಗೆ ಗೃಹ ಪ್ರವೇಶ ಮಾಡುತ್ತಿಲ್ಲ, ಇದು ಆಗ ಬಾರದು. ಮಂತ್ರಿಗಳರ ಯಾರೂ ಶಾಶ್ವತ ಅಲ್ಲ, ಈ ವಿಧಾನಸೌಧವನ್ನು ಕಟ್ಟಿಸಿದಂತಹ ಮಹಾ ಶಿಲ್ಪ, ಮೇಧಾವಿ ರಾಜ್ಯದ ಹಿರಿಯ ಮುತ್ಸದ್ಧಿ ಈ ದೇಶದ ಮಹಾನಾಯಕ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಈ ಭವನವನ್ನು ಪ್ರವೇಶ ಮಾಡುವುದಕ್ಕೆ ಆಗಲಿಲ್ಲ, ಈ ಕಟ್ಟಡವನ್ನು ನಿರ್ಮಾಣ ಮಾಡಿದಂತಹ ಕೆಂಗಲ್ ಹನುಮಂತಯ್ಯನವರು ತಾವೇ ನಿಂತು ಮೇಸ್ತ್ರೀ ಕೆಲಸ ಮಾಡಿದರು. ಕಂಬ ಹೀಗಿರಬೇಕು, ವಿನ್ಯಾಸ ಹೀಗಿರಬೇಕು, ಸ್ಥಳ ಹೀಗಿರಬೇಕು ಸದನ ಹೀಗಿರಬೇಕು ಮತ್ತು ವಿಧಾನಸೌಧ ಹೀಗಿರಬೇಕು, ಮತ್ತು ಕಟ್ಟಡ ಹೀಗಿರಬೇಕೆಂದು ಹೇಳಿ ಪ್ರತಿ ಕಲ್ಲು ಕಲ್ಲುಗಳನ್ನು ತಾವೇ ಕೆತ್ತಿಸಿ ಸ್ವತಃ ಚಿತ್ರವನ್ನು ಮಾಡಿಸಿ ಸುಂದರ ಭವ್ಯವಾದಂತಹ ಕಟ್ಟಡವನ್ನು ಕರ್ನಾಟಕದ ಕನ್ನಡಿಗರಿಗೆ ಕೊಟ್ಟಂತಹ ಧೀಮಂತ ಶಕ್ತಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಇದರ ಒಳಗಡೆ ಬಂದು ಒಂದು ಕೊಠಡಿಯಲ್ಲಿ ಕುಳಿತುಕೊಳ್ಳಲು ಆಗಲಿಲ್ಲ, ಇದರ ಉದ್ಘಾಟನೆ ಕಡಿದಾಳ್ ಮಂಜಪ್ಪನವರು ಮಾಡಿದರು. ಅವರ ಸರ್ಕಾರದಲ್ಲಿ ಇದ್ದಂತಹ ಹಿರಿಯ ಸಚಿವರು ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಮತ್ತೆ ಬಂದು ಮೂರು ತಿಂಗಳಿನಲ್ಲಿ ಮಾಡಿದರು. ಈ ವಿಧಾನಸೌಧದ ಕೊಡುಗೆಯನ್ನು ಕೊಟ್ಟಂತಹ ಈ ಚಿತ್ರ ಪುಟವನ್ನು ಹಿಂದೆ ಇದ್ದಂತಹ ನಮ್ಮ ಇದೇ ಸದನದ ಅಧ್ಯಕ್ಷರಾದಂತಹ ಶ್ರೀಮಾನ್ ಎಸ್.ಎಂ. ಕೃಷ್ಣರವರು ಅವರು ಒಂದು ಮಾರ್ಗದರ್ಶನದಲ್ಲಿ ಮತ್ತು ನಮ್ಮ ಕೌಜಲಗಿಯವರು ಅಧ್ಯಕ್ಷರು ಆಗಿದ್ದಾಗ ಆ ಚಿತ್ರ ಪುಟವನ್ನು ಇಲ್ಲಿ ತಂದದು ಬಹಳ ಸಂತೋಷ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಈ ಸದನ ನಮ್ಮ ಸ್ವಂತ ಮನೆ ಏನಲ್ಲ ಮತ್ತು ಭ್ರಮೆ, ನಾವೆಲ್ಲಾ ಪೂಜೆ ಮಾಡಿಸಿ ಒಳಗೆ ಬರತಕ್ಕಂಥಾದ್ದು ಮತ್ತು ನಮಗೆ ಇದು ಬಹಳ ದಿವಸಗಳ ಕಾಲ ಇರುತ್ತದೆ ಅನ್ನತಕ್ಕಂಥಾದ್ದು. ತಮಗೆ ಹೇಳುತ್ತೇನೆ, ವೀರೇಂದ್ರಪಾಟೀಲರು ಬಂದರು, ಮಾನ್ಯ ಶ್ರೀ ಬಂಗಾರಪ್ಪನವರು ಬಂದರು ಮತ್ತು ಮೊಯಿಲಿಯವರು ಬಂದರು. ಸ್ವಲ್ಪ ಹೆಚ್ಚು ಕಡಿಮೆ 90 ರಿಂದ 95, ಅಥವಾ 100 ಜನ ಮಂತ್ರಿಗಳು ಆದರು. 100 ಜನ ಬಂದವರೂ ಆ ರೂಮುಗಳನ್ನು ಅಲಂಕರಿಸಿದರು ಹೋದರು. ಸಂಪ್ರದಾಯಕ್ಕೆ ವಿರೋಧ ಅಲ್ಲ, ಪೂಜೆಗೆ ವಿರೋಧಿ ಅಲ್ಲ, ನನಗೆ ಯಂತಹ ವಿರೋಧ ಏನೂ ಇಲ್ಲ,

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೇ, ಅದು ಒಂದು ಸಂಸ್ಕೃತಿ. ಈಗ ಮದುವೆ ಮಾಡುತ್ತಾರೆ. ಸುಮ್ಮ ಸುಮ್ಮನೆ ಕಟ್ಟಿಕೊಂಡು ಹೋಗಬಹುದಲ್ಲಾ, ಏತಕ್ಕೋಸ್ಕರ ಶಾಸ್ತ್ರವನ್ನು ಕೇಳಿ ಎಲ್ಲಾ ಮಾಡಿ ಲಗ್ನವನ್ನು ನಿಶ್ಚಯಿಸಿ ಮದುವೆ ಮಾಡಬೇಕು. ಅದು ಒಂದು ಸಂಸ್ಕೃತಿ. ಇನ್ನು ಕೆಲವರು ದೇವರಿಗೆ ಪೂಜೆ ಮಾಡುವುದಿಲ್ಲ, ಅದು ಅವರಿಗೆ ಬಿಟ್ಟ ವಿಚಾರ.

ಅಧ್ಯಕ್ಷರು : ಅದನ್ನೆಲ್ಲಾ ಮನೆಒಳಗಡೆ ಮಾಡಿ ಕೊಳ್ಳಬೇಕು, ಸಾರ್ವಜನಿಕ ಸ್ಥಳಗಳಲ್ಲಿ ಅಲ್ಲ ಎನ್ನುವುದು ಅವರ ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ : ಮೂರು ನಾಲ್ಕು ವರ್ಗ ಇದೆ. ಸುಮ್ಮ ಸುಮ್ಮನೆ ಕಟ್ಟಿಕೊಂಡು ಹೋಗುವುದು ಉಂಟು. ಮತ್ತು ಸರ್ಕಾರಿ ಕಛೇರಿಯಲ್ಲಿ ಹೋಗಿ ರಿಜಿಸ್ಟರ್ ಮಾಡಿ ಮದುವೆ ಮಾಡಿ ಕೊಳ್ಳುವುದು ಮತ್ತೊಂದು ಮತ್ತು ಒಂದು ಕಾಲದಲ್ಲಿ ಮದುವೆ ಅಂದರೆ ಏಳು ದಿವಸ ನಡೆಯುತ್ತಿತ್ತು. ಚಪ್ರದ ಪೂಜೆ, ಕಂಬ ಮುಹೂರ್ತ, ಹೀಗೆ ಎಲ್ಲಾ ಒಟ್ಟು ಏಳು ದಿವಸ. ಈಗ ಏನು ಸ್ವಾಮಿ ಲಂಡನ್‌ನಿಂದ ಗಂಡು ಬರುತ್ತಾನೆ, ತಾಳಿ ರೆಡಿ ಇರುತ್ತದೆ, ವುಡ್‌ಲ್ಯಾಂಡ್‌ನಲ್ಲಿ ಊಟ ಆಗುತ್ತದೆ, ತಾಳಿ ಕಟ್ಟುತ್ತೇವೆ ಏರೋಪ್ಲೇನ್ ಹತ್ತಿಸುತ್ತೇವೆ. ಅದೆಲ್ಲಾ ನಡೆಯುತ್ತಿದೆ ಅಲ್ಲವಾ ಈಗ. ಈಗ ಎಲ್ಲಲಾ ಬದಲಾವಣೆ ಆಗಿದೆ, ಆದುದರಿಂದ ಇದನ್ನೆಲ್ಲಾ ನಿಮಗೆ ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಆದುದರಿಂದ ಸಂಪೂರ್ಣವಾದ ಬದಲಾವಣೆ ದೇಶದಲ್ಲಿ ಆಗಿದೆ. ಬದಲಾವಣೆ ಒಂದು ಕಡೆ ವ್ಯವಸ್ಥೆ ಮತ್ತೊಂದು ಕಡೆ ವಿಧಾನಸೌಧದಲ್ಲಿ ನಾಯಕರು, ಮಂತ್ರಿಗಳಾಗಿರುವವರು ಕುರ್ಚಿಗೆ ಎಲ್ಲಾ ಬೂದು ಗುಂಬಳಕಾಯಿ ಕಟ್ಟಿ ಕುಂಕುಮ ಹಚ್ಚಿ ಹಾವು ಹಾಕುವುದು ಏನಿದು. ಇದು ಏನು ಮಾರಮ್ಮನ ದೇವಸ್ಥಾನ ಮಾಡುವುದಕ್ಕಾ ಈ ವಿಧಾನ ಸೌಧ ಇರುವುದು. ಇದು ನನಗೆ ಅರ್ಥವಾಗುವುದಿಲ್ಲ, ನಾನು ಒಂದು ರೌಂಡ್ ಬರುವಷ್ಟರ ಹೊತ್ತಿಗೆ ಸುಸ್ತಾಗಿ ಹೋದೆ. ಒಂದು ದಿವಸ ಮೂರನೇ ಮಹಡಿಯಲ್ಲಿ ಹತ್ತಿದೆನು, ಬೂದು ಗುಂಬಳಕಾಯಿ ಒಡೆಯುತ್ತಾರೆ ಕರ್ಪೂರ ಹಚ್ಚುತ್ತಾರೆ. ಈ ವ್ಯವಸ್ಥೆಗೆ ನಾನು ವಿರೋಧ ಇಲ್ಲ.

ನಾನು ಬಹಳ ದೈವ ಭಕ್ತ, ಅದರಲ್ಲಿ ಎರಡನೆ ಅಭಿಪ್ರಾಯವಿಲ್ಲ, ದೇವರನ್ನು ನೋಡುವುದಕ್ಕೆ ನಾನು ತಿರುಪತಿಗೆ ಹೋಗಿದ್ದೇನೆ ಮತ್ತು ಮಹದೇಶ್ವರ ಬೆಟ್ಟಕ್ಕೆ ನಾನು ಪ್ರತಿ ತಿಂಗಳು ಹೋಗುತ್ತೇನೆ. ಅದರ ಬಗ್ಗೆ ಏನೂ ಅಭಿಪ್ರಾಯವಿಲ್ಲ. ನಂತರ ದಿಕ್ಕುಗಳು ನಮಗೆ ಈ ದಿಕ್ಕಿನಲ್ಲೇ ರೂಂ ಬೇಕು, ಆ ದಿಕ್ಕಿನಲ್ಲೇ ರೂಂ ಬೇಕು. ಯಾವ ದಿಕ್ಕಾದರೆ ಏನು ನಮಗೆ? ಒಬ್ಬ ಮಹಾತ್ಮ ಸತ್ತವನು ತೆಂಕರೋ ಬಡಗರೋ ಎಂದು ಹೇಳಿದ ಆ ತೆಂಕಲೋ ಬಡಗಲೋ ಎಂದು ಅಷ್ಟೇ ಹೇಳುತ್ತೇನೆ. ಅದಕ್ಕಿಂತ ಮುಂದಕ್ಕೆ ನಾನು ಹೋಗುವುದಿಲ್ಲ. ಅದು ಗ್ರಾಮ್ಯ ಭಾಷೆ. ತೆಂಕಲೋ ಬಡಗಲೋ ಅಂದರೆ ಯಾವ ಕಡೆಯಾದರೆ ಏನಂತೆ, ಅದು ಒಂದು ಗಾದೆ. ಆ ಗಾದೆ ಇದೆಯಲ್ಲಾ ಅದರ ಬಗ್ಗೆ 10 ಸಾವಿರ ಪುಟಗಳ ವ್ಯಾಖ್ಯಾನವನ್ನು ಬರೆಯಬಹುದು. ಆದುದರಿಂದ ನಾವು ಸಮಾಜಕ್ಕೆ ಒಂದು ಹೊಸ ದಿಕ್ಕನ್ನು ತೋರಿಸತಕ್ಕಂಥವರು ಈ ವ್ಯವಸ್ಥೆಯಲ್ಲಿ ಇರಬೇಕಾದುದ್ದು ಕರ್ತವ್ಯ. ಇದಾದನಂತರ ಹೊಸ ಮಂತ್ರಿಮಂಡಲ ಬಂದ ತಕ್ಷಣ ಅಧಿಕಾರಗಳ ಬದಲಾವಣೆ. ಅವರ ಗತಿ ಏನಾಗಬೇಕು, ಅವರು ಎಲ್ಲಿ ಹೋಗಬೇಕು? ಮೊನ್ನೆ ಅವರು ಯಾವ ಉದ್ದೇಶಕ್ಕೆ ಬದಲಾವಣೆ ಮಾಡಿದರು ಎಂದು ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಈ ಬೆಂಗಳೂರು ಮಹಾನಗರದ ಪೊಲೀಸ್ ಕಮಿಷನರ್ ಕೋದಂಡ ರಾಮಯ್ಯನವರು ಒಬ್ಬ ಒಳ್ಳೆಯ ಕೆಲಸ ಮಾಡಿರತಕ್ಕಂತ ವ್ಯಕ್ತಿ. ಒಳ್ಳೆಯ ಕೆಲಸ ಮಾಡಿರತಕ್ಕಂಥವರ ಬಗ್ಗೆ ಇಲ್ಲಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಈಗ ಕಮಿಷನರ್ ಆಗಿರುವಂತಹ ಶ್ರೀನಿವಾಸ್‌ಲು ರವರು ಸಹ ಬಹಳ ಒಳ್ಳೆಯ ದಕ್ಷ ಅಧಿಕಾರಿಗಳು. ಅದಕ್ಕೆ

ನನ್ನದೇನೂ ತಕರಾರು ಇಲ್ಲ, ಅದು ನಿಮ್ಮ ಸರ್ಕಾರಕ್ಕೆ ಸೇರಿದ್ದು, ನೀವು ಏನು ಬೇಕಾದರೂ ಬದಲಾವಣೆ ಮಾಡಿಕೊಳ್ಳಿ. ಕೋದಂಡ ರಾಮಯ್ಯನವರನ್ನನು ಬದಲಾವಣೆ ಮಾಡುವುದಕ್ಕೆ ನಿಮಗೆ ಇದ್ದಂತಹ ಕಾರಣಗಳೇನು? ಏನಾದರೂ ಒಂದು ಕಾರಣ ಇಲ್ಲದಿಲ್ಲ, ಕೋದಂಡರಾಮಯ್ಯನವರಂತೂ ನಮಗೆ ಬಹಳ

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಸರ್ಕಾರ ಹೊಸದಾಗಿ ಅಧಿಕಾರ ವಹಿಸಿಕೊಂಡ ಮೇಲೆ ಯಾವುದೇ ಸಾಮಾನ್ಯ ವರ್ಗಗಳನ್ನು ಜನರಲ್ ಟ್ರಾನ್ಸ್‌ಫರ್ ಮಾಡಬಾರದು ಎಂದು ನಿರ್ಣಯ ಮಾಡಿದ್ದೇವೆ. ನಾವು ಯಾವುದೇ ಜನರಲ್ ಟ್ರಾನ್ಸ್‌ಪರ್ಸ್‌ಗಳು ಮಾಡುವುದಿಲ್ಲ, ಚೀಫ್ ಸೆಕ್ರಟರಿ ರಿಟೈರ್ಡ್ ಆಗುತ್ತಿದ್ದಾರೆ. ಅದಕ್ಕೆ ಇನ್ನೊಬ್ಬ ಚೀಫ್ ಸೆಕ್ರಟರಿಯನ್ನು ತೆಗೆದುಕೊಂಡಿದ್ದೇವೆ. ಅದು ಹಿಂದಿನ ಸರ್ಕಾರವೇ ಇಂತಹವರು ಚೀಫ್ ಸೆಕ್ರೆಟರಿ ಎಂದು ನಿರ್ಣಯ ಮಾಡಿತ್ತು ಅದನ್ನು ಅನುಷ್ಠಾನಕ್ಕೆ ಕೊಟ್ಟಿದ್ದೇವೆ. ಇನ್ನು ಪೊಲೀಸ್ ಕಮಿಷನರ್ ಬಗ್ಗೆ ಹೇಳುವುದಾದರೆ ಮೂರು ಜನ ಹಿರಿಯ ಅಧಿಕಾರಿಗಳಲ್ಲಿ ಹೊಂದಾಣಿಕೆ ಇರಲಿಲ್ಲ, ಆ ಮೂರು ಜನ ಅಧಿಕಾರಿಗಳು ದಕ್ಷರಿದ್ದಾರೆ. ಮೂರು ಜನರೂ ಕೂಡ ಪ್ರಾಮಾಣಿಕಸ್ತರಿದ್ದಾರೆ. ಆದರೆ ಅವರ ಹತ್ತಿರ ಸಾಮರಸ್ಯದ ಕೊರತೆ ಇದ್ದುದರಿಂದ ಬೆಂಗಳೂರು ಮಹಾನಗರದಲ್ಲಿ ನಾವು ಬಂದ ಮೂರು ದಿನಕ್ಕೆ 18 ದರೋಡೆಗಳು ಮತ್ತು ಅಲ್ಲಿ ಯಾರೋ ಬಸ್‌ನಲ್ಲಿ ಬಿದ್ದು 12 ಮಂದಿ ಮೃತಪಟ್ಟರು ಎಂದು ಬಾಕ್ಸ್ ಐಟಮ್‌ನಲ್ಲಿ ಬಂದಿರುವುದನ್ನು ನೋಡಿದ್ದೀರಿ. ಬೆಂಗಳೂರು ಕ್ಯಾಪಿಟಲ್ ಸಿಟಿ. ಅಲ್ಲಿ ಯಾವ ಅಧಿಕಾರಿಗಳು ಇದ್ದಾರೋ, ಅವರು ಈ ನಗರದ ರಕ್ಷಣೆಯನ್ನು ಮಾಡತಕ್ಕಂಥ ಮೂರು ಜನರಲ್ಲಿ ಸಾಮರಸ್ಯ ಇರಲಿಲ್ಲ. ಅದನ್ನು ನೋಡಿ ಸರ್ಕಾರ ಕಣ್ಣುಬಿಟ್ಟುಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ಆದುದರಿಂದ ಎಲ್ಲಾ ಹಿರಿಯ ಅಧಿಕಾರಿಗಳು ಸಮಾಲೋಚನೆ ಮಾಡಿ ಕೊನೆಗೆ ಆ ಒಂದು ನಿರ್ಣಯ ಮಾಡಿದರು. ಇಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ. ಅದು ಪತ್ರಿಕೆಯಲ್ಲೂ ವರದಿಯಾಗಿರುವುದನ್ನು ಓದಿರಬಹುದು. ಪತ್ರಿಕೆಯಲ್ಲೂ ವರದಿಯಾಗಿರುವುದನ್ನು ನೀವು ಓದಿರಬಹುದು.

All the three police officers are pulling in different directions. ಜನ ಸಮಾನ್ಯರಿಗೆ ಕಷ್ಟವಾಗುತ್ತಿದೆ ಎಂದು ತಾವು ಓದಿರಬಹುದು.ಅವರ ಇಂಟಿಗ್ರಿಟಿ ಪ್ರಶ್ನೆ ಮಾಡುವುದಕ್ಕೆ ನಾನು ಇಂದೂ ಸಿದ್ಧವಿಲ್ಲ, ನಾಳೆನೂ ಸಿದ್ಧವಿಲ್ಲ They are all honest officers. ಆದರೆ ಒಂದೊಂದು ಸಾರಿ ಇಂತಹ ಸಮಸ್ಯೆ ಉದ್ಭವವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಮಾತಿನಲ್ಲಿ ನಂಬಿಕೆ ಇಟ್ಟುಕೊಂಡಿದ್ದೇನೆ. ಮೂರು ಜನರೂ ದಕ್ಷ ಅಧಿಕಾರಿಗಳು ಎಂದು ತಾವು ಹೇಳಿದಿರಿ ನಮ್ಮಲ್ಲಿ ದಕ್ಷ ಅಧಿಕಾರಿಗಳಿಗೆ ಕೊರತೆ ಇಲ್ಲ, ರಾಮಲಿಂಗಂನವರು ಹಾಗೂ ಕೋದಂಡ ರಾಮಯ್ಯನವರು ಬಹಳ ದಕ್ಷ ಅಧಿಕಾರಿಗಳು ಶ್ರೀನಿವಾಸಲು ಸಹ ದಕ್ಷ ಅಧಿಕಾರಿ. ಅದರಲ್ಲಿ ನನ್ನ ಎರಡನೇ ಅಭಿಪ್ರಾಯವಿಲ್ಲ, ಈಗ ಕೋದಂಡ ರಾಮಯ್ಯನವರನ್ನು ಪೊಲೀಸ್ ಗೃಹ ನಿರ್ಮಾಣ ಮಂಡಲಿಗೆ ಹಾಕಿದ್ದೀರಿ. ಆದರೆ ಅಲ್ಲಿಗೆ ಒಬ್ಬ ಜೂನಿಯರ್ ಇಂಜಿನಿಯರ್ ಸಾಕಾಗಿತ್ತು. ಅಂತಹ ದೊಡ್ಡ ಕೆಲಸ ಮಾಡತಕ್ಕಂಥ ವ್ಯಕ್ತಿತ್ವ ಇರತಕ್ಕ ಅಲ್ಲಿಗೆ ಹಾಕಿದ್ದೀರಲ್ಲಾ, ಅವರಿಗೆ ಏನು ಪರಿಶಿಕ್ಷೆಯೋ ಅಥವಾ ಏನು ಎನ್ನುವುದು ಅಷ್ಟೇ ನಮ್ಮದು. ಅದರಲ್ಲಿ ನನ್ನದೇನೂ ತಕರಾರು ಇಲ್ಲ, ನನ್ನದೇನೂ ವ್ಯಾಖ್ಯಾನ ಇಲ್ಲ,

ಶ್ರೀ ಹೆಚ್.ಡಿ. ದೇವಗೌಡ : ಅಡಿಷನಲ್ ಡಿಜಿಪಿ ಹುದ್ದೆಯ ಶ್ರೇಣಿಗೆ ಆ ಒಂದು ಜಾಗಕ್ಕೆ ಹಿಂದಿನ ಸರ್ಕಾರಗಳು, ನೇಮಕ ಮಾಡಿರುವಂಥದ್ದರ ಬಗ್ಗೆ ಬೇಕಾದರೆ ಜೂನಿಯರ್ ಇಂಜಿನಿಯರ್ ಕೆಲಸ ಮಾಡುವುದಲ್ಲ, ಹಾಗೆ ತಾವು ದಯಮಾಡಿ ಮಾತನಾಡಬೇಡಿ. ಅಷ್ಟೇ ಅಲ್ಲ ಈಗ ಬೇರೆ ಚೈನ್ ಯಾಕ್ಷನ್ ಆಗುವುದಕ್ಕೆ ಕೆಲವು

ಬದಲಾವಣೆಗಳನ್ನು ಮಾಡಬೇಕಾಗಿದೆ. ಅದಕ್ಕೋಸ್ಕರ ತಾತ್ಕಾಲಿಕ ಅವರು ಅಲ್ಲಿ ಇರಬಹುದು. ಅದಾದನಂತರ ಅವರ ದಕ್ಷತೆಗೆ ಅನುಗುಣವಾಗಿ ಅವರ ಸೇವೆಯ ಉಪಯೋಗವನ್ನು ಯಾವ ಜಾಗದಲ್ಲಿಟ್ಟು ಮಾಡಬೇಕೆಂಬುದನ್ನು ಸಹ ಸರ್ಕಾರ ತೀವ್ರವಾಗಿ ಪರಿಗಣಿಸುತ್ತದೆ. ಆದರೆ ಈಗ ಚೈನ್ ಯಾಕ್ಷನ್ ಆಗುವುದು ಬೇಡ. ನಾಲ್ಕಾರು ಟ್ರಾನ್ಸ್‌ಫರ್‌ಗಳನ್ನು ಮಾಡುವುದು ಬೇಡವೆಂದು ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿದರ ಪರಿಣಾಮ ಜೂನಿಯರ್ ಇಂಜಿನಿಯರ್ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಬಂದು ಅಡಿಷನಲ್ ಡಿಜಿಪಿ ಆಗಿ ಪೋಸ್ಟ್ ಮಾಡಿ ಎಂದರೆ ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ ; ಈವತ್ತು ಕರ್ನಾಟಕದಲ್ಲಿ ವ್ಯವಸ್ಥೆ ಬೆಳೆದಿದೆ ಹಿಂದೆ ಇಡೀ ಲೋಕೋಪಯೋಗಿ ಇಲಾಖೆಯನ್ನು ಒಬ್ಬರೇ ಒಬ್ಬರು ಮುಖ್ಯ ಇಂಜಿನಿಯರ್ ನೋಡಿಕೊಳ್ಳುತ್ತಿದ್ದರು. ಈವತ್ತು ನನ್ನ ಪ್ರಕಾರ 25-30ಮುಖ್ಯ ಇಂಜಿನಿಯರ್‌ಗಳು ಇರಬಹುದು. ನೀರಾವರಿಯಲ್ಲಿ 30 ಜನರು ಇರಬಹುದು. ಪೋಲೀಸ್ ಇಲಾಖೆಯಲ್ಲಿ ಒಬ್ಬರೇ ಡಿಜಿಗಳು ಇದ್ದರು, ಈಗ 4-5 ಜನರು ಅಂದರೆ ಇವತ್ತು ಆ ವ್ಯವಸ್ಥೆಯ ಬಗ್ಗೆ ಬಹಳಷ್ಟು ಬೆಳೆವಣಿಗೆಯಾಗಿದೆ. ಇದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ಇದನ್ನು ಉದ್ದೇಶ ಪೂರ್ವಕವಾಗಿ ಮಾಡಿದರು ಎನ್ನುವುದಕ್ಕಿಂತ ಹೆಚ್ಚಾಗಿ ಇದು ಬೆಂಗಳೂರು ನಗರದ ಜನಮಕ್ಕೆ ರಸ್ತೆಗಳ ವ್ಯವಸ್ಥೆಗಳಿಂದ ಆಗುತ್ತಿದ್ದ ಅನಾಹುತ ಮತ್ತು ಇದನ್ನು ತಪ್ಪಿಸುವಲ್ಲಿ ಸಮರ್ಥವಾಗಿ ಕೆಲಸ ಮಾಡಿದಂತಹ ವ್ಯಕ್ತಿ ಎನ್ನುವಂತಹ ಹೆಸರನ್ನು ಗಳಿಸಿದ್ದರು. ಈಗ ಬಂದಿರುವವರಿಗೆ ಆ ಸಾಮರ್ಥ್ಯ ಇಲ್ಲ ಎಂದು ಹೇಳುವುದಿಲ್ಲ, ಬಹಳ ಸಾಮರ್ಥ್ಯರಿದ್ದಾರೆ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ ಅವರು ಸಮರ್ಥ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಆದರೆ ಸರ್ಕಾರಗಳು ಬದಲಾವಣೆಯಾದ ನಂತರ ಯಾವುದೋ ಕಾರಣವನ್ನು ಹೇಳಿ, ಅಧಿಕಾರಿಗಳನ್ನು ಮೂಲೆ ಗುಂಪು ಮಾಡತಕ್ಕದ್ದು ಈ ರಾಜ್ಯದ ಅಧಿಕಾರದ ವ್ಯವಸ್ಥೆಯಲ್ಲಿ ಗುಂಪುಗಾರಿಕೆಯಾಗಿ ರಾಜ್ಯದ ಆಡಳಿತ ಸೂತ್ರಕ್ಕೆ ಬದಲಾವಣೆಯಿಂದ ಅಪಾಯ ಆಗಲುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಒಂದೊಂದು ಗುಂಪು, ಅಂದರೆ ಐಎಎಸ್ ಒಂದು ವರ್ಗ ಅದರಲ್ಲಿ ಮೂರು ಭಾಗ, ಐಪಿಎಸ್‌ನಲ್ಲಿ ಮೂರು ಭಾಗ, ಈ ರೀತಿಯಾದರೆ ಹೇಗೆ? ಮಾನ್ಯ ದೇವೇಗೌಡರೇ ತಮಗೆ ಗೊತ್ತಿದೆ. ತಾವು ಈ ರಾಜ್ಯದ ಹಿರಿಯ ಮುತ್ಸದಿಗಳು, ಅದರಲ್ಲಿ ಏನೂ ಎರಡು ಅಭಿಪ್ರಾಯವಿಲ್ಲ, ತಾವು ವಿರೋಧಪಕ್ಷದ ನಾಯಕರಾಗಿ ತಮ್ಮ ಭಾಷಣವನ್ನು ಮಾಡಿರುವುದನ್ನು ನಾನು ಅನೇಕ ಬಾರಿ ಆಲಿಸಿದ್ದೇನೆ. ನಾನು ನಿಮ್ಮ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ತಾವು ತಮ್ಮ ನಿಲುವನ್ನು ನಿಖರವಾಗಿ, ನಿದಾನವಾಗಿ ಸ್ಪಷ್ಟವಾಗಿ ಹೇಳಿದ್ದೀರಿ. ಅನೇಕ ಸಾರಿ ನಿಮ್ಮ ಭಾಷಣ ಕಡತದಿಂದ ಹೊರಗೆ ಹೋಗಿಲ್ಲ, ಅದನ್ನು ನಾನು ಮೆಚ್ಚಿದ್ದೇನೆ. ಈಗ ತಾವು ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿದ್ದೀರಿ. ಅದಕ್ಕೆ ನಾನು ಮೆಚ್ಚಿ ಸಂತೋಷ ಪಟ್ಟಿದ್ದೇನೆ, ತಮ್ಮನ್ನು ಅಭಿನಂದಿಸಿದ್ದೇನೆ. ಇಂಥವುಗಳು ಯಾವುದೂ ನಿಮ್ಮ ಕೈ ಕೆಳಗೆ ನಡೆಯಬಾರದು. ನಾಳೆ ಇತಿಹಾಸದಲ್ಲಿ ನಿಮ್ಮ ಹೆಸರು ಉಳಿಯಬೇಕು. ಎಂಬ ಭಾವನೆಯಿಂದ ಹೇಳುತ್ತಿದ್ದೇನೆ. ಯಾರು ಏನೇ ಹೇಳಲಿ, ನಿಮ್ಮದು ಒಂದು ವರ್ಷ, ನಾನು ಐದು ವರ್ಷ ಇರಬೇಕು ಎನ್ನತಕ್ಕಂಥವಾದ ನನ್ನದು ಇದೆ. ಆ ಪ್ರಶ್ನೆ ಬೇರೆ ಒಂದು ದಿನವಿರಲಿ ನಾಳೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳು ಆಗಿದ್ದರು. ಈ ಪರಿಸ್ಥಿತಿಯಾಯಿತು ಎಂದು ಇತಿಹಾಸದಲ್ಲಿ ಹೇಳುವಂತೆ ತಾವು ಆಗಬೇಕು ಎಂಬುದು ನನ್ನ ಪ್ರಮಾಣಿಕವಾದಂತಹ ಅಂತನೆ.

(ಮಾನ್ಯ ಜಿ.ಎಸ್. ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಕೆಲವರು ಬಂದ ತಕ್ಷಣ ಅಧಿಕಾರಿಗಳ ಮನೆಗಳನ್ನು ರೈಡ್ ಮಾಡಿಸುವುದು. ಅವರ ಮೇಲೆ ಉದ್ದೇಶಪೂರ್ವಕವಾಗಿ ಕೇಸ್ ಗಳನ್ನು ಹಾಕುವುದು, ಅವರನ್ನು ಹೊರಗೆ ಹಾಕುವಂಥಾದ್ದು ಒಬ್ಬರದ್ದು ಆದಮೇಲೆ ಒಬ್ಬರದ್ದು ನಡೆಯುತ್ತಿದೆ. ಕೆಲವು ಸರ್ಕಾರ ಬಂದರೆ ಕೆಲವು ಪ್ರಭಾವಿಗಳನ್ನು ತೆಗೆದುಕೊಳ್ಳುವುದು, ಇನ್ನು ಕೆಲವು ಸರ್ಕಾರ ಬಂದರೆ ತೆಗೆದುಕೊಳ್ಳದೇ ಇರುವುದು. ಈ ಪರಿಸ್ಥಿತಿಯಲ್ಲಿ ಅನೇಕ ಜನ ಅಧಿಕಾರಿಗಳನ್ನು ಇವತ್ತು ಅಮಾನತ್ತಿನಲ್ಲಿ ಇಟ್ಟಿರತಕ್ಕಂಥ ನಿದರ್ಶನಗಳು ಇದೆ. ಅಮಾನತ್ತಿನಲ್ಲಿಟ್ಟು ಅವರು ಆಡಳಿತ ನ್ಯಾಯಮಂಡಳಿಗೆ ಹೋಗಿ ತಮ್ಮ ನ್ಯಾಯವನ್ನು ಕೇಳಿ ನ್ಯಾಯವನ್ನು ಪಡೆದು ಸರ್ಕಾರಕ್ಕೆ ಬಂದಿರತಕ್ಕದ್ದು ಉಂಟು. ಶ್ರೀ ಪಾಟ್ನಾಯಕ್ ರವರು ಬಹಳ ಹೋರಾಟ ಮಾಡಿ ಸರ್ಕಾರಕ್ಕೆ ಬಂದರು. ಇನ್ನು ಲೋಕಾಯುಕ್ತರಲ್ಲಿ ಅನೇಕ ಜನರು ಹೊರಗೇ ಇದ್ದಾರೆ. ಈಗ ಮಾಜಿ ಮುಖ್ಯ ಕಾರ್ಯದರ್ಶಿ ಅಲೆಗ್ಸ್ಯಾಂಡರ್ ಅವರು ಇವತ್ತು ಅವರನ್ನು ಅನಾಮತ್ತಿನಲ್ಲಿಟ್ಟಿದ್ದೀರಿ. ಅವರಿಗೆ ನೂರಕ್ಕೆ ತೊಂಭತ್ತು ಭಾಗ ಸಂಬಳವನ್ನು ಕೊಡುತ್ತಿದ್ದೀರಿ. ಇನ್ನು 10 ಭಾಗ ಮಾತ್ರ ಸಂಬಳ ಕೊಡುತ್ತಿಲ್ಲ, ಏನೂ ಕೆಲಸವಿಲ್ಲ, ಅವರೂ ಹೊರಗೆ ಇದ್ದಾರೆ. ಈ ರೀತಿ ಅನೇಕ ಅಧಿಕಾರಿಗಳು ಹೊರಗೆ ಇರುವಂತಹ ವಿಚಾರದ ಬಗ್ಗೆ ತಮ್ಮ ಸರ್ಕಾರ ಚಿಂತನೆ ಮಾಡಬೇಕು.

ನೀವು ರಾಗ ದ್ವೇಷ ಯಾವುದನ್ನೂ ಮಾಡದೆ ಇಂತಹ ಅಧಿಕಾರಿಗಳು ಯಾರಾದರೂ ಹೊರಗೆ ಇದ್ದರೆ ಮತ್ತೆ ಅವರ ಸೇವೆಯನ್ನು ಉಪಯೋಗಿಸತಕ್ಕಂಥ ವ್ಯವಸ್ಥೆಯನ್ನು ....

ಶ್ರೀ ಹೆಚ್. ಎನ್. ನಂಜೇಗೌಡ : ಒಂದು ನಿಮಿಷ ಮಾನ್ಯ ಅಧ್ಯಕ್ಷರೆ ಶ್ರೀಮಾನ್ ನಾಣಯ್ಯನವರು ಅಲ್ಲೇ ಕುಳಿತಿದ್ದಾರೆ, ನಾನು ಇಲ್ಲಿ ಕುಳಿತಿದ್ದೇನೆ; ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಾರೆ. ಏನು ಉದ್ದೇಶ ಮುಖ್ಯಮಂತ್ರಿಗಳೇ ಎವಿಡೆನ್ಸ್ ಏನಾದರೂ ಇದ್ದರೆ ಟ್ಯಾಂಪರ್ ಮಾಡತ್ತಾರೆ ಎಂದು ಈಗ ಅಲೆಗ್ಸಾಂಡರ ವಿರುದ್ಧ ಅಂದರೆ ಅಂದಿನ ಶ್ರೀಮಾನ್ ಬಂಗಾರಪ್ಪನವರ ಸರ್ಕಾರದ ವಿರುದ್ಧ ಕ್ಲಾಸಿಕ ಕಂಪ್ಯೂಟರ್ ಡೀಲ್ ಬಗ್ಗೆ ಕೋರ್ಟಿಗೆ ಹೋದವರು ನಾವು. ನಾನುಬೈಪಾಸ್ ಸರ್ಜರಿ ಮಾಡಿಸಿಕೊಳ್ಳುವುದಕ್ಕಾಗಿ ಆಸ್ಪತ್ರೆಯಲ್ಲಿದ್ದೆ. ಮಾನ್ಯ ನಾಣಯ್ಯನವರನ್ನು ಮತ್ತು ಲಾಯರ್‌ರನ್ ಕರೆಯಿಸಿಕೊಂಡು ನಾನೇ ಆ ಮಾಹಿತಿಯನ್ನು ಕೊಟ್ಟಿದ್ದುದು. ಬಂಗಾರಪ್ಪನವರ ನಾಯಕತ್ವದಲ್ಲಿ ರಾಜ್ಯ ಸರಿಯಾಗಿ ನಡೆಯುತ್ತಿಲ್ಲ ಎಂದು ನಮಗೆ ಭಾರಿ ಸಿಟ್ಟು ಇತ್ತು. ಅದಕ್ಕೆ ನಾನಾ ಕಾರಣಗಳು ಇವೆ. ಆದರೆ ಅದರ ಬಗ್ಗೆ ದೂರ ಮಾಡುವುದಕ್ಕೆ ನಾನು ಹೋಗುವುದಿಲ್ಲ, ಚೀಫ್ ಸೆಕ್ರೆಟರಿಯನ್ನು because under th provisions of law, we could not avoid making him a party ಈಗ ಇವೊತ ನೀವು ಚೀಫ್ ಸೆಕ್ರೆಟರಿ ಒಬ್ಬರನ್ನು ಮಾಡಿಕೊಂಡಿದ್ದೀರಿ. ನಾನು ಹೇಳುತ್ತೇನೆ ನವ ವ್ಯವಸ್ಥೆಯಲ್ಲಿ that Chief Secretry should work under the instructions from th Chief Minster and cabinet ಆ ಕೆಲಸ ಮಾಡಿದರೆ unfortunately a dynami officer like Aleuander, I call him dynamic, because I know him since 196 he became a victim of circumstances.

ಆಯಿತು; ತದನಂತರ ಬಂದ ಸರ್ಕಾರ ಏನಾಯಿತು. ಅತ್ತೆ ಮೇಲೆ ಇ ಸಿಟ್ಟನ್ನು ಕೊತ್ತಿ ಮೇಲೆ ತೆಗೆದರು ಎಂದು ನಮ್ಮ ಹಳ್ಳಿ ಕಡೆ ಗಾದೆ ಹೇಳುತ್ತಾ ಮೊಯಿಲಿಯವರಿಗೆ ಬಂಗಾರಪ್ಪನವರ ಮೇಲೆ ಸಿಟ್ಟು ಇದ್ದರೆ, ಬಂಗಾರಪ್ಪನವರ ಮೇ ತೀರಿಸಿಕೊಳ್ಳಬೇಕು. ಸಿ.ಬಿ.ಐ.ನವರು ಅಲೆಗ್ಸಾಂಡರ್‌ರವನ್ನು ಸಸ್ಪೆಂಡ್ ಮಾಡಿ ಎಂ

ಹೇಳಲಿಲ್ಲ, ಶ್ರೀವಾತ್ಸವ್ ಐ.ಪಿ.ಎಸ್. ಹಾಗೂ ಗುರುಪ್ರಸಾದ್ ಐ.ಪಿ.ಎಸ್. ಇದ್ದಾರೆ ಅವರಿಗೆ ಮರ್ಡರ್ ಕೇಸ್ ಮೇಲೆ ಚಾರ್ಜ್ ಶೀಟ್ ಹಾಕಿದ್ದಾರೆ; ಅವರನ್ನು ನೀವು ರೀ-ಇನ್‌ಸ್ಟೇಟ್ ಮಾಡುತ್ತೀರಿ; I am not here to argue on behalf of Alexander ಎರಡು ವರ್ಷ ಆಗುತ್ತಾ ಬಂತು, ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ನಮ್ಮ ವ್ಯವಸ್ಥೆಯಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಇರಬಾರದು

ನೇಣು ಹಾಕುವುದಕ್ಕೆ, ತೀರ್ಮಾನ ಕೊಡುವುದಕ್ಕೆ ಕೋರ್ಟು ಇದೆ. ಹೀಗಾಗಿ ಕೋರ್ಟ್ ತೀರ್ಮಾನದ ಪ್ರಕಾರ ಮೊಯಿಲಿ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಕ್ಯಾನ್ಸಲ್ ಮಾಡಿ ಎಂದು ಅವರು ಹೇಳಿದರು, ದುಡ್ಡನ್ನಾದರೂ ರಿಕವರಿ ಮಾಡಿಕೊಳ್ಳಬೇಕಲ್ಲಾ; ಏನು ಕ್ರಮ ಕೈಗೊಂಡರು; ಕೋರ್ಟಿನನ ತೀರ್ಮಾನವಾಗಿದೆ ಅದರ ಮೇಲೆ ಈ ಸಿ.ಬಿ.ಐ. ಇನ್‌ಕ್ವೈಯಿರಿ ಏಕೆ ಬೇಕಾಗಿತ್ತು? Where wa the necessity? ಕೋರ್ಟು ತೀರ್ಮಾನ ಕೊಟ್ಟಿದ್ದು ಆ ತೀರ್ಮಾನದ ಪ್ರಕಾರ ಇವರ ವ್ಯವಹಾರ ಮಾಡಬೇಕು. ಇಂಪ್ಲಿಮೆಂಟ್ ಮಾಡಬೇಕು. ಈ ಕೋರ್ಟ್ ತೀರ್ಮಾನದ ಬಗ್ಗೆ ಇಂಪ್ಲಿಮೆಂಟ್ ಏನು ಮಾಡಿದರು? It was a joint responsiblity. Moil was also a Minister when Bangarappa was the the Chief Minister. He wa a part y to that. ನೇಣು ಹಾಕುವುದಿದ್ದರೆ ಬಂಗಾರಪ್ಪನವರ ಜೊತೆಗೆ ಮೊಯಿಲಿಯವರನ್ ನೇಣು ಹಾಕಬೇಕಾಗಿತ್ತು. ಹೋಗಿ ಹೋಗಿ ಅಧಿಕಾರಿಗಳ ಮೇಲೆ ದ್ವೇಷ ತೀರಿಸಿಕೊಳ್ಳತಕ್ಕಂ ಪ್ರವೃತ್ತಿ ಸರಿಯಿಲ್ಲ; ನೀವು ಬಂದಿದ್ದೀರಿ; we are not vindictive ಎಂದು ನೀ ಮೊದಲೇ ಹೇಳಿದ್ದೀರಿ. ನಿಮ್ಮ ವಿನ್‌ಡಿಕ್ಟೀವ್‌ನೆಸ್ ಇಲ್ಲ ಎಂಬುದು ಜಾಫ ಷರೀಫ್‌ರವರಿಗೆ ಸೀಮಿತವಾಗಕೂಡದು, ಅಧಿಕಾರಿಗಳ ಬಗ್ಗೆಯೂ ಕೂಡ ನೋ unnecessarily when some officer faithfully implements the decision of th Cabinet, or when he understands the cabinet feeling and when he acts on dynamically, he understands the cabinet feeling and when he acts on dynamically, he should not become as scapegoat or a victim of the circumstance

ದಯಮಾಡಿ ಅವರನ್ನು ರೀಇನ್‌ಸ್ಟೇಟ್ ಮಾಡಬೇಕೆಂದು ಈ ಕೇಸನ್ನು ಹಾಕಿದವನ ನಾನು ಹೇಳುತ್ತಿದ್ದೇನೆ; I feel guilty. ಏಕೆಂದರೆ ನಾನು 1967 ರಿಂದ ಅವ ಕಾರ್ಯನಿರ್ವಹಿಸುವುದನ್ನು ನೋಡಿದ್ದೇನೆ. ಎಷ್ಟೋ ದಿನ ಮೆಟ್ಟಿಲು ಇಳಿದು ಹೋಗುತ್ತಿ ಮನುಷ್ಯ; ಚೀಫ್ ಸೆಕ್ರಟರಿ ಆಗಿದ್ದಾಗ ಯಾರಾದರೂ ಹಳ್ಳಿಯವರು ಬಂದರೆ ವಾಪ ಕರೆದುಕೊಂಡು ಹೋಗಿದ್ದನ್ನು ನೋಡಿದ್ದೇನೆ. ಮಡಿವಂತಿಕೆ ಐ.ಎ.ಎಸ್.ಆಫಿಸರ್ಗಳ ಜಾಸ್ತಿ, ಅದರಲ್ಲಿ ಈ ಮನುಷ್ಯ ಕಷ್ಟಪಟ್ಟು ಕೆಲಸ ಮಾಡುತ್ತಿದ್ದವರು. ನನ್ನಿಂ ಹೀಗೆ ಆಯಿತಲ್ಲಾ ಎಂದು I feel guilty. ದಯಮಾಡಿ ಈ ಅನ್ಯಾಯವನ್ನು ಸರಿಪಡಿ ಇನ್ನೂ ಕೋರ್ಟ್ ತೀರ್ಮಾನ ಇದೆ. ನೇಣು ಹಾಕುವುದಾದರೆ ಕೋರ್ಟ್‌ನವ ನೇಣು ಹಾಕಲಿ; ಬೇರೆ ಅಧಿಕಾರಿಗಳಿಗೆ ಏನು ಮಾಡಿದ್ದರೋ, ಗುರುಪ್ರಸಾದ್‌ರವ ಏನು ಮಾಡಿದ್ದರೋ, ಇನ್ನೊಬ್ಬರಿಗೆ ಏನು ಮಾಡಿದ್ದರೋ;

ಅಶೋಕ್ ಕುಮಾರ್‌ಗೆ ಏನು ಮಾಡಿದ್ದರೋ; ಅದೇ ರೀತಿ ಇಲ್ಲೂ ಮಾ ಏಕೆಂದರೆ ಎರಡು ವರ್ಷ ತುಂಬಾ ದಿನವಾಯಿತು; ಇದು ಸರಿಯಲ್ಲ ಎನ್ನ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೇ, ಯಾವುದೇ ಒ ವ್ಯಕ್ತಿ ಅಧಿಕಾರ ನಡೆಸತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳ ಕೈ ಕೆಳಗೆ ಇ ಇರುತ್ತಾರೆ. ಮುಖ್ಯ ಕಾರ್ಯದರ್ಶಿ, ಬೇರೆ ಬೇರೆ ಅಧಿಕಾರಿಳು ಇತ್ಯಾದಿಯವ ಇರಲೇಬೇಕಾಗುತ್ತದೆ. ಹಾಗೆ ಇರತಕ್ಕಂಥ ಸಂದರ್ಭದಲ್ಲಿ there are set of ru

which guide us, how to function ourselves as administrators of the state through cabinet decisions either or other than cabinet decisions also.

ಏಕೆಂದರೆ, ಅಧಿಕಾರದಲ್ಲಿ ಆ ಕಡೆ ಇದ್ದವರೂ ಈ ಕಡೆ ಇದ್ದವರೂ ಎಲ್ಲರೂ ಸೇರಿಕೊಂಡು ಕಾನೂನು ಬಿಟ್ಟು ಯಾರೂ ಕೂಡ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬೇಕಾದಷ್ಟು ಹೇಳಿದರೂ ಕೂಡ ಆ ಕಾನೂನಿಗೆ ಮೋಸ ಮಾಡಲಿಕ್ಕೆ ಹೋದರೆ ಅದು ಅನ್ಯಾಯದ ಪ್ರಶ್ನೆ ಆಗುತ್ತದೆ. ಇವೊತ್ತು ಈ ಅಧಿಕಾರಿ ಒಬ್ಬ ಮುಖ್ಯ ಕಾರ್ಯದರ್ಶಿ. ಕ್ಯಾಬನೆಟ್‌ನಲ್ಲಿ ಏನು ನಡೆಯುತ್ತದೆ ಎನ್ನತಕ್ಕಂಥ ವಿವರಗಳಿಗೆ ನಾನು ಹೋಗುವುದಿಲ್ಲ, ಅದು ತಪ್ಪಾಗುತ್ತದೆ.

ಚೇರ್ಮನ್ : ಈ ವಿಚಾರವನ್ನು ಇನ್ನೊಂದು ಸಮಯದಲ್ಲಿ ಹೇಳಬಹುದಾಗಿತ್ತು.

ಶ್ರೀ ಎಸ್. ಬಂಗಾರಪ್ಪ : ಈಗಾಗಲೇ ಹೇಳಿರಿತಕ್ಕಂಥ ವಿಷಯ ಕಡತಕ್ಕೆ ಹೋದರೆ ಒನ್ ಸೈಡ್ ಆಗಿ ಉಳಿಯುತ್ತದೆ ಎಂಬ ದೃಷ್ಟಿಯಿಂದ ನಾನು ಹೇಳಲೇಬೇಕಾಗಿದೆ. ಈ ವಿಷಯದಲ್ಲಿ ಎಲ್ಲರೂ ಸೇರಿ ಸರ್ವಾನುಮತದಿಂದ ಒಂದು ತೀರ್ಮಾನ ತಂದ ಮೇಲೆ ಅದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಘನತೆ, ಗೌರವ ಏನೂ ಇಲ್ಲವೇನು? ಇವರು ರಾಜಕೀಯದ ಚಟಕ್ಕೆ ಅದನ್ನು ತೆಗೆದುಕೊಂಡು ಹೋಗಿ ಏನಾದರೂ ಒಂದನ್ನು ಹುಡುಕಿ, ಒಬ್ಬರನ್ನು ತೆಗೆದುಕೊಂಡು ಹೋಗಿ ಗುರಿ ಮಾಡಬೇಕು ಎನ್ನತಕ್ಕಂಥ ಉದ್ದೇಶ ಅವರು ಇಟ್ಟುಕೊಂಡು ಆ ರೀತಿ ಮಾಡಲಿಕ್ಕೆ ಹೋದರೆ ಅದು ಬಹಳ ದಿವಸ ಬದುಕಲಾರದು.

ಶ್ರೀ ಹೆಚ್.ಡಿ. ದೇವೇಗೌಡ : ಸಸ್‌ಪೆನ್ಷನ್‌ನಲ್ಲಿ ಇಟ್ಟಿರುವವರನ್ನು ಅಂದರೆ ಅಮಾನತ್ತಿನಲ್ಲಿಟ್ಟಿರುವವರನ್ನು ರಿವೋಕ್ ಮಾಡುವುದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಮಾತನಾಡಿದ್ದಾರೆ. ಬಹುಶಃ ಶ್ರೀಮಾನ್ ಬಂಗಾರಪ್ಪನವರೂ ಕೂಡ ಇದರ ಪರವಾಗಿಯೇ ಮಾತನಾಡುವವರಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಮೆರಟ್ಸ್ ಅಂಡ್ ಡೀಮೆರಿಟ್ಸ್ ಯಾರನ್ನು ಏತಕ್ಕೆ ಸೇರಿಸಿದರು.. ಯಾರ ಮೇಲೆ ಚಾರ್ಜ್ ಶೀಟ್ ಹಾಕಿದರು. ಇದೆಲ್ಲಾ ಅವಶ್ಯಕತೆಯಿಲ್ಲ. The matter is pending before the Court.

ಈಗ ಅಧಿಕಾರಿಯನ್ನು ನಾವು ಅಮಾನತ್ತಿನಲ್ಲಿಟ್ಟಿರುವ ಬಗ್ಗೆ ಯಾವ ಸರ್ಕಾರವೂ ಇರಲಿ. ನಾನು ಅದರ ಬಗ್ಗೆ ದ್ವೇಷಗಳಿಂದ ಮಾತಾನಾಡಲು ಹೋಗುವುದಿಲ್ಲ, ಉತ್ತರ ಕೊಡುವಾಗ ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು ಎಂಬುದನ್ನು ಹೇಳುತ್ತೇನೆ. ಆದರೆ ಈಗ ಯಾರನ್ನು ಸೇರಿಸಿದ್ದಾರೆ. ಏತಕ್ಕೆ ಸೇರಿಸಿದರು. ಅದೆಲ್ಲಾ ಕೋರ್ಟಿನಲ್ಲಿದೆ. the court if it finds that it is not proper they will pass strictures, or whatever it may be. ತಾವು ಹಿರಿಯರು ಇದ್ದೀರಿ, ನಾನು ವಿನಂತಿಸುವುದಿಷ್ಟೇ, ಗೌರ್ನಮೆಂಟ್ ಮೈಂಡ್ ಏನು ಎನ್ನುವುದನ್ನು ರಿಪ್ಲೈ ಕೊಡುವಾಗ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಈಗ ನಾನಾದರೂ ಅದನ್ನೇ ಹೇಳುತ್ತಿದ್ದೆ. ಕೋರ್ಟ್ ಮುಂದೆ ಅದೆಲ್ಲಾ ಇರುವುದರಿಂದ ಈಗ ಆ ವಿಚಾರಕ್ಕೆ ಹೋಗತಕ್ಕಂಥ ಅವಶ್ಯಕತೆ ಏನೂ ಇಲ್ಲ, ಕೋರ್ಟ್‌ನವರು ತೀರ್ಮಾನ ಮಾಡಲಿ. ಈಗ ನನ್ನ ಮೇಲೆ ಓ.ಬಿ.ಐ. ಕೇಸ್ ಹಾಕಿದ್ದಾರೆ. ಸರ್ಕಾರದವರು ಆ ಆಫೀಸರ್ ಅವರನ್ನು ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ನಾಳೆ ಮತ್ತೊಬ್ಬರು ಬರುತ್ತಾರೆ, ಮತ್ತೊಬ್ಬರು ಬಂದು ಮತ್ತೊಬ್ಬರು ಸೆಕ್ರೆಟರಿಯವರನ್ನು ಸಸ್ಪೆಂಡ್ ಮಾಡುತ್ತಾರೆ. ಕೋರ್ಟ್ ಡೈರೆಕ್ಷನ್

ಕೊಟ್ಟರೂ ಕೂಡ ಇವೊತ್ತು ಅಲೆಕ್ಸಾಂಡ್‌ರ್ ಇರಬಹುದು, ಮತ್ತೊಬ್ಬರು ಇರಬಹುದು, ಕೋರ್ಟ್ ಡೈರಕ್ಷನ್ ಇದ್ದರೂ ಅದನ್ನು ಜಾರಿಗೆ ಕೊಡಲೇ ಇರತಕ್ಕಂಥ ಒಂದು ಆಡಳಿತವನ್ನು ನಾವು ರಾಜ್ಯದಲ್ಲಿ ನೋಡಿದ್ದೇವೆ. ಇವೆಲ್ಲಾ ಇರಬೇಕಾದರೆ ನಾವು ಕೋರ್ಟ್‌ನಲ್ಲಿ ಕೇಸ್ ಹಾಕಿ ಹೆದರಿಸುತ್ತೇವೆ ಅಥವಾ ಪ್ರಚಾರ ಮಾಡಿ ಮಾಡಿ ಹೆದರಿಸುತ್ತೇವೆ ಎನ್ನತಕ್ಕಂಥಾದ್ದು ಬಹಳ ದಿವಸ ನಡೆಯುವುದಿಲ್ಲ. ನಾನು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಕೇಳುತ್ತಲೇ ಇದ್ದೇನೆ, ನಿನ್ನೆ ನಾನು ಇಲ್ಲದೇ ಇದ್ದಾಗಲೂ ಕೂಡ ಈ ವಿಷಯ ಪ್ರಸ್ತಾಪಕ್ಕೆ ಬಂದಿತ್ತು ಎಂದು ನಾನು ಕೇಳಿದ್ದೇನೆ. ನನಗೆ ಅನಿಸುತ್ತದೆ, ಇದನ್ನು ಪದೇ ಪದೇ ಪ್ರಸ್ತಾಪ ಮಾಡುವುದರಿಂದ ಇದರಲ್ಲಿ ಬರೀ ಪ್ರಚಾರ ಬಿಟ್ಟರೆ ಬೇರೆ ಏನೇನೂ ಇಲ್ಲ, ನೀವು ಬೇಕಾದಷ್ಟು ಬೊಂಬ್ಡಾ ಹೊಡೆದು ಕೊಂಡರೂ ಕೂಡ ಇದರಲ್ಲಿ ಇರುವುದು ಅಷ್ಟೇನೇ; ಇನ್ನು ಕಾನೂನು, ಅದು ನನಗೆ ಗೊತ್ತಿದೆ, ನಾನೂ ಕೂಡ ಲಾಯರ್ ಆಗಿದ್ದವನು; ನಾನೂ ಕೂಡ ಅಡ್ಮಿನಿಸ್ಟ್ರೇಟರ್ ಆಗಿ ಕೆಲಸ ಮಾಡಿದ್ದೇನೆ. ಸುಮಾರು 28 ವರ್ಷದ ನನ್ನ ರಾಜಕೀಯ ಅನುಭವದಲ್ಲಿ ಯಾರೂ ಕೂಡ ನನಗೆ ಹೇಳಿಕೊಡತಕ್ಕಂಥ ಅವಶ್ಯಕತೆ ನನಗೆ ಏನೂ ಕಾಣಿಸುತ್ತಿಲ್ಲ. ಆಗ ರಾಜಕೀಯದಲ್ಲಿ ತೀಟೆಗೋಸ್ಕರ ನೀವು ಈ ರೀತಿ ತೀರ್ಮಾನ ಮಾಡಿದ್ದೇವೆ ಎಂದರೆ ಅದು ಬೇರೆ ಪ್ರಶ್ನೆ. ಇನ್ನು ಶ್ರೀಮಾನ್ ನಂಜೇಗೌಡರು ಹೇಳಿರತಕ್ಕಂಥದ್ದು ಹೈಕೋರ್ಟ್‌ನಲ್ಲಿ ತೀರ್ಮಾನ ಮಾಡಿದ್ದಾರೆ. ಅದು ಸರಿಯೋ ತಪ್ಪೋ ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ ಎಂದು ಕೇಳಿದ್ದೇನೆ ಅಷ್ಟೇ. ಮುಂದೆ ಅದು ಏನು ಬರುತ್ತದೋ ಎನ್ನುವುದು ಅನಂತರದ ಪ್ರಶ್ನೆ. ಅದನ್ನು ಬಿಟ್ಟು ಹೋ, ಇದು Computer case ಎಂದು ಅಂದರೆ.... ನೀವು ಇರಿಗೇಷನ್ ಡಿಪಾರ್ಟಮೆಂಟಿನಲ್ಲಿ ಹಣ ಅಡ್ವಾನ್ಸ್ ಕೊಡುತ್ತೀರಿ.. ಮತ್ತೊಂದು ಮಾಡುತ್ತೀರಿ. ಮಾನ್ಯ ಸಭಾಧ್ಯಕ್ಷರೇ, ಯಾವಾಗಲೂ ಕೂಡ ಆಡಳಿತ ನಡೆಸಬೇಕಾದರೆ ಆ ಮನುಷ್ಯ ಆ ಒಂದು ತೀರ್ಮಾನ ಮಾಡಬೇಕಾದರೆ ಮೊದಲೇ ಆ ರೀತಿ ತೀರ್ಮಾನಗಳಿದ್ದು, ಮತ್ತೊಂದು ಇದ್ದರೆ, ಹಾಗೆ ಮಾಡಬೇಕಾಗಿ ಬರುತ್ತದೆ. ಅಡ್ಮಿನಿಸ್ಟ್ರೇಷನ್‌ನಲ್ಲಿ ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಯಾರು ಏನೇ ಹೇಳಿದರೂ ಕೂಡ ನ್ಯಾಯ ಬಿಟ್ಟು ಯಾರೂ ಕೂಡ ಹೋಗಿಲ್ಲ; ಇನ್ನು ಈ ಅಧಿಕಾರಿಗಳ ಬಗ್ಗೆ ಒಂದೇ ಒಂದು ಮಾತನ್ನು ನಾನು ಹೇಳುತ್ತೇನೆ. ಆ ಅಧಿಕಾರಿ ನನ್ನ ಕೈ ಕೆಳಗೆ ಕೆಲಸ ಮಾಡಿದ್ದರಿಂದ ಸರ್ಕಾರದಲ್ಲಿ ಕೆಲಸ ಮಾಡಿದ್ದರಿಂದ, ಕ್ಯಾಬಿನೆಟ್‌ಗೆ ಅವರು ಹೊಣೆಗಾರರಾಗಿ ಆ ಕೆಲಸ ಮಾಡಿದ್ದರಿಂದ ಏನಾಯಿತು? ಎಲ್ಲರಿಗೂ ಕೂಡ ಗೊತ್ತಿದೆ. ಈಗಿರುವ ಚೀಫ್ ಸೆಕ್ರೆಟರಿ ಇವೊತ್ತಿಗೆ ಬರುತ್ತಾರೆ. ನೀವು ನಾಳೆ ಕ್ಯಾಬಿನೆಟ್‌ಗೆ ಬರುತ್ತಾರೆ, ನೀವು ನಾಳೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಮತ್ತೊಬ್ಬರನ್ನು ಚೀಫ್ ಸೆಕ್ರೆಟರಿಯನ್ನು ಮಾಡುತ್ತೀರಿ. ಈಗಿರುವವರನ್ನು ಸಸ್ಪೆಂಡ್ ಮಾಡುತ್ತೀರಿ; ಈ ರೀತಿ ಮಾಡುತ್ತಿದ್ದರೆ ಅದು ಸರಿಯೇ? ಇದೇ ರೀತಿಯಲ್ಲಿಯೇ ಅಲೆಕ್ಸಾಂಡರವರದ್ದೂ ಆಗಿರುವುದು. ಇದು ಕೋರ್ಟ್‌ನಲ್ಲಿ ಇದೆಯೆಂದು ದೇವೇಗೌಡರು ಉತ್ತರ ಕೊಡುವ ಕಾಲದಲ್ಲಿ ಹೇಳಲಿ, ನಾನು ಬೇಡ ಅನ್ನುವುದಿಲ್ಲ, ಆದರೆ ಅದನ್ನು ಮಾಡಿರತಕ್ಕಂಥದ್ದು ಹಿಂದಿನ ಸರ್ಕಾರದವರು ಅಂದರೆ ನಾನು ರಾಜೀನಾಮೆ ಕೊಟ್ಟಮೇಲೆ ಬಂದಂಥ ಸರ್ಕಾರ. ಮೊಯ್ಲಿರವರ ಸರ್ಕಾರ. ಅವರು ಮಾಡಿರುವುದು ಮಹಾ ಅಪರಾಧ. ಆ ಅಧಿಕಾರಿ ಒಳ್ಳೆಯ ಅಧಿಕಾರಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅಲೆಕ್ಸಾಂಡರ್ ವಿಚಾರ ಇವತ್ತಿನದಲ್ಲ.

ಶ್ರೀ ಬಿ.ಆರ್. ಯಾವಗಲ್ : ತಾವಿದ್ದಾಗ ಶಂಕರನಾರಾಯಣ್ ಕೇಸ್ ಬಗ್ಗೆ ಏನಾಯಿತು? ಅದನ್ನು ತಾವೇ ಮಾಡಿದ್ದುದು.

ಶ್ರೀ ಎಸ್. ಬಂಗಾರಪ್ಪ : ಕ್ಯಾಬಿನೆಟ್ ತೀರ್ಮಾನಕ್ಕೆ ವಿರುದ್ಧವಾಗಿ ಶಂಕರನಾರಾಯಣ್‌ರವರು ಬರೆದಿದ್ದರು. ಅದು ನಿಮಗೆ ಗೊತ್ತಿಲ್ಲ. ಸುಮ್ಮನೆ ಗೊತ್ತಿಲ್ಲದೆ ಏನೇನೋ ಮಾತನಾಡುವುದಕ್ಕೆ ಹೋಗಬೇಡಿ. ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಯಾವಗಲ್ : ಆ ರೀತಿ ಹೇಳಬೇಡಿ, ದಯವಿಟ್ಟು. ನಾನೂ ಕೂಡ ತಮ್ಮಷ್ಟೇ ಜನರಿಂದ ಆರಿಸಿ ಬಂದಿದ್ದೇನೆ. ಕುಳಿತುಕೊಳ್ಳಿ, ಬಿಡಿ ಎಂದು ಹೇಳುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ಸುಮ್ಮನೆ ಗೊತ್ತಿಲ್ಲದೇ ಮಾತನಾಡುವುದಕ್ಕೆ ಹೋಗಬೇಡಿ. ಇವತ್ತು ನಿಮ್ಮ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾರೆ. ಅವರು ಬರೆದಿದ್ದಕ್ಕೆ ವಿರುದ್ಧವಾಗಿ ಚೀಫ್ ಸೆಕ್ರೆಟರಿಯಾದವರು ಬರೆದರೆ ಅಡಕ್ಕೆ ಬೆಲೆ ಏನಿದೆ? ಅದೂ ಕೂಡ ಇದೇ ರೀತಿ ಆಗಿದ್ದುದು. ಗೊತ್ತಿಲ್ಲದೆ ಸುಮ್ಮನೆ ಏನೇನೋ ಮಾತನಾಡುವುದಕ್ಕೆ ಹೋಗಬೇಡಿ. ಶಂಕರನಾರಾಯಣ ಎಂದಕೂಡಲೇ ಮೇಲಿನಿಂದ ಇಳಿದುಕೊಂಡು ಬರುವುದಿಲ್ಲ. ಅಲ್ಲಿ ಯಾರೇ ಇದ್ದರೂ ಅಷ್ಟೇ. ಚೀಫ್‌ಮಿನಿಸ್ಟರ್‌ಗೆ ವಿರುದ್ಧವಾಗಿ ಬರೆದರೆ ಏನು ಮಾಡಬೇಕು?

ಡಾ॥ ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರಿಗೆ ಆಡಳಿತದಲ್ಲಿ ಎಷ್ಟು ಅನುಭವ ಇದೆಯೋ ಅಷ್ಟೇ ಅನುಭವ ಮಾನ್ಯ ಯಾವಗಲ್‌ರವರಿಗೂ ಮತ್ತು ನಮಗೂ ಇದೆ. ಒಬ್ಬ ಚೀಫ್ ಸೆಕ್ರೆಟರಿ ತನ್ನ ಒಪಿನಿಯನ್ ಕೊಡಬಹುದು. ಆದರೆ ಆರಕ್ಕೇ ಅವನನ್ನು ಕೋಪದಿಂದ ಹೊರಗೆ ಕಳುಹಿಸುವುದು ಅನೈತಿಕ; ಅನ್ ಎಥಿಕಲ್. ಅದು ಸರಿ ಎಂದು ನಿಮ್ಮ ಆತ್ಮವನ್ನು ನೀವೇ ಕೇಳಿಕೊಂಡಿದ್ದರೆ ಅದಕ್ಕೆ ನಿಮ್ಮ ಆತ್ಮ ನಿಮಗೆ ಹೇಳುತ್ತದೆ ಅದು ತಪ್ಪಾಗಿರಬಹುದು ಎಂದು.

ಶ್ರೀ ಎಸ್. ಬಂಗಾರಪ್ಪ : ಅದು ಬಿ.ಜೆ.ಪಿ. ಆತ್ಮ ಅಲ್ಲ; ನಮ್ಮ ಆತ್ಮ ಬೇರೆ ಆತ್ಮ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇವರ ಆತ್ಮ ಬಿ.ಜೆ.ಪಿ. ಆತ್ಮ ಆಗುವುದು ಬೇಡ ಎಂದು.

ಛೇರ್ಮನ್ : ನೀವು ಹೇಳುತ್ತಿರುವುದು ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಬಿ.ಜೆ.ಪಿ. ಆತ್ಮ ಏನೆಂಬುದು ನಮಗೆಲ್ಲಾ ಗೊತ್ತು. ನಾನಾದರೂ ಹೇಳುವುದಿಷ್ಟೆ; ಒಬ್ಬ ಚೀಫ್ ಸೆಕ್ರೆಟರಿ ಆದವನು ಕ್ಯಾಬಿನೆಟ್ ತೀರ್ಮಾನಕ್ಕೆ ವಿರುದ್ಧವಾಗಿ ಬರೆದರೆ ಅವನನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ. ತೀರ್ಮಾನಕ್ಕೆ ವಿರುದ್ಧವಾಗಿ ಬರೆಯುವುದಾದರೆ ಮುಖ್ಯಮಂತ್ರಿ ಏತಕ್ಕೆ ಇರಬೇಕು? ಮಂತ್ರಿಮಂಡಲ ಏತಕ್ಕೆ ಇರಬೇಕು?

(ಗೊಂದಲ)

ಛೇರ್ಮನ್: ನೀವಿಬ್ಬರೂ ಒಟ್ಟಿಗೇ ಮಾತನಾಡಿದರೆ ಹೇಗೆ? ಯಾರಾದರೂ ಒಬ್ಬರು ಮಾತನಾಡಿ.

ಡಾ॥ ಜೀವರಾಜ ಆಳ್ವ : ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಅವರ ಮಾತಿನ ವೈಖರಿ, ಆ ದರ್ಪ, ...

ಶ್ರೀ ಎಸ್. ಬಂಗಾರಪ್ಪ : ಏನು ದರ್ಪ, ಏನು ವೈಖರಿ? ಏನು ನೀವು ಹೇಳುತ್ತಿರುವುದು.

(ಗೊಂದಲ)

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್. ಬಂಗಾರಪ್ಪ : ಕ್ಯಾಬಿನೆಟ್ ತೀರ್ಮಾನಕ್ಕೆ ವಿರುದ್ಧವಾಗಿ ಬರೆದರೆ ಅದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ನೀವೂ ಕೂಡ ಮಂತ್ರಿಯಾಗಿದ್ದರು. ಕ್ಯಾಬಿನೆಟ್ ತೀರ್ಮಾನಕ್ಕೆ ವಿರುದ್ಧವಾಗಿ ಬರೆದಾಗ ನೀವು ಸುಮ್ಮನಿದ್ದಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ಬೇರೆಯವರಿಗೆ ಅವಕಾಶವನ್ನು ಕೊಟ್ಟರೆ ಈ ರೀತಿ ಸಿಡಿ, ಕಿಡಿ ಹಾರುತ್ತದೆ. ಆದ್ದರಿಂದ ಇನ್ನು ಯಾರಿಗೂ ನಾನು ನನ್ನ ಅವಕಾಶವನ್ನು ಕೊಡುವ ಮಟ್ಟದಲ್ಲಿಲ್ಲ. ನನ್ನ ಪಕ್ಕದಲ್ಲಿ ಇರುವುದು ಭಾರೀ ಸಿಡಿ.

ಅಧ್ಯಕ್ಷರು : ನಾಗರಾಜ್‌ರವರೇ, ಸಮಯ ಬಹಳ ಕಡಿಮೆ ಇದೆ. ಈಗಾಗಲೇ ನಾವು 8 ಗಂಟೆಕಾಲ ಚರ್ಚೆ ಮಾಡಿದ್ದೇವೆ. ತಾವೇನೂ, ಹೆಚ್ಚಿಗೆ ಸಮಯವನ್ನು ತೆಗೆದುಕೊಂಡಿಲ್ಲವೆಂದು ನನಗೆ ಗೊತ್ತು. ತಾವು ಹಿರಿಯ ಸದಸ್ಯರು. ನಿಮ್ಮನ್ನು ತಡೆಯಬೇಕೆಂಬ ಉದ್ದೇಶ ನನಗಿಲ್ಲ, ಇವತ್ತು ಕಡೆಯ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ ಆಗಬೇಕಾಗಿದೆ. ಇನ್ನೂ ಕೆಲವು ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ತಾವು ಯಾರಿಗೂ ಈಲ್ಡ್ ಆಗದೆ ನನ್ನ ಜೊತೆ ಸಹಕರಿಸಿದರೆ ನಾವು ಸಭೆಯ ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಭಾಷಣ ಮಾಡುವುದಕ್ಕೆ ಎದ್ದಾಗ ನನ್ನ ಕಾಲವನ್ನೆಲ್ಲಾ ನನ್ನ ಸ್ನೇಹಿತರು ತೆಗೆದುಕೊಳ್ಳುತ್ತಿದ್ದಾರೆ. ನೀವು ಏತಕ್ಕೆ ಕೊಟ್ಟಿರಿ ಎಂದರೆ, ಇದು ಪ್ರಜಾಪ್ರಭುತ್ವ ಇದೇನೂ ಮಿಲ್ಟಿ ಪ್ರಭುತ್ವ ಅಲ್ಲ್, ಇದು ಸರ್ವಾಧಿಕಾರಿಯ ಸಭೆಯೇ? ಯಾರಾದರೂ ಕೇಳಿದರೆ ಅವಕಾಶವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಒಂದು ಮಾತನ್ನು ಹೇಳಲೇಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮತ್ತೆ ಇವರು ಪದೇ ಪದೇ.....

ಅಧ್ಯಕ್ಷರು : ನಾಗರಾಜ್‌ರವರೇ, ನಿಮ್ಮ ಒಳ್ಳೆಯತನವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ, ನೀವು ಮುಂದುವರಿಸಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಪದೇ ಪದೇ ಹೇಳುತ್ತಿದ್ದೇನೆ. ತಮಗೆ ನಮ್ಮ ಎರಡೂ ಕಡೆಯ ಸದಸ್ಯರ ಬಗ್ಗೆಯೂ ಕಣ್ಣಿರಬೇಕು. ಅದು ಬಿಟ್ಟು ಕೇವಲ ಮೊದಲನೇ ಸಾಲಿನ ಬಗ್ಗೆಯೇ ಕಣ್ಣಿದ್ದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ತಮಗೆ ಹೇಳುತ್ತೇನೆ, ನೀವೆಲ್ಲರೂ ಸೇರಿ ಒಂದು ಪಕ್ಷ. ಆದರೆ ಇಲ್ಲಿ ಹಲವಾರು ಪಕ್ಷಗಳಿವೆ. ಎಲ್ಲರಿಗೂ ಪ್ರಾತಿನಿಧ್ಯವನ್ನು ಕೊಡಬೇಕಾದುದು ನನ್ನ ಕರ್ತವ್ಯ.

ಶ್ರೀ ಕೆ.ಎನ್. ನಾಗೇಗೌಡ : ತಾವು ನಿಯಮಾವಳಿಯನ್ನು ಬಿಟ್ಟು ಕೆಲಸಮಾಡಿ ಎಂದು ನಾನು ಎಂದೂ ಕೂಡ ಹೇಳುವುದಿಲ್ಲ,

ಅಧ್ಯಕ್ಷರು : ನಾನು ಮೊದಲನೆಯ ಬೆಂಚ್‌ನ ಕಡೆಗೇ ನೋಡುತ್ತಿದ್ದೇನೆಂಬ ಅಭಿಪ್ರಾಯ ಯಾರಿಗೂ ಬರುವುದ ಬೇಡ. ಹಲವಾರ ಪಕ್ಷಗಳ ಪ್ರತಿನಿಧಿಗಳು

ಇಲ್ಲಿರುವುದರಿಂದ ಅವರೆಲ್ಲರಿಗೂ ಅವಕಾಶವನ್ನು ಕೊಡಬೇಕಾದುದು ನನ್ನ ಕರ್ತವ್ಯ. ಒಬ್ಬರಾದ ಮೇಲೆ ಒಬ್ಬರು ಬರುತ್ತಿದ್ದಾರೆ. ದಯವಿಟ್ಟು ಯಾರೂ ಆ ರೀತಿ ಭಾವನೆ ಮಾಡಿಕೊಳ್ಳುವುದು ಬೇಡ. ಆದಾದ ನಂತರ ನಾನು ತಮ್ಮ ಕಡೆ ಬರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಯಾವ ಯಾವ ಪಕ್ಷಕ್ಕೆ ಎಷ್ಟೆಷ್ಟು ಸಮಯ ಎಂದು ತಾವು ನಿಗಧಿಮಾಡಿದ್ದೀರಿ. ನಮಗೆ ತಾವು ಸಮಯವನ್ನು ನಿಗದಿ ಮಾಡಿದ್ದೀರಿ. ರಾತ್ರಿ 10 ಗಂಟೆಯಾದರೂ ಕೂಡ ತಾವು ನಮಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ರಾತ್ರಿ 10 ಗಂಟೆಯಾದರೂ ಕೂಡುವುದಕ್ಕೆ ನಾನು ಸಿದ್ಧವಾಗಿದ್ದೆ. ಒಂದು ತೊಂದರೆ ಎಂದರೆ, ನಮ್ಮ ಪತ್ರಿಕೋದ್ಯಮದಲ್ಲಿರುವ ಸ್ನೇಹಿತರಿಗೆ ಅವರು ಒಂದು ಸಮಾವೇಶವನ್ನು ಇವತ್ತು ಸಂಜೆ ಪ್ರೆಸ್ ಕ್ಲಬ್‌ನಲ್ಲಿ ಇಟ್ಟುಕೊಂಡಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ನೀವು ಸಂಜೆ 6 ಗಂಟೆ, ಅಥವಾ 6.30 ಗಂಟೆಯೊಳಗೆ ಅಧಿವೇಶನವನ್ನು ಮುಗಿಸಿದರೆ ಮತ್ತೆ ನಾವು ವರದಿಯನ್ನು ಕೊಡುವುದಕ್ಕೆ ನಮಗೆ ಸುಮಾರು ಎರಡೂವರೆ ಗಂಟೆ ಕಾಲ ಬೇಕಾಗುತ್ತದೆ. ಇವತ್ತು ನಾವು ನಮ್ಮ ಕುಟುಂಬದ ಎಲ್ಲರೂ ಬಂದು ಈ ಒಂದು ಸಮಾವೇಶದಲ್ಲಿ ಪಾಲ್ಗೊಳ್ಳಬೇಕಾಗಿದೆ, ತಡವಾಗಿ ಅಧಿವೇಶನ ಕೂರುವುದಾದರೆ ನಮಗೆ ತೊಂದರೆಯಾಗುತ್ತದೆ, ಇವತ್ತಾದರೂ ನಾವು ಬೇಗ ಮನೆಗೆ ಹೋಗುವುದಕ್ಕೆ ಬಿಡಿ ಎಂದು ಕೇಳಿಕೊಂಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ನಾವು ಮೊದಲನೇ ಸಾರಿ ಆರಿಸಿ ಬಂದಿದ್ದೇವೆ. ನಾವು ಮಾತನಾಡುವ ಹಕ್ಕನ್ನು ದಯವಿಟ್ಟು ಮೊಟಕು ಮಾಡಬಾರದೆಂದು ನನ್ನ ವಿನಂತಿ.

ಅಧ್ಯಕ್ಷರು : ತಾವು ತಮ್ಮ ಪಕ್ಷದ ಮುಖಾಂತರ ಬಂದಿದ್ದೀರಿ. ನಿಮ್ಮ ನಾಯಕರಿದ್ದಾರೆ. ನಿಮ್ಮ ಮನವಿಯನ್ನು ಅವರು ಸಲ್ಲಿಸಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಆದ್ದರಿಂದ ಆ ತೊಂದರೆ ಇರುವುದರಿಂದ ನಾವು ರಾತ್ರಿ 10 ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಈ ಸಮಯವನ್ನು ಹೇಗೆ ನಿಗದಿ ಮಾಡುತ್ತೀರಿ ಎಂಬುದನ್ನು ತಾವೇ ತೀರ್ಮಾನ ಮಾಡಬೇಕ. ನಮಗೆ ನಿಗದಿ ಮಾಡಿರವ ಸಮಯವನ್ನು ಹೇಗೆ ಕೊಡತ್ತೀರೆಂಬುದು ತಮಗೆ ಬಿಟ್ಟಿದ್ದುದು. ಆದರೆ ನಮಗೆ ಸಮಯನ್ನಂತೂ ಕೊಡಬೇಕು. ನಾವು ಕೊಟ್ಟಿರತಕ್ಕದ್ದು 7-8 ಸದಸ್ಯರ ಹೆಸರುಗಳು. ನಾವು ಇಲ್ಲಿ ಒಂದು ಅಧಿಕೃತ ವಿರೋಧ ಮಾತನಾಡಬೇಕೆಂದು ನಾವು ನಮ್ಮ ಸದಸ್ಯರಿಗೆ ತಿಳಿಸಿದ್ದೇವೆ. ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಾಗಬೇಕು. ತಾವು ಹೇಗೆ ಸಮಯವನ್ನು ಹಂಚಿಕೊಡುತ್ತೀರ ಅದು ತಮಗೆ ಬಿಟ್ಟಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರೇ, ಹಾಗಾದರೆ ನನ್ನ ಸಮಯವನ್ನೂ ಕಿತ್ತುಕೊಳ್ಳಬೇಕೆಂದು ತಾವು ಹೊರಟಿದ್ದೀರಾ? ಮಾನ್ಯ ಅಧ್ಯಕ್ಷರೆ, ಅಮಾನತ್ತಿನಿಲ್ಲಿಟ್ಟಿರವ ಹಿರಿಯ ಅಧಿಕಾರಿ ಅಲೆಗ್ಸಾಂಡರ್ ಬಗ್ಗೆ ಮಾತನಾಡಿ ಅವರನ್ನು ಅಮಾನತ್ತಿನಲ್ಲಿಟ್ಟಿರುವುದು ಸರಿಯಾದ ಸಮಯವಲ್ಲ, ಸರ್ಕಾರ ಮತ್ತೆ ಅವರ ಸೇವೆಯನ್ನು ಪಡೆದುಕೊಳ್ಳಬೇಕು. ಅವರು ಒಬ್ಬ ದಕ್ಷ ಅಧಿಕಾರಿ ಎಂಬುದಲ್ಲಿ ಎರಡನೇ ಅಭಿಪ್ರಾಯ. ಹಿಂದಿನ ಸರ್ಕಾರಕ್ಕೂ ನಾನು ಈ ಸರ್ಕಾರಕ್ಕೂ ನಾನು ಈ ಮಾತನ್ನು ಹೇಳಿದೆ. ಅವರಿಗೆ ಆ ಭಾವನೆ ಇರಲಿಲ್ಲ, ಅವರ ಭಾವನೆ ಪೂರ್ವಗ್ರಹಪೀಡಿತವಾಗಿದ್ದುದರಿಂದ ಅವರು ಅದಕ್ಕೆ ತಯಾರಾಗಿರಲಿಲ್ಲ, ಆದ್ದರಿಂದ ನಮ್ಮ ಮಾತು ಅವರಿಗೆ ಹಿಡಿಸಲಿಲ್ಲ. ಹೊಸ ಸರ್ಕಾರಗಳು ಬಂದಾಗಲೆಲ್ಲಾ ಅಧಿಕಾರಿಗಳನ್ನು ಬದಲಾವಣೆ ನೀತಿಯನ್ನು ಕೈ ಬಿಡಬೇಕ. ಮಾನ್ಯ ಮುಖ್ಯ ಮಂತ್ರಿಗಳು ಒಬ್ಬ ಪತ್ರಿಕಾ ಕಾರ್ಯದರ್ಶಿಯವರನ್ನು

ನೇಮಕ ಮಾಡಿದ್ದಾರೆ. ಅವರು ಎಂದರೆ ಮಾನ್ಯ ಜಯಶೀಲರಾವ್‌ರವರು. ಇವತ್ತು ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ಅವರು ಒಳ್ಳೆಯ, ಹಿರಿಯ, ಶ್ರೇಷ್ಠ ಹಾಗೂ ಈ ರಾಜ್ಯದಲ್ಲಿ ಅಪಾರವಾದ ರೀತಿಯಲ್ಲಿ ಪತ್ರಿಕೋದ್ಯಮದಲ್ಲಿ ಸೇವೆಯನ್ನು ಮಾಡಿರರತಕ್ಕವರು. ಇವರ ಆಯ್ಕೆ ತಕ್ಕ ಆಯ್ಕೆ. ಇದು ಬಹಳ ಒಳ್ಳೆಯ ಆಯ್ಕೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಈ ಕೆಲಸವನ್ನು ಮಾಡಿರುವುದು ಅವರ ಆಡಳಿತವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಮೊದಲನೇ ಹೆಜ್ಜೆಯನ್ನಿಟ್ಟಿದ್ದಾರೆಂದು ಹೇಳಬಯಸುತ್ತೇನೆ.

ಅಧ್ಯಕ್ಷರೆ, ಈ ಸದನದಲ್ಲಿ ನನ್ನ ಅನೇಕ ಹಿರಿಯ ಸ್ನೇಹಿತರು, ಒಳ್ಳೊಳ್ಳೆಯ ಸ್ನೇಹಿತರು, ಇದ್ದರು ನಾನು ತಮ್ಮ ಆಯ್ಕೆಯ ಸಂದರ್ಭದಲ್ಲಿಯೂ ಸಹ ಇದರ ಬಗ್ಗೆ ಹೇಳಿದೆ. ಡಿ.ಬಿ. ಚಂದ್ರೇಗೌಡರು, ಏಕಾಂತಯ್ಯನವರು, ಎಸ್.ಎಂ. ಕೃಷ್ಣ ಅವರು, ಪ್ರೊಫೆಸರ್ ನಂಜುಂಡಸ್ವಾಮಿಯವರು, ಬಾಬಾಗೌಡರು, ಸುಬ್ಬಯ್ಯನವರು ಎಲ್ಲರೂ ಇರಬೇಕಾಗಿತ್ತು ಈ ಸದನದಲ್ಲಿ ಎಂಬುದು ನನ್ನ ವಾದ ನನ್ನ ಮನಸ್ಸು ಅದಿದ್ದರೆ ಚರ್ಚೆಗೆ ಬಹಳ ಒಳ್ಳೆಯ.......

ಶ್ರೀ ಕೆ.ಎನ್. ನಾಗೇಗೌಡ : ಕೃಷ್ಣ ಅವರನ್ನು ನಾಮಿನೇಟ್ ಮಾಡಿಕೊಳ್ಳಬಹುದು ತಾವು ಇಲ್ಲಿ,

ಶ್ರೀ ವಾಟಾಳ್ನಾಗರಾಜ್ : ಇಲ್ಲಿಗೆ ನಾಮಕರಣ ಮಾಡಿಕೊಳ್ಳುವ ಅವಕಾಶ ಇದ್ದಿದ್ದರೆ ನೇರವಾಗಿ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೆ. ಅದಿಲ್ಲ, ನಾಮಕರಣ ಮಾಡುವ ಅವಕಾಶ ಇರುವುದು ಆ ಮನೆಗೆ. ಮಾಡತಕ್ಕಂಥ ಶಕ್ತಿ ಸರ್ಕಾರಕ್ಕಿದ್ದರೆ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಾದರೆ ಸರ್ಕಾರ ಉಪಯೋಗಿಸಿಕೊಳ್ಳಲಿ. ಪಾಪ ಅವರನ್ನು ಸೋಲಿಸಿ ಗೆದ್ದಿರುವವರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಬಹಳ ಪ್ರಾಮಾಣಿಕವಾದ ಚಿಂತನೆ ಇದೆ ನಾಗೇಗೌಡರೇ ಪಾಪ, ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಅವರು ಗೌರವಾನ್ವಿತ ಸದಸ್ಯರು ಬಂದಿದ್ದಾರೆ. ಅದರ ಬಗ್ಗೆ ಇಲ್ಲ. ತಮಗೆ ಹೇಳುವುದಾದರೆ ಒಂದು ಕಾಲದಲ್ಲಿ ಲೋಕಸಭೆಯಲ್ಲಿ ದೊಡ್ಡ ದೊಡ್ಡ ಘಟಾನುಘಟಿಗಳು ಸೋತುಬಿಟ್ಟರು. ವಾಜಪೇಯಿ ಅವರು ಸೋತಾಗ ಫರ್ನಾಂಡಿಸ್ ಅವರು ಸೋತಾಗ ನಾನು ಹೇಳಿದೆ. ಈ ತತ್ವ ಭೇದ ಏನೇ ಇರಬಹುದು. ವಾಜಪೇಯಿ ಇರಬೇಕು ಪಾರ್ಲಿಮೆಂಟ್ನಲ್ಲಿ, ಫರ್ನಾಂಡೀಸ್ ಇರಬೇಕು ಎಂದು ಹೇಳಿದಂಥ ಮನುಷ್ಯ ನಾನು. ಕಾರಣ ಬೇರೆ. ನಮ್ಮಲ್ಲಿ ತತ್ವಭೇದ ಇರಬಹುದು. ಆದರೆ ಅಂಥ ವ್ಯಕ್ತಿಗಳೆಲ್ಲಾ ನಮ್ಮಲ್ಲಿರಬೇಕಾದುದು ಕರ್ತವ್ಯ. ಸ್ವಾಮಿ, ಅಧ್ಯಕ್ಷರೇ, ನಮ್ಮ ದೇವೇಗೌಡರ ಸರ್ಕಾರ ಬಂದನಂತರ ಅವರು ಹೋದಕಡೆಯೆಲ್ಲಾ ಸ್ವಾಭಿಮಾನಿ, ಸಮೃದ್ಧ, ಸಜೀವ ಈ ಮೂರೂ ಅವರಲ್ಲಿ ಒಳ್ಳೆಯ ವಜ್ರಕವಚವಾಗಿ ಇಟ್ಟುಕೊಂಡಿದ್ದರು. ಸ್ವಾಭಿಮಾನಿ, ಸಮೃದ್ಧ ಮತ್ತು ಸಜೀವ, ಈ ಮೂರರ ಅರ್ಥ ಇದೆಯಲ್ಲಾ ಇದು ಬಹಳ. ನಮ್ಮ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರ ಕನ್ನಡದ ಬಗ್ಗೆ ಇಲ್ಲವೇ ಇಲ್ಲ, ಯಾವ ಪುಟ ತಿರುವಿದರೂ ಸ್ವಾಭಿಮಾನ ಇಲ್ಲ, ಸಜೀವ ಇಲ್ಲ ಎಲ್ಲಿದೆ ಎಂಬುದನ್ನು ತೋರಿಸಿ. ಸಮೃದ್ಧ ಇಲ್ಲ,

ಈ ಪದಗಳನ್ನು ಜೀವರಾಜ್ ಆಳ್ವ ಅಲ್ಲಿ ಹುಟ್ಟಹಾಕಿ ಈ ಕಡೆ ಬಂದು ಆ ಪದಗಳು ಅನಾಥವಾಗಿ ಅಲ್ಲಿ ಕುಳಿತಿವೆ. ಮುಖ್ಯಮಂತ್ರಿಗಳು ಇಲ್ಲಿದ್ದರೆ ನಾನು ಹೇಳುತ್ತಿದ್ದೆ. ಸಜೀವ ಎಂದರೆ ಇಲ್ಲಿಯವರೆಗೂ ನಿರ್ಜೀವವಾಗಿದ್ದವೆಯೇ ನಾವು? ಸಜೀವ, ಸಮೃದ್ಧಿ, ಸ್ವಾಭಿಮಾನ ಈ ಮೂರರ ಅರ್ಥ ಇದೆಯಲ್ಲಾ ಸಿದ್ಧರಾಮಯ್ಯನವರೇ, ಇದು ಬಹಳ. ತಮಗೂ ಗೊತ್ತಿದೆ. ತಾವು ಕನ್ನಡದ ಸಂಸ್ಥೆಯ ಅಧ್ಯಕ್ಷರಾಗಿ ಮೇಲೆ ಬಂದು ಪ್ರಕಾಶಮಾನಕ್ಕೆ ಬಂದಿದ್ದೀರಿ. ನಾನು ಸಂತೋಷ ಪಡುತ್ತೇನೆ. ಆದರೆ ತಮ್ಮ ಸರ್ಕಾರ, ನಾನು ನಿನ್ನೆಯಿಂದಲೂ ಅಧ್ಯಕ್ಷರೇ, ಪುಟ ಪುಟವನ್ನು ಬಿಚ್ಚಿದ್ದೇನೆ. ಒಂದು

ಸ್ವಾಭಿಮಾನ ಕಾಣಲಿಲ್ಲ, ಸಜೀವ ಕಾಣಲಿಲ್ಲ, ಸಮೃದ್ಧಿ ಕಾಣಲಿಲ್ಲ. ಆದ್ದರಿಂದ ಸ್ವಾಭಿಮಾನ, ಸಮೃದ್ಧ, ಸಜೀವ ಮೂರನ್ನು ಅನ್ವರ್ಥನಾಮವಾಗಿ ತಮ್ಮ ಸರ್ಕಾರ ಮಾಡುವುದಕ್ಕೆ ಕಾರ್ಯಕ್ರಮಗಳೇನು ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ನಿಮ್ಮ ಯೋಜನೆಗಳೇನು ಎಂಬುದನ್ನು ಸ್ಪಷ್ಟಪಡಿಸಬೇಕು. ಕೇವಲ ಒಂದು ಅಂಕಿಯಲ್ಲಿ ಮಾತನಾಡಿ ಮುಗಿಸುವುದಕ್ಕಾಗುವುದಿಲ್ಲ. ಸ್ವಾಭಿಮಾನಕ್ಕೆ ನಿಮ್ಮ ಯೋಜನೆಗಳೇನು? ಸಮೃದ್ಧಿಗೆ ನಿಮ್ಮ ಯೋಜನೆಗಳೇನು? ಈ ಕೆಲಸವನ್ನು ತಮ್ಮ ಸರ್ಕಾರ, ತಾವು ಮಾಡಬೇಕು. ನೀವು ಮಾಡಿಲ್ಲ ಎಂದರೆ .... ಏನು ಸ್ವಾಮಿ, ಬೈರೇಗೌಡರೇ, ಏತಕ್ಕೆ ಏಳುತ್ತಾ ಇದ್ದೀರಿ? ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ನಿಮ್ಮ ಜೊತೆಯಲ್ಲಿ ಕುಳಿತುಕೊಳ್ಳೋಣ ಎಂದು.

ಶ್ರೀ ವಾಟಾಳ್ ನಾಗರಾಜ್ : ಆ ಚಟ ಇನ್ನೂ ಹೋಗಿಲ್ಲ. ನಮ್ಮ ಪಕ್ಕದಲ್ಲಿ ಕೆಲಸ ಮಾಡಿದ್ದಾರೆ. ಅದರಲ್ಲಿ ನಾನು ಅವರನ್ನು ಮೆಚ್ಚುತ್ತೇನೆ. ಅದರಲ್ಲೂ ಅಬ್ಕಾರಿ ಬಗ್ಗೆ ಅವರಿಗಿದ್ದಂಥ ಅಪಾರವಾದ ಅನುಭವ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅದನ್ನು ಮೆಚ್ಚುತ್ತೇನೆ. ಆದರೆ ಅವರಿಗೆ ಅದೇ ಇಲಾಖೆ ಕೊಡಬೇಕಾಗಿತ್ತು. ತಿಪ್ಪೇಸ್ವಾಮಿಯವರಿಗೆ ಕೃಷಿ ಕೊಟ್ಟು ಅಬ್ಕಾರಿ ಅವರಿಗೆ ಕೊಟ್ಟಿದ್ದರೆ ಸ್ವಲ್ಪ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಇರಲಿ. ಆದರೂ ಕೂಡ ಈ ಮೂರು ದೊಡ್ಡದೊಡ್ಡ ಪದಗಳು ಯಾವ ಗೋಡೆ, ಬೀದಿ ನೋಡಿ, ಅಲ್ಲೆಲ್ಲಾ ಇದ್ದುವು. ಸಮೃದ್ಧಿ, ಸ್ವಾಭಿಮಾನ, ಸಜೀವ. ನಾನು ಅಂದುಕೊಂಡೆ ಸಮೃದ್ಧಿ ಎಂದರೆ ರಾಮಕೃಷ್ಣ ಹೆಗಡೆಯವರು, ಸ್ವಾಭಿಮಾನ ಎಂದರೆ ದೇವೇಗೌಡರು, ಸಜೀವ ಎಂದರೆ ಎಸ್.ಆರ್. ಬೊಮ್ಮಾಯಿಯವರು, ಈ ಮೂರು ಜನ ಎಂದು ನಾನು ಅಂದುಕೊಂಡಿದ್ದೆ. ಸಜೀವ ಒಬ್ಬರು, ಸ್ವಾಭಿಮಾನ ಒಬ್ಬರು. ಹೀಗೆ ಮೂರು ಜನ ಮೂರು ಬಿರುದುಗಳನ್ನು ಸಜೀವ, ಸ್ವಾಭಿಮಾನ, ಸಮೃದ್ಧಿ ಹಾಕಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಇದು ನೀವು ಮಾಡಿದ್ದೀರಿ. ಸಂತೋಷ. ನನಗೆ ಬಹಳ ಮೆಚ್ಚುಗೆಯಾಗತಕ್ಕಂಥದ್ದು.

ಶ್ರೀ ಸಿದ್ಧರಾಮಯ್ಯ : ಈ ಪದಗಳೂ ಕೂಡ ಈ ನಾಡಿನ ಜನರ ಬದುಕಿಗೆ ಸಂಬಂಧಪಟ್ಟು ಪದಗಳೇ ಹೊರತು ವ್ಯಕ್ತಿಗಳಿಗೆ ಸಂಬಂಧಪಟ್ಟು ಪಟಗಳು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ನಾಡಿನ ಆಡಳಿತವನ್ನು ನಡೆಸಬೇಕಾದರೆ ಒಂದೆ ಸೂತ್ರಧಾರಿ ವ್ಯಕ್ತಿಗಳು ಬೇಕು. ಆ ವ್ಯಕ್ತಿಗಳಿಗೇ ಹೆಸರು ಅದು. ಈಗ ಅರ್ಥ ಸಚಿವರು ಅಂದರೆ ಯಾರು ಸಿದ್ಧರಾಮಯ್ಯನವರು. ಸುಮ್ಮನೆ ಅರ್ಥ ಸಚಿವರು ಎಂದು ಹೇಳಿಬಿಟ್ಟರೆ ಆಗುವುದಿಲ್ಲ, ಸಿದ್ಧರಾಮಯ್ಯನವರ ಕೈಯ್ಯಲ್ಲಿ ಅರ್ಥ ಇಲಾಖೆ ಇದೆ. ಅವರಿಂದ ನಡೆಸುತ್ತೇವೆ ಎಂದು ಹೇಳುವ ವ್ಯವಸ್ಥೆ. ಆದ್ದರಿಂದ ಈ ಮೂರ ಜನ ಸ್ವಾಭಿಮಾನ, ಸಜೀವ, ಸಮೃದ್ಧಿ ಕಟ್ಟಿಕೊಂಡು ಊರಲ್ಲೆಲ್ಲಾ ಓಡಾದಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಅದರಲ್ಲೇನೂ ಅನುಮಾನ ಇಲ್ಲ. ಈ ಮೂರು ಜನರು ನಮ್ಮ ಪಕ್ಷದ ಹಿರಿಯ ನಾಯಕರು. ಅವರು ಕೊಡತಕ್ಕಂಥ ಮಾರ್ಗದರ್ಶನದಲ್ಲಿಯೂ ಕೂಡ ಈ ಸರ್ಕಾರ ನಡೆಯುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಂದರೆ 3 ಜನ ಮುಖ್ಯ ಮಂತ್ರಿಗಳು ಎಂದು.

ಶ್ರೀ ಸಿದ್ಧರಾಮಯ್ಯ : ಮೂರು ಜನ ಮುಖ್ಯಮಂತ್ರಿಗಳಲ್ಲ. ಮುಖ್ಯ ಮಂತ್ರಿಗಳು ನಮ್ಮ ಸನ್ಮಾನ್ಯ ದೇವೇಗೌಡರು. ಆದರೆ ಈ ಮೂರು ಜನರು ನಮ್ಮ ಪಕ್ಷಕ್ಕೆ ಮಾರ್ಗದರ್ಶನ ಮಾಡತಕ್ಕ ನಾಯಕರುಗಳು.

ಶ್ರೀ ವಾಟಾಳ್ ನಾಗರಾಜ : ಅಂದರೆ ತೆರೆ ಮರೆಯಲ್ಲಿ ಸಚಿವ ಸಂಪುಟದ ಸಭೆಯಲ್ಲಿ ಈ ಮೂರು ಜನ ಸೇರುತ್ತಾರೆ.

ಶ್ರೀ ಸಿದ್ಧರಾಮಯ್ಯ : ನಮ್ಮ ಪಕ್ಷಕ್ಕೆ ಮಾರ್ಗದರ್ಶನ ಮಾಡತಕ್ಕಂಥ ಈ ಮೂರು ಜನ ಕೂಡ ನಾಯಕರುಗಳು.

ಶ್ರೀ ವಾಟಾಳ್ ನಾಗರಾಜ್ : ಬಹಳ ಸಂತೋಷ. ಈ ಸರ್ಕಾರದ ಬಗ್ಗೆ ಬಹಳ ನಿರೀಕ್ಷಣೆ ಮಾಡಿದ್ದೆ. ಈ ರಾಜ್ಯದ ನವ ಕರ್ನಾಟಕ ನಿರ್ಮಾಣಕ್ಕಾಗಿ, ಕನ್ನಡದ ಬೆಳವಣಿಗೆಗಾಗಿ, ಕರ್ನಾಟಕ ಅಭ್ಯುದಯಕ್ಕಾಗಿ ಬಹಳ ನಿರೀಕ್ಷಣೆ ಮಾಡಿದ್ದೇನೆ. ಒಂದು ಗಾದೆ ನೆನಪಿಗೆ ಬರುತ್ತದೆ. ಅದೇನೆಂದರೆ "ಬರಗೆಟ್ಟ ದೇವರಿಗೆ ಪರ ಮಾಡಿದ ಹಾಗೆ" ಅಂತ. ದೇವರೇ ಬರಗೆಟ್ಟು ಹೋಗಿದ್ದಾನೆ. ಅವರಿಗೆ ಪರ ಮಾಡಿದಾಕ್ಷಣ ಅನ್ನ ತಿಂದು ಬಿಡ್ತು, ಮಡಿಕೆ ತಿಂದು ಬಿಡ್ತು, ಓಲೆಗೆ ಹಾಕಿದ ಸೌದೆಯನ್ನೇ ತಿಂದುಬಿಡ್ತು. ಹಾಗೆ ಇವರು ಅಧಿಕಾರಕ್ಕೆ ಬಂದ ತಕ್ಷಣವೇ ಮಂತ್ರಿಗಳು ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಕೊಡಲು ಪ್ರಾರಂಭಮಾಡಿದರು. ಒಬ್ಬರು ಬಡ್ಡಿ ಮನ್ನಾ ಮಾಡುತ್ತೇವೆಂದರು, ಇನ್ನೊಬ್ಬರು ಸುಸ್ತಿ ಬಡ್ಡಿ ಮನ್ನಾ ಎಂದು ಹೇಳಿದರು. ಇನ್ನೊಬ್ಬರು ಶ್ವೇತಪತ್ರ ಎಂದರು. ಒಂದು ಕಡೆಯಿಂದ ಹೇಳುವುದಕ್ಕೆ ಪ್ರಾರಂಭ ಮಾಡಿದರು.

ಇನ್ನೂ 17ನೇ ತಾರೀಖು ನಮ್ಮ ಅಧಿಕಾರ ಮುಗಿದೇ ಇಲ್ಲ. ಆಗಲೇ ನೀವು ಬರಗೆಟ್ಟ ದೇವರಿಗೆ ಪರ ಮಾಡಿದ ಹಾಗೆ ಮಾಡಲು ಪ್ರಾರಂಭ ಮಾಡಿದಿರಿ. ದೇವರು ಬರಗೆಟ್ಟು ಬಿಟ್ಟಿದ್ದಾನೆ. ಪರ ಅಂದರೆ ಹೊಟ್ಟೆಗಿಲ್ಲ. ಪಜೀತಿ ಗೆಟ್ಟು ಹೋಗಿದ್ದಾನೆ. ಬರ ಗೆಟ್ಟದೇವರಿಗೆ ಪರ ಅಂದರೆ ಆ ವ್ಯವಸ್ಥೆಯನ್ನು ಮಾಡಿದ ತಕ್ಷಣದೇವರು ನೈವೇದ್ಯದವರೆಗೆ ಕಾಯಲಿಲ್ಲ, ಎದ್ದು ಬಂದೇ ಬಿಟ್ಟ. ಅಡಿಗೆ ಮನೆಗೇ ಬಂದ. ಮಡಿಕೆ ತಿಂದ. ಬಿಸಿ ಬಿಸಿ ಅನ್ನ ತಿಂದ. ಒಂದೇ ಸಾರಿ ಎಲ್ಲವನ್ನೂ ಗಬಗಬನೆ ತಿಂದ. ಈ ಪರಿಸ್ಥಿತಿ ಜನರಲ್ಲಿ ಭಾವನೆ ಮೂಡುತ್ತಿದೆ. ನಿಮ್ಮೆಲ್ಲರ ಬಗ್ಗೆ ಮೆಚ್ಚುಗೆ ಇದೆ. ನಿಮ್ಮ ಸಚಿವ ಸಂಪುಟದಲ್ಲಿರತಕ್ಕ ಹಿರಿಯ ಸಚಿವರು ಇದ್ದೀರಿ. ನೀವು ತಿಳುವಳಿಕೆ ಇರತಕ್ಕಂತಹವರು ಇದ್ದೀರಿ. ಆದರೆ ಬರ ಇದೆಯಲ್ಲಾ, ಈ ಬರಕ್ಕೆ ಸ್ವಲ್ಪ ಲಗಾಮು ಹಾಕಬೇಕು. ಇದು ಒಳ್ಳೆಯ ಲಕ್ಷಣ ಅಲ್ಲ. ಬಂದ ತಕ್ಷಣ ಶುರು ಮಾಡಿಬಿಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ : ನಮಗೆ ಅಧಿಕಾರದ ದಾಹ ಇಲ್ಲ. ಅಧಿಕಾರದ ಬರನೂ ಇಲ್ಲ. ಜನರು ಈ ಕಾಂಗ್ರೆಸ್ ಸರ್ಕಾರದಿಂದ ಬೇಸತ್ತು ನಮಗೆ ಬದಲಾವಣೆ ಮಾಡಿ ನಮಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ನಾವು ಜನರ ಕೆಲಸ ಮಾಡುವುದಕ್ಕೋಸ್ಕರ ಇದ್ದೇವೆಯೇ ಹೊರತು ಯಾವತ್ತೂ ಕೂಡ ಅಧಿಕಾರದ ದಾಹಕ್ಕಾಗಲಿ, ಅಧಿಕಾರದ ಬರಕ್ಕಾಗಲಿ ಅದಕ್ಕೆ ಅಂಟಿಕೊಂಡು ಕುಳಿತುಕೊಳ್ಳತಕ್ಕ ಕೆಲಸವನ್ನಾಗಲೀ ನಾವು ಯಾವತ್ತೂ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಏನು ಬೈರೇಗೌಡರೇ?

ಶ್ರೀ ಸಿ. ಬೈರೇಗೌಡ : ಬರ ಇದ್ದರೇನೆ ಇದೆಲ್ಲಾ ಅಧಿಕಾರ ದಾಹ ಬರಬೇಕಾಗಿಲ್ಲ, ಬರ ನಮ್ಮಲ್ಲೇನೂ ಇರಲಿಲ್ಲ. ಬರ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ದಾಹ ಕೂಡ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವೂ ಒಬ್ಬರು. ಒಂದೇ ರೆಕಾರ್ಡು. ಬದಲಾವಣೆ ಆಗಬಹುದು ಎಂದು ಇದ್ದೆ.

ಶ್ರೀ ಸಿ. ಬೈರೇಗೌಡ : ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಕೊಟ್ಟಿರಿ ಎಂದು ನೀವೇ ಹೇಳಿದಿರಿ. ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆ, ಶ್ವೇತ ಪತ್ರ ಹೊರಡಿಸುತ್ತೇವೆ ಎಂದು ಹೇಳಿದ್ದೇವೆ ಎಂದು ನೀವೇ ಹೇಳಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮದೆಲ್ಲಾ ಒಂದೇ ಟೇಪು ಎಂಬುದು ನಿಮಗೆ ಗೊತ್ತಿದೆ.

ಶ್ರೀ ವಾಟಾಳ ನಾಗರಾಜ್ : ನಮ್ಮ ಗೃಹ ಸಚಿವರು, ನಮ್ಮದೆಲ್ಲಾ ಒಂದೇ ಟೇಪು ಎಂಬುದು ನಿಮಗೇ ಗೊತ್ತಿದೆ ಎಂದು ಹೇಳುತ್ತಿದ್ದಾರೆ. ಅಂದರೆ ಇವರಲ್ಲಿ ಬದಲಾವಣೆ ಇಲ್ಲ, ಒಂದೇ ಟೇಪು. ಯಾವತ್ತೂ ಬದಲಾವಣೆಯಾಗುವುದಿಲ್ಲ ಇವರು. ತಪ್ಪು ಇರಲಿ, ಯಾವುದೇ ಮೋಸ ಇರಲಿ, ಎಲ್ಲಾ ಒಂದೇ. ಬದಲಾವಣೆ ಮಾತ್ರ ಆಗುವುದಿಲ್ಲ.

ಅಧ್ಯಕ್ಷರು : ಅವರವರ ಕಷ್ಟ ಅವರವರಿಗೆ. ನಿಮ್ಮ ಮಾತು ನಿಮಗೆ. ಅವರ ಪ್ರತಿಕ್ರಿಯೆ ಅವರಿಗೆ. ಆದರೆ ಶ್ರೀಮಾನ್ ನಾಗೇಗೌಡರು ಹಣೆ ಹಣ ಚಚ್ಚಿಕೊಳ್ಳುತ್ತಿದ್ದಾರೆ. ನನ್ನ ಹೆಸರು ಪಟ್ಟಿಯಲ್ಲಿದೆ, ಟೈಮು ಹೋಗುತ್ತಿದೆಯಲ್ಲಾ ಅಂತ

(ನಗು)

ಶ್ರೀ ಕೆ.ಎನ್. ನಾಗೇಗೌಡ : ನಾನು 12 ವರ್ಷ ಕೌನ್ಸಿಲ್ನಲ್ಲಿ ಕೆಲಸ ಮಾಡಿದೆ. ಮೂರು ದಿವಸ ನಾನು ಭಾಷಣ ಮಾಡುವುದಕ್ಕೆ ಯಾವತ್ತೂ ಕಾಯಲಿಲ್ಲ. ವಿಧಿನೇ ಇಲ್ಲ. ರೂಲ್ಸ್ ಪ್ರಕಾರ ಹೋಗಲೇಬೇಕು. ಇಲ್ಲದಿದ್ದರೆ ಕೆಲಸವಾಗುವುದಿಲ್ಲ.

ಅಧ್ಯಕ್ಷರು : ಹಠ ಹಿಡಿದು ಈ ಮನೆಗೆ ಬಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ವಿಧಾನ ಪರಿಷತ್ತಿನಲ್ಲಿ, ಅವರದೇ ರಾಜ್ಯ. ಅಲ್ಲಿ 45 ಜನ ಇದ್ದಾರೆ. ಇಲ್ಲಿ 224 ಜನ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಸದಸ್ಯರು ಹೊಸಬರಿಗೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಹೊಸದೇನೂ ಅಲ್ಲ, ನಿಮ್ಮನ್ನು ನೋಡಿದ್ದೇನೆ. 6 ತಿಂಗಳ ಹಿಂದೆ ಒಂದು ನಿಮಿಷವೆಂದು ಹೇಳಿ ಒಂದು ಗಂಟೆ ಹೇಳುತ್ತಾ ಇದ್ದಿರಿ. ಈ ಸರ್ಕಾರ ಕೆಲವು ನಿರ್ಧಾರಗಳ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಬೇಕು. ಕನ್ನಡ ಆಡಳಿತ ಭಾಷೆ ಏನು ಸ್ವಾಮಿ ಇದು ಬರೀ ಮಾತಿಗೋ ಬರೀ ಘೋಷಣೆಗೋ ಕಾರ್ಯ ಪ್ರವೃತ್ತರಾಗಿ ಕರ್ಯೋನ್ಮುಖರಾಗಿ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಆಗಿದೆಯೆ? ಯಾವ ಪಕ್ಷದ ಸರ್ಕಾರ ಬಂದಾಗಲೂ ಕನ್ನಡವನ್ನು ಆಡಳಿತ ಭಾಷೆ ಮಾಡುತ್ತೇವೆಂದು ಅದಕ್ಕೆ ಯೋಜನೆಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. ಯಾವ ಯೋಜನೆಗಳನ್ನು ಮಾಡಿದ್ದೀರಿ? ಈಗ ನಿಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ. ನೀವು ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಹಂತ ಹಂತವಾಗಿ ಯೋಜನೆಯನ್ನು ಹಾಕಿದ್ದೇವೆಂದು ಹೇಳಬೇಕು. ಇದು ಸಾಧ್ಯವಿಲ್ಲ, ಯಾವ ಇಲಾಖೆಯಲ್ಲಿಯೂ ಗ್ರಾಮ ಪಂಚಾಯಿತಿಯಿಂದ ಹಿಡಿದು ಶಾಸನಸಭೆಯವರೆಗೂ ಇವತ್ತಿಗೂ ಆಡಳಿತ ಕನ್ನಡದಲ್ಲಿ ನಡೆಯುತ್ತಿಲ್ಲ, ಇದು ಸ್ಪಷ್ಟ ಅಭಿಪ್ರಾಯ. ಯಾವ ಇಲಾಖೆಗೆ ಹೋದರೂ ನೂರಕ್ಕೆ ಎಂಭತ್ತು ಭಾಗ ಇಂಗ್ಲಿಷ್ನಲ್ಲಿಯೇ ಆಡಳಿತ ನಡೆಯುತ್ತಿದೆಯೇ ಹೊರತು ಕನ್ನಡದಲ್ಲಿ ಆಡಳಿತ ನಡೆಯುತ್ತಿಲ್ಲ, ಅಂದಮೇಲೆ ಆಡಳಿತ ಭಾಷೆ ಕನ್ನಡವೆಂದು ಹೇಳುವ ನೈತಿಕ ಹಕ್ಕು ನಿಮಗೆ ಯಾವುದೂ ಇಲ್ಲ. ಪ್ರಾಮಾಣಿಕವಾಗಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆ ಅಥವಾ

ಪ್ರಾಮಾಣಿಕವಾಗಿ ಮಾಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳುವುದಾದರೆ ನಾನು ಒಪ್ಪುತ್ತೇನೆ. ಅದರ ಬಗ್ಗೆ ಪ್ರಾಮಾಣಿಕತೆ ಇಲ್ಲವೆಂದರೆ ನಾನು ಒಪ್ಪುತ್ತೇನೆ. ಮುಂದಿನ ಆಯವ್ಯಯದ ಮಂಡನೆವರೆಗೆ ರಾಜ್ಯಪಾಲರ ಭಾಷಣ ಮಂಡನೆವರೆಗೆ ನಾನು ನಿಮ್ಮ ಸರ್ಕಾರಕ್ಕೆ ಕಾಲಾವಕಾಶವನ್ನು ಕೊಡುತ್ತೇನೆ. ಅಲ್ಲಿಯವರೆಗೆ ನೀವು ಮಾಡಲಿಲ್ಲವೆಂದರೆ ನಾವು ಸರ್ಕಾರವನ್ನು ತೆಗೆಯುತ್ತೇವೆಂದು ಹೇಳುವುದಕ್ಕೆ ಬದಲಾಗಿ ನೀವು ಪೊಳ್ಳು ಘೋಷಣೆಗಳನ್ನು ಜನರಿಗೆ ಹೇಳುತ್ತಿದ್ದಾರೆಂದು ರಸ್ತೆ ರಸ್ತೆಗಳಲ್ಲಿ ತಮಟೆ ಹೊಡೆಯುವ ಕಾಲ ಬರುತ್ತದೆನ್ನು ಮಾತನ್ನು ತಮ್ಮಲ್ಲಿ ನಾನು ಪ್ರಾಮಾಣಿಕವಾಗಿ ಹೇಳಿದ್ದೇನೆ.

ಕರ್ನಾಟಕದ ಗಡಿನಾಡು ಅಭಿವೃದ್ಧಿಗೆ ಒಂದು ವಿಶೇಷವಾದ ಶಕ್ತಿಯನ್ನು ಕೊಡಬೇಕು. ಸ್ವಲ್ಪ ಹೆಚ್ಚು ಕಡಿಮೆ 50-52 ಗಡಿನಾಡು ಪ್ರದೇಶಗಳು ಬರುತ್ತವೆ. ಗಡಿನಾಡು ಪ್ರದೇಶಗಳ ಬೆಳವಣಿಗೆಯ ಬಗ್ಗೆ ಹೇಳಬೇಕಾದರೆ, ಅಧ್ಯಕ್ಷರ ಜಿಲ್ಲೆಯಲ್ಲೂ ಐದಾರು ಗಡಿನಾಡು ಪ್ರದೇಶಗಳು ಬರುತ್ತವೆ. ರಾಜ್ಯದ ಗಡಿನಾಡು ಪ್ರದೇಶಗಳ ಅಭಿವೃದ್ಧಿಗೆ ವಿಶೇಷವಾದ ಸವಲತ್ತು ಕೊಡಬೇಕೆಂದು ಹೇಳಿ ನಾನು ಶಾಸನಸಭೆಗೆ ಬಂದ ಪ್ರಾರಂಭದಲ್ಲಿಯೇ ಹೇಳಿದೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನನ್ನ ನೀತಿಯನ್ನು ಒಪ್ಪಿ, ಪ್ರಾರಂಭದಲ್ಲಿ 5 ಕೋಟಿ ನಂತರ ಆರು 15 ಕೋಟಿಗೆ ಬಂದು ನಿಂತಿದೆ. 15 ಕೋಟಿ ರೂಪಾಯಿಗಳಿಂದ ಗಡಿನಾಡು ಪ್ರದೇಶದ ಬೆಳವಣಿಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ತಮ್ಮ ರಾಜ್ಯಪಾಲರ ಭಾಷಣದಲ್ಲಿ ಗಡಿನಾಡು ಅಭಿವೃದ್ಧಿಯ ಬಗ್ಗೆ ಹಾಗೂ ಹೊರನಾಡು ಬಗ್ಗೆ ಪ್ರಸ್ತಾಪವಿಲ್ಲ. ನನಗನಿಸುತ್ತದೆ ಕನಿಷ್ಠ 50-56 ಗಡಿನಾಡು ಪ್ರದೇಶಗಳು ಏನು ಬರುತ್ತವೆ ಅವುಗಳ ಕಾಮಗಾರಿ ಜೊತೆಗೆ ಸಮಗ್ರ ಕನ್ನಡದ ಬೆಳವಣಿಗೆ, ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ, ಕನ್ನಡದ ಕಲೆಯ ಸಮಗ್ರ ಬೆಳವಣಿಗೆಗಾಗಿ 100 ಕೋಟಿ ರೂಪಾಯಿಗಳನ್ನು ಇರತಕ್ಕದ್ದು ನಮ್ಮ ಕರ್ತವ್ಯ. ಹೊರನಾಡು ಕನ್ನಡಿಗರ ಬಗ್ಗೆ ತಮಗೆ ಹೇಳುತ್ತೇನೆ. ಕಾಸರಗೋಡು, ಸೊಲ್ಲಾಪುರ, ಅಕ್ಕಲಕೋಟೆ ತಾಳವಾಡಿ, ಎಲ್ಲಿ ಹೋದರೂ ಆ ಜನರ ಕಣ್ಣೀರ ಕಥೆ ಒಂದು ಕಡೆ ಅಲ್ಲಿನ ಸರ್ಕಾರಕ್ಕೂ ಬೇಕಾಗಿಲ್ಲ ಅವರು, ನಮ್ಮ ಸರ್ಕಾರಕ್ಕೂ ಅವರ ಬಗ್ಗೆ ಪ್ರೀತಿಯಿಲ್ಲ. ತ್ರಿಶಂಕುವಾಗಿ ಕುಳಿತಿರಕ್ಕ ಜನರ ಬಗ್ಗೆ ನಮ್ಮ ಸರ್ಕಾರ ನಮ್ಮ ಅತಿಥಿಗಳು ಎನ್ನುವ ದೃಷ್ಟಿಯಿಂದ ಕ್ರಮ ಕೈಗೊಳ್ಳಬೇಕಾಗಿದೆ. ಇಂದಲ್ಲ ನಾಳೆ ಆ ಪ್ರದೇಶಗಳು ಕರ್ನಾಟಕಕ್ಕೆ ಸೇರಬೇಕಾದ ಪ್ರದೇಶಗಳು. ಗಡಿನಾಡು ಹೊರನಾಡು ಕನ್ನಡಿಗರ ಸಂಸ್ಕೃತಿಯ ಕೆಲಸಕ್ಕೆ ಕಲೆಗೆ ಸಾಹಿತ್ಯಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡತಕ್ಕ ಯೋಜನೆಯನ್ನು ಕರ್ನಾಟಕ ಸರ್ಕಾರ ಸಮಗ್ರವಾಗಿ ಮಾಡಬೇಕೆಂದು ಹೇಳುತ್ತಿದ್ದೇನೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಬೆಳಗಾವಿ ನಗರಸಭೆಯವರು ಮಾಡಿರುವ ಕೆಲಸದ ಬಗ್ಗೆ ಒಂದೇ ಸಮನೆ ಈ ಮನೆಯಲ್ಲಿ ಹೇಳುತ್ತಿದ್ದೇನೆ. ಆ ನಗರಸಭೆಯ ಮೇಲೆ ರಾಷ್ಟ್ರ ಧ್ವಜ ಇಲ್ಲ, ಬೆಳಗಾವಿ ನಗರಸಭೆಯ ಮೇಲೆ ಅವರದೇ ಆದ ಒಂದು ಧ್ವಜವನ್ನು ಹಾಕಿದ್ದಾರೆ.

ಅದನ್ನು ತೆಗೆಯಬೇಕೆಂದು ಒಂದೇ ಸಮನೆ ಸರ್ಕಾರವನ್ನು ಕೇಳಿದ್ದೇನೆ. ಹಿಂದಿನ ಸರ್ಕಾರ ಮತ್ತು ಈ ಸರ್ಕಾರವನ್ನು ಕೇಳುತ್ತಿದ್ದೇನೆ. ತಾವು ಅಲ್ಲಿಂದ ಧ್ವಜವನ್ನು ತೆಗೆಸಲಿಲ್ಲ, ಅಂದರೆ ಆ ನಗರಸಭೆಯನ್ನು ರದ್ದುಮಾಡಿ. ಸರ್ಕಾರಕ್ಕೆ ಸಂಪೂರ್ಣವಾದ ಹಕ್ಕು ಇದೆ. ಅವರು ರಾಷ್ಟ್ರಧ್ವಜವನ್ನು ಏಕೆ ಹಾಕುವುದಿಲ್ಲವೆನ್ನುವ ನೋವು ನನಗಿದೆ. ದಯಮಾಡಿ ಅವೊಂದು ನಗರಸಭೆಯ ಮೇಲೆ ತೀವ್ರವಾದ ಹೆಚ್ಚಿನ ಗಮನವನ್ನು ಇಟ್ಟು ಸರ್ಕಾರ ಒಂದು ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳಬೇಕು. ಕರ್ನಾಟಕಕ್ಕೆ ವಲಸೆ ಬಂದಿರುವವರ ಸಂಖ್ಯೆ ಎಷ್ಟು? ನಮ್ಮ ಕರ್ನಾಟಕ ರಾಜ್ಯದ ಜನಸಂಖ್ಯೆ 4 ಕೋಟಿ 70 ಲಕ್ಷ ಎಂದು ಹೇಳುತ್ತಾರೆ. ಒಬ್ಬರು 5 ಕೋಟಿ ಎಂದು ಹೇಳುತ್ತಾರೆ.

ಇವತ್ತು ವಲಸೆಯನ್ನು ತಡೆಯುತಕ್ಕ ಕೆಲಸವನ್ನು ಯಾವ ಸರ್ಕಾರವೂ ಮಾಡಲಿಲ್ಲ. ಬೇರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿರತಕ್ಕ ರೀತಿಯಲ್ಲಿ ಬೇರೆ ಯಾವ ರಾಜ್ಯಗಳಿಗೂ ಹೋಗಿಲ್ಲ.

1956ರಲ್ಲಿ ಕರ್ನಾಟಕ ಏಕೀಕರಣ, ಆದಂದಿನಿಂದ ಇಲ್ಲಿಯವರೆಗೆ 1 ಕೋಟಿ ಜನ ಹೊರಗಡೆಯಿಂದ ಬಂದಿದ್ದಾರೆ. ಅನೇಕ ಜಿಲ್ಲೆಗಳು ಬೆಳಗಾವಿ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಮೈಸೂರು ಬೆಂಗಳೂರು ಈ ಪ್ರಕಾರ ರಾಯಚೂರು ಹೀಗೆ ಅನೇಕ ಜಿಲ್ಲೆಗಳಿಗೆ ವಲಸೆ ಬಂದವರು ಆ ಜನರಿಂದ ತುಂಬಿ ಸ್ಥಳೀಯರಿಗೆ ಅಪಾಯ ಒದಗಿದೆ. ಸ್ಥಳೀಯರಿಗೆ ತೀವ್ರ ಗಂಭೀರ ಪರಿಸ್ಥಿತಿ ಒದಗಿದೆ. ಈ ವಲಸೆಯನ್ನು ತಡೆದು ಕರ್ನಾಟಕ ಭಾಷಾವಾರು ತತ್ವವನ್ನು ಉಳಿಸತಕ್ಕ ವ್ಯವಸ್ಥೆ ನಮ್ಮ ಸರ್ಕಾರದಲ್ಲಿ ಆಗಲಿಲ್ಲವೆಂದರೆ ನಾವು ನಿಜವಾಗಲೂ ಬಹಳ ನೋವು ಪಡಬೇಕಾಗುತ್ತದೆಂದು ತಮಗೆ ತಿಳಿಸುತ್ತಿದ್ದೇನೆ.

ಕನ್ನಡ ಚಿತ್ರರಂಗದ ಬಗ್ಗೆ ತಮಗೆ ಹೇಳುವುದಾದರೆ, ಬೆಂಗಳೂರಿನಲ್ಲಿ ಯಾವ ಭಾಷೆಯ ಚಿತ್ರಗಳು ಬೇಕಾದರೂ ನಡೆಯುತ್ತವೆ. ಯಾವ ಭಾಷೆಯ ಚಿತ್ರ ಬೇಕಾದರೂ ಕೇಳಿ. ನೀವು ಕೇಳಿದ ಭಾಷೆಯ ಚಿತ್ರಗಳು ನಡೆಯುತ್ತವೆ. ಆದರೆ ತಮಿಳುನಾಡಿನಲ್ಲಿ, ಆಂಧ್ರದಲ್ಲಿ, ಅಥವಾ ಕೇರಳದಲ್ಲಿ ಒಂದು ಕನ್ನಡ ಚಿತ್ರ ನಡೆಯುವುದಿಲ್ಲ ಏನು ಪರಿಸ್ಥಿತಿ? ಇದು ಯಾವ ರಾಜ್ಯವಾಗಿದೆ? ಇಲ್ಲಿ ಯಾರು ಬೇಕಾದರೂ ಏನು ಬೇಕಾದರೂ ಮಾಡಬಹುದೆನ್ನುವ ಭಾವನೆ ನಿರ್ಮಾಣವಾಗಿದೆ. ಆ ಸರ್ಕಾರಗಳಿಗೆ ನಮ್ಮ ಸರ್ಕಾರ ಹೇಳಲಿ, ತಮಿಳುನಾಡಿನಲ್ಲಿ ಕನ್ನಡ ಚಿತ್ರಗಳನ್ನು ಹಾಕಬೇಕೆಂದು ಹೇಳಿ, ಕೇರಳದಲ್ಲಿ ಕನ್ನಡ ಚಿತ್ರಗಳನ್ನು ಹಾಕಬೇಕೆಂದು ಆ ರೀತಿ ಹೇಳಿ. ಅಲ್ಲಿ ಹಾಕಲಿಲ್ಲವೆಂದರೆ ನಾವು ಕಾನೂನು ಮಾಡಬೇಕಾಗುತ್ತದೆ. ಪರಭಾಷಾ ಚಿತ್ರಗಳನ್ನು ನಿಲ್ಲಿಸತಕ್ಕ ಕಾನೂನು ಜಾರಿಗೆ ತರುತ್ತೇವೆಂದು ಘಂಟಾಘೋಷವಾಗಿ ಹೇಳಿಕೆಯನ್ನು ಸರ್ಕಾರ ನೀಡುವುದಾದರೆ ನನಗನಿಸುತ್ತದೆ ಅದು ಒಳ್ಳೆಯ ಮಾರ್ಗವೆಂದು ನಾನು ತಮಗೆ ಹೇಳುತ್ತೇನೆ. ನನಗೆ ನೋವಾಗುತ್ತಿದೆ, 1962ರಲ್ಲಿ ಸೆಪ್ಟೆಂಬರ್ 7ನೇ ತಾರೀಖು ಯಾರಾದರೂ ಬರೆದಿರಬಹುದು ಕೇಳಿರಬಹುದು ಇತಿಹಾಸದಲ್ಲಿರಲಿ, ಇಲ್ಲವೇ ಹೋಗಿರಲಿ, ನಾವು ಕನ್ನಡದ ಬಗ್ಗೆ ಹೋರಾಟ ಮಾಡಲಿಕ್ಕೆ ಹೋದಾಗ ನನಗೆ ಬೂಟ್ಸ್ನ ಏಟು ಹೊಡೆದರು.

ಬೂಟ್ಸ್ನ ಏಟು ಅಷ್ಟೇ ಅಲ್ಲ ಬಂದೂಕಿನ ಏಟು ಹೊಡೆದರೂ ನನ್ನ ರಕ್ತ ಕನ್ನಡ ಎಂದು ಹೇಳಿ ಹೋರಾಟ ಮಾಡಿದಂಥ ಮನುಷ್ಯ ನಾನು. ನನಗೆ ಈವತ್ತು ನೋವಾಗುತ್ತಿದೆ. ನನ್ನ ರಾಜ್ಯದಲ್ಲಿ ಆಗಿರತಕ್ಕ ಈ ಪರಭಾಷೆಯ ಧಾಳಿ ವಲಸೆಯ ಧಾಳಿ ಈ ಭಾಷೆಯ ಮೇಲೆ ಆಗುತ್ತಿರುವುದು ನನಗೆ ಬಹಳ ನೋವಾಗುತ್ತದೆ. ಅತ್ಯಂತ ಕರುಣಾಜನಕ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ರಾಜ್ಯದ ಬೆಳವಣಿಗೆ ಕನ್ನಡ ಭಾಷೆಯ ಅಭಿವೃದ್ಧಿಗೆ ಚಿಂತನೆ ಇರಬೇಕಾದದ್ದು ತಮ್ಮ ಕರ್ತವ್ಯವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ಸರ್ಕಾರದ ಭಾಷಾ ಸೂತ್ರವೇನು? ಕನ್ನಡ ಮಾಧ್ಯಮದ ಬಗ್ಗೆ ಸರ್ಕಾರಕ್ಕೆ ಯಾವ ಸೂತ್ರವಿದೆ ಯಾವ ನೀತಿ ನಿಲುವುಗಳು ಇವತ್ತಿನವರೆಗೆ ಕಾಣುತ್ತಿಲ್ಲ. ನಿಮ್ಮ ಸರ್ಕಾರ ಬಂದಾಗ ಅದರ ಬಗ್ಗೆ ಚಿಂತನೆ ಮಾಡಬೇಕಾಗಿತ್ತು. ಅದು ನಿಮ್ಮ ಕರ್ತವ್ಯ. ಹಿಂದೆ ನಿಮ್ಮ ಸರ್ಕಾರವೇ ಅಧಿಕಾರದಲ್ಲಿದ್ದಾಗ ಸರೋಜಿನಿ ಮಹಿಷಿಯವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿ ವರದಿಯನ್ನು ತರಿಸಿಕೊಳ್ಳಲಾಗಿದೆ. ಅದನ್ನು ಜಾರಿಗೆ ತರುವುದಕ್ಕಾಗಿಲ್ಲ. ಮುಂದೆ ಬಂದಂತಹ ಸರ್ಕಾರಗಳು ಒಂದೊಂದು ಉಪಸಮಿತಿಗಳನ್ನು ಮಾಡಿಕೊಂಡು ಬಂದಿವೆ. ಆ ವರದಿಯನ್ನು ಸಂಪೂರ್ಣವಾಗಿ ಒಪ್ಪಿಲ್ಲ. ನಾನು ನಿನ್ನೆ ನೋಡಿದೆ, ಇವತ್ತೂ ಸಹ

ನಿಮ್ಮ ಸರ್ಕಾರ ಒಂದು ಉಪಸಮಿತಿಯನ್ನು ಮಾಡಿದೆ. ಇದು ಬಹಳ ನೋವಿನ ಪ್ರಸಂಗ.

ಈ ಸರೋಜಿನಿ ಮಹಿಷಿ ವರದಿಗೆ ಉಪ ಸಮಿತಿ ಮಾಡಿದ್ದಾರೆ. ನೀವು ಹೇಳಿಬಿಡಿ, ವರದಿಯನ್ನು ಒಪ್ಪುತ್ತೇವೆ ಎಂದು ಹೇಳಿ, ಇಲ್ಲವೇ ತಳ್ಳಿ ಹಾಕುತ್ತೇವೆಂದು ಸ್ಪಷ್ಟವಾಗಿ ಹೇಳಬಿಡಬೇಕು. ಬಂದ ಸರ್ಕಾರಗಳೆಲ್ಲವೂ ಉಪ ಸಮಿತಿ ಮಾಡಿಕೊಳ್ಳುವ ಬದಲು, ನಮ್ಮ ಕೈಯಲ್ಲಿ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರುವುದು ಸಾಧ್ಯವೇ ಇಲ್ಲವೆಯ ಹೇಳುವುದಾದರೆ ನಾನು ಸಂತೋಷಪಡುತ್ತೇನೆ. ಅದನ್ನು ಬಿಟ್ಟು ಪ್ರತಿ ಸರ್ಕಾರಗಳೂ ಉಪ ಸಮಿತಿಯನ್ನು ಮಾಡಿಕೊಳ್ಳುವುದಾದರೆ, ಇದು ಸರಿಯಾದ ಮಾರ್ಗವಲ್ಲವೆಂದು ತಮಗೆ ಸ್ಪಷ್ಟಪಡಿಸುತ್ತಿದ್ದೇನೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರದಲ್ಲಿ ನಮಗೆ ಆಗಬೇಕಾದ ಪರಿಸ್ಥಿತಿಗಳ ಬಗ್ಗೆ...

ಅಧ್ಯಕ್ಷರು : ಗಡಿಯಾರ, ಗಡಿಯಾರ...

ಶ್ರೀ ವಾಟಾಳ್ ನಾಗರಾಜ್ : ನಾನು ಭಾಷಣವನ್ನು ಮುಗಿಸಿದ್ದೇನೆ ಸ್ವಾಮಿ. ದಯಮಾಡಿ

ಅಧ್ಯಕ್ಷರು : ಹಾಗೆ ಮಾಡಬೇಡಿ. ತಾವು ಮುಂದುವರಿಸಿ. ತಾವು ಹಿರಿಯ ಸದಸ್ಯರು, ಬೇಸರಪಟ್ಟುಕೊಳ್ಳಬಾರದು. ಈ ರೀತಿ ನೀವು ಮಾಡಬಾರದು. ಇನ್ನೂ ಅನೇಕ ಸದಸ್ಯರಿದ್ದಾರೆ. ಈ ರೀತಿ ಮಾಡಿದರೆ ನನಗೂ ನೋವಾಗುತ್ತದೆ. ನೀವು ನನಗೆ ತೊಂದರೆ ಕೊಡುತ್ತಾ ಇಲ್ಲ, ಇನ್ನೂ ಅನೇಕ ಸದಸ್ಯರು ಇದ್ದಾರೆ, ಆದ್ದರಿಂದ ಸಹಕರಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ತೊಂದರೆ ಕೊಡಬಾರದು. ಆ ಕೆಲಸ ನಾನೇಕೆ ಮಾಡಲಿ? ನಮ್ಮ ದೆಹಲಿ ದರ್ಬಾರಿಗೆ, ಕರ್ನಾಟಕ ಗುಲಾಮಗಿರಿಯಾಗಿದೆ. ಇದನ್ನು ಒಪ್ಪಿಕೊಳ್ಳಲೇ ಬೇಕು, ಬೇರೆ ಮಾತೇ ಇಲ್ಲ, 1972ರಿಂದ ಇಲ್ಲಿಯವರೆಗೆ ಒಂದು ರಾಷ್ಟ್ರೀಯ ಹೆದ್ದಾರಿಗೂ ಅವರು ಅನುಮತಿ ಕೊಟ್ಟಿಲ್ಲ. ಮಹಾಜನ್ ವರದಿಯನ್ನು ಕಾರ್ಯಗತ ಮಾಡಿಲ್ಲ. ಅನೇಕ ವಿದ್ಯುಚ್ಛಕ್ತಿ ಯೋಜನೆಗಳು ಅಲ್ಲಿಯೇ ಕುಳಿತಿವೆ. ಯಾರು ಕೇಳುವವರು? ಯಾರಿಗೆ ಹೇಳಬೇಕು? ತಮಿಳುನಾಡಿಗಾದರೆ, ಪ್ರಧಾನ ಮಂತ್ರಿಗಳು ಓಡಿ ಬರುತ್ತಾರೆ. ಅಲ್ಲಿಯ ಮುಖ್ಯಮಂತ್ರಿಗಳು ಸತ್ಯಾಗ್ರಹ ಮಾಡಿದರೆ, ಧಡಧಡನೆ ಓಡಿಬರುತ್ತಾರೆ. ಆಂಧ್ರಕ್ಕೆ ಹೋದರೆ, ಎನ್.ಟಿ. ರಾಮರಾವ್ ಕೇಳಿದ್ದೆಲ್ಲವನ್ನೂ ಕೊಡುತ್ತಾರೆ. ಕೇರಳ ಸಣ್ಣ ರಾಜ್ಯ, ಕರುಣಾಕರನ್ ಇಲ್ಲದೆ ಈ ರಾಷ್ಟ್ರ ನಡೆಯುವ ಹಾಗೆಯೇ ಇಲ್ಲ. ಈ ಪರಿಸ್ಥಿತಿ ಇರುವಾಗ, ಕರ್ನಾಟಕ ಪರಿಸ್ಥಿತಿ ಏನಾಗಿದೆ, ನಾವು ಏನಾಗಿದ್ದೇವೆ. ನಮ್ಮಲ್ಲಿ ರಾಜಕೀಯ ನಾಯಕತ್ವ ಬೇಕು. ಕರ್ನಾಟಕದ ಎಲ್ಲಾ ಬೇಡಿಕೆಗಳನ್ನೂ ಕೇಂದ್ರದಲ್ಲಿ ಪಡೆಯತಕ್ಕ ಶಕ್ತಿ ನಿಮಗೆ ಬೇಕು. ನನಗನಿಸುತ್ತದೆ, ಕಲ್ಕತ್ತಾ ನಗರದಲ್ಲಿ ಮೆಟ್ರೋ ರೈಲು 1,500 ಕೋಟಿ ರೂಪಾಯಿಗಳ ವೆಚ್ಚದಲ್ಲಿ, ರಾಜ್ಯ ಸರ್ಕಾರದ ಹಣದಿಂದಲೇ ಅಲ್ಲಿ ಮಾಡಿದ್ದಾರೆ, ಮಾಡುತ್ತಾ ಇದ್ದಾರೆ. ನಮ್ಮಲ್ಲಿ ಬೆಂಗಳೂರಿಗೆ ವೃತ್ತ ರೈಲು ಇಲ್ಲ, ಬೆಂಗಳೂರು ಮೈಸೂರಿಗೆ ಎಲೆಕ್ಟ್ರಿಕ್ ರೈಲು ಇಲ್ಲ, ಜೋಡಿ ರಸ್ತೆ ಇಲ್ಲ, ಇವೆಲ್ಲಾ ಕೇಂದ್ರಸರ್ಕಾರ ಮಾಡಬೇಕಾದ ಪರಿಸ್ಥಿತಿಗಳು. ನಮ್ಮ ಬೇಡಿಕೆಗಳಿಗೆ, ನಾವು ಕೇಂದ್ರ ಸರ್ಕಾರದ ಮುಂದೆ ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಹೋಗಬೇಕಾಗಿಲ್ಲ, ನಮ್ಮ ಧ್ವನಿಗೆ, ಕೇಂದ್ರ ಸರ್ಕಾರ ಹೆದರಿ ನಮ್ಮ ಕಾರ್ಯಗಳನ್ನು ಮಾಡತಕ್ಕ ಕೆಲಸದಲ್ಲಿ ನಿಲ್ಲಬೇಕು.

ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದ ಮೇಲೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ಪ್ರಭಾವವನ್ನು ಬೀರಿ, ಕೇಂದ್ರ ಸರ್ಕಾರದಿಂದ, ಕರ್ನಾಟಕ ರಾಜ್ಯಕ್ಕೆ ಆಗಬೇಕಾದಂಥ ಸವಲತ್ತುಗಳ ಬಗ್ಗೆ ಅವರು

ತೀವ್ರವಾದ ಕಾಳಜಿಯನ್ನು ವಹಿಸಬೇಕು. ಕಾರ್ಯಕ್ರಮ ಹಾಕಿಕೊಳ್ಳಬೇಕು. ನಾವಂತೂ, ಎಲ್ಲಾ ವಿರೋಧಪಕ್ಷದವರೂ ಸಿದ್ಧರಿದ್ದೇವೆ. ಈ ರಾಜ್ಯದ ಹಿತಕ್ಕಾಗಿ, ಕೇಂದ್ರ ಸರ್ಕಾರದ ಜೊತೆಯಲ್ಲಿ ಹೋರಾಟ ಮಾಡಲು, ಯಾವ ಘಳಿಗೆಯಲ್ಲಿ ಕರೆದರೂ ನಾವು ಪಕ್ಷಭೇದ ಮರೆತು ನಾವೆಲ್ಲರೂ ಒಟ್ಟಾಗಿದ್ದೇವೆ. ಮಾನ್ಯ ದೇವೇಗೌಡರು ಈ ಒಂದು ಪರಿಸ್ಥಿತಿಯಲ್ಲಿ ನಿಲ್ಲಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆನ್ನುವುದೇ ನನ್ನ ಅತ್ಯಂತ ಕಳಕಳಿಯ ಮನವಿ. ಈ ರಾಜ್ಯದ ಅತ್ಯಂತ ಗಂಭೀರವಾದ ಎರಡು ಪ್ರಶ್ನೆಗಳಿವೆ. ಒಂದು ಕೃಷ್ಣಾ ಮತ್ತೊಂದು ಕಾವೇರಿ. ಇದರ ರಕ್ಷಣೆಯನ್ನು ಮಾನ್ಯ ದೇವೇಗೌಡರು ಮಾಡುತ್ತಾರೆ ಮತ್ತು ಮಾಡುವುದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಇಲ್ಲಿ ನಾವು ಮತ್ತು ಅನೇಕ ಸದಸ್ಯರು ಅದರ ಬಗ್ಗೆ ಅಪಾರವಾಗಿ ಹೋರಾಟ ಮಾಡಿದ್ದೇವೆ, ಮೊದಲಿನಿಂದಲೂ ಚಿಂತನೆ ಮಾಡಿರತಕ್ಕಂತಹವರು ಇಲ್ಲಿದ್ದೇವೆ. ನಾನು ಅವರಿಗೆ ಕೇಳುತ್ತೇನೆ, ಈ ವಿಚಾರದಲ್ಲಿ ಸರ್ಕಾರದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಕಾವೇರಿ ನ್ಯಾಯ ಮಂಡಳಿ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಇಲ್ಲಿಯೂ ಹೇಳಿದ್ದೇನೆ, ಮತ್ತು ಅನೇಕ ಕಡೆ ಹೇಳಿದ್ದೇನೆ. ಕಾವೇರಿ ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡಬೇಕೆಂದು ಹೇಳಿದ್ದೇನೆ. ಈ ಮಾತನ್ನು ಮೊದಲಿನಿಂದಲೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ರಾಜ್ಯ ಸರ್ಕಾರ ಆ ನಿಲುವಿಗೆ ಬದ್ಧರಾಗುತ್ತಾರೆಯೇ ಎನ್ನುವುದನ್ನು ಹೇಳಬೇಕು. ನಾವು ಬಹಿಷ್ಕಾರ ಮಾಡುತ್ತೇವೆ ಇಲ್ಲವೇ ಅವರ ಜೊತೆಯಲ್ಲಿ ಸೇರುತ್ತೇವೆ ಎನ್ನುವುದನ್ನು ಹೇಳಬೇಕು. ಬಚಾವತ್ ತೀರ್ಪಿನ ಪ್ರಕಾರ, ಎರಡು ಸಾವಿರ ಇಸವಿಯೊಳಗೆ, ಕೃಷ್ಣಾ ನದಿ ನೀರಿನ ಹಂಚಿಕೆಯನ್ನು ಮಾಡುವುದಕ್ಕೆ ನಮ್ಮ ಸಂಪನ್ಮೂಲ ಏನು, ಏನು ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಸರ್ಕಾರ.....

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಕ್ಷಮಿಸಬೇಕು ತಮಗೆ ಗೊತ್ತಿರುವ ಹಾಗೆ, ಕಾವೇರಿ ನೀರಿನ ವಿವಾದದ ವಿಚಾರದಲ್ಲಿ ಬಹಿಷ್ಕಾರ ಹಾಕತಕ್ಕಂಥ ವಿಷಯ ಆಗಲೂ ಬಂದಿತ್ತು. ಇದು ಒಳ್ಳೆಯದಲ್ಲವೆಂಬ ಅಭಿಪ್ರಾಯ ಬಂದು, ಈ ಸದನ ಮತ್ತು ಆ ಸದನ ಎರಡು ಕಡೆಗಳಲ್ಲೂ ಸರ್ವಾನುಮತದ ನಿರ್ಣಯ ತೆಗೆದುಕೊಂಡಿದ್ದೇವೆ. ಅದಕ್ಕೆ ತಾವೂ ಕೂಡ ಪಾತ್ರರು ಎಂಬ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಅಂದರೆ, ನಿಮ್ಮ ವೈಯಕ್ತಿಕವಾದ ಅಭಿಪ್ರಾಯವನ್ನು ಮೆಚ್ಚುತ್ತೇನೆ. ಬಹಿಷ್ಕಾರ ಹಾಕುವುದು ಬಹಳ ಒಳ್ಳೆಯದಿದೆ, ನಿಮ್ಮ ನಿಲುವು ಒಳ್ಳೆಯದಿದೆ ಎನ್ನುವ ಅಭಿಪ್ರಾಯ ಇದ್ದರೂ ಕೂಡ, ಅದು ಅಷ್ಟು ಒಳ್ಳೆಯದಲ್ಲ. ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಏನು ಟ್ರಿಬ್ಯೂನಲ್ ಇದೆ. ಅಲ್ಲಿ ನಮ್ಮ ಕೇಸನ್ನು ಸ್ಪಷ್ಟವಾಗಿ ನಡೆಸುವ ಬಗ್ಗೆ ನಮ್ಮ ವಿಚಾರವನ್ನು ಇಟ್ಟುಕೊಳ್ಳೋಣ. ಅದರ ಬಗ್ಗೆ ಬಹಿಷ್ಕಾರ ಹಾಕುವುದು ಒಳ್ಳೆಯದಲ್ಲ ಎಂದು ಸರ್ವಾನುಮತದಿಂದ ಎರಡೂ ಸದನದಲ್ಲಿ ನಿರ್ಣಯವಾಗಿದೆ. ಅದನ್ನು ತಮ್ಮ ನೆನಪಿಗೆ ತಂದುಕೊಟ್ಟೆ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಅದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಮಾನ್ಯ ಕಿಟ್ಟೆಲ್ ಮತ್ತು ರೈಸ್ ಎಂಬುವರು ಕನ್ನಡ ಶಬ್ದಕೋಶಕ್ಕೆ ಮತ್ತು ಸಾಹಿತ್ಯಕ್ಕೆ ಆಹಾರವಾದ ಸೇವೆಯನ್ನು ಮಾಡಿರತಕ್ಕಂಥವರು. ಅಂಥವರನ್ನು ನೆನಪು ಮಾಡಿಕೊಳ್ಳುವುದಕ್ಕೋಸ್ಕರ ಸ್ಮಾರಕಗಳನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ. ವಿಶ್ವ ಕನ್ನಡ ಸಮ್ಮೇಳನವನ್ನು ಸರ್ಕಾರ ಯಾವುದೇ ರಾಜಕೀಯ ಗೋಜಿಗೆ ಹೋಗದೆ ಪರಿಣಾಮಕಾರಿಯಾಗಿ ವಿಶ್ವ ಮಟ್ಟದಲ್ಲಿ ಸಮ್ಮೇಳನವೇ ಆಗಬೇಕೇ ಹೊರತು ಅದು ಜಿಲ್ಲಾ ಮಟ್ಟದ ಸಮ್ಮೇಳನವಾಗಬಾರದು. ಹಿಂದಿನ ಸರ್ಕಾರ ಇದ್ದಾಗಲೇ, ದೆಹಲಿಯಲ್ಲಿ ಒಂದು ಕನ್ನಡ ಭವನವನ್ನು ಕಟ್ಟಿಸಿ ಅದರೊಳಗೆ ಕರ್ನಾಟಕದ ಎಲ್ಲಾ ಇಲಾಖೆಗಳು ಅದರೊಳಗೆ ಇರುವಂಥ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ

ಮಾನ್ಯ ಮೊಯಿಲಿಯವರೂ ಒಪ್ಪಿಕೊಂಡಿದ್ದರು. ಅದರ ಬಗ್ಗೆ ಏನು ಕೆಲಸ ಆಗಿದೆ ಎಂಬುದು ಇನ್ನೂ ಗೊತ್ತಾಗಿಲ್ಲ.

ಈಗ ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು ಆ ಕಡೆ ಗಮನಹರಿಸಿ ದೆಹಲಿಯಲ್ಲಿ ಒಂದು ಕನ್ನಡ ಭವನವನ್ನು ನಿರ್ಮಾಣ ಮಾಡಿ ಎಲ್ಲಾ ಇಲಾಖೆಗಳೂ ಆ ಕಟ್ಟಡದಲ್ಲಿ ಇರುವಂಥ ವ್ಯವಸ್ಥೆ ಮಾಡಿ ಅದನ್ನು ಒಂದು ಇಡೀ ಕನ್ನಡದ ರಾಯಭಾರಿ ಕಛೇರಿ ತರಹ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಆಮೇಲೆ, ಸನ್ಮಾನ್ಯ ಎಸ್. ನಿಜಲಿಂಗಪ್ಪನವರು ಶ್ರೇಷ್ಠ ಮಟ್ಟದಲ್ಲಿ ನಮ್ಮ ರಾಜ್ಯಕ್ಕೆ ಸೇರೆ ಮಾಡಿರತಕ್ಕಂಥ ರಾಷ್ಟ್ರದ ಹಿರಿಯ ನಾಯಕರಲ್ಲಿ ಒಬ್ಬರು. ಅವರ ಹುಟ್ಟು ಹಬ್ಬವನ್ನು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸರ್ಕಾರವೇ ಪ್ರತಿ ವರ್ಷ ನಡೆಸುವುದರ ಜೊತೆಗೆ ಅವರ ಒಂದು ಪ್ರತಿಮೆಯನ್ನು ಸೂಕ್ತವಾದ ಜಾಗದಲ್ಲಿ ಅನಾವರಣ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನಂತರ ಮಾನ್ಯ ನಿಕೋಲಾಸ್ ರೋರಿಚ್ರವರು ಬಿಟ್ಟುಹೋಗಿರುವ ಆಸ್ತಿಯಲ್ಲಿ ಅಮೂಲ್ಯವಾದ ಭಗವಾನ್ ಬುದ್ಧನ ಭಿಕ್ಷಾಪಾತ್ರೆಯು ಒಂದು ಇದೆ. ಇದು ಬಹಳ ಶ್ರೇಷ್ಠವಾದುದ್ದು. ದೊಡ್ಡ ಮರದ ಪೆಟ್ಟಿಗೆಯಲ್ಲಿ ಇಟ್ಟಿರುವುದು ಪತ್ರಿಕೆಯಲ್ಲಿ ಬಂದಿತ್ತು. ಆ ಶ್ರೇಷ್ಠವಾದ ಕಲಾ ಕೃತಿಗಳು ಮತ್ತಿತರ ವಸ್ತುಗಳನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಕೇವಲ 15 ನಿಮಿಷಗಳು ಮಾತ್ರ ಅವಕಾಶ ಕೊಟ್ಟಿದ್ದೀರಿ, ನಾನು ಒಂದು ರಾಷ್ಟ್ರೀಯ ಪಕ್ಷಕ್ಕೆ ಸೇರಿದವನಾಗಿರುವುದರಿಂದ ಇಷ್ಟು ಕಡಿಮೆ ಅವಧಿ ಕೊಟ್ಟಿರುವುದು ಬಹಳ ಅನ್ಯಾಯ.

ಅಧ್ಯಕ್ಷರು : ಮುಂದೆ ಅದನ್ನು ಸರಿಪಡಿಸುತ್ತೇನೆ. ಇವತ್ತಿಗೆ ತಾವು ಸಹಕರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ 14 ಪ್ಯಾರಾಗಳ ವಿಷಯಗಳನ್ನು ಹೇಳಿದ್ದಾರೆ, ಅದರಲ್ಲಿ 9 ಪ್ಯಾರಾಗಳಲ್ಲಿ ಮಾತ್ರ ಅವರ ಧ್ಯೇಯೋದ್ದೇಶಗಳನ್ನು ಹೇಳಿದ್ದಾರೆ. ಅವರು ಹೇಳಿರತಕ್ಕಂಥ ಧ್ಯೇಯೋದ್ದೇಶಗಳು ಸಂಪೂರ್ಣವಾಗಿ ಸ್ವಯಂ ವಿರೋಧಾಭಾಸ ಹಾಗೂ ಅಸ್ಪಷ್ಟತೆಯಿಂದ ಕೂಡಿರತಕ್ಕಂಥಾದ್ದು ಸ್ಪಷ್ಟವಾಗಿದೆ. ಕಳೆದ ಚುನಾವಣೆಯಲ್ಲಿ ಜನತೆ ಜನತಾದಳ ಪಕ್ಷಕ್ಕೆ ಬಹುಮತವನ್ನು ಕೊಡುವುದರ ಮೂಲಕ ಜನತಾದಳ ಪಕ್ಷಕ್ಕೆ ಅಧಿಕಾರ ಕೊಟ್ಟಿದ್ದಾರೆ. ಆದ್ದರಿಂದ ಜನತಾದಳ ಪಕ್ಷವನ್ನು ನಾನು ಅಭಿನಂದಿಸುತ್ತೇನೆ. ಅದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿ, ಬಿ.ಜೆ.ಪಿ. ಪಕ್ಷವನ್ನು ಅಧಿಕಾರಕ್ಕೆ ತರದೇ ಇರುವುದಕ್ಕೆ ನಾನು ಜನತೆಯನ್ನು ಅಭಿನಂದಿಸುತ್ತೇನೆ. ರಾಜ್ಯಪಾಲರ ಭಾಷಣವು ಸರ್ಕಾರದ ಕಾರ್ಯಕ್ರಮದ ನೀತಿ ನಿರೂಪಣೆ ಆಗಿರಬೇಕಾಗಿರತಕ್ಕಂಥಾದ್ದು ಒಂದು ಮುಖ್ಯವಾದ ಅಂಶ. ಆದರೆ ರಾಜ್ಯ ಪಾಲರ ಭಾಷಣದಲ್ಲಿ ಸರ್ಕಾರದ ತತ್ವ, ಧೋರಣೆ, ನೀತಿ, ನಿರೂಪಣೆ ಏನಿದೆ ಎನ್ನುವುದರ ಬಗ್ಗೆ ಯಾವುದೇ ಅಂಶ ಇದರಲ್ಲಿ ಇಲ್ಲ, ಯಾವುದೇ ಸರ್ಕಾರ ಹೊಸದಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಥಮವಾಗಿ ಮಂಡಿಸತಕ್ಕಂಥ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಆರ್ಥಿಕ ಧೋರಣೆ, ರಾಜಕೀಯ ನಿಲುಮೆ, ಸಾಮಾಜಿಕ, ಸಾಂಸ್ಕೃತಿಕ ಯೋಜನೆಗಳ ಈ ನಾಲ್ಕು ಶಗಳ ಬಗ್ಗೆ ಅವರ ಧೋರಣೆ ಏನು ಎನ್ನತಕ್ಕಂಥದ್ದು ಸ್ಪಷ್ಟವಾಗಿರಬೇಕಾಗಿತ್ತು.

ಆದರೆ ಅದರಲ್ಲಿ ಯಾವುದೇ ರೀತಿಯಾದಂಥ ಸ್ಪಷ್ಟತೆ ಇಲ್ಲ. ಮೊದಲನೆಯ ಅಂಶವಾದ ಆರ್ಥಿಕ ಸಮಸ್ಯೆಗಳ ಬಗ್ಗೆ ಹೇಳುವಾಗ ಕೈಗಾರಿಕಾ ರಂಗ ಮತ್ತು ಕೃಷಿ ರಂಗದ ಬಗ್ಗೆ ಹೇಳಿದ್ದಾರೆ. ಆದರೆ, ಕೃಷಿ ರಂಗದಲ್ಲಿ ಮುಖ್ಯವಾಗಿರತಕ್ಕಂಥ ಸಮಸ್ಯೆಗಳನ್ನು ಇದರಲ್ಲಿ ಗುರುತಿಸಿಲ್ಲ. ಕೃಷಿ ರಂಗದಲ್ಲಿ ಮೂಲ ಸಮಸ್ಯೆ ಎಂದರೆ, ಭೂಮಿಯ ಪ್ರಶ್ನೆ. 47 ವರ್ಷಗಳಿಂದ ಅಧಿಕಾರ ನಡೆಸಿದ ಸರ್ಕಾರಗಳು ಈ ಭೂಮಿ ಪ್ರಶ್ನೆಯನ್ನು ಇದುವರೆಗೆ ಈ ದೇಶದಲ್ಲಿ ಪರಿಹಾರ ಮಾಡಿಲ್ಲ. ಅಂದರೆ ಅದರ ಅರ್ಥ, ಭೂಮಿ ಯಾರ ಒಡೆತನದಲ್ಲಿ ಇರಬೇಕು? ಉಳುವವನಿಗೆ ಆ ಭೂಮಿ ಮೇಲೆ ಒಡೆತನ ಇರಬೇಕೇ ಅಥವಾ ಉಳುಮೆ ಮಾಡದೇ ಇರತಕ್ಕಂಥವನಿಗೆ ಆ ಭೂಮಿ ಮೇಲೆ ಒಡೆತನ ಇರಬೇಕೇ ಎಂಬ ಬಗ್ಗೆ ಕಳೆದ 47 ವರ್ಷಗಳಿಂದ ಯಾವುದೇ ಸರ್ಕಾರ ಇತ್ಯರ್ಥ ಮಾಡಲಿಲ್ಲ. ಈ ಸರ್ಕಾರವೂ ಕೂಡ ಯಾವುದೇ ಚಕಾರವನ್ನು ಅದರ ಬಗ್ಗೆ ಎತ್ತಿಲ್ಲ. ಮಾನ್ಯ ದೇವರಾಜ ಅರಸರವರು ಮುಖ್ಯ ಮಂತ್ರಿಗಳಾಗಿದ್ದಾಗ ಭೂ ಸುಧಾರಣೆ ಕಾನೂನು ತಂದು, ಭೂ ನ್ಯಾಯ ಮಂಡಳಿಗಳನ್ನು ರಚನೆ ಮಾಡಿ ಗೇಣಿದಾರರಿಗೆ ಭೂಮಿ ಸಿಕ್ಕತಕ್ಕಂಥ ಒಂದು ಯೋಜನೆಯನ್ನು ಹಾಕಿದರು. ಅದರ ವೈಫಲ್ಯಗಳು ಏನೇ ಇದ್ದರೂ ಕರ್ನಾಟಕ ರಾಜ್ಯದಲ್ಲಿ ಅದೊಂದು ಪ್ರಮುಖವಾದ ಘಟನೆ ಎಂದು ನಾವು ಒಪ್ಪಬೇಕಾಗುತ್ತದೆ.

ಆದರೆ ಇವತ್ತು ಈ ಸರ್ಕಾರ ಭೂಮಿ ಪ್ರಶ್ನೆ ಬಗ್ಗೆಯಾಗಲೀ, ಅಥವಾ ಬಗರ್ಹುಕುಂ ಪ್ರಶ್ನೆ ಬಗ್ಗೆಯಾಗಲೀ ಸ್ಪಷ್ಟವಾದಂಥ ಯಾವುದೇ ಅಂಶವನ್ನು ಇದರಲ್ಲಿ ಹೇಳಿಲ್ಲ. ಎರಡು ವರ್ಷಗಳ ಹಿಂದೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಬಗರ್ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬೇಕೆಂದು ಹೇಳಿದ್ದರು, ಅದರ ಬಗ್ಗೆ ಏನೂ ಕಾರ್ಯಕ್ರಮ ಎಂಬುದು ಇದರಲ್ಲಿ ಇಲ್ಲ. ಕೃಷಿ ಅಭಿವೃದ್ಧಿ ಬಗ್ಗೆ ಬಹಳಷ್ಟು ಮಾಡುತ್ತೇವೆಂದು ಹೇಳಿದಂಥ ಜನ ಇವರು ಭೂಮಿಯ ಪ್ರಶ್ನೆ, ಕೃಷಿ ಕಾರ್ಮಿಕರ ಕೂಲಿ ಪ್ರಶ್ನೆ ಮತ್ತು ಬೆಲೆಯ ಪ್ರಶ್ನೆ ಬಗ್ಗೆ ಇತ್ಯರ್ಥ ಮಾಡುವ ಬಗ್ಗೆ ಏನೂ ಹೇಳಿಲ್ಲ. ಉಳುವವನಿಗೆ ಭೂಮಿ ಸಿಗಬೇಕೇ ಎನ್ನುವ ಬಗ್ಗೆ ಇವರ ಧೋರಣೆ ಏನು ಎನ್ನುವ ಬಗ್ಗೆ ಸ್ಪಷ್ಟವಾಗಿಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕೃಷಿ ಕಾರ್ಮಿಕರ ಜೀವನದ ಪರಿಸ್ಥಿತಿ ಏನು ಎಂದು ನಮ್ಮ ಶಾಸಕರುಗಳಿಗೆಲ್ಲಾ ಗೊತ್ತಿದೆ. ಇಡೀ ರಾಜ್ಯದಲ್ಲಿ ಒಂದೇ ರೀತಿಯಾದ ಕೂಲಿ ಇಲ್ಲ.

ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯದಾಗಿದೆ. ಸರಾಸರಿ ತೆಗೆದುಕೊಂಡರೆ 10-12 ರೂಪಾಯಿ ಮಾತ್ರ ಕೃಷಿ ಕಾರ್ಮಿಕರಿಗೆ ಕೂಲಿ ಸಿಗುತ್ತಿದೆ. ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ 10-12 ರೂಪಾಯಿಗಳನ್ನು ಕೂಲಿ ತೆಗೆದುಕೊಂಡರೆ ಅವರ ಹೆಂಡತಿ ಮಕ್ಕಳನ್ನು ಸಾಕುವುದು ಹೇಗೆ? ಅವರ ಜೀವನ ಹೇಗೆ ಎಂಬುದನ್ನು ನಾವು ಪ್ರಾಮಾಣಿಕವಾಗಿ ಆಲೋಚನೆ ಮಾಡಬೇಕಾಗುತ್ತದೆ. 3ನೇ ಅಂಶ ಬೆಲೆ ಪ್ರಶ್ನೆ ರೈತರು ಬೆಳೆದಂಥ ಬೆಳೆಗೆ ಸರಿಯಾದಂಥ ಬೆಲೆ ಸಿಕ್ಕದೆ ಇವತ್ತು ರೈತರು ದಿವಾಳಿಯಾಗುತ್ತಿದ್ದಾರೆ. ಕೈಗಾರಿಕೆಗಳಲ್ಲಿ ಉತ್ಪನ್ನವಾಗತಕ್ಕಂಥ ಸಾಮಗ್ರಿಗಳ ಮತ್ತು ಕೃಷಿಯ ಕ್ಷೇತ್ರದಲ್ಲಿ ಉತ್ಪನ್ನವಾಗತಕ್ಕಂಥ ಸಾಮಗ್ರಿಗಳ ಬೆಲೆಗಳ ಮಧ್ಯೆ ಇರತಕ್ಕಂಥ ಅಂತರದಿಂದಾಗಿ ಇವತ್ತು ರೈತರ ದಿನೇ ದಿನೇ ದಿವಾಳಿಯಾಗುತ್ತಿದ್ದಾನೆ. Imbalance between the industrial product and the agricultural products the gap is widening every day.

ರೈತರುಗಳಿಗೆ ಲಾಭದಾಯಕವಾದ ಬೆಲೆಯನ್ನು ಕೊಡುವುದರ ಬಗ್ಗೆ ವ್ಯವಸಾಯದ ಧೋರಣೆಯಲ್ಲಿ ಸರ್ಕಾರ ಸ್ಪಷ್ಟನೆ ಮಾಡಿಲ್ಲ. ಇನ್ನು ವಿದ್ಯುಚ್ಛಕ್ತಿ ಬಗ್ಗೆಯೂ ಕೂಡ ಸ್ಪಷ್ಟವಾದ ಧೋರಣೆ ಇಲ್ಲ. ಅದೇ ಸಂದರ್ಭದಲ್ಲಿ ಕೈಗಾರಿಕೆಗಳ ಬಗ್ಗೆ ಇದರಲ್ಲಿ ಹೇಳಿದ್ದಾರೆ. ವಿದೇಶಿ ಕಂಪನಿಗಳನ್ನು ಇಲ್ಲಿ ಬಂಡವಾಳ ಹೂಡಲು ನಾವು ಇಲ್ಲಿ ಆಹ್ವಾನ ಮಾಡುತ್ತೇವೆ, ಆ ಒಂದು ಸಮಿತಿಗೆ ಮುಖ್ಯಮಂತ್ರಿಯವರೇ ಅಧ್ಯಕ್ಷರಾಗಿರುತ್ತಾರೆಂದು

ಹೇಳಿದ್ದಾರೆ. ಬಂಧುಗಳೇ, ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಾಂಗ್ರೆಸ್ (ಐ) ಸರಕಾರ ತನ್ನ ಅಧಿಕಾರವನ್ನು ಕಳೆದುಕೊಂಡಿರುವುದಕ್ಕೆ ಹಲವಾರು ಮಾನ್ಯ ಸದಸ್ಯರುಗಳು ಅವರದೇ ಆದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಕಚ್ಚಾಟದಿಂದ, ಭ್ರಷ್ಟಾಚಾರದಿಂದ ಅಧಿಕಾರವನ್ನು ಕಳೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಅವರು ತಮ್ಮ ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ಮೂಲಭೂತವಾದ ಕಾರಣ ಏನೆಂದರೆ ನರಸಿಂಹರಾವ್ ನೇತ್ರತ್ವದ ಕಾಂಗ್ರೆಸ್ (ಐ) ಸರಕಾರವು ತಾನು ಅನುಸರಿಸಿದಂಥ ಒಂದು ಆರ್ಥಿಕ ಧೋರಣೆ, ಗ್ಯಾಟ್ ಒಪ್ಪಂದದ ಪ್ರತಿಫಲವಾಗಿ ಸಾಮಾನ್ಯ ಜನರು ಕೊಂಡುಕೊಳ್ಳತಕ್ಕಂಥ ಪ್ರತಿಯೊಂದು ವಸ್ತುವಿನ ಬೆಲೆಯು ವಿಪರೀತವಾಗಿ ಏರಿಕೆಯಾಗಿ ಸಾಮಾನ್ಯ ಜನರು ಕಾಂಗ್ರೆಸ್ನ ಬಗ್ಗೆ ತಿರಸ್ಕಾರ ಭಾವನೆಯನ್ನು ಹೊಂದುವಂತಾಯಿತು. ಮಾನ್ಯ ಸದಸ್ಯರುಗಳು ಈಗ ತಾನೆ ಚುನಾವಣೆಗಳನ್ನು ಎದುರಿಸಿ ಇಲ್ಲಿಗೆ ಬಂದಿದ್ದೀರಿ.

ಚುನಾವಣೆಗಳಲ್ಲಿ ಮತ ಕೇಳಲು ಹಳ್ಳಿಗಳಿಗೆ ಹೋಗಿದ್ದಾಗ ಜನ ಸಾಮಾನ್ಯರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಎಂಬುದು ನಿಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ. ಇವೊತ್ತು ಒಂದು ಕೆ.ಜಿ. ನುಚ್ಚು 7 ರೂ. ಗಳವರೆಗೆ ಆಗಿದೆ. ಹೀಗೆ ಬೆಲೆ ಏರಿಕೆ ಇದ್ದಲ್ಲಿ ನಾವು ಹೇಗೆ ಜೀವನ ಮಾಡುವುದು ಎಂಬುದು ಜನಸಾಮಾನ್ಯರ ಪ್ರಶ್ನೆಯಾಗಿತ್ತು. ಅದರ ಅರ್ಥ ಅಂದರೆ ಜನಸಾಮಾನ್ಯರು ಉಪಯೋಗಿಸತಕ್ಕಂಥ ಅಗತ್ಯ ವಸ್ತುಗಳ ಬೆಲೆಯು ವಿಪರೀತವಾಗಿ ಏರಿ, ಆರ್ಥಿಕ ಸಮಸ್ಯೆಗಳ ಒತ್ತಡದಿಂದಾಗಿ ಸಾಮಾನ್ಯ ಜನರು ಬದುಕುವುದಕ್ಕೆ ಕಷ್ಟವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಜನರು ಕಾಂಗ್ರೆಸ್ಸನ್ನು ಸೋಲಿಸಿದ್ದಾರೆಂಬುದನ್ನು ನಾವೆಲ್ಲರೂ ಒಪ್ಪಬೇಕು. ಅದಕ್ಕೆ ಮುಖ್ಯ ಕಾರಣ ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರವು ಅನುಸರಿಸಿದ ಹೊಸ ಆರ್ಥಿಕ ಧೋರಣೆಗಳ ಪ್ರತಿಫಲ ಎಂದು ಹೇಳಬೇಕು. ಒಂದು ಕೆ.ಜಿ. ಕಾಫಿಪುಡಿಯ ಬೆಲೆಯು ಕೇವಲ ಆರು ತಿಂಗಳ ಅವಧಿಯಲ್ಲಿ 180 ರೂ.ಗಳ ವರೆಗೆ ಆಗಿದೆ. ಇದಕ್ಕೆ ಕಾರಣ ಹೊಸ ಆರ್ಥಿಕ ನೀತಿಯಿಂದಾಗಿ ಈ ದೇಶದ ಉತ್ಪನ್ನಗಳು ವಿದೇಶಕ್ಕೆ ಹೋಗಬಹುದು ಎಂಬ ಬಗ್ಗೆ ಕೊಟ್ಟ ಅನುಮತಿಯ ಪ್ರತಿಫಲವಾಗಿದೆ. ಇವೊತ್ತು ನಮ್ಮ ದೇಶದಲ್ಲಿ ಉತ್ಪಾದನೆಯಾದಂಥ ಎಲ್ಲಾ ವಸ್ತುಗಳು ವಿದೇಶಕ್ಕೆ ಹೋಗಿ, ನಮ್ಮ ದೇಶದವರಿಗೇ, ಅದರಲ್ಲೂ ಜನಸಾಮಾನ್ಯರಿಗೆ ಕೊಂಡುಕೊಳ್ಳತಕ್ಕಂಥ ಶಕ್ತಿ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯು ಬಂದು, ಅದರ ಕಾರಣದಿಂದ ಕಾಂಗ್ರೆಸ್ (ಐ) ಸರಕಾರ ಅಧಿಕಾರವನ್ನು ಕಳೆದುಕೊಂಡು ಎಂಬುದನ್ನು ಗಮನಿಸಬೇಕು.

ಅಂಥ ಸಂದರ್ಭದಲ್ಲಿ ಜನತಾದಳ ಸರಕಾರ ಹಲವಾರು ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರೇ ನಾವು ಕೇಂದ್ರದ ಜೊತೆಗೆ ಘರ್ಷಣೆಗೆ ಇಳಿಯುವುದಿಲ್ಲ ಎಂದು ಹೇಳಿದ್ದಾರೆ. ಹೌದು, ಘರ್ಷಣೆಯು ಯಾರಿಗೂ ಬೇಕಾಗಿಲ್ಲ. ಆದರೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ ಕೇಂದ್ರದ ನರಸಿಂಹರಾವ್ ಸರಕಾರದ ಧೋರಣೆಗಳಿಗೂ ನಿಮ್ಮ ಧೋರಣೆಗಳಿಗೂ ವ್ಯತ್ಯಾಸ ಇಲ್ಲವೇ? ಅವರು ಅನುಸರಿಸಿದ ಆರ್ಥಿಕ ಧೋರಣೆಗಳನ್ನು ನೀವು ಒಪ್ಪುವುದಾದರೆ, ನಿಮಗೂ ಕೂಡ ಅದೇ ಪರಿಸ್ಥಿತಿ ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಆದ್ದರಿಂದ ಕೇಂದ್ರ ಸರಕಾರದ ಆರ್ಥಿಕ ಧೋರಣೆಗಳನ್ನು ನೀವೇನಾದರೂ ಒಪ್ಪಿದರೆ, ಈ ರಾಜ್ಯದ ಜನತೆಯು ಸಂಪೂರ್ಣವಾಗಿ ದಿವಾಳಿಯಾಗುತ್ತಾರೆ. ಆದ್ದರಿಂದ ಈ ಕುರಿತು ಜನತಾದಳ ಸರಕಾರದ ಧೋರಣೆ ಏನು ಎಂಬುದನ್ನು ಸ್ಪಷ್ಟ ಮಾಡಬೇಕಾಗಿದೆ.

ಏತಕ್ಕೆಂದರೆ ನರಸಿಂಹರಾವ್ ಸರಕಾರದ ಆರ್ಥಿಕ ಧೋರಣೆಯು ಇಡೀ ದೇಶದ ಸಾರ್ವಭೌಮತ್ವವನ್ನೇ ಒತ್ತೆ ಇಟ್ಟು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದೆ. ಅದರ ಪ್ರತಿಫಲವನ್ನು ಇಡೀ ದೇಶದ ಜನತೆಯು ಅನುಭವಿಸಬೇಕಾಗಿದೆ. ಇವೊತ್ತು 2 ಲಕ್ಷ 84 ಸಾವಿರ ಕೋಟಿ ರೂಪಾಯಿಗಳಷ್ಟು ವಿದೇಶಿ ಸಾಲವಿದೆ. ಪ್ರತಿಭಾರತೀಯನ ತಲೆಯ

ಮೇಲೆ 3200 ರೂ.ಗಳ ಸಾಲವನ್ನು ಹಾಕಿದ್ದಾರೆ, ಆ ಮೂಲಕ ಇಡೀ ದೇಶವನ್ನು ಆರ್ಥಿಕವಾಗಿ ದಿವಾಳಿಗೆ ದೂಡತಕ್ಕಂಥ ಕಾಂಗ್ರೆಸ್‌ಆರ್ಥಿಕ ಧೋರಣೆಯನ್ನು ನೀವು ಒಪ್ಪುತ್ತೀರೋ ಅಥವಾ ಅದರ ವಿರುದ್ಧ ಏನಾದರೂ ಹೋರಾಟವನ್ನು ಮಾಡುತ್ತಿರೋ ಎಂಬ ಬಗ್ಗೆ ತಾವು ಸ್ಪಷ್ಟ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರ ನೇತ್ರತ್ವದ ಸಮಿತಿಯು ರಚಿತವಾಗಿದ್ದು ಅದರ ಕಾರ್ಯವೈಖರಿಯ ಬಗ್ಗೆ ಕೇಳುತ್ತಾ, ನೀವು ವಿದೇಶಿ ಬಂಡವಾಳವನ್ನು ತರುವುದರ ಬಗ್ಗೆ ನಮ್ಮ ವಿರೋಧ ಇಲ್ಲ, ನಮ್ಮ ಪ್ರಶ್ನೆ ಏನೆಂದರೆ ನೀವು ಯಾವ ಷರತ್ತಿನ ಮೇಲೆ ಮತ್ತು ಯಾವ ಸಂದರ್ಭಗಳಲ್ಲಿ ವಿದೇಶಿ ಬಂಡವಾಳವನ್ನು ಒಂದು ರಾಜ್ಯದಲ್ಲಿ ತೊಡಗಿಸುವಾಗ ಅದರಲ್ಲಿರತಕ್ಕಂಥ ಷರತ್ತುಗಳು ಬಹುಮುಖ್ಯವಾಗಿರುತ್ತವೆ. ಯಾವ ವಿದೇಶಿ ಬಂಡವಾಳಗಾರರು ಇಲ್ಲಿ ಹಣವನ್ನು ತೊಡಗಿಸಿದ ನಂತರ ಅವರಿಗೆ ಬರತಕ್ಕಂಥ ಲಾಭವನ್ನು ಇದೇ ರಾಜ್ಯದಲ್ಲಿ ಅವರು ಮತ್ತೆ ಇವೆಸ್ಟ್ ಮಾಡಬೇಕೆಂಬ ಷರತ್ತಿನ ಮೇಲೆ ನೀವು ವಿದೇಶಿ ಬಂಡವಾಳವನ್ನು ಆಹ್ವಾನ ಮಾಡಿದರೆ ಅದಕ್ಕೆ ನಮ್ಮ ವಿರೋಧವಿಲ್ಲ.

ಆದರೆ ವಿದೇಶಿ ಬಂಡವಾಳಗಾರರನ್ನು ನಮ್ಮ ದೇಶಕ್ಕೆ ಆಹ್ವಾನ ಮಾಡಿ ಅವರು ಇಲ್ಲಿ ತಮ್ಮ ಬಂಡವಾಳವನ್ನು ಹೂಡಿ, ನಮ್ಮ ದೇಶದಲ್ಲಿ ಸುಲಭದಲ್ಲಿ ಸಿಗತಕ್ಕಂಥ ಕಾರ್ಮಿಕರನ್ನು ಉಪಯೋಗಿಸಿಕೊಂಡು ನಮ್ಮ ದೇಶದಲ್ಲಿ ಸಿಗತಕ್ಕಂಥ ಕಚ್ಚಾಮಾಲನ್ನು ಉಪಯೋಗಿಸಿಕೊಂಡು ಅವರು ಲಾಭವನ್ನು ಮಾಡಿಕೊಂಡು ಅವರ ದೇಶಕ್ಕೆ ಹಣವನ್ನು ತೆಗೆದುಕೊಂಡು ಹೋಗುವುದಾದರೆ, ನಮ್ಮ ದೇಶದ ಕಚ್ಚಾ ವಸ್ತುಗಳನ್ನು, ಶ್ರಮಿಕಶಕ್ತಿಯನ್ನು ಉಪಯೋಗಿಸಿಕೊಂಡು ಲಾಭಮಾಡಿಕೊಂಡು ಹೋಗುವುದಾದಲ್ಲಿ ಅದಕ್ಕೆ ನಮ್ಮ ಸಂಪೂರ್ಣವಾದ ವಿರೋಧವಿದೆ. ಅದಕ್ಕೆ ಯಾವುದೇ ಪರಿಸ್ಥಿತಿಯಲ್ಲಿಯೂ ಅವಕಾಶ ಮಾಡಿಕೊಡಬಾರದು ಎಂದು ಹೇಳ ಬಯಸುತ್ತೇನೆ. ಅದೇ ರೀತಿಯಲ್ಲಿ ವಿದ್ಯುತ್ ವಲಯದಲ್ಲಿ ವಿದೇಶಿ ಕಂಪನಿಗಳಿಗೆ ಬಂಡವಾಳ ಹಾಕಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅದರ ಪರಿಣಾಮ ಏನು ಎಂಬುದನ್ನು ನೀವು ಆಲೋಚನೆ ಮಾಡಬೇಕಾಗಿತ್ತು.

ಈವತ್ತು ಯೋಜನಾ ಆಯೋಗಕ್ಕೆ ಸೂಚನೆ ಕೊಟ್ಟಿದೆ. ನೀವು ಈ ವಿದ್ಯುತ್ ದರವನ್ನು ಒಂದು ಯೂನಿಟ್ಗೆ 10 ಪೈಸೆಯಿಂದ 98 ಪೈಸೆಗೇನಾದರೂ ಏರಿಸಿದ್ದೇ ಆದರೆ ಅಗತ್ಯ ವಸ್ತುಗಳ ಬೆಲೆ ಕೂಡ 34 ಪರ್ಸೆಂಟ್‌ಏರುತ್ತದೆ ಎಂಬ ಎಚ್ಚರಿಕೆಯನ್ನು ಯೋಜನಾ ಆಯೋಗ ಕೊಟ್ಟಿದೆ. ಅದರ ಜೊತೆಯಲ್ಲೇ ನಾನು ಜನತಾದಳದ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ, ಮಹಾರಾಷ್ಟ್ರದ ಶರದ್ಪವಾರ್ ಸರ್ಕಾರ ಅಮೆರಿಕದ ಎನ್ರಾಂಗ್ ಕಂಪನಿ ಜೊತೆ ಒಪ್ಪಂದ ಮಾಡಿ ವಿದ್ಯುತ್ ವಲಯದಲ್ಲಿ ಬಂಡವಾಳ ಹಾಕಲಿಕ್ಕೆ ಆಹ್ವಾನ ಮಾಡಿದೆ. ಆದರೆ ಆ ಕಂಪನಿಯವರು ಮಹಾರಾಷ್ಟ್ರದ ಸರ್ಕಾರದ ಮೇಲೆ ಒತ್ತಡ ಹಾಕಿ 16 ಪರ್ಸೆಂಟ್ ಲಾಭ ನಮಗೆ ಕೊಡುವುದಕ್ಕೆ ನಿಮ್ಮ ಸರ್ಕಾರ ನಮಗೆ ಆಶ್ವಾಸನೆ, ಕೊಟ್ಟರೆ ಮಾತ್ರ ನಾವು ಆ ಬಂಡವಾಳ ಹಾಕುತ್ತೇವೆಂದು. ಮಹಾರಾಷ್ಟ್ರ ಸರ್ಕಾರ ಅದಕ್ಕೆ ಒಪ್ಪಿದೆ, ಅದರ ಪರಿಣಾಮ ಇವತ್ತು ಒಂದು ಯೂನಿಟ್ ವಿದ್ಯುತ್ಗೆ 40 ಪೈಸೆಯಿಂದ 4.60 ಪೈಸೆ ಆಗುತ್ತದೆ. ಆಗ ಈ ದೇಶದ ಕೃಷಿ ಕೈಗಾರಿಕೆಗಳ ಮೇಲೆ ಎಂತಹ ಪರಿಣಾಮವಾಗುತ್ತದೆ. ಅಗತ್ಯವಸ್ತುಗಳ ಬೆಲೆಗಳು 64 ಪರ್ಸೆಂಟ್ ಏರುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ನೀವು ವಿದೇಶಿ ಕಂಪನಿಗಳನ್ನು ನಮ್ಮ ರಾಜ್ಯದ ವಿದ್ಯುತ್ ವಲಯಕ್ಕೆ ಬಂಡವಾಳ ಹಾಕಲು ಆಹ್ವಾನ ಮಾಡುವಾಗ ನಿಮ್ಮ ಮೇಲೂ ಕೂಡ ಅದೇ ಷರತ್ತನ್ನು ಅವರು ಹಾಕುತ್ತಾರೆ. 16 ಪರ್ಸೆಂಟ್ ಲಾಭವನ್ನು ನೀವು ಅಷ್ಯೂರ್ ಮಾಡಿದರೆ ಅದರಿಂದ 4.60 ರೂ. ಪೈಸೆ ಒಂದು ಯೂನಿಟ್ ಕರೆಂಟ್ಗೆ ಆಗುತ್ತದೆ ಎಂದು ಇದೇ ಯೋಜನಾ ಆಯೋಗ ಸೂಚನೆ ಕೊಟ್ಟಿದೆ.

ಈಗಾಗಲೇ ರೈತರು ದಿವಾಳಿಯಾಗಿದ್ದಾರೆ. ಅವರಿಗೆ ಸರಿಯಾದ ರೀತಿಯಲ್ಲಿ ಕರೆಂಟ್ವೋಲ್ಟೇಜಿಲ್ಲ, ಮೋಟರ್‌ಗಳು ಸುಟ್ಟುಹೋಗುತ್ತಿವೆ. ಅವರಿಗೆ ಕನಿಷ್ಠ 3 ಗಂಟೆಯಾದರೂ ವಿದ್ಯುತ್ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಮಾಡಲು ಸಾಧ್ಯವಿದೆ. ಇನ್ನೊಂದು ಪ್ರಶ್ನೆ ಇರುವುದು, ವಿದ್ಯುಚ್ಛಕ್ತಿ ವಲಯವನ್ನು ನಾವು ರಿಪೇರಿ ಮಾಡುತ್ತೇವೆ ಎಂಬುದು, ವಿದ್ಯುತ್ ಬಗ್ಗೆ ಇರುವುದು ಮುಖ್ಯ ಅಂಶ ಕರ್ನಾಟಕದಲ್ಲಿ ನಾವು ಸತತವಾಗಿ ನೋಡುತ್ತಿರುವುದು ವಿದ್ಯುತ್ ಏನು ಉತ್ಪಾದನೆಯಾಗುತ್ತಿತ್ತು. ಈಗ ಹೈಡ್ರೊ ಎಲೆಕ್ಟ್ರಿಕ್ ನ್ಯೂಕ್ಲಿಯರ್ ಸ್ಟೇಷನ್ನುಗಳಲ್ಲಿ ಉತ್ಪಾದನೆ ಮಾಡಲು ನೀವು ಪ್ರಾರಂಭಿಸಿದರೂ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಅದರ ಬದಲಿಗೆ ಏನಾಗಿದೆ ಉತ್ಪಾದನೆ ಮಾಡುವ ಘಟಕಗಳ ಮೇಲೆ ಇವತ್ತು ಸಾಲದ ಹೊರೆ ಇದೆ. ರಾಯಚೂರು ಥರ್ಮಲ್ ಪ್ಲಾಂಟ್ನವರು ನನಗೆ ಮಾಹಿತಿ ಇರುವ ಪ್ರಕಾರ ಕೋಲ್ ಇಂಡಿಯಾ ಅಥಾರಿಟಿಗೆ 500 ಕೋಟಿ ರೂ. ಸಾಲ ಕೊಡಬೇಕಾಗಿದೆ.

ಆದರಿಂದ ಅವರು ಕೋಲನ್ನು ಸಪ್ಲೈ ಮಾಡಲು ಆಗುತ್ತಿಲ್ಲ, ವಿದ್ಯುತ್ತನ್ನು ಉತ್ಪಾದಿಸಲು ಆಗುತ್ತಿಲ್ಲ, ಶರಾವತಿಯಲ್ಲಿ ಬಿಟ್ಟುಹೋಗಿರುವ ಬಾಯ್ಲರುಗಳನ್ನು ರಿಪೇರಿ ಮಾಡಲು ಆಗುತ್ತಿಲ್ಲ. ಆದ್ದರಿಂದ ಮೊಟ್ಟಮೊದಲಿಗೆ ಸರ್ಕಾರ ವಿದ್ಯುತ್ ಉತ್ಪಾದನೆಗೆ ಏನೇನು ಕಾರ್ಯಕ್ರಮ ಹಾಕಿದ್ದೀರಿ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಅದನ್ನು ಇದರಲ್ಲಿ ನೀವು ತೋರಿಸಿಲ್ಲ. ಇದೇ ರೀತಿಯಲ್ಲಿ ಇವತ್ತು ಕೃಷಿಯ ರೈತರು ದಿವಾಳಿಯಾಗುತ್ತಿದ್ದಾರೆ. ಒಂದು ಕಡೆ ಕೃಷಿ ಕಾರ್ಮಿಕರಿಗೆ ಕೂಲಿ ಇಲ್ಲ, ಅವನು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಇನ್ನೊಂದು ಕಡೆ ರೈತ ದಿವಾಳಿಯಾಗುತ್ತಿದ್ದಾನೆ. ಆತ ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಇಲ್ಲದೆ ಅವನು ದಿವಾಳಿಯಾಗುತ್ತಿದ್ದಾನೆ. ಇವತ್ತು ಕೃಷಿ ಉತ್ಪಾದನೆಗಳ ಮತ್ತು ಕೈಗಾರಿಕೆ ಉತ್ಪನ್ನಗಳ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡುವಲ್ಲಿ ಸರ್ಕಾರದ ಯೋಜನೆಗಳೇನು ಎಂಬುದು ಇದರಲ್ಲಿ ಸ್ಪಷ್ಟವಾಗಿಲ್ಲ, ಅದೇ ರೀತಿಯಲ್ಲಿ ಗ್ರಾಮೀಣ ಉದ್ಯೋಗ, ಶಿಕ್ಷಣ. ಅಧ್ಯಕ್ಷರೇ, ನನ್ನ ಕಳಕಳಿಯ ವಿನಂತಿ. ಯಾವುದೇ ಸರ್ಕಾರಕ್ಕೆ ವಿದ್ಯಾಭ್ಯಾಸದ ಬಗ್ಗೆ ಸ್ಪಷ್ಟವಾದ ಧೋರಣೆ ಇರಬೇಕು. ಸ್ಪಷ್ಟವಾದ ಕಾರ್ಯಕ್ರಮ ಇವೊತ್ತಿಲ್ಲ, ಇವತ್ತು ಕನ್ನಡ ನಾಡು ನುಡಿ ಭಾಷೆಗಳ ಬಗ್ಗೆ ನಾವು ಬಹಳಷ್ಟು ಮಾತನಾಡುತ್ತೇವೆ ಆದರೆ ವಿದ್ಯಾಭ್ಯಾಸದ ಬಗ್ಗೆ ಸ್ಪಷ್ಟವಾದ ಧೋರಣೆ ಇಲ್ಲ, ಕೇಂದ್ರ ಸರ್ಕಾರವೂ ಕೂಡ ನಿರಂತರವಾಗಿ ವಿದ್ಯಾಭ್ಯಾಸವನ್ನು ಕಡೆಗಣಿಸಿದೆ.

ಇಡೀ ರಾಷ್ಟ್ರದ ಒಟ್ಟು ಆದಾಯದಲ್ಲಿ 1.5 ಪರ್ಸೆಂಟ್ ಮಾತ್ರ ಇವತ್ತು ಶಿಕ್ಷಣಕ್ಕೆ ವಿನಿಯೋಗಿಸಿದೆ. ರಾಜ್ಯ ಸರ್ಕಾರಗಳು ಕೂಡ ಅದೇ ಧಾಟಿಯಲ್ಲಿ ಹೋಗುತ್ತಿವೆ. ನಮ್ಮ ಕರ್ನಾಟಕದಲ್ಲಿ ನೂರಕ್ಕೆ 68 ಜನ ಹೆಬ್ಬೆಟ್ಟು ಒತ್ತುತ್ತಿದ್ದಾರೆ, ಶಿಕ್ಷಣವಿಲ್ಲ, ಓದಬೇಕಾದ ಮಕ್ಕಳು ಕುರಿ, ಹಂದಿ ಮೇಯಿಸುತ್ತಿದ್ದಾರೆ. ಅವರಿಗೆ ಓದತಕ್ಕಂಥ ಸೌಲಭ್ಯವಿಲ್ಲ, ಆದ್ದರಿಂದ ನಾನು ಇವತ್ತು ಸರ್ಕಾರಕ್ಕೆ ಮನವಿ ಮಾಡುವುದು 11ನೇ ತರಗತಿವರೆಗೆ, ಪಿ.ಯು.ಸಿ. ವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದರೆ ಮಾತ್ರ ಈ ನಾಡಿನ ಅವಿದ್ಯಾವಂತರಿಗೆ ಶಿಕ್ಷಣ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದು ನಿಮ್ಮ ಕಾರ್ಯಕ್ರಮ ಆಗಬೇಕಾಗಿತ್ತು ಆದರೆ ಆಗಲಿಲ್ಲ, ನೀವು ಜಯಪ್ರಕಾಶ್ ನಾರಾಯಣರ ತತ್ವದ ಮೇಲೆ ನಮ್ಮ ಸರ್ಕಾರ ನಡೆಯುತ್ತದೆ ಎನ್ನುತ್ತೀರಿ. ಅವರು ಸಾಯುವವರೆಗೂ ತನ್ನ ಅಭಿಪ್ರಾಯ ಹೇಳುತ್ತಿದ್ದರು. ಶಿಕ್ಷಣದ ಬಗ್ಗೆ, ಯಾವುತ್ತು ಈ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯ ವಿದ್ಯಾವಂತನಾಗುತ್ತಾನೋ ಅವತ್ತು ಈ ದೇಶ ಬದುಕಲಿಕ್ಕೆ ಸಾಧ್ಯವಾಗುತ್ತದೆಂದು. ಆದರೆ ಇವತ್ತು ಜನತಾದಳ ಸರ್ಕಾರ ಶಿಕ್ಷಣದ ಬಗ್ಗೆ ದುರದೃಷ್ಟವಶಾತ್ ತನ್ನ ಧೋರಣೆ ಪ್ರಸ್ತಾಪಿಸಿಲ್ಲ. ಆದ್ದರಿಂದ ಪ್ರತಿಯೊಬ್ಬನಿಗೂ ವಿದ್ಯೆ ಕೊಡುವುದು, ಆತ ಪಡೆಯುವುದು ಆತನ ಹಕ್ಕಾಗುತ್ತದೆ.

ಆದರೆ ಕರ್ನಾಟಕ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ವಿದ್ಯೆಯನ್ನು ಪಡೆಯತಕ್ಕಂಥದ್ದು ಇವತ್ತು ಒಂದು ಪ್ರಿವ್ಲೇಜ್ ಆಗಿದೆಯೇ ಹೊರತು ಅದು ಹಕ್ಕಾಗಿ ಉಳಿದಿಲ್ಲ. ವಿದ್ಯಾಭ್ಯಾಸ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಹಾಗೆ ಮಾರಾಟವಾಗುತ್ತದೆ. ಯಾರಿಗೆ ಇವತ್ತು ಹಣ ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೋ ಅವರಿಗೆ ಮಾತ್ರ ವಿದ್ಯಾಭ್ಯಾಸ ಸಿಗುತ್ತಿದೆ. ಸಾಮಾನ್ಯ ಬಡವರ ಮಕ್ಕಳಿಗೆ ಇವತ್ತು ವಿದ್ಯಾಭ್ಯಾಸ ಸಿಗುತ್ತಿಲ್ಲ. ಆದ್ದರಿಂದ ಶಿಕ್ಷಣದ ಬಗ್ಗೆ ತಾವು ಸ್ಪಷ್ಟವಾದಂಥ ಒಂದು ನಿಲುಮೆಯನ್ನು ಇದರಲ್ಲಿ ಸ್ಪಷ್ಟಪಡಿಸಿಲ್ಲ. ಹಳ್ಳಿಗಾಡಿನ ಶಾಲೆಗಳ ಬಗ್ಗೆ ನೀವು ನೋಡಬೇಕು. ಸ್ಕೂಲು ಇದ್ದರೆ ಮಾಸ್ಟರ್ ಇಲ್ಲ, ಮಾಸ್ಟರ್ ಇದ್ದರೆ ಬಿಲ್ಡಿಂಗ್ ಇಲ್ಲ, ಬಿಲ್ಡಿಂಗ್ ಇದ್ದರೆ ಅಲ್ಲಿ ಪೀಠೋಪಕರಣಗಳು ಇಲ್ಲ, ಯಾವುದೇ ಶಾಲೆಯಲ್ಲಿ ಇವತ್ತು ಹೋಗಿ ನೋಡಿದರೂ ಕೂಡ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ರೀತಿಯಲ್ಲಿ ಆ ಶಾಲೆಗಳು ಇವತ್ತು ಇಲ್ಲ, ಬಂಧುಗಳೇ, ಇನ್ನೊಂದು ಮುಖ್ಯವಾದ ಅಂಶ. ನಾವೆಲ್ಲರೂ ಮಾತನಾಡುತ್ತಿರುವಂಥದ್ದು ಮಹಿಳೆಯರ ಸಮಾನತೆ. 30 ಪರ್ಸೆಂಟ್ನ್ನು ನಾವು ಮಹಿಳೆಯರಿಗೆ ನಿಗದಿ ಮಾಡುತ್ತೇವೆ ಎಂದು ಹೇಳಿದ್ದೀರಿ. ನೀವು 30 ಪರ್ಸೆಂಟ್ ಅಲ್ಲ,

50 ಪರ್ಸೆಂಟ್ ಮಾಡಿದರೂ ನಮಗೇನು ಅಭ್ಯಂತರವಿಲ್ಲ, ಏಕೆಂದರೆ ಅವರು ಅರ್ಧ ಜನಸಂಖ್ಯೆ ಇದ್ದಾರೆ. ಆದರೆ ಒಂದು ಪ್ರಶ್ನೆ ನಿಮ್ಮಲ್ಲಿ ಒಂದು ಮುಖ್ಯವಾದಂಥ ವಿಷಯ ನಿಮ್ಮ ಗಮನದಲ್ಲಿರಬೇಕು. ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದಲ್ಲಿ 11 ವರ್ಷಗಳ ಕಾಲ ಪ್ರಧಾನಮಂತ್ರಿಯಾಗಿದ್ದರೂ ಕೂಡ ಈ ದೇಶದ ಮಹಿಳೆಯರ ಪರಿಸ್ಥಿತಿ ಸುಧಾರಣೆಯಾಗಲಿಲ್ಲ, ಎಲ್ಲಾ ಅಡಿಗೆ ಸ್ಟವ್ಗಳು ಅತ್ತೆಯ ಮನೆಯಲ್ಲಿಯೇ ಸಿಡಿದುಹೋಗುತ್ತದೆ, ತವರು ಮನೆಯಲ್ಲಿ ಸಿಡಿಯುವುದನ್ನು ತಡೆಯಲಿಕ್ಕೆ ಆಗಲಿಲ್ಲ. ಇದು ನಿಮಗೆ ತಿಳಿದಿರಬೇಕು. ಒಬ್ಬ ಮಹಿಳಾ ಪ್ರಧಾನಮಂತ್ರಿ 11 ವರ್ಷ ಅಧಿಕಾರದಲ್ಲಿ ಇದ್ದರೂ ಕೂಡ ಮಹಿಳೆಯರ ಸಮಸ್ಯೆ ಪರಿಹಾರವಾಗಲಿಲ್ಲ, ಆದ್ದರಿಂದ ನೀವು 30 ಪರ್ಸೆಂಟ್ ಇಲ್ಲಿ ವಿಧಾನಸಭೆಯಲ್ಲಿ ನೀವು ಕಾದಿರಿಸುವುದಾದರೆ ಅದರಿಂದ ಏನಾದರೂ ಮಹಿಳೆಯರ ಪರಿಸ್ಥಿತಿ ಚೆನ್ನಾಗಿ ಆಗುತ್ತದೆ ಎಂದು ನಿಮ್ಮ ಭ್ರಮೆ ಇದ್ದರೆ ಅದು ಖಂಡಿತಾ ನಿಮಗೆ ಭ್ರಮೆಯಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಇವತ್ತು ಗಮನಿಸಬೇಕು, ಹಳ್ಳಿಗಾಡಿನಲ್ಲಿ ಇವತ್ತು ಇಡೀ ಮಹಿಳಾ ಸಮುದಾಯದಲ್ಲಿ ಒಟ್ಟು 80 ಭಾಗ ಹಳ್ಳಿಗಳಲ್ಲಿ ಜೀವನ ಮಾಡುತ್ತಿದ್ದಾರೆ, ಅವರಿಗೆ ಬೆಳಿಗ್ಗೆ ಎದ್ದರೆ ಬಹಿರಂಗವಾಗಿ ಸ್ನಾನ ಮಾಡತಕ್ಕಂಥ ಪರಿಸ್ಥಿತಿ ಇದೆ.

ಇದು ನಾಚಿಕೆಗೇಡಿನ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಇದೆ. ಅವರಿಗೆ ಕನಿಷ್ಠ ಮನವೀಯ ದೃಷ್ಟಿ, ಕನಿಷ್ಠ ನಾಗರೀಕ ಸೌಲಭ್ಯ ಇಲ್ಲ. ಬೆಳಿಗ್ಗೆ ಎದ್ದರೆ ಅವರು ಎಲ್ಲಾ ಕೆಲಸ ಕಾರ್ಯಗಳನ್ನು ಬಯಲಿನಲ್ಲಿ ಮಾಡಬೇಕು ಹೆಂಗಸರು, ಸ್ನಾನ ಮಾಡುವುದಕ್ಕೆ ಸ್ನಾನಗೃಹ ಇಲ್ಲ, ನೂರಕ್ಕೆ ಎಂಭತ್ತು ಜನರಿಗೆ ಇಲ್ಲ, ಅವರು ಬಯಲಿನಲ್ಲಿಯೇ ಸ್ನಾನ ಮಾಡಬೇಕು. ಅವರ ಆರ್ಥಿಕ ಸ್ಥಿತಿ ಹೇಗಿದೆ ಎನ್ನುವುದನ್ನು ಗಮನಿಸದೆ ಅದನ್ನು ನೀವೇನಾದರೂ ಉತ್ತಮಪಡಿಸುವುದನ್ನು ಬಿಟ್ಟು ನಾವು ಶಾಸನಸಭೆಯಲ್ಲಿ, ಲೋಕ ಸಭೆಯಲ್ಲಿ 30 ಪರ್ಸೆಂಟ್ ಸ್ಥಾನವನ್ನು ಅವರಿಗೆ ಮೀಸಲಿಟ್ಟು ಅವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದರೆ ಇದಕ್ಕಿಂತ ಹಿಪೋಕ್ರಸಿ ಬೇರೆ ಏನೂ ಇರುವುದಕ್ಕೆ ಸಾಧ್ಯವಿಲ್ಲ. ಅದರಿಂದ ಅವರು ಖಂಡಿತವಾಗಿಯೂ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ, ಇವತ್ತು ಅವರು ರಾಜಕೀಯವಾಗಿ ಪ್ರಮುಖ ಸ್ಥಾನವನ್ನು ಪಡೆಯಬೇಕು ಎಂದಾದರೆ ಅವರಲ್ಲಿ ರಾಜಕೀಯ ಪ್ರಜ್ಞೆ ಬರಬೇಕು. ರಾಜಕೀಯ ಪ್ರಜ್ಞೆ ಬರಬೇಕಾದರೆ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇರಬೇಕು. ಆರ್ಥಿಕ ಸ್ವಾತಂತ್ರ್ಯ ಇವತ್ತು ಮಹಿಳೆಯರಿಗೆ ಏನಿದೆ? ಇವತ್ತು ಅವರ ಸ್ಥಿತಿ ಎಷ್ಟು ಹೀನಾಯವಾಗಿದೆ ಎಂದರೆ ಎಷ್ಟೇ ವಿದ್ಯಾವಂತ ಮಹಿಳೆಯಾದರೂ ಕೂಡ ಕನಿಷ್ಠ ನೀವು ನೋಡಿರಬಹುದು, ಗಂಡ ಹೆಂಡತಿ ಬಸ್

ಹತ್ತಿದರೆ ಕಂಡಕ್ಟರ್ ಬಂದು ಟಿಕೆಟ್ ಕೇಳಿದರೆ ಗಂಡನ ಕಡೆಗೆ ಅವಳು ಕೈ ತೋರಿಸಬೇಕು.

ಆರ್ಥಿಕವಾಗಿ ಅವರು ಎಷ್ಟು ಪರಾವಲಂಬಿತರಾಗಿದ್ದಾರೆ. ಎಲ್ಲಿಯವರೆಗೆ ಆರ್ಥಿಕ ಗುಲಾಮತನ ಮಹಿಳೆಯರಲ್ಲಿತ್ತೋ ಅಲ್ಲಿಯವರೆಗೂ ನೀವು ಯಾವುದೇ ರೀತಿಯಾದಂಥ ಸಮಾನತೆಯನ್ನು ಖಂಡಿತವಾಗಿಯೂ ಸಾಧಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಂಶವನ್ನು ನೀವು ಗಮನದಲ್ಲಿಟ್ಟು ಮೊದಲನೆಯದಾಗಿ ಅವರಿಗೆ ಆರ್ಥಿಕ ಸ್ವಾತಂತ್ರ, ತಂದೆಯ ಆಸ್ತಿಯಲ್ಲಿ ಗಂಡು ಮಕ್ಕಳ ರೀತಿಯಲ್ಲಿ ಸಮಪಾಲು ಬರತಕ್ಕಂಥ ರೀತಿಯಲ್ಲಿ ಕಾನೂನನ್ನು ತರಬೇಕು, ಅವರಿಗೆ ಸ್ವತಂತ್ರವಾಗಿ ಬದುಕುವುದಕ್ಕೆ ಆರ್ಥಿಕ ಬುನಾದಿಯನ್ನು ಹಾಕಿಕೊಡಬೇಕು. ಅವರಿಗೆ ಬೇಕಾಗಿರತಕ್ಕಂಥ ಕನಿಷ್ಠ ಸೌಲಭ್ಯಗಳನ್ನು ಕೊಡಬೇಕು. ವಿದ್ಯಾಭ್ಯಾಸವನ್ನು ಕೊಡಬೇಕು. ಆಮೇಲೆ ನೀವು ಶಾಸನಸಭೆಯಲ್ಲಿ 50 ಪರ್ಸೆಂಟ್ ಮಾಡಿ. ಏಕೆಂದರೆ ಅವರು 50 ಪರ್ಸೆಂಟ್ ಜನಸಂಖ್ಯೆ ಇದ್ದಾರೆ. ಅದೇ ರೀತಿಯಲ್ಲಿ ಇವತ್ತು ಕುಡಿಯುವ ನೀರಿನ ಪರಿಸ್ಥಿತಿ. ಏನು ನಿಮ್ಮ ಧೋರಣೆ?

ಅಧ್ಯಕ್ಷರು : ಐದು ನಿಮಿಷ ಹೆಚ್ಚಾಯಿತು. ಬೇಗ ಕನ್ಕ್ಲೂಡ್ ಮಾಡಿ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ : ಇಸ್ಟು ಮುಖ್ಯವಾಗಿ ಕುಡಿಯುವ ನೀರಿನ ಪ್ರಶ್ನೆ. ಕುಡಿಯುವ ನೀರಿನ ಪ್ರಶ್ನೆ ಬಂದಾಗ ನಜೀರ್ ಸಾಬ್ರವರು ಬೋರ್‌ವೆಲ್ಲಗಳನ್ನು ಹಾಕದುದ್ದು ನಿಜ. ಆದರೆ ಇವತ್ತು ನಾವು ಅವರನ್ನು ಶ್ಲಾಘನೆ ಮಾಡಬೇಕು. ಕನಿಷ್ಠ ಕರ್ನಾಟಕ ರಾಜ್ಯದಲ್ಲಿ ಕುಡಿಯುವುದಕ್ಕೆ ನೀರು ಕೊಟ್ಟಂಥ ಮೊಟ್ಟಮೊದಲ ಮಂತ್ರಿಯವರು. ಆದರೆ ಇವತ್ತು ಪರಿಸ್ಥಿತಿ ಏನು ಆಯಿತು? ಭೂಮಿಯಲ್ಲಿ ನೀರಿನ ಮಟ್ಟ ಸಂಪೂರ್ಣವಾಗಿ ಕೆಳಗಡೆ ಹೋಗುತ್ತಿದೆ. 400 ಅಡಿ ಹಾಕಿದರೂ ಕೂಡ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ, ಅದನ್ನೇ ಹೇಳಿಕೊಂಡು ಬಂಡವಾಳ ಮಾಡಿಕೊಳ್ಳುವುದು ಬೇಡ. ಇವತ್ತು ಇನ್ನೊಂದು ಹೊಸ ಕಾರ್ಯಕ್ರಮ ಕುಡಿಯುವ ನೀರಿನ ಬಗ್ಗೆ ಬೇಕಾಗಿದೆ. ಆ ಕುಡಿಯುವ ನೀರಿನ ಬಗ್ಗೆ ಹೊಸ ಕಾರ್ಯಕ್ರಮ ಹಾಕದೆ ಇದ್ದರೆ ಜನತೆಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯತೆ ಇಲ್ಲ, ಅದಕ್ಕೆ ನನ್ನ ಸಲಹೆ ಏನೆಂದರೆ ನೀವು ಬೋರ್‌ವೆಲ್ಲಗಳನ್ನು ಹಾಕಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದರ ಬದಲು ನೀವು ಮಿನಿ ವಾಟರ್ ಸಪ್ಲೈ ಸ್ಕೀಮ್, ಎನ್.ಆರ್.ಡಬ್ಲ್ಯೂ. ಸ್ಕೀಮ್ನಲ್ಲಿ ಟ್ಯಾಂಕ್ಗಳನ್ನು ಕಟ್ಟಿ ಹಳ್ಳಿಗಳಿಗೆ ಸರಬರಾಜು ಮಾಡುವುದರಿಂದ ಅದೇನಾದರೂ ಉತ್ತಮ ಪಡಿಸುವುದಕ್ಕಾಗುತ್ತದೆ. ಅದೇ ಸಂದರ್ಭದಲ್ಲಿ ನೀರಿನ ಅಂಶದಲ್ಲಿ ಹಲವಾರು ವಿಷಪೂರಿತ ಅಂಶಗಳು ಇದೆ ಎಂದು ವರದಿಗಳು ಬರುತ್ತಿವೆ.

ನೀರಿನಲ್ಲಿ ಫ್ಲೋರಾಯ್ಡ್ (Floride) ಎನ್ನತಕ್ಕ ಕಂಟೆಂಟ್ ಇದೆ. ಇದರಿಂದ ಫ್ಲುರೋಸಿಸ್ ಎಂದು ಅಪಾಯಕಾರಿ ಖಾಯಿಲೆ ಬರತಕ್ಕ ಸೂಚನೆ ಇದೆ. ಅದಕ್ಕೆ ಫಿಲ್ಟರ್ ಗಳನ್ನು ಅಳವಡಿಸಬೇಕು ಎಂದು ಹೇಳತಕ್ಕದ್ದು ಕೂಡ ಬಹಳ ಮುಖ್ಯ. ಅದನ್ನು ಗಮನದಲ್ಲಿಡಬೇಕು. ಅದೇ ರೀತಿಯಲ್ಲಿ ಮುಖ್ಯವಾಗಿ ರಾಜಕೀಯ ಪ್ರಶ್ನೆ; ಬಂಧುಗಳೇ, ನಾನು ಜನತಾ ದಳದ ಸರ್ಕಾರವನ್ನು ಕೇಳುತ್ತಿದ್ದೇನೆ. ಇವತ್ತು ಕರ್ನಾಟಕ ರಾಜ್ಯದ ಜನತೆ ರಾಜಕೀಯವಾಗಿ ಸ್ಪಷ್ಟ ತೀರ್ಮಾನವನ್ನು ಕೊಟ್ಟಿದ್ದಾರೆ. ಒಂದು ಕಡೆ ಇಡೀ ದೇಶವನ್ನು ದಿವಾಳಿ ಎಬ್ಬಿಸಿ, ಆರ್ಥಿಕ ಸಾರ್ವಭೌಮತ್ವವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಒತ್ತೆ ಇಟ್ಟಂತಹ ಕಾಂಗ್ರೆಸ್ ಸರ್ಕಾರವನ್ನು ತಿರಸ್ಕರಿಸಿದ್ದಾರೆ. ಅದೇ ರೀತಿಯಲ್ಲಿ ಇಡೀ ಐದು ವರ್ಷಗಳಿಂದ ಈ ದೇಶದಲ್ಲಿ ಬಹು ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಿಗಳು ಸೃಷ್ಟಿ ಮಾಡಿದಂತಹ ಅನಾಹುತಗಳನ್ನು ನಾವು ಕಂಡಿದ್ದೇವೆ. ಆ ಮರಣ ಹೋಮವನ್ನು ಕಂಡಿದ್ದೇವೆ. ಈ ಎರಡು ಶಕ್ತಿಗಳ ವಿರುದ್ಧ ಹೋರಾಟ ಮಾಡಲಿಕ್ಕೆ ಜನತಾ - ದಳದ ಸರ್ಕಾರ ರಾಜಕೀಯವಾಗಿ

ಯಾವ ನಿಲುವನ್ನು ತೆಗೆದುಕೊಂಡಿದೆ ಎನ್ನತಕ್ಕದ್ದನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಏಕೆಂದರೆ ಇವತ್ತು ಇಡೀ ಭಾರತ ದೇಶದ ಜನತೆ ಸ್ಪಷ್ಟವಾಗಿ ಎರಡು ಅಪಾಯಕಾರಿ ಶಕ್ತಿಗಳನ್ನು ಗುರುತಿಸುತ್ತಿದ್ದಾರೆ. ಒಂದು ಈ ದೇಶದ ಸಾರ್ವಭೌಮತ್ವವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಗಳಿಗೆ ಒತ್ತೆಯಿಟ್ಟು ಈ ದೇಶವನ್ನು ದಿವಾಳಿ ಮಾಡಿದಂತಹ ಕಾಂಗ್ರೆಸ್. ಇನ್ನೊಂದು ಕಡೆ ಬಹು ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಿಗಳು. ಈ ಎರಡು ಶಕ್ತಿಗಳನ್ನು ಹೋರಾಟ ಮಾಡಲಿಕ್ಕೆ ನೀವು ಏನು ರಾಜಕೀಯ ತೀರ್ಮಾನ ತೆಗೆದುಕೊಂಡಿದ್ದೀರಿ? ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳ ಬಗ್ಗೆ ನಿಮ್ಮ ಧೋರಣೆ ಏನು? ಇವತ್ತು ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಬಹಳ ಮುಖ್ಯವಾಗುತ್ತದೆ. ಕೇಂದ್ರ ಇವತ್ತು ಇದೇ ರಾಜ್ಯದ ಸಂಪನ್ಮೂಲಗಳಲ್ಲಿ ಶೇಕಡಾ 75 ಭಾಗ ಹೊಡೆದುಕೊಂಡು ಹೋಗುತ್ತಿದೆ. ರಾಜ್ಯಗಳಿಗೆ ಅಧಿಕಾರ ಇಲ್ಲ. ಇವತ್ತು ನಿಜವಾಗಿ ರಾಜ್ಯ ಸರ್ಕಾರಗಳಿಗಾಗಿ ಅಧಿಕಾರ ಇದೆಯೇ ಎಂದು ಕೇಳಿದರೆ ಖಂಡಿತ ಇಲ್ಲ. It is a glorious municipality. It is not more than that.

ಅದೇ ರಾಜಕೀಯ ದೃಷ್ಟಿಯಿಂದ ನೀವು ಆಲೋಚನೆ ಮಾಡಿದರೂ ಇದೇ ಸದನ ಯಾವುದೇ ಕಾನೂನನ್ನು ಪಾಸ್ ಮಾಡಿ ಕಳುಹಿಸಿದರೆ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲದೇ ಅದು ಪಾಸ್ ಆಗಲಿಕ್ಕೆ ಸಾಧ್ಯ ಇಲ್ಲ. ಇದು ಫೆಡಲರ್ ವ್ಯವಸ್ಥೆ. ಫೆಡರಲ್ ವ್ಯವಸ್ಥೆಯಲ್ಲಿರತಕ್ಕ ಲೋಪದೋಷಗಳು ಅದರಲ್ಲಿರತಕ್ಕ ಪಾಸಿಟೀವ್ ಅಂಶಗಳನ್ನು ನಾವು ಗುರುತಿಸಬೇಕಾಗಿತಕ್ಕ ಸಂದರ್ಭದಲ್ಲಿ ಪ್ರಜಾಪ್ರಭುತ್ವದಲ್ಲಿ ಕೇಂದ್ರದಲ್ಲಿ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರುತ್ತದೆ, ರಾಜ್ಯದಲ್ಲಿ ಒಂದು ಪಕ್ಷ ಅಧಿಕಾರಕ್ಕೆ ಬರುತ್ತದೆ. ಕೇಂದ್ರದಲ್ಲಿ ರಾಜಕೀಯ ಪಕ್ಷ ಬೇರೆ ಇದ್ದಾಗೆ, ರಾಜ್ಯದಲ್ಲಿ ರಾಜಕೀಯ ಪಕ್ಷ ಬೇರೆ ಇದ್ದಾಗೆ ಕೇಂದ್ರ ರಾಜ್ಯಗಳ ಸಂಬಂಧಗಳಲ್ಲಿ ಹಾಗೂ ಧೋರಣೆಗಳಲ್ಲಿ ಭಿನ್ನ ಆಗುತ್ತದೆ. ಆ ಧೋರಣೆಗಳಲ್ಲಿ ಭಿನ್ನ ಆಗುವಾಗ, ಇವತ್ತು ಕೇಂದ್ರ ಸರ್ಕಾರದ ಧೋರಣೆಗಳಿಂದಾಗ ರಾಜ್ಯದ ಮೇಲೆ ಆಗತಕ್ಕಂಥ ಎಲ್ಲಾ ಪರಿಣಾಮಗಳನ್ನು ನಾವು ಅವಲೋಕಿಸಿ ಕೇಂದ್ರ ಸರ್ಕಾರ ತೆಗೆದುಕೊಳ್ಳತಕ್ಕ ನಿಲುವುಗಳು ಏನು ಎನ್ನುವ ಆಧಾರದ ಮೇಲೆ ನಾವು ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ. ಈಗ ಕೃಷ್ಣಾ ನದಿ ನೀರಿನ ಪ್ರಶ್ನೆ ಬರಬಹುದು, ಬಚಾವತ್ ಕಮಿಟಿ ಪ್ರಶ್ನೆ ಬರಬಹುದು, ಇನ್ನೊಂದು ಪ್ರಶ್ನೆ ಬಂದಾಗ ನಮ್ಮ ರಾಜ್ಯದ ಪ್ರಶ್ನೆ ಏನು? ನಮ್ಮ ರಾಜ್ಯದ ನೀರಿನ ಪ್ರಶ್ನೆ ಏನು ? ನಮ್ಮ ರಾಜ್ಯದ ಭೂಮಿ ಪ್ರಶ್ನೆ ಏನು? ನಮ್ಮ ರಾಜ್ಯದ ಕೈಗಾರಿಕೆಗಳ ಪ್ರಶ್ನೆ ಏನು ಎನ್ನತಕ್ಕದ್ದನ್ನು ಮುಖ್ಯವಾಗಿ ನಾವು ನೋಡುವಾಗ ಕೇಂದ್ರ ಸರ್ಕಾರದ ಧೋರಣೆಗಳಿಗೂ ರಾಜ್ಯ ಸರ್ಕಾರದ ಧೋರಣೆಗಳಿಗೂ ವ್ಯತ್ಯಾಸ ಇದೆ. ಆವಾಗ ನಾವು ಕೇಂದ್ರ ಜೊತೆಗೆ ಅನಿವಾರ್ಯವಾಗಿ ಸಂಘರ್ಷಕ್ಕೆ ಇಳಿಯಬೇಕಾದ ಪ್ರಸಂಗ ಬರುತ್ತದೆ. ಅಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಜನತೆ ಏನು ಅಧಿಕಾರ ಕೊಟ್ಟಿದ್ದಾರೆ ಅದನ್ನು ನಾವು ತಿರಸ್ಕಾರ ಮಾಡಿದ ಹಾಗೆ ಆಗುತ್ತದೆ ಎನ್ನತಕ್ಕದ್ದನ್ನು ಸ್ಪಷ್ಟವಾಗಿ ತಿಳಿಯಬೇಕು. ಆದ್ದರಿಂದ ಈ ರಾಜ್ಯಪಾಲರ ಭಾಷಣವೆಂದು ಹೇಳಿದರೆ ಒಂದು ಸರ್ಕಾರದ ಧೋರಣೆ ಆಗರಿಬೇಕು. ಸರ್ಕಾರದ ನೀತಿ ನಿರೂಪಣೆ ಆಗಿರಬೇಕು. ಆರ್ಥಿಕ, ರಾಜಕೀಯ ರಂಗದ, ಸಾಮಾಜಿಕ ನಿರೂಪಣೆ ಆಗಿರಬೇಕು.

ಅಧ್ಯಕ್ಷರು : ತಾವು ಕನ್ ಕ್ಲೂಡ್ ಮಾಡಿ, ಇನ್ನೂ ಬೇಕಾದಷ್ಟು ಅಪರ್ಚುನಿಟೀಸ್ ಇರುತ್ತದೆ. ನೀವು ಸಿ.ಪಿ.ಎಂ. ಪಕ್ಷದ ಲೀಡರ್.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಕರ್ನಾಟಕ ರಾಜ್ಯದಲ್ಲಿರತಕ್ಕ ಇನ್ನೊಂದು ಮುಖ್ಯ ಅಂಶದ ಬಗ್ಗೆ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತಾ ಇದ್ದೇನೆ.

ಅಧ್ಯಕ್ಷರು : ಈಗಾಗಲೇ ಹತ್ತು ನಿಮಿಷ ಜಾಸ್ತಿ ಆಗಿದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಕರ್ನಾಟಕ ರಾಜ್ಯದ ಸಂಸ್ಕೃತಿ ಅಂಶಗಳ ಬಗ್ಗೆ ಬಂದಾಗ ಕ್ರೀಡೆಗಳ ಬಗ್ಗೆ ನಿಮ್ಮ ಧೋರಣೆ ಏನು ಇದೆ? ಅದನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ? ನಮ್ಮ ಕ್ರೀಡಾ ರಂಗದಲ್ಲಿರತಕ್ಕ ಹೊಲಸನ್ನು ...

ಅಧ್ಯಕ್ಷರು : ಈಗ ನೀವು ಕ್ರೀಡಾ ಮನೋಭಾವದಿಂದ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಅಧ್ಯಕ್ಷರೇ, ಈ ಎಲ್ಲಾ ಅಂಶಗಳಲ್ಲಿ ಇದರಲ್ಲಿ ಅಡಕ ಆಗದೇ ಇರುವುದರಿಂದ ರಾಜ್ಯಪಾಲರ ಭಾಷಣ, ಸರ್ಕಾರದ ಧೋರಣೆ ಸರಿಯಾಗಿ ನಿರೂಪಣೆ ಆಗಿಲ್ಲ, ಅದನ್ನು ನಿರೂಪಣೆ ಮಾಡಬೇಕು ಎಂದು ಹೇಳಿ, ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಧನ್ಯವಾದಗಳು. ಮಾನ್ಯ ನಾಗೇಗೌಡರು ತಮ್ಮ ಭಾಷಣವನ್ನು ಪ್ರಾರಂಭಿಸಿ. ತಾವು ಹಿರಿಯರು. ತಮಗೆ ಏನೂ ಹೇಳಬೇಕಾಗಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ತಾವು ಬೆಲ್ ಹೊಡೆಯುವುದಕ್ಕೆ ಮುಂಚೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ,ತಮಗೆ ಗೊತ್ತಿದೆ. 4 ತಾಸು ಕಾಂಗ್ರೆಸ್ ಪಕ್ಷದ ಕಾಂಗ್ರೆಸ್ ಪಕ್ಷದವರಿ, ನಾಲ್ಕು ಬಿಜೆಪಿ ಅವರಿಗೆ, ಒಂದು ತಾಸು ಕೆಸಿಪಿ ಅವರಿಗೆ ಮತ್ತು ಒಂದು ತಾಸು ಬೇರೆಯವರಿಗೆ ಈ ರೀತಿ ತಾವು ಅಲಾಟ್‌ಮೆಂಟ್ ಮಾಡಿದ್ದೀರಿ. ನಮ್ಮ ಪಕ್ಷದಿಂದ ಮಾನ್ಯ ಘೋರ್ಪಡೆಯವರು ಹಾಗೂ ನಾವು ಸುಮಾರು ಒಂದು, ಒಂದೂವರೆ ಗಂಟೆ ಮಾತನಾಡಿದ್ದೇವೆ. ಇನ್ನೂ ಅನೇಕ ಜನ ಮಾತನಾಡುವವರು ಇದ್ದಾರೆ. ಅದರ ಬಗ್ಗೆ ತಾವು ಸ್ವಲ್ಪ ನೋಡಬೇಕು.

ಅಧ್ಯಕ್ಷರು : ಈ ಒಂದು ಅಧಿವೇಶನದಲ್ಲಿ ಸ್ವಲ್ಪ ಏರು ಪೇರು ಆಗಿದೆ. ತಾವು ದಯಮಾಡಿ ಸ್ವಲ್ಪ ಸಹಕರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಟೈಮ್ ಲಿಮಿಟ್ ಹಾಕಬೇಕು.

ಅಧ್ಯಕ್ಷರು : ತಾವು ಹೇಳುವುದನ್ನು ಒಪ್ಪುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆಯವರಿಗೂ 10-15 ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ನನಗೂ ಈ ಕರ್ತವ್ಯ ಹೊಸದಾಗಿರುವುದರಿಂದ ಈ ದಿಸೆಯಲ್ಲಿ ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

SRI S. RAJENDRAN : Respected Speaker Sir, for the last four days we are waiting for a chance to speak. We also request the Hon'ble Speaker to give us a chance to speak for sometime.

MR. SPEAKER : My dear friend Mr. Rajendran, you will get an opportunity to speak. Please have patience. Kindly resume your seat.

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯಪಾಲರ ಭಾಷಣ ಮುಗಿದ ನಂತರ ಅದಕ್ಕೆ ವಂದನೆಯನ್ನು ಸಲ್ಲಿಸತಕ್ಕ ಕಾರ್ಯಕಲಾಪದಲ್ಲಿ ಅನೇಕ ಹಿರಿಯ ಹಾಗೂ ಕಿರಿಯ ಸದಸ್ಯರುಗಳು ಅವರದೇ ಅದೇ

ರೀತಿಯಲ್ಲಿ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಈ ದಿಸೆಯಲ್ಲಿ ನನ್ನ ಒಂದು ಸಲಹೆಯನ್ನು ಪ್ರಾರಂಭಿಕವಾಗಿ ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ, ರಾಜ್ಯ ಸರ್ಕಾರದ ಚುನಾವಣೆಗಳು ಫೆಬ್ರವರಿ, ಮಾರ್ಚಿ ತಿಂಗಳಿನಲ್ಲಾಗಬೇಕು. ಯಾವುದೇ ರಾಜ್ಯ ಸರ್ಕಾರದ ಚುನಾವಣೆಗಳು ನವೆಂಬರ್, ಡಿಸೆಂಬರ್ ತಿಂಗಳಿನಲ್ಲಾದರೆ ಬಜೆಟ್ ನಲ್ಲಿ ಇಡುವಂಥ ಹಣಕ್ಕೆ ಹೊಂದಾಣಿಕೆಯಾಗುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸತ್ಯಾಂಶದ ಒಂದು ಮಾತನ್ನು ಹೇಳಿದರು. ಏನೆಂದರೆ, ಇನ್ನು ಮೂರು ತಿಂಗಳಲ್ಲಿ ನಿಮ್ಮ ಸರ್ಕಾರದ ಕಾರ್ಯಕ್ರಮ ಏನೆಂದು ಈ ಕುರಿತು ಹೇಳುವುದಾದರೆ ಮೂರು ತಿಂಗಳ ಕಾರ್ಯಕ್ರಮ ಯಾವುದೆಂದೆ, ಹಳೆಯ ಸರ್ಕಾರ ಬಜೆಟ್‌ನಲ್ಲಿ ಏನು ಹಣವಿಟ್ಟು ಕಾರ್ಯಕ್ರಮ ಹಮ್ಮಿಕೊಂಡಿತ್ತೋ ಅದನ್ನೇ ಮುಂದುವರೆಸುತ್ತೇವೆಯೇ ವಿನಾ ಕಾರ್ಯಕ್ರಮದಲ್ಲಿ ಹೆಚ್ಚು ಬದಲಾವಣೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ, ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಾಗದ ಬರೆದು ಕೇಂದ್ರದ ಚುನಾವಣಾ ಆಯೋಗಕ್ಕೆ ತಿಳಿಸಿ ಇನ್ನು ಮುಂದೆ ರಾಜ್ಯದ ಯಾವುದೇ ಚುನಾವಣೆಗಳು ನಡೆಯುವ ಕಾಲದಲ್ಲಿ ಫೆಬ್ರವರಿ-ಮಾರ್ಚಿ ತಿಂಗಳಿನಲ್ಲಿ ನಡೆಯತಕ್ಕಂಥಾದ್ದು ಸೂಕ್ತ. ಮಧ್ಯ ವರ್ಷದಲ್ಲಿ ನಡೆದರೆ ಆರ್ಥಿಕವಾಗಿ ಒಂದು ಶಿಸ್ತು financial discipline ಎಂದು ನಾವು ನು ಹೇಳುತ್ತೇವೆ ಆರ್ಥಿಕ ಶಿಸ್ತು (ಫೈನಾನ್ಸಿಯಲ್ ಡಿಸಿಪ್ಲಿನ್) ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣವೇನೆದಂರೆ, ಒಂದು ಸರ್ಕಾರ ವರ್ಷದ ಆದಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ಅಭಿಪ್ರಾಯ ಸೂಚಿಸಿದರೆ ನಂತರ ಬಂದ ಸರ್ಕಾರ ಅದನ್ನು ಯದ್ವಾ-ತದ್ವಾ ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಆರ್ಥಿಕ ವರ್ಷದ ಒಂದು ತಿಂಗಳ ಮುಂಚಿತವಾಗಿ ರಾಜ್ಯ ಸರ್ಕಾರದ ಯಾವುದೇ ಚುನಾವಣೆಗಳಾದರೆ ಅದಕ್ಕೊಂದು ಅರ್ಥವಿರುತ್ತದೆಂದು ನನಗನನ್ನಿಸುತ್ತದೆ, ಮತ್ತು ಚುನಾವಣಾ ಕಾಲದಲ್ಲಿ ಏನು ಭರವಸೆಗಳನ್ನು ಕೊಟ್ಟಿರುತ್ತಾರೆ, ಪ್ರಾರಂಭಿಕವಾಗಿ ರಾಜ್ಯಪಾಲರ ಭಾಷಣದ ನಂತರ ಬಜೆಟ್‌ಗೆ ಬಹಳ ಅನುಕೂಲವಾಗುತ್ತದೆನ್ನುವುದು ನಮಗೆ ಸೂಚನೆಯಾಗುತ್ತದೆಂದು ಹೇಳುತ್ತಾ ಬರುವ ಮೂರು ತಿಂಗಳಲ್ಲಿ ನೀವು ಏನು ಮಾಡುತ್ತೀರಿ ಎಂದರೆ, ಕಳೆದ ಬಜೆಟ್ ನಲ್ಲಿ ಏನು ಹಣವಿಟ್ಟು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತೋ ಅದನ್ನೇ ಮೂರು ತಿಂಗಳಲ್ಲಿ ಮಾಡಬೇಕಾಗುತ್ತದೆ.

ಬೇರೆ ಮಾರ್ಗವಿರಲಿಲ್ಲ. ಆದುದರಿಂದ, ಕೇಂದ್ರ ಸರ್ಕಾರಕ್ಕೆ ಕಾಗದ ಬರೆದು ಅಲ್ಲಿಂದ ಚುನಾವಣಾ ಆಯೋಗಕ್ಕೆ ರಾಜ್ಯದಲ್ಲಿನ ಚುನಾವಣೆಯನ್ನು ಫೆಬ್ರವರಿ-ಮಾರ್ಚಿ ತಿಂಗಳಿನಲ್ಲಿ ನಡೆಸುವಂತೆ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಿಸೆಂಬರ್, ಜನವರಿ, ಫೆಬ್ರವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ನಿಮ್ಮ ಸರ್ಕಾರದ ಕಾರ್ಯಕ್ರಮವೇನೆಂದು ಕೇಳಿದೆ. ಇದರಲ್ಲಿ ತಪ್ಪೇನಿದೆ? ನಿಮಗೆ ನಾಲ್ಕು ತಿಂಗಳುಗಳ ಕಾಲಾವಕಾಶ ಸಿಕ್ಕಿರುವುದರಿಂದ ಅಷ್ಟರಲ್ಲಿ ನಿಮ್ಮ ಸರ್ಕಾರದ ಹೊಸ ಕಾರ್ಯಕ್ರಮಗಳು ಪ್ರಕಟವಾಗಬೇಕಲ್ಲಾ. ಕೊನೆಯ ಪಕ್ಷ ಸ್ವಲ್ಪವಾದರೂ ಬದಲಾವಣೆಯಾಗಬೇಕಲ್ಲಾ. ಅದನ್ನಾದರೂ ಹೇಳಬೇಕು. ಎಲ್ಲವನ್ನೂ ಮಾರ್ಚಿನಲ್ಲಿ ಹೇಳುತ್ತೇವೆ ಎಂದರೆ ಇಲ್ಲಿಯವರೆಗೆ ನಾವು ಮಾಡಿದ್ದುದು ಸರಿ ಎಂದು ಅದರ ಅರ್ಥ.

ಶ್ರೀ ಕೆ.ಎನ್. ನಾಗೇಗೌಡ :ಅವರು ಹೇಳಿದ್ದುದು ಸರಿಯಲ್ಲವೆಂದು ನಾನು ಹೇಳಲಿಲ್ಲ. ಸಂವಿಧಾನಾತ್ಮಕವಾಗಿ ಬಜೆಟ್ ಅನ್ನು ಈ ಸದನದಲ್ಲಿಟ್ಟು ಈಗಾಗಲೇ ನಾವು ಈ ಸದನದ ಒಪ್ಪಿಗೆ ಪಡೆದು ಕೊಂಡಿದ್ದೇವೆ. ರಾಜ್ಯಾಂಗ ಬದ್ಧವಾಗಿ ಹಣಕಾಸಿನ ವ್ಯವಹಾರಗಳನ್ನು, ಕಾರ್ಯಕ್ರಮಗಳನ್ನು ಬಜೆಟ್ ನಲ್ಲಿಟ್ಟು ಅದಕ್ಕೆ ದಿನಾಂಕ 31.3.94 ರಂದು ಒಪ್ಪಿಗೆ ಪಡೆದುಕೊಂಡು 31ನೇ ಮಾರ್ಚಿ 95ರವರೆಗೆ ಏನೇನು

ಮಾಡಬೇಕೆಂದು ಈ ಸದನದಲ್ಲಿ ತೀರ್ಮಾನವಾಗಿದೆ. ಆದುದರಿಂದ, ನಾನು ಹೇಳಿದೆ, ಚುನಾವಣೆ ನಡೆಸುವಂಥ ಕಾಲದಲ್ಲಿ ನವೆಂಬರ್ ತಿಂಗಳಿನಲ್ಲಿ ಚುನಾವಣೆ ನಡೆಸತಕ್ಕಂಥಾದ್ದು ಅಥವಾ ಜುಲೈನಲ್ಲಿ ಚುನಾವಣೆ ನಡೆಸುವುದಕ್ಕಿಂತ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಕೇಂದ್ರದ ಚುನಾವಣಾ ಆಯೋಗಕ್ಕೆ ತಿಳಿಸಿ ಇನ್ನು ಮುಂದೆ ರಾಜ್ಯ ಸರ್ಕಾರದ ಚುನಾವಣೆ ನಡೆಸುವ ಕಾಲದಲ್ಲಿ ಆರ್ಥಿಕ ಶಿಸ್ತು ಬರಬೇಕಾದರೆ, ಆ ಚುನಾವಣೆಗಳು ಫೆಬ್ರವರಿ ತಿಂಗಳಿನಲ್ಲಿ ನಡೆದರೆ ಆರ್ಥಿಕ ಶಿಸ್ತು ಬರುತ್ತದೆ, ಹೊಸ ಕಾರ್ಯಕ್ರಮವಾಗುತ್ತದೆ. ಆಗ ಸರ್ಕಾರಕ್ಕೂ, ವಿಧಾನಸಬೆಗೂ ಅಧಿಕಾರವಿರುತ್ತದೆನ್ನುವುದು ರಾಜ್ಯಾಂಗಬದ್ಧವಾಗಿ ಸರಿಪಡಿಸಿಕೊಳ್ಳುವುದಕ್ಕೆ ಕಾಗದ ಬರೆಯಬೇಕೆಂದು ಸಲಹೆ ಮಾಡಿದ್ದೇ ವಿನಹ ಬೇರೆ ಏನೂ ಅಲ್ಲವೆಂದು ತಿಳಿಸುತ್ತಾ ಅದಕ್ಕೆ ಸಂಬಂಧಿಸಿದ ಮತ್ತೊಂದು ವಿಚಾರವನ್ನು ಉದಾಹರಣೆಗೆ ಹೇಳುವುದಾದರೆ, ನಾವು ಚುನಾವಣೆಗಳನ್ನು ಫೆಬ್ರವರಿ-ಮಾರ್ಚಿ ತಿಂಗಳಿನಲ್ಲಿ ಏತಕ್ಕೋಸ್ಕರ ನಡೆಸಬೇಕೆಂದರೆ ನಮಗೆಲ್ಲರಿಗೂ ಗೊತ್ತಿರುವಂತೆ ರಾಜ್ಯ ಸರ್ಕಾರದ ಆದಾಯ ಇವೊತ್ತು 6,000 ಕೋಟಿ ರೂಪಾಯಿಗಳು. ಇದರಲ್ಲಿ ಅಬಕಾರಿ ಬಾಬಿನಿಂದ ಬರುವ ಹಣದ ಉದಾಹರಣೆ ಹೇಳುವುದಾದರೇ 807 ಕೋಟಿ ರೂಪಾಯಿಗಳ ಗುರಿ ಹೊಂದಿದ್ದು ಇಷ್ಟು ಹಣ ಬರಬೇಕಾಗಿದ್ದು ಆದರೆ, ಬಂದಿರತಕ್ಕಂಥಾದ್ದು 460 ಕೋಟಿ ರೂಪಾಯಿಗಳು.

ಹಾಗೆಯೇ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 3300 ಕೋಟಿ ಬರಬೇಕಾಗಿದ್ದರೆ ಇವತ್ತು ನಮಗೆ ಬಂದಿರತಕ್ಕದ್ದು 2000 ಕೋಟಿ ರೂಪಾಯಿಗಳು. ಇವೆಲ್ಲವನ್ನೂ ನಾವು ಆಲೋಚನೆ ಬಂದಿರತಕ್ಕದ್ದು 2000 ಕೋಟಿ ರೂಪಾಯಿಗಳು. ಇವೆಲ್ಲವನ್ನೂ ನಾವು ಆಲೋಚನೆ ಮಾಡಿ ಹೇಳುವುದಾದರೆ ಈ ಟಾರ್ಗೆಟ್‌ಗೆ, ಕಾರ್ಯಕ್ರಮಕ್ಕೆ, ಹಳೆಯ ಕಾರ್ಯಕ್ರಮಕ್ಕೆ ಈ ಹೊಸ ಸರ್ಕಾರ ಹೊಂದಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಎನ್ನತಕ್ಕ ವಿಚಾರವನ್ನು ಮಾನ್ಯ ಸ್ನೇಹಿತರಿಗೆ ತಿಳಿಸಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಎರಡು ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಮೊದಲನೆಯದು ಮತ್ತು ಅತಿ ಮುಖ್ಯವಾದುದೆಂದರೆ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡುವ ರಿಚಾರ. ಇದರಲ್ಲಿ ಬೇಕಾದಷ್ಟು ಅಭಿಪ್ರಾಯಗಳು ವಿರುದ್ಧವಾಗಿ ಬರಬಹುದು ಅಥವಾ ಪರವಾಗಿಯೂ ಸಹ ಬರಬಹುದು. ಅದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾಜಿ ಸಹಕಾರ ಮಂತ್ರಿಗಳಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದನ್ನು ನಾನು ತಾಳೆ ಮಾಡಿ ನೋಡಿದಾಗ, ಏನೆಂದರೆ ಎಷ್ಟು ಜರ ರೈತರಿಗೆ ಈ ಬಡ್ಡಿಯ ಮನ್ನಾ ಮಾಡುವುದರಿಂದ ಪ್ರಯೋಜನವಾಗುತ್ತದೆ. ಎನ್ನತಕ್ಕದ್ದು. ಅದ್ಯಕೆ ನನ್ನದೇ ಆದಂಥ ಮಾಹಿತಿಯ ಪ್ರಕಾರ ಇಡೀ ರಾಜ್ಯದಲ್ಲಿ ಹತ್ತು ಲಕ್ಷದ ಎಪ್ಪತ್ತು ಸಾವಿರ ರೈತರಿಗೆ ಬಡ್ಡಿಯನ್ನು ಮನ್ನಾ ಮಾಡುವುದರಿಂದ ಪ್ರಯೋಜನವಾಗುತ್ತದೆ ಎನ್ನತಕ್ಕ ಮಾತನ್ನು ಅವರಿಗೆ ಈ ಸಬೆಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅಷ್ಟು ಜನರಿಗೆ ಪ್ರಯೋಜನವಾಗುವುದಿಲ್ಲವೆಂದು ಏಕೆ ಹೇಳಿದೆ ಎಂದರೆ, ಈ ಪಿಎಲ್‌ಡಿ ಬ್ಯಾಂಕ್, ಅಪೆಕ್ಸ್ ಬ್ಯಾಂಕುಗಳು ಹುಟ್ಟಿ 60-70 ವರ್ಷಗಳೇನಾಗಿದೆ ಅಲ್ಲಿಂದ ಇಲ್ಲಿಯವರೆಗೆ ಅವರು ರೈತರಿಗೆ ಸಾಲ ಕೊಟ್ಟಿರುವ ಸಂಖ್ಯೆ 10-12 ಲಕ್ಷವನ್ನು ಬಿಟ್ಟು ಹೆಚ್ಚಾಗಿ ಕೊಟ್ಟಿಲ್ಲ, ಇನ್ನು 45 ಲಕ್ಷ ಜನ ಹಳ್ಳಿಗಳಲ್ಲಿ ಬೇರೆ ಬೇರೆ ಶ್ರೀಮಂತರ ಹತ್ತಿರ, ಮನಿಲೆಂಡರ್ ಗಳ ಹತ್ತಿರ, ರಾಷ್ಟ್ರೀಕೃತ ಬ್ಯಾಂಕುಗಳ ಹತ್ತಿರ ಸಾಲವನ್ನು ತೆಗೆದುಕೊಂಡು ಬರುತ್ತಾರೆ. ಆದರೆ ನಿಮ್ಮ ಸಹಕಾರಿ ಬ್ಯಾಂಕ್ ನಿಂದ ಇಲ್ಲಿಯವರೆಗೆ ಸಾಲವನ್ನು ಪಡೆದುಕೊಂಡಿರುವವವು 65 ಲಕ್ಷ ಜನ ರೈತರ ಪೈಕಿ ಕೇವಲ 10-12 ಲಕ್ಷ ಮಾತ್ರ. ಅದಕ್ಕಾಗಿ ನೀವು ಏನೇ ರಿಯಾಯಿತಿ ಕೊಟ್ಟರೂ 1-2 ಲಕ್ಷ ಜನ ರೈತರಿಗಿಂತ ಜಾಸ್ತಿ ಅನುಕೂಲವಾಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಆ ಮಾಹಿತಿ ಸರಿಯಾಗಿಲ್ಲ ಎನ್ನುವ ಬಗ್ಗೆ ಹೆಚ್ಚು ವ್ಯಾಖ್ಯಾನ ಬೇಡ. ಏಕೆಂದರೆ ಸಮಯವಿಲ್ಲ.

MR. SPEAKER : It involves a bigger dimension. ಯಾವ ಸಹಕಾರ ಸಂಸ್ಥೆಗಳೂ ಸಹ ಆಧಾರವಿಲ್ಲದೆ ಸಾಲವನ್ನು ಕೊಡುವುದಿಲ್ಲ. The properties, landed properties, agricultural properties are owned by a very small section of the population of the State. They are the farming community. So, the relief extended under this programme should go to the farming community.

SRI M. MALLIKARJUNA KHARGE : ಅದಕ್ಕೇ ನಾನು ಹೇಳಿದ್ದುದು ಪಟ್ಟಾದಾರರು ಎಂದು ಇರತಕ್ಕದ್ದೇ 65 ಲಕ್ಷ.

MR. SPEAKER : Exactly that's it. Agricultural labourers will not get relief from this. The borrowers or the farmers. That's true, only who have gesture.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಾನು ಹೇಳಿದ್ದುದು ಅಗ್ರಿಕಲ್ಚರ್ ಪಟ್ಟೇದಾರರೆಂದು ಏನು ಹೇಳುತ್ತಾರೆ, ರೆವಿನ್ಯೂ ಇಲಾಖೆಯಲ್ಲಿ ಪಟ್ಟೆದಾರರು ಇರತಕ್ಕವರ ಸಂಖ್ಯೆಯೇ 65 ಲಕ್ಷ. ಅದರಲ್ಲಿ ಸಹಕಾರ ಸಂಸ್ಥೆಗಳಿಂದ ಇದುವರೆಗೆ ಸಾಲವನ್ನು ತೆಗೆದುಕೊಂಡಿರುವವರು, so far since inception of the Bank I am talking...

MR. SPEAKER : There is no second opinion about it. But the gesture of the Government is in favour of the farming community in the State.

ಶ್ರೀ ಕೆ.ಎನ್.ನಾಗೇಗೌಡ : ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ 52 ಲಕ್ಷ ಜನ ರೈತರಲ್ಲಿ 10 ಲಕ್ಷದ 70 ಸಾವಿರ ಜನ ರೈತರಿಗೆ ಈಗ ಕೊಟ್ಟಿರತಕ್ಕಂಥ, ಏನು ಅಕ್ಟೋಬರ್ ಗೆ ಡಿಮಾಂಡ್ ಕಲೆಕ್ಷನ್ 300 ಕೋಟಿ ರೂಪಾಯಿಗಳಲ್ಲಿ ಸುಮಾರು 194 ಕೋಟಿ ರೂಪಾಯಿ ಬಡ್ಡಿಯಿಂದ ಸಹಾಯ ದೊರೆಯುತ್ತದೆ ಎಂದು ಒಂದೇ ಒಂದು ವಿಚಾರವನ್ನು ಹೇಳಲು ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ ವಿಸಹ ಬೇರೆ ಏನೂ ಇಲ್ಲ, ಅಂದರೆ ಲಾಂಗ್ ಟರ್ಮ್ ಶೇಕಡ 9 ರಷ್ಟು, ಶಾರ್ಟ್ ಟರ್ಮ್ ಇವೆರಡು ಇದರಲ್ಲಿ ಸೇರಿದರೆ 194 ಕೋಟಿ ರೂಪಾಯಿಗಳು 1 ಲಕ್ಷದ 70 ಸಾವಿರ ಜನರಿಗೆ ರೈತರಿಗೆ ದೊರೆಯುತ್ತದೆ ಎನ್ನತಕ್ಕ ಮಾಹಿತಿಯನ್ನು ತಿಳಿಸುವುದಕ್ಕೆ ಇಷ್ಟಪಡುತ್ತಾ.ಅವರು ಒಂದು ವರ್ಷಕ್ಕೆ ಇದನ್ನು ಮುಂದುವರೆಸಬೇಕು ಎನ್ನತಕ್ಕ ಮಾತನ್ನು ಹೇಳಿದರು. ಆದರೆ ನನ್ನದೊಂದು ಸಲಹೆ ಏನೆಂದರೆ ಈಗ ಬಡ್ಡಿ ಮನ್ನಾ ಏನು ಮಾಡಿದ್ದಾರೆ ಅವನ್ನು ಜೂನ್ ವರೆಗೆ, ಮುಂದುವರೆಸತಕ್ಕದ್ದು ಅವರಿಗೆ ಮತ್ತೆ ಮೂರು ತಿಂಗಳ ಹೆಚ್ಚು ಕಾಲ ಕೊಡಬೇಕು. ಇದರಿಂದ ಯಾರು ಬೆಳೆ ಬೆಳೆದಿದ್ದಾರೆ ತಿಂಗಳ ಹೆಚ್ಚು ಕಾಲಲ ಕೊಡಬೇಕು. ಇದರಿಂದ ಯಾರು ಬೆಳೆ ಬೆಳೆದಿದ್ದಾರೆ ಅವರಿಗೆ ಸಾಲವನ್ನು ಕಟ್ಟಲು ಅನುಕೂಲವಾಗುತ್ತದೆ. ಅದರಲ್ಲೂ ಹೆಚ್ಚು ಸಣ್ಣ ಹಿಡುವಳಿದಾರರಿಗೆ ಇದರಿಂದ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಮೂರು ತಿಂಗಳು ಈ ಬಡ್ಡಿ ಮನ್ನಾ ಮಾಡತಕ್ಕ ಕಾಲವನ್ನು ವಿಸ್ತರಣೆ ಮಾಡಬೇಕು ಎಂದು ಸರ್ಕಾರದಲ್ಲಿ ನಾನು ಸೂಚಿಸುತ್ತೇನೆ. ಮತ್ತೆ ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ ಎನ್ನುವ ಬಗ್ಗೆ, 1983ರಲ್ಲಿ ಸರ್ಕಾರ ಏನು ಮಾಡಿತ್ತು ಅದನ್ನೇ, ಅದೇ ರೀತಿಯಲ್ಲಿ ಜೂನ್ ವರಗೆ ವಿಸ್ತರಿಸುವುದು ಸೂಕ್ತವೆಂದು ಸರ್ಕಾರಕ್ಕೆ ಸೂಚನೆಯನ್ನು ಕೊಡುವುದಕ್ಕೆ ವಿಸ್ತರಿಸುವುದು ಸೂಕ್ತವೆಂದು ಸರ್ಕಾರಕ್ಕೆ ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ನಮ್ಮ ಉಪಮುಖ್ಯಮಂತ್ರಿಗಳು, ವಿದ್ಯುಚ್ಛಕ್ತಿ ಮಂತ್ರಿಗಳು ಬಂದಿದ್ದಾರೆ.

ನಿನ್ನೆದಿನ ವಿದ್ಯುಚ್ಛಕ್ತಿಯ ಬಗ್ಗೆ ದೀರ್ಘವಾದ ಚರ್ಚೆಯಾಯಿತು.ನಾನು ಬಹಳ ಹೊತ್ತು ಮಾತನಾಡುವುದಕ್ಕೆ ಹೋಗದೆ ಇದ್ದರೂ ಸಹ ಇವತ್ತಿನ ದಿವಸ 9 ಲಕ್ಷ I.P. ಸೆಟ್‌ಗಳಿಗೆ 41 ಪರ್ಸೆಂಟ್ ಪವರ್ ಉಪಯೋಗಿಸುತ್ತಿದ್ದೇವೆ. ಎನ್ನತಕ್ಕಂತಹ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸ್ವಲ್ಪ ಮಾಹಿತಿಯನ್ನು ಅವರು ಪರಿಶೀಲನೆ ಮಾಡಬೇಕು ಎನ್ನತಕ್ಕಂಥದ್ದು ನನ್ನ ಮನವಿ. ಕಾರಣ ಏನೆಂದರೆ ನನಗೆ ಗೊತ್ತಿರುವ ರೀತಿಯಲ್ಲಿ ಒಂದು ಪಂಪ್ ಸೆಟ್‌ಗೆ 6,700 ಯೂನಿಟ್ ಎಂದು ಈಗಾಗಲೇ ಲೆಕ್ಕ ಹಾಕಿದ್ದೇವೆ. ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ನಾವು ಉತ್ಪಾದನೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ, ನಮ್ಮ ರಾಜ್ಯದಲ್ಲಿ ಎಂದೂ ಸಹ ವಿದ್ಯುಚ್ಛಕ್ತಿಯ ಕೊರತೆ ಇಲ್ಲ; ಅದರ ಕೊರತೆ ಇದೆ ಎಂದು ನಾನು ಭಾವಿಸಿ ಕೊಳ್ಳುವುದಿಲ್ಲ. ನಿನ್ನೆ ಸಹ ಮಂತ್ರಿಗಳು ಬಹಳ ಚೆನ್ನಾಗಿ ಪ್ರಸ್ತಾಪ ಮಾಡುತ್ತಾ ಒಂದು ಮಾತನ್ನು ಹೇಳಿದರು. ಇವತ್ತು ನಮ್ಮ ಕೆಪ್ಯಾಸಿಟಿ 4,000 ಮೆಗ್ಯಾವ್ಯಾಟ್ಸ್ ಇದೆ. ಕೇಂದ್ರದಿಂದ ನಮಗೆ 710 ಮೆಗಾವ್ಯಾಟ್ಸ್ ಬರುತ್ತದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ತೊಂದರೆ ಇಲ್ಲ ಒಂದೇ ಒಂದು ನಮ್ಮ ವೋಲ್ಟೇಜ್ ಪ್ರಾಬ್ಲಮ್ ಇರತಕ್ಕಂಥಾದ್ದು ಅದನ್ನು ಹೆಚ್ಚು ಪ್ರಧಾನವಾಗಿ ಕಾಣಬೇಕು ಎನ್ನತಕ್ಕಂಥಾದ್ದನ್ನು ಅವರು ಹೇಳಿದರು. ಅಲ್ಲದೆ ಇದು ಒಂದು ಮಾಹಿತಿ ಏನು ಇದೆ ಈ ಐ.ಪಿ. ಸೆಟ್‌ದ್ದು ಮುನ್ನೂರು ಕೋಟಿ ನಷ್ಟವಾಗುತ್ತದೆ. ಇನ್ನೂರು ಕೋಟಿ ನಷ್ಟವಾಗುತ್ತಿದೆ, 41 ಪರ್ಸೆಂಟ್ ಉಪಯೋಗಿಸುತ್ತಿದ್ದಾರೆ. 9 ಲಕ್ಷ ಪಂಪ್ ಸೆಟ್ಟುಗಳು ಇವೆ ಎಂದು ಹೇಳುತ್ತಾರೆ. ಈ ಮಾಹಿತಿಯನ್ನು ತಾವು ಪುನರ್ ಪರಿಶೀಲನೆ ಮಾಡಬೇಕು. ನನ್ನ ಅರ್ಥ ಏನೆಂದರೆ ಒಂದು ಪಂಪ್ ಸೆಟ್ ಗೆ 6,700 ಯೂನಿಟ್ಸ್ ಪವರ್ ವರ್ಷಕ್ಕೆ ಎಂದು ಲೆಕ್ಕ ಹಾಕಿದ್ದು ಎಲ್ಲವನ್ನೂ ಈ ಲಿಫ್ಟನ್, ಟ್ರಾನ್ಸ್ಮಿಷನ್ ಲಾಸ್ನೂ ಇವತ್ತು ಬೇರೆ ಕಡೆ ಕೊಟ್ಟಿದ್ದನ್ನು, ಎಲ್ಲವನ್ನೂ ಕೂಡಿ ಮ್ಯಾಥಮಿಟಿಕ್ಸ್ ಮಾಡಿ ಈ 41 ಪರ್ಸೆಂಟ್ ಇದೆ ಎಂದು ನಿರ್ಧರಿಸಲಾಗಿದೆ. ತಾವು 41 ಪರ್ಸೆಂಟ್ ಇದೆಯೋ ಇಲ್ಲವೋ ಎಂಬುದಕ್ಕೆ ತಾವು ಎಕ್ಸಪರ್ಟ್ ಕಮಿಟಿ ಮಾಡಿದರೆ ಅದರಿಂದ ಬಹಳಷ್ಟು...

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, 31 ರಿಂದ 41 ರವರೆಗೆ ಎಂದು ಏತಕ್ಕೆ ಹೇಳಿದ್ದೇನೆಂದರೆ ಕೆಲವು ಸಾರಿ ತಾವು ಅನುಮಾನಪಟ್ಟ ಹಾಗೆ ಬೇರೆ ಎಲ್ಲೋ ಹೋಗಿದ್ದನ್ನು ರೈತರ ಮೇಲೆ ಹಾಕುವ ಪ್ರಸಂಗ ನಡೆದಿದೆ ನ್ನುವ ಅನುಮಾನ ಇತ್ತು ನನಗೆ. ಆದರೆ ಯಾವಾಗಲಾದರೂ ಮಳೆ ಬಂದು ಪಂಪು ಸೆಟ್ಟುಗಳ ಉಪಯೋಗ ಮಾಡದೇ ಇದ್ದಾಗ ನೇರವಾಗಿ ನಮಗೆ 22 ಪರ್ಸೆಂಟ್ ಡಿಮ್ಯಾಂಡ್ ಕಡಿಮೆ ಆಗುತ್ತದೆ. ಅದರ ಆಧಾರದ ಮೇಲೆ 31 ರಿಂದ 40 ಎಂದು ಆದರೂ, ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಗದೇ ಇಲ್ಲ ಎಂದು ಹೇಳಿದ ಮೇಲೆ ಪರಿಶೀಲನೆ ಏಕೆ ಮಾಡುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ : ನಾನು ಹೇಳಿದ್ದುದು ವೇರಿಯೇಷನ್ ಅನ್ನು ಪರಿಶೀಲನೆ ರೈತರು 41 ಪರ್ಸೆಂಟ್ ಉಪಯೋಗಿಸುತ್ತಿದ್ದಾರೋ ಇಲ್ಲವೋ ಎನ್ನತಕ್ಕಂಥಾದ್ದು ನಮಗೆ ಖಾತರಿ ಆಗಬೇಕು. ಅದು ಖಾತರಿ ಆಗದೆ ಹೋದರೆ ನಾವು ರಿಯಾಯಿತಿ ಕೊಡುವುದಕ್ಕೆ ಸರಿ ಹೋಗುವುದಿಲ್ಲ. ಆ ಮೇಲೆ 9 ಲಕ್ಷ ಪಂಪುಸೆಟ್ಟುಗಳಲ್ಲಿ ಎಷ್ಟು ಪಂಪುಸೆಟ್ಟುಗಳು ಕೆಲಸ ಮಾಡುತ್ತವೆ. ಅದು ಬಹಳ ಮುಖ್ಯವಾದುದು, ಆವರೇಜ್ ಆಗಿ ಐದು ಎಕರೆಗೆ ನೀರು ಹಾಯಿಸುವವರಿದ್ದಾರೆ, 3ಎಕರೆಗೆ ನೀರು ಹಾಯಿಸುವವರಿದ್ದಾರೆ, ಒಂದು ಎಕರೆಗೆ ನೀರು ಹಾಯಿಸುವವರಿದ್ದಾರೆ, ಎಷ್ಟು ಪಂಪುಸೆಟ್ಟುಗಳನ್ನು ಅವರು ಉಪಯೋಗಿಸುತ್ತಿದ್ದಾರೆ. ಕೆಲವು ಕಡೆ ಕರೆಂಟ್ ಸಿಗುತ್ತದೆ. ಕೆಲವು ಕಡೆ ಕರೆಂಟ್

ಸಿಗುವುದಿಲ್ಲ. ಈ ಆವರೇಜ್ ಕ್ಯಾಲುಕ್ ಲೇಷನ್ ಮಾಡಿ ಈ ಎಲ್ಲಾ ಲೆಕ್ಕವನ್ನೂ ಸಹ ಈ ಐ.ಪಿ.ಗಳ ಮೇಲೆ ಹಾಕಿ 41 ಪರ್ಸೆಂಟ್ ಮಾಹಿತಿಯನ್ನು ಕೊಟ್ಟಿರತಕ್ಕಂಥದ್ದನ್ನು ತಾವು ಪರಿಶೀಲನೆ ಮಾಡಬೇಕು ಎನ್ನತಕ್ಕಂಥಾದ್ದುನ್ನ ಒಂದು ಅನಿಸಿಕೆ. ಇನ್ನೊಂದು ತಾವು ಇಂಡಸ್ಟ್ರೀಗಳ ಬಗ್ಗೆ ಮಾತನಾಡುತ್ತಾ ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದಿರಿ. ಅದು ಇವತ್ತು 20 ರಿಂದ 29 ಪರ್ಸೆಂಟ್ ಉಪಯೋಗಸುತ್ತಿದ್ದಾರೆ. ಜಾಸ್ತಿ ಮಾಡಿದರೆ ಅವರು ಕಡಿಮೆ ತೆಗೆದುಕೊಳ್ಳುತ್ತಾರೆ ಎನ್ನುವ ಮಾತನ್ನು ತಾವು ಹೇಳಿದಿರಿ. ಅದಕ್ಕೆ ನನ್ನದ್ದು ಒಂದು ಸಲಹೆ ಏನೆಂದರೆ, ಮಹಾರಾಷ್ಟ್ರದಲ್ಲಿ ಗುಜರಾತ್ನಲ್ಲಿ ನಮಗಿಂತ ಜಾಸ್ತಿ ಬೆಲೆ ಮಾಡಿದ್ದಾರೆ. ಇವತ್ತು ಮಹಾರಾಷ್ಟ್ರದಲ್ಲಿ ಗುಜರಾತ್ನಲ್ಲಿ ಜಾಸ್ತಿ ಇರುವ ಕಾಲದಲ್ಲಿ ಕರ್ನಾಟಕದಲ್ಲಿ ಕಡಿಮೆ ಮಾಡಬೇಕು ಎನ್ನತಕ್ಕಂಥಾದ್ದು ಇಲ್ಲ. ತಾವು ಹೇಳಿದ ಹಾಗೆ ಅವರಿಗೆ ಅಶ್ಯೂರ್ಡ್ ಪವರ್ ಬೇಕು ಅಷ್ಟೇ. ಅವರಿಗೆ ಕಂಟಿನ್ಯೂಟಿ ಆಫ್ ಪವರ್ ಬೇಕು ಅಷ್ಟೇ. ಈ ಅಶ್ಯೂರ್ಡ್ ಮತ್ತು ಕಂಡಿನ್ಯೂಟಿ ಆಫ್ ಪವರ್ ಇದ್ದು ವೋಲ್ಟೇಜ್ ಡ್ರಾಪ್ ಆಗದೇ ಇದ್ದರೆ ನೀವು ಎಷ್ಟೇ ಜಾಸ್ತಿ ಮಾಡಿದರೂ ಸಹ ಅವರು ಒಪ್ಪಿಕೊಳ್ಳತಕ್ಕ ಪರಿಸ್ಥಿತಿ ಇದೆ. ತಾವು ಇಂಡಸ್ಟ್ರೀಯವರಿಗೆ ಜಾಸ್ತಿ ಮಾಡತಕ್ಕದ್ದರಲ್ಲಿ ಅರ್ಥ ಇದೆ. ಅದರಲ್ಲೂ ಹೈ ವೋಲ್ಟೇಜ್ನವರಿಗೆ ಜಾಸ್ತಿ ಮಾಡತಕ್ಕಂಥದರಲ್ಲಿ ಅರ್ಥ ಇದೆ. ಬೇರೆ ರಾಜ್ಯಗಳಿಗೆ ಹೋಲಿಸಿದಾಗ ನಮ್ಮ ರಾಜ್ಯ ಕಡಿಮೆ ಕೊಡುತ್ತಿದೆ ಎಂದು ನಾನು ಮತ್ತೊಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಬಹಳ ಟೆಕ್ನಿಕಲ್ ಆಗಿ ಯೋಚನೆ ಮಾಡಬೇಕಾದಂಥದ್ದು ನಮ್ಮ ಶರಾವತಿಯಲ್ಲಿ ನಮ್ಮ ನಾಗರರಿಯಲ್ಲಿ ವಾರಾಹಿಯಲ್ಲಿ ಮತ್ತೆ ನಮ್ಮ ಇನ್ನಿತರ ಡ್ಯಾಮ್ ಗಳಲ್ಲಿ ಮಾನ್ ಸೂನ್‌ನಲ್ಲಿ ನಾವು ಐದು ಪರ್ಸೆಂಟ್ ಮೇಲೆ ಪವರ್ ಗಾಗಿ ನೀರನ್ನು ಇಟ್ಟುಕೊಳ್ಳಬಾರದು. ನನಗೆ ಗೊತ್ತಿರುವ ಹಾಗೆ ಸೂಪದಲ್ಲಿ, ವಾರಾಹಿಯಲ್ಲಿ ಎಲ್ಲಾ ಕಡೆ ಇವತ್ತು ಮಾನ್ ಸೂನ್‌ನಲ್ಲಿ 20 ಪರ್ಸೆಂಟ್ ರಿಂದ 30 ಪರ್ಸೆಂಟ್ ವರೆಗೆ ನೀರು ಇತ್ತು. ಆ ನೀರನ್ನು ನೀವು ವಿದ್ಯುಚ್ಛಕ್ತಿಯಾಗಿ ಕನ್ ವರ್ಟ್ ಮಾಡಬೇಕು. ಅದು ಮಾನ್ ಸೂನ್ ಕಾಲದಲ್ಲಿ ಸುಮಾರು 3-4 ತಿಂಗಳುಗಳ ಹಿಂದೆ

ಈಗ ತಾವು ಅದನ್ನು ತರಿಸಿ. ಪ್ರತಿ ಡ್ಯಾಂಗಳಲ್ಲಿ ಎಂದರೆ ನಮ್ಮ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಡ್ಯಾಂಗಳಲ್ಲಿ ಎಷ್ಟು ನೀರು ಇದೆ. ಐದು ಪರ್ಸೆಂಟ್ ಮೇಲೆ ನೀವು ಯಾವುದೇ ಡ್ಯಾಂಗಳಲ್ಲಿ ನೀರು ಇರುವುದಕ್ಕೆ ಬಿಡಬಾರದು. ಐದು ಪರ್ಸೆಂಟ್ ಮೇಲೆ ಇರತಕ್ಕಂಥ ನೀರನ್ನು ತಾವು ಕನ್‌ವರ್ಟ್ ಮಾಡಿ ಪವರ್ ಮಾಡಿಕೊಳ್ಳುವುದಕ್ಕೆ ಹೆಚ್ಚು ಗಮನ ಹರಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ಕೆಲವು ಸಾರಿ ನಾವು ಜೂನ್ 10ಕ್ಕೆ ಮಳೆ ಬರುತ್ತದೆ ಎಂದು ನಿರೀಕ್ಷೆ ಮಾಡಿರುತ್ತೇವೆ. ಆದರೆ ಒಂದೊಂದು ಸಾರಿ 20ಕ್ಕೆ ಮುಂದೆ ಆಗಬಹುದು. ಕೊನೆಯ ಘಳಿಗೆಯಲ್ಲಿ ನಮಗೆ ಬೇರೆ ಯಾವುದೇ ಕಡೆಯಿಂದ ಪವರ್ ಬಾರದೇ ಇದ್ದ ಕಾಲದಲ್ಲಿ ನಮ್ಮ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ಅದನ್ನು ಸೇಫ್ಟಿಗಾಗಿ ಉಳಿಸಿಕೊಳ್ಳುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಮೂರು ನಾಲ್ಕು ತಿಂಗಳ ಹಿಂದೆ ಪ್ರತಿ ತಾಲ್ಲೂಕಿಗೆ ವೋಲ್ಟೇಜ್ ಇಂಪ್ರೂವ್ ಮೆಂಟಿಂಗ್ ಅಥವಾ ನಮ್ಮ ಬಿಡಿ ಅಂಪ್ರೂವ್ ಮೆಂಟ್ಗೆ ಮೂವತ್ತು ಲಕ್ಷ ರೂಪಾಯಿ ಕೊಡಬೇಕು ಎಂದು ಸರ್ಕಾರ ಒಂದು ವಿಚಾರವನ್ನು ತೀರ್ಮಾನ ಮಾಡಿತ್ತು. ಈ ಮೂವತ್ತು ಲಕ್ಷ ರೂಪಾಯಿಯಲ್ಲಿ ತಾವು ಯೋಚನೆ ಮಾಡಬೇಕು. ಆಯಾಯ ಜಿಲ್ಲೆಗಳಲ್ಲಿ ಒಬ್ಬ ಆಫೀಸರನ್ನು ಹೆಡ್ ಮಾಡಿ ಆಯಾ ಲೆಜಿಸ್ಲೇಟರನ್ನು ಕೂರಿಸಿ, ಆಯಾ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ವೋಲ್ಟೇಜ್ ಇಂಪ್ರೂವ್ ಮೆಂಟ್ಗೆ ಸಿಸ್ಟಂ ಇಂಪ್ರೂವ್ ಮೆಂಟ್ ನಾನೇ ಕುಳಿತುಕೊಂಡು ಮಾಡುತ್ತೇನೆ

ಎಂದು ಸಲಹೆ ಕೊಟ್ಟಿದ್ದೀರಿ, ಅದಕ್ಕೆ ಬದಲಾಗಿ ಹಿಂದೆ ಏನು 30 ಲಕ್ಷ ರೂಪಾಯಿ ಪ್ರತಿ ತಾಲ್ಲೂಕಿಗೆ ಕೊಟ್ಟು ಅಲ್ಲಿಂದ ಸಿಸ್ಟಂ ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮಾಡಿದ್ದರು ಅದನ್ನೇ ಸರಿಯಾಗಿ ಯೋಚನೆ ಮಾಡಬೇಕು, ಅದರಿಂದ ಬಹಳಷ್ಟು ಪ್ರಯೋಜನವಾಗುತ್ತದೆ. ನಿಜ, ಈಗ ಅದಕ್ಕೆ ಹಣಕಾಸಿನ ತೊಂದರೆ ಇದೆ. ನನಗೆ ಗೊತ್ತಿರುವ ಪ್ರಕಾರ ತಮಗೆ 550 ಕೋಟಿ ಪ್ಲಾನ್ ಒಳಗಡೆ ಕೆ.ಇ.ಬಿ.ಗೆ. ಇತ್ತು. ಇವತ್ತಿನವರೆಗೂ ತಾವು ಖರ್ಚು ಮಾಡಿರತಕ್ಕಂಥಾದ್ದು 281 ಕೋಟಿ ರೂಪಾಯಿ. ಇದಕ್ಕೆ 50-55 ಪರ್ಸೆಂಟ್ ಖರ್ಚುಮಾಡಿರಬಹುದು. ಅದೇ ರೀತಿ ಪವರ್ ಕಾರ್ಪೋರೇಷನ್ ಗೂ ಸಹ ನೀವು ಖರ್ಚು ಮಾಡಿಲ್ಲ. ಅದು ಯಾವುದೇ ಸರ್ಕಾರ ಇರಲಿ, ಈ ಸರ್ಕಾರ ಅಥವಾ ಆ ಸರ್ಕಾರ ಇರಲಿ. ಪವರ್ ಕಾರ್ಪೋರೇಷನ್‌ಗೆ 297 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ ಮತ್ತು ಕೆಇಬಿಗೆ 281 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ತಾವು ಇನ್ನೂ ಮೂರು ತಿಂಗಳಲ್ ಇವರೆಡರಿಂದ 500 ಕೋಟಿ ರೂಪಾಯಿಯನ್ನು ಖರ್ಚು ಮಾಡಿಕೊಳ್ಳುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ನೀವು 500 ಕೋಟಿ ರೂಪಾಯಿ ಖರ್ಚು ಮಾಡದೇ ಹೋದರೆ ಖಂಡಿತವಾಗಿ ಸಹ ಸಿಸ್ಟಂ ಇಂಪ್ರೂವ್ ಆಗುವುದಿಲ್ಲ. ಪವರ್ ಸಪ್ಲೈ ಅಂತೂ ಬಹಳ ತೊಂದರೆಯಾಗುತ್ತದೆ. ನೀವು ಕೆಇಬಿಯಲ್ಲಿ ಯಾವುದೇ ಆದಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆನ್ನುವ ದೃಷ್ಟಿಯಿಂದ ನಾವು ಏನು ಬಜೆಟ್ ಅಲೋಕೇಷನ್ ಮಾಡಿದ್ದೇವೋ ಅದರಲ್ಲಿ ಕನಿಷ್ಟ ಪಕ್ಷ 80 ಪರ್ಸೆಂಟ್ ಆದರೂ ಸಹ ತಾವು ಮ್ಯಾನೇಜ್ ಮಾಡಲೇಬೇಕು. ನೀವು 80 ಪರ್ಸೆಂಟ್ ಮ್ಯಾನೇಜ್ ಮಾಡದೇ ಹೋದರೆ ಬಹಳಷ್ಟು ಪಂಪ್ ಸೆಟ್ಟುಗಳನ್ನು ಕೊಡುವ ಕಾರ್ಯಕ್ರಮ ಇರಲಿ, ಅಥವಾ ಇನ್ನು ಬೇರೆ ಸಿಸ್ಟಂ ಇಂಪ್ರೂವ್ ಮೆಂಟ್ ಇರಲಿ, ಅಥವಾ ಪವರ್ ಜನರೇಟ್ ಮಾಡತಕ್ಕಂಥ ಕಾರ್ಯಕ್ರಮವಾಗಲಿ ಅದು ಯಾವುದೂ ಆಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ತಾವು ಎರಡನ್ನು ಆಲೋಚನೆ ಮಾಡಬೇಕೆಂದು ಸಲಹೆ ಕೊಡುತ್ತೇವೆ. ತಾವು ಇರಿಗೇಷನ್ ವಿಚಾರವಾಗಿ ಬಹಳಷ್ಟು ಹೇಳಿದ್ದೀರಿ. ಕೃಷ್ಣಾ ಮತ್ತು ಕಾವೇರಿ ಎರಡನ್ನು ಮುಗಿಸಬೇಕು ಎಂದು ಹೇಳಿದ್ದೀರಿ. ನನಗೆ ಹೋದಸಾರಿ ಬಹಳ,ಟು ಅಸಮಧಾನ ಬಂದಿದ್ದು ಇದರಲ್ಲಿ ಒಂದು ಕಾರಣಕ್ಕಾಗಿ. ಹೋದ ಸರ್ಕಾರ 993 ಕೋಟಿ ರೂಪಾಯಿಯನ್ನು ಇರಿಗೇಷನ್ ಗೆಂದು ಇಟ್ಟರು. ಆದರೆ ಇಲ್ಲಿಯವರೆಗೆ 430 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದೇವೆ ಇನ್ನು 3 ತಿಂಗಳಲ್ಲಿ, ಎರಡು ಸಾವಿರ ವರ್ಷಕ್ಕೆ ಕೃಷ್ಣಾ ಪೂರೈಸುತ್ತೇವೆ, ಕಾವೇರಿ ವಿವಾದವನ್ನು ಮುಗಿಸುತ್ತೇವೆ ಎನ್ನುವಂತಹ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರೂ ಸಹ ಇಲ್ಲಿಯವರೆಗೆ ನೀವು ಖರ್ಚು ಮಾಡಿರತಕ್ಕಂಥಾದ್ದು 450 ಕೋಟಿ ಕೋಟಿ ರೂಪಾಯಿಗಳು ಮಾತ್ರ. ಇಡೀ ಒಂದು 10 ತಿಂಗಳಲ್ಲಿ ಖರ್ಚು ಮಾಡಿರತಕ್ಕಂಥಾದ್ದು 450 ಕೋಟಿ ರೂಪಾಯಿಗಳು ಮಾತ್ರ. ಆದುದರಿಂದ ಈ ಕಡೆ ಹೆಚ್ಚು ಗಮನವನ್ನು ತಾವು ಹರಿಸಬೇಕು. ಇದರಲ್ಲಿ 91 ಸಾವಿರ ಹೆಕ್ಟೇರ್‌ಗಳಲ್ಲಿ ನೀರು ಕೊಡುತ್ತೇವೆ ಎಂದು ಹೇಳಿದ್ದೇವೆ ಇಲ್ಲಿಯವರೆಗೆ ನಮ್ಮ ಪೊಟೆನ್ ಷಿಯಲ್ 21 ಸಾವಿರಕ್ಕೂ ನೀವು ಕೊಟ್ಟಿಲ್ಲ. 21 ಸಾವಿರಕ್ಕೆ ಇನ್ನೂ ಉಳಿದಿರತಕ್ಕಂಥ ಸುಮಾರು 70 ಸಾವಿರಕ್ಕೆ ಈ ಹೊಸ ಸರ್ಕಾರದ ಮೇಲೆ ಜವಾಬ್ದಾರಿ ಇದೆ. 70 ಸಾವಿರ ಹೆಕ್ಟೇರ್‌ಗೆ ನಾವು ಇನ್ನೂ ಮೂರು ತಿಂಗಳಲ್ಲಿ ನೀರು ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕೋಸ್ಕರ ನಾನು ಹೇಳಿದ್ದುದು ಯಾವುದೇ ಸರ್ಕಾರ ಚುನಾವಣೆಗಳನ್ನು ಫೆಬ್ರವರಿ, ಮಾರ್ಚ್‌ನಲ್ಲಿ ಮಾಡಿದರೆ ಈ ಕನ್ ಫ್ಯೂಷನ್ ಇರುವುದಿಲ್ಲ. ಇವತ್ತು 91 ಸಾವಿರ ಹೆಕ್ಟೇರ್‌ನಲ್ಲಿ 21 ಸಾವಿರ ಹೆಕ್ಟೇರ್‌ಗೆ ನೀರು

ಕೊಟ್ಟರೆ ಎಷ್ಟು ಸಮಸ್ಯೆ ಬಗೆಹರಿಯುತ್ತದೆ. ಎಂಬುದನ್ನು ಗಮನಿಸಬೇಕು. ಆದುದರಿಂದ ನಮ್ಮ ಮಾಡ್ರನೈಸೇಷನ್ ಆಫ್ ವಿ.ಸಿ.ಗೆ 25 ಕೋಟಿ ರೂಪಾಯಿ ಕೊಡಬೇಕಾಗಿತ್ತು. ನಮಗೆ ನೀವು ಕೊಟ್ಟಿರತಕ್ಕಂಥಾದ್ದು ಇಲ್ಲಿಯವರೆಗೆ ಕೇವಲ 7 ಕೋಟಿ ಮತ್ತು 29 ಲಕ್ಷ ರೂಪಾಯಿ. ಅದನ್ನು ಲೆಕ್ಕ ಹಾಕಿಕೊಂಡರೆ ನಮಗೆ 25 ಪರ್ಸೆಂಟ್ ನೀರಾವರಿಗೆ ಹಣ ಖರ್ಚು ಮಾಡಿಲ್ಲ. ಆದ್ದರಿಂದ ಹೊಸ ಸರ್ಕಾರದ ಜವಾಬ್ದಾರಿ ಎಂದು ಹೇಳಿದರೆ ಏನು ಬಜೆಟ್‌ನಲ್ಲಿ ಆಲೋಕೇಷನ್‌ನಲ್ಲಿ 993 ಕೋಟಿ ರೂಪಾಯಿಯನ್ನು ನೀರಾವರಿಗೆ ಇಟ್ಟಿದ್ದಾರೆ. ಅಷ್ಟೂ ಹಣವನ್ನು ನೀವು ಕಾವೇರಿ, ಕೃಷ್ಣಾ ಅಥವಾ ಸಣ್ಣ ನೀರಾವರಿಗೆ ಖರ್ಚು ಮಾಡಬೇಕು. ಬೇರೆ ಎಲ್ಲಾ ಕಾರ್ಯಕ್ರಮಗಳಿಗಿಂತ ವಿದ್ಯುಚ್ಛಕ್ತಿ ಮತ್ತು ನೀರಾವರಿ ಕಾರ್ಯಕ್ರಮಗಳಿಗೆ ಹೆಚ್ಚು ಇನ್ನು ಮೂರು ತಿಂಗಳಲ್ಲಿ ಆಲೋಕೇಷನ್ ಮಾಡತಕ್ಕಂಥಾದ್ದಲ್ಲಿ ಅಥವಾ ಅಪ್ರೊಪ್ರಿಯೇಷನ್ ಬಿಲ್ ಮಾಡತಕ್ಕಂಥಾದ್ದಲ್ಲಿ ಆಗಲಿ ಅಥವಾ ತಾವು ಸಪ್ಲಿಮೆಂಟರಿ ಬಜೆಟ್ ಎಸ್ಟಿಮೇಟ್ ಏನಾದರೂ ಇರುವುದಾದರೆ ಅದರಲ್ಲಿಯಾಗಲಿ, ಯಾವುದಾದರೂ ರೀತಿಯಲ್ಲಿ ಈ ಎರಡು ಬಾಬುಗಳಿಗೆ ವಿದ್ಯುಚ್ಛಕ್ತಿ ಮತ್ತು ನೀರಾವರಿಗೆ 1994-95ನೇ ಇಸವಿಯಲ್ಲಿ ಏನು ಹಣ ಇಟ್ಟಿದ್ದರು, ಆ ಹಣವನ್ನು 80 ಪರ್ಸೆಂಟ್ ಉಪಯೋಗಿಸತಕ್ಕಂಥ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೀರಿ ಎನ್ನುವಂತಹ ಮಾತನ್ನು ಹೇಳಿ ನಮಗೆ ಮಾಡ್ರನೈಸೇಷನ್ ಆಫ್ ವಿ.ಸಿ.ಗೆ ಜಾಸ್ತಿ ಹಣ ಬಿಡುಗಡೆಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗದೆ ಒಂದೇ ಒಂದು ಮಾತನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಇವತ್ತಿನ ದಿವಸ ಇದು ಒಂದು ವಿಶೇಷವಾದಂತಹ ವಿಧಾನಸಭೆಯಾಗಿದೆ.

ಇದು ಒಂದು ವಿಶೇಷವಾದಂತಹ ವಿಧಾನಸಭೆಯಾಗಿದೆ. ನನ್ನ ರಾಜಕಾರಣದಲ್ಲಿ ನಾನು ನೋಡಿದ ಹಾಗೆ 108 ಜನ ವಿರೋಧಪಕ್ಷದಲ್ಲಿರುವಂಥಾದ್ದು ವೈಯಕ್ತಿಕವಾಗಿ ಹೇಳುವುದಾದರೆ ನನಗೆ ಬಹಳ ಸಂತೋಷ. 1989ರಲ್ಲಿ ಸರ್ಕಾರ ಓವರ್ ಲೋಡ್ ಆಗಿ ಏನಾನಾಯಿತು ಎಂಬುದನ್ನು ನೋಡಿದ್ದೇವೆ. ಇನ್ನೊಂದು ಸಾರಿ ಕಡಿಮೆಯಾಗಿದ್ದಾಗಲೂ ಏನಾಯಿತೆಂಬುದನ್ನು ನೋಡಿದ್ದೇವೆ. ಆದ್ದರಿಂದ ಹೆಚ್ಚು ಕಡಿಮೆ ವಿರೋಧ ಪಕ್ಷವೂ ಆಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಓವರ್ ಲೋಡ್ ಆದರೆ ಕುಸಿದು ಬೀಳುತ್ತದೆ ಎಂದೋ?

ಶ್ರೀ ಬಸವರಾಜ ರಾಯರೆಡ್ಡಿ : ಓವರ್ ಲೋಡ್ ಆದರೆ ಗಾಡಿ ಜಗ್ಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಓವರ್ ಲೋಡ್ ಆಗುವುದು ಸೂಕ್ತವಲ್ಲ. ಆದುದರಿಂದ 108 ಜನರು ವಿರೋಧಪಕ್ಷದಲ್ಲಿ ಬಂದಿರತಕ್ಕಂಥದ್ದು ನಮ್ಮ ವಿಧಾನಸೌಧದ ಇತಿಹಾಸದಲ್ಲೇ ಒಳ್ಳೆಯದೆಂದು ನನಗನ್ನಿಸಿದೆ. ಈ ರೀತಿಯಾದಂತಹ ವಿಧಾನಸಭೆ ರಚನೆಯಾಗಬೇಕೆಂದು ಮತದಾರರು ಯೋಚನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಮತದಾರರಿಗೆ ಬಹಳಷ್ಟು ಶಕ್ತಿ ಇದೆ, ಬುದ್ಧಿ ಇದೆ. ಅವರು ಯಾವುದೇ ಪತ್ರಿಕೆಯ ವರದಿಯನ್ನು ನೋಡಿಕೊಂಡು ಓಟು ಕೊಡತಕ್ಕಂಥ ಜನರಲ್ಲ. ಕರ್ನಾಟಕದವರು ರಾಜಕೀಯದಲ್ಲಿ ತೀರ್ಪು ಕೊಡುವುದರಲ್ಲಿ ಇಡೀ ರಾಷ್ಟ್ರದಲ್ಲೇ ಬುದ್ಧಿವಂತ ಜನರಿದ್ದಾರೆ. ಎನ್ನುವಂಥಾದ್ದು ಅರ್ಥವಾಗಿದೆ. ಆದರೆ ಒಂದು ಡಾ ಜೀವರಾಜಆಳ್ವ ರವರು ಡಿಸೆಂಬರ್ 11ನೇ ತಾರೀಖಿನಂದು ನಡೆದಂತಹ ಗಲಾಟೆಯ ಬಗ್ಗೆ ಬಹಳ ತೀವ್ರವಾಗಿ ಪ್ರಸ್ತಾಪ ಮಾಡಿದರು. ವಿಧಾನಸೌಧದ ಪವಿತ್ರತೆಯನ್ನು ಹಾಳು ಮಾಡಿದಿರಿ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ಸ್ನೇಹಿತರಿಗೆ ಒಂದು ಮಾತನ್ನು ಜ್ಞಾಪಿಸಿಕೊಳ್ಳುವುದಕ್ಕೆ ಹೇಳಲಿಚ್ಛಿಸುತ್ತೇನೆ. ನಾವೆಲ್ಲಾ ಕಾಂಗ್ರೆಸ್ ಪಕ್ಷದಲ್ಲಿದ್ದೆವು.ಆಗ ಮಾನ್ಯ ಮುಖ್ಯಮಂತ್ರಿಯವರು

ಶ್ರೀ ವೀರಪ್ಪ ಮೊಯಿಲಿಯವರು ಆಗಿದ್ದರು. ಆಗ ಮೂರನೆಯ ಮಹಡಿಯಲ್ಲಿ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಅಂದರೆ 3-4 ದಶಕಗಳಿಂದ ನಡೆಯುತ್ತಿರತಕ್ಕಂಥದ್ದು ಯಾವುದೂ ಸಹ ಜನರ ಇಚ್ಛೆಯಂತೆ ನಡೆದಿದೆಯೇ ವಿನಃ ನಾವು ಮುಖ್ಯಮಂತ್ರಿಗಳ ಅಥವಾ ಆಗುರವರ ಇಚ್ಛೆಯಂತೆ ನಡೆದಿಲ್ಲ. ತಾವು ಜ್ಞಾಪಿಸಿಕೊಳ್ಳಬೇಕು. ಈ ರಾಜ್ಯದಲ್ಲಿ ಎಂಥಾದ್ದು ನಡೆದಿದೆ ಎಂದು ನಾವೇ ಬಿಡಿಸಿದವನು ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರನ್ನು ಮೂರನೇ ಮಹಡಿಯಲ್ಲಿ ನಮ್ಮ ಕಾನ್ ಫರೆನ್ಸ್ ಹಾಲಿನ ಒಳಗೆ ಶಾಸಕರೇ ಹೊಡೆಯುವುದಕ್ಕೆ ಹೋದಂತಹ ನಿದರ್ಶನವನ್ನು ನಾವು ನೋಡಿದ್ದೇವೆ. ನಿಮ್ಮದೇ ಉದಾಹರಣೆಯನ್ನು ತೆಗೆದುಕೊಳ್ಳೋಣ, ಬೇರೆ ಉದಾಹರಣೆ ಬೇಡ. ಮಾನ್ಯ ಬಂಗಾರಪ್ಪನವರ ಮನೆಗೆ ಮಾನ್ಯ ದೇವೇಗೌಡರು ಹೋದಂತಹ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಹೋದಂತಹ ಸಂದರ್ಭದಲ್ಲಿ ಬಟ್ಟೆ ಹರಿದುಕೊಂಡು ಬಂದಂಥಾದ್ದು ನಿದರ್ಶನಗಳು ಇವೆ. ಆದುದರಿಂದ ಈ ಅಧಿಕಾರ ಇನ್ನೊಂದು ಕೈಗೆ ಹಸ್ತಾಂತರವಾಗುವಂತಹ ಕಾಲದಲ್ಲಿ ಇಂತಹ ಬದಲಾವಣೆಗಳನ್ನು ರಾಜಕೀಯವಾಗಿ ನಿರೀಕ್ಷಣೆ ಮಾಡಲೇಬೇಕು. ಆದರೆ ಅದು ಆದದ್ದು ಸರಿಯೆಂದು ನಾನು ಹೇಳುವುದಿಲ್ಲ, ಅದನ್ನು ತೀವ್ರವಾಗಿ ಖಂಡನೆ ಮಾಡತಕ್ಕವರು ಹಾಗೂ ತೀವ್ರವಾಗಿ ವಿರೋದ ಮಾಡತಕ್ಕವರು ನಾವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡೂ ಉದಾಹರಣೆಗಳನ್ನು ಅವರೇ ಕೊಡುತ್ತಿದ್ದಾರೆ. ಮಾನ್ಯ ದೇವೇಗೌಡರ ಅಂಗಿಯನ್ನು ಹರಿದದ್ದು, ಮೊನ್ನೆಯ ಘಟನೆಯನ್ನು ಅವರೇ ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ರಾಜಕೀಯವಾಗಿ ನೀವು ಎರಡನ್ನೂ ತೆಗೆದುಕೊಳ್ಳಬೇಕು. ನೀವು ಒಂದು ಸೈಡ್ ತೆಗದುಕೊಂಡರೆ ಸರಿಯಾಗುವುದಿಲ್ಲ, ಯಾವ ಎರಡೂ ತೆಗೆದುಕೊಳ್ಳಬೇಕೆಂದರೆ, ಈ ರಾಜ್ಯದ ಪವಿತ್ರತೆ ಹಾಳಾಗಿ ಹೋಯಿತು, ನಾನು ನೀವು ಮಾತನಾಡುವಾಗನಾವು ಇಬ್ಬರೂ ಕಾಂಗ್ರೆಸ್ ನಲ್ಲಿದ್ದಾಗ ಮಾನ್ಯ ಮುಖ್ಯಮಂತ್ರಿಯವರನ್ನು ಹೊಡೆಯುವುದಕ್ಕೆ ಹೋದ ಘಟನೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎನ್ನತಕ್ಕಂಥದ್ದು.

ಶ್ರೀ ಕಾಗೋಡು ತಿಮ್ಮಪ್ಪ : ತಪ್ಪು ಆಗಿದ್ದರೆ ತಪ್ಪಾಗಿದೆ ಎಂದು ಒಪ್ಪಿಕೊಳ್ಳೋಣ. ಆಗಿದ್ದರ ಬಗ್ಗೆ ಪವಿತ್ರತೆ ಹೋಯಿತು ಎಂದು ಅವರು ಹೇಳಿದುದರಲ್ಲಿ ತಪ್ಪು ಏನೂ ಇಲ್ಲ, ಅದನ್ನು ನಾವು ನೀವು ಒಪ್ಪಿಕೊಳ್ಳಲೇಬೇಕು. ಅದು ನಮ್ಮಿಂದ ಅಥವಾ ತಮ್ಮಿಂದ ಆಗಬಹುದು ಆದರೆ ಮುಂದೆ ಇಂತಹ ಘಟನೆಗಳು ಆಗದಂತಹ ರೀತಿಯಲ್ಲಿ ನೋಡಿಕೊಳ್ಳುವಂತಹ ಜವಬ್ದಾರಿ ಎಲ್ಲರ ಮೇಲೂ ಇದೆ. ಆದ್ದರಿಂದ ಅಲ್ಲಿಗೆ ಹೋದಮೇಲೆ ನಿಮ್ಮ ಪಕ್ಷದ ಮುಖ್ಯಮಂತ್ರಿಯವರ ಆಯ್ಕೆಯ ಸಂದರ್ಭದಲ್ಲಿ ನಡೆದಿದ್ದರೆ ಅದು ತಪ್ಪು, ಹಿಂದೆ ನಡೆದಿದ್ದರೆ ಅದು ತಪ್ಪು, ಇದನ್ನು ಆಗದೇ ಇರುವಂತಹ ರೀತಿಯಲ್ಲಿ ನಾವೆಲ್ಲರೂ ಸೇರಿ ಜವಾಬ್ದಾರಿಯಿಂದ ಹೋಗಬೇಕು.

ಶ್ರೀ ಕೆ.ಎನ್. ನಾಗೇಗೌಡ : ನಾನು ಅದೇ ಹೇಳಿದುದ್ದು. ತಪ್ಪು ಮಾಡಿದವರು ತಪ್ಪು ಎಂದು ಬೆಟ್ಟು ಮಾಡಿ ತೋರಿಸುವುದು ಬೇಡ. ನಾವು ನೀವು? ಇದ್ದಾಗ ಮಾನ್ಯ ಮುಖ್ಯಮಂತ್ರಿಯವರ ಮೇಲೆ ಶಾಸಕರು ಮಾಡಿದಂತಹ ಜಿಲ್ಲೆಯನ್ನು ಮರೆತು ಆ ತಪ್ಪನ್ನು ಹೇಗೆ ಒಪ್ಪಿಕೊಂಡಿದ್ದೀರಿ, ಅದೇ ರೀತಿ ಈ ತಪ್ಪನ್ನೂ ಸರಿ ಮಾಡಿ ಎಂದು ನೀವು ಹೇಳಬೇಕು.

ಅಧ್ಯಕ್ಷರು : ಮಾನ್ಯ ನಾಗೇಗೌಡರೇ, ಬೇಗ ಮುಗಿಸಿ.

ಶ್ರೀ ಕೆ.ಎನ್. ನಾಗೇಗೌಡ : ನಾನು ಏತಕ್ಕೆ ಈ ವಿಚಾರವನ್ನು ಪ್ರಸ್ತಾಪ ಮಾಡಿದೆನೆಂದರೆ ರಾಜಕಾರಣದಲ್ಲಿ ಅಧಿಕಾರ ಹಸ್ತಾಂತರವಾಗುವಂತಹ ಕಾಲದಲ್ಲಿ ಇಂತಹ ಒಂದು ಸಹಜವಾದಂತಹ ಬೆಳವಣಿಗೆಯನ್ನು ನಾನು ಯಾವ ರೀತಿ ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕೆಂಬ ಸಲಹೆ, ಸೂಕ್ತ ಮಾರ್ಗವೇ ವಿನಃ ಅದರ ಮೇಲೆ

ಟೀಕೆ ಮಾಡುವುದು ಸೂಕ್ತ ಮಾರ್ಗವಲ್ಲವೆಂಬ ದೃಷ್ಟಿಯಿಂದ ಹೇಳಿದೆನೇ ವಿನಹ ಬೇರೆನೂ ಅಲ್ಲ, ಈ ಘಟನೆ ಬಹಳ ದೊಡ್ಡ ಘಟನೆಯಾಗಿ ಹೋಯಿತು ಎಂಬುದನ್ನು ಪ್ರಸ್ತಾಪ ಮಾಡುವುದು ಬೇಡವೆಂದು ಹೇಳಲಿಲ್ಲ. ಆ ತಪ್ಪುಗಳನ್ನು ನಾವು ಕಂಟ್ರೋಲ್ ಮಾಡಿ ಹೇಗೆ ಇಟ್ಟುಕೊಳ್ಳಬೇಕೆಂದರ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡಿದ್ದೇನೆ ಇನ್ನು ಒಟ್ಟಾರೆ ಹೇಳುವುದಾದರೆ ಇವತ್ತು ರಾಜ್ಯಪಾಲರ ಭಾಷಣದಲ್ಲಿ ಸೂಕ್ಷ್ಮವಾದಂತಹ ಮಾರ್ಗದರ್ಶಿಯನ್ನು ನೀಡಿದ್ದಾರೆ. ಅದು ಗ್ರಾಮಾಂತರ ಜನರ ಸರ್ಕಾರ ಆಗಬೇಕೆಂಬುದು ನಮ್ಮ ಆಸೆ. ಇವತ್ತು ಹಳ್ಳಿಗಾಡಿನ ಸರ್ಕಾರವಾಗಬೇಕು, ರೈತರರಿಗೆ ಪ್ರಯೋಜನವಾಗುವಂತಹ ಸರ್ಕಾರವಾಗಬೇಕು. ಇಲ್ಲಿ ಏನೂ ಸೂಚನೆ ಇಲ್ಲದಿದ್ದರೂ ಸಹ ಮುಂದೆ ಬರುವಂತಹ ಮಾರ್ಚಿ ಬಡ್ಜೆಟ್‌ನಲ್ಲಿ ಸಂಪೂರ್ಣವಾಗಿ ರೈತರ, ಗ್ರಾಮಾಂತರ ಸರ್ಕಾರ ಆಗುವಂಥಾದ್ದಕ್ಕೆ ಹೆಚ್ಚು ಗಮನವನ್ನು ಈ ಹೊಸ ಸರ್ಕಾರ ಕೊಡಬೇಕು. ಆವಾಗಲೇ ಇವತ್ತು ಮತದಾರರು ಏನು ಓಟು ಕೊಟ್ಟಿದ್ದಾರೆ, ಅದಕ್ಕೆ ಸಾರ್ಥಕವಾಗುತ್ತದೆ ಎಂಬ ಮಾತನ್ನು ಹೇಳಿ ತಾವು ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ನನ್ನ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ತಮ್ಮ ಅಪ್ಪಣೆಯನ್ನು ಪಡೆದು ರೈಲ್ವೆ ದುರಂತ ನಡೆದ ಸ್ಥಳಕ್ಕೆ ನಾನೂ ಹೋಗಿ ಬಂದೆ. ನಮ್ಮ ಮಂತ್ರಿಗಳಾಗಿರತಕ್ಕಂಥ ಬಸವರಾಜ ರಾಯರೆಡ್ಡಿ ಯವರು ಕೇವಲ ಮೂರು ಜನ ಮಾತ್ರ ನಿಧನರಾಗಿದ್ದಾರೆ ಎಂದು ಹೇಳಿದರು. ಒಬ್ಬ ಮಂತ್ರ್ಯಾಗಿ ಸದನವನ್ನು ಏಕೆ ತಪ್ಪು ದಾರಿಗೆ ಎಲೆಯುವವ ಯತ್ನ ಮಾಡಬೇಕು? ನಾವು ಹೋಗಿ ಬಂದಿದ್ದರಿಂದ ನಿಜ ಸ್ಥಿತಿ ಗೊತ್ತಾಯಿತು. ಅವರ ಮಾತನ್ನು ಕೇಳಿಕೊಂಡು ನಾವು ಕುಳಿತಿದ್ದರೆ ಎಂತಹ ಅನಾಹುತ ಆಗುತ್ತಿತ್ತು. ಕುಳಿತಿದ್ದರೆ He has committed a grave breach of privilege.

ಅಧ್ಯಕ್ಷರು : ಅವರು ಹೇಳಿದುದ್ದು ಯಲಬುರ್ಗಾದವರು ಯಾರೂ ಸತ್ತಿಲ್ಲವೆಂದು

+ ಡಾ|| ಜೀವರಾಜ ಆಳ್ವ (ಚಿಕ್ಕಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಸಾಂಪ್ರದಾಯಿಕವಾದ ಚುಟುಕು ಭಾಷಣದ ನಂತರದ ಚರ್ಚೆಯಲ್ಲಿ ಭಾಗವಹಿಸಬೇಕೋ ಬೇಡವೋ ಎಂಬ ಮುಜುಗರ ನನ್ನದಾಗಿತ್ತು. ಶ್ರೀ ನಾಗೇಗೌಡರ ಭಾಷಣ ಬಹಳ ಚೆನ್ನಾಗಿತ್ತು. ನಾನಾ ಸೈದ್ಧಾಂತಿಕ ವಿಚಾರಗಳ ಬಗ್ಗೆ, ರಾಜ್ಯಪಾಲರ ಭಾಷಣ ಮಾರ್ಚಿ ತಿಂಗಳಿನಲ್ಲಿ ಮಾಡಬಹುದು, ಎಲೆಕ್ಷನ್ ಕಮೀಷನ್‌ಗೆ ನಾವು ತಿಳಿಸಬಹುದು ಲೋನ್ ವೇವರ್ ಬಗ್ಗೆ ಎಲ್ಲವನ್ನೂ ಚೆನ್ನಾಗಿ ಅವರು ಹೇಳಿಕೊಂಡು ಬಂದರು. ಅವರು ಇಂತಹ ಒಳ್ಳೆಯ ಭಾಷಣವನ್ನು ಮಾಡಿದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಬೇಗ ಅವರಿಗೆ ಪ್ರಮಾಣವಚನವನ್ನು ಮಾಡಿಸಿ ಎಂದು ಹೇಳೋಣ ಎಂದು ಇದ್ದೆ. ಆದರೆ ಮಾನ್ಯ ನಾಗೇಗೌಡರು ಇತ್ತ ಸ್ವಲ್ಪ ಗಮನಿಸಬೇಕು. ನಾನು ಈ ಘಟನೆಗಳ ಬಗ್ಗೆ ರಾಜಕೀಯವಾಗಿ ಟೀಕೆ ಮಾಡಲಿಲ್ಲ, ಪತ್ರಿಕಾಗೋಷ್ಠಿಗೆ ಹೋಗಲಿಲ್ಲ, ವಿಧಾನಸಭೆಯಲ್ಲಿ ಮಾತನಾಡಲಿಲ್ಲ, ಆದರೆ ಯಾವಾಗ ಒಬ್ಬ ರಾಜ್ಯದ ಮುಖ್ಯ ಸಚಿವರು ಏನೋ ಒಂದು ಸಹಜಕ್ರಿಯೆ ಏನೂ ಆಗಿಲ್ಲ ಎಂದು, ಇದಕ್ಕೆ ಮುಖ್ಯಮಂತ್ರಿಗಳು ಕ್ಷಮೆ ಕೇಳಿದ್ದಾರೆಂದು ಹೇಳಿದಾಗ, ನಾನು ಹೇಳುತ್ತೇನೆ ಆಗಿದೆ. ಈ ವಿಧಾನಸೌಧಕ್ಕೆ ಅಪವಿತ್ರ ಆಗಿದೆ, ಹಿಂದೆ ಆಗಿರುವುದು ಬೇರೆ, ಮೂರನೆಯ ಮಹಡಿಯಲ್ಲಿ ಆಗಿರುವುದು ಬೇರೆ, ಆದರೆ ಯಾವುದೇ ವರ್ಷದಲ್ಲಿ ಯಾವುದೇ ಸಮಯದಲ್ಲಿ ಆಗದಿರುವಂಥ ಅಚಾತುರ್ಯವಾದ ಘಟನೆಗಳು ಆಗಿದೆ, Transition of Government ಎನ್ನುತ್ತಾರೆ. ಜಗತ್ತಿನಲ್ಲಿ ಒಂದು ಸರ್ಕಾರದ ನಂತರ ಇನ್ನೊಂದು ಸರ್ಕಾರ ಬಂದಾಗ ರಕ್ತದ ಕೋಡಿ ಹರಿಯುತ್ತದೆ, ನಾನು ಇಲ್ಲ ಎಂದು ಹೇಳುವುದಿಲ್ಲ, ಜನತಾದಳ ಪಕ್ಷದ ಕಛೇರಿಯಲ್ಲಿ ಜಗಳ ಆಗುತ್ತದೆ, ಮನೆಗಳಲ್ಲಿ ಒಂದು ರೀತಿಯ ಜಗಳವಾಗಬಹುದು, ಆದರೆ ವಿಧಾನಸೌಧ, ವಿಧಾನಸಭೆ ಇಡೀ ಸರ್ಕಾರವನ್ನು ನಡೆಸುವಂಥ ಕ್ಷೇತ್ರ ಈ

ಪಾವಿತ್ರತೆಯನ್ನು ಕಾಪಾಡಿದ್ದರೆ ಚೆನ್ನಾಗಿರುತ್ತಿತ್ತು. ಅದನ್ನು ಬಹಳ ಲಘುವಾಗಿ ಏನೂ ಆಗಿಲ್ಲ ಎಂದು ಮಾನ್ಯ ದೇವೇಗೌಡರು ಹೇಳಿ ಬಹಳ ಸಜ್ಜನಿಕೆಯಿಂದ ಕ್ಷಮೆ ಕೇಳಿದ್ದಾರೆ ಎಂದು ತೇಲಿಸಿ ಹೇಳಿದಾಗ ನನಗೂ ಸ್ವಲ್ಪ ನೋವಾಯಿತು. ಇದನ್ನು ತಾವು ಸರಿಪಡಿಸಿಕೊಳ್ಳಿ. ಇಂತಹ ತಪ್ಪುಗಳು ಆಗದಿರುವ ಹಾಗೆ ನೋಡಿಕೊಳ್ಳಿ ಎಂದು ಹೇಳಿದೆವೇ ಹೊರತು I am very very clear in my thought; very clear, there is no ambiguity whatsoever.

ಅಧ್ಯಕ್ಷರೆ, ನನಗಂತೂ ಬಹಳ ಸಂತೋಷ ಈ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದೇವೇಗೌಡರು ಮಾಡಿದಂಥ ಕೆಲಸ, ಅವರು ಸಂಸದೀಯ ಚಟುವಟಿಕೆ, ಪಾರ್ಲಿಮೆಂಟ್ ಸದಸ್ಯರಾಗಿ ಅವರು ಮಾಡಿದಂಥ ಕೆಲಸ ಇವೆಲ್ಲವನ್ನೂ ನೆನಸಿಕೊಂಡು ಈ ರಾಜ್ಯದ ಮುಖ್ಯಮಂತ್ರಿಗಳು ಶ್ರೀ ದೇವೇಗೌಡರು ಆಗಬೇಕು ಎಂದು ಮೊದಲು ಹೇಳಿದವನು ನಾನು ಎಂದು ಕಾಣಿಸುತ್ತದೆ. ಆದರೆ ನನಗೆ ಆಮೇಲೆ ಸ್ವಲ್ಪ ಹೆದರಿಕೆಯಾಯಿತು. ಈ ಪರ್‌ಸನಾಲಿಟಿ ಡಿಫೆಕ್ಟ್ಸ್ ಅಂಥ ವ್ಯಕ್ತಿಗಳಲ್ಲಿ ಇದೆ. ಇವತ್ತೂ ನಾನು ಬಯಸುವುದು a person who can be the most dynamic and powerful and successful Chief Minister of the State but he can also be the most disastrous Chief Minister.

ಇಲ್ಲಿ ಕಾಂಟ್ರಡಿಕ್ಷನ್ಸ್ ಇದೆ. ಒಂದು ಕಡೆ ಅತ್ಯಂತ ಒಳ್ಳೆಯ ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಸೇವೆ ಮಾಡುವಂಥ ಶಕ್ತಿಯನ್ನು ಆ ಒಂದು ಚಾಕಚಕ್ಯತೆಯನ್ನು ಪಡೆದಿದ್ದಾರೆ. ನಮ್ಮಲ್ಲಿ ಎಲ್ಲಾ ಇದೆ, ನಮ್ಮಲ್ಲಿ ಪರ್‌ಸನಾಲಿಟಿ ಡಿಫೆಕ್ಟ್ಸ್ ಅಂತಾರೆ, ವೈಫಲ್ಯಗಳು ಎಂದು ಹೇಳುತ್ತಾರೆ, ಆ ವೈಫಲ್ಯಗಳಿಂದಾಗಿ he could also be the most disastrous Chief Minister of the State.

ಈ ರಾಜ್ಯದ ಕಾರ್ಯಭಾರವನ್ನು ಹೊತ್ತಿರುವಂಥ ಮಾನ್ಯ ಮುಖ್ಯ ಮಂತ್ರಿಗಳು ಅವರ ಜೊತೆಯಲ್ಲಿ ಬಹಳ ಹೆಮ್ಮೆಪಡುವಂಥ ಇವತ್ತು ಈ ಸಾಲಿನಲ್ಲಿ ಜನತಾ ದಳದ ವ್ಯವಸ್ಥೆಯಲ್ಲಿ ಸುಮಾರು 5-6 ಜನ ಮುಖ್ಯಮಂತ್ರಿಗಳಾಗುವಂಥ ಪ್ರಭಾವ, ಶಕ್ತಿಯನ್ನು ಪಡೆದಿರುವಂಥ ವ್ಯಕ್ತಿಗಳಿದ್ದಾರೆ, ಒಳ್ಳೆಯ ನುರಿತಿರುವಂಥ ಮಂತ್ರಿಗಳಿದ್ದಾರೆ, ಹಲವಾರು ವರ್ಷಗಳಿಂದ 3-4 ಬಾರಿ ಶಾಸಕರಾಗಿ ಬಂದು ಇವತ್ತು ಮಂತ್ರಿ ಸ್ಥಾನಗಳನ್ನು ಪಡೆದಿದ್ದಾರೆ. ಆದರೆ ultimately it is the team work. ನಾನು ಹೇಳುವ ಮಾತನ್ನು ಯಾರೂ ಕೂಡ ಅನ್ಯಥಾ ಭಾವಿಸಬಾರದು. ಇದನ್ನು ಪರ್ಸನಾಲಿಟಿ ಡಿಫೆಕ್ಟ್ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಮೊಯ್ಲಿಯವರು the greatest failure in him is mis-trust.

ನಂಬಿಕೆ ಇಲ್ಲ, ಅವರದ್ದು ಒಂದು ತರಹದ ವರ್ತನೆ ಆದರೆ ಮಾನ್ಯ ದೇವೇಗೌಡರು ಇನ್ನೊಂದು ರೀತಿಯ ವರ್ತನೆ.

MR. SPEAKER : Mis-trust...

DR. JEEVARAJ ALVA : He does not take the people into confidence. I want to go on record that, whatever political difference that apart, my personal relationship, it has been the most cordial relationship.

ಆದರೆ ಒಂದು ವ್ಯಕ್ತಿತ್ವವನ್ನು ತುಲನೆ ಮಾಡಿದಾಗ ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದು ನಿಂತಿರುವಂಥ ಮಾನ್ಯ ದೇವೇಗೌಡರು ಕೆಲವು ವ್ಯವಸ್ಥೆಗಳನ್ನು ಸರಿಪಡಿಸಿಕೊಂಡು ಹೋಗಬೇಕು. ಏಕೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಾವು ಈಗ ವಿರೋಧಪಕ್ಷವಾಗಿದ್ದೇವೆ. ಕಾಂಗ್ರೆಸ್ಸೇತರ ಸರ್ಕಾರ ಬಂದಿದೆ.

ಎರಡನೇ ಸಾರಿ ಬಂದಿದೆ. ನಾನು ನಿನ್ನೆ ಒಂದು ಮಾತನ್ನು ಹೇಳಿದೆ. This Government will not be in the Government and it will not be in the opposition party also, How can it be ಎಂದು.

ನಾನು ಏನು ಯೋಚನೆ ಮಾಡಿದ್ದೆ ಎಂದರೆ, ಈ ಸರ್ಕಾರ ಜನತಾದಳದ ಸರ್ಕಾರವಾಗಿ ಬರುವುದಕ್ಕೆ ಸಾಧ್ಯವಿಲ್ಲ. ಜನತಾದಳ ಮತ್ತು ಕಾಂಗ್ರೆಸ್ ಎರಡೂ ಸೇರಿ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡುತ್ತೇವೆಂದು ಸಾಧಾರಣವಾಗಿ we, the so called political pandits ನಾವು ಕ್ಯಾಲುಕ್ಲೇಷನ್ ಮಾಡಿದ್ದೆವು. but our calculation mis-fired totally; ವಿರೋಧ ಪಕ್ಷವಾಗಿ ನಾವು ಇರುತ್ತೇವೆಂದು ಹೇಳಿದ್ದೆವು. ಅಧಿಕಾರವನ್ನು ಮಾಡಬೇಕೆಂಬ ಆಸೆ ಇದೆ. ಆದರೆ for some calculation ಏಕೆಂದರೆ ಇದು ಸಮಬಲವೆಂದು ಮಾನ್ಯ ನಾಗೇಗೌಡರು ಹೆಮ್ಮೆ ಪಟ್ಟರೂ ಕೂಡ ರಾಜಕೀಯವಾಗಿ ಇದು most crucial critical stage of the State. ಈ ಸರ್ಕಾರದ ಮೆಜಾರಿಟಿ ಎಂದರೆ ಕೇವಲ 5-6 116 ಇರತಕ್ಕದ್ದು 110 ಆಗುವುದಕ್ಕೆ ಹೆಚ್ಚು ಹೊತ್ತಿಲ್ಲ, It is only a question of time and the performance and I am not envisaging a political uncertainty in the State, but the attitude, the approach; ನಾನು ವಿಂಡಿಕ್ಟೀವ್‌ನೆಸ್‌ನ್ನು ಮಾಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದರು, ನಾನು witch-hunt ಮಾಡುವುದಿಲ್ಲವೆಂದು ಹೇಳಿದ್ದರು. With the same breath, our Hon'ble Chief Minister announces a vigilance cell in his own Chief Minister's Office. There is a vigilance committee; There is Lok Ayukta. But our Hon'ble Chief-Minister wants to have a vigilance cell in the Chief-Minister's Office which will have a control in monitoring authority over the constitutionally created Lok Ayukta. ಲೋಕಾಯುಕ್ತ ಎಂದರೆ ಯಾರು?

MR. SPEAKER : Your apprehension is that the vigilance Cell becomes.....

DR. JEEVARAJ ALVA : I am only trying to say; He can correct; He can withdraw. I am not an authority.

ಏಕೆಂದರೆ ಮಾನ್ಯ ದೇವೇಗೌಡರಿಂದ ನಾಡು, ನುಡಿ, ಕಾವೇರಿ ಜಲ ಬಗ್ಗೆ, ಕೃಷ್ಣಾ ಬೇಸಿನ್ ಬಗ್ಗೆ ಒಳ್ಳೆಯ ಕೆಲಸವಾಗುತ್ತದೆಂದು ನನಗೆ ಕಲ್ಪನೆ ಇದೆ. ಏಕೆಂದರೆ, he can positively deliver goods. It was an aberration, ವೀರಪ್ಪ ಮೊಯ್ಲಿಯವರು, ಅವರು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. with all the flams we have found with Bangarappa, there was some semblance of something; whether good or bad, but nothing happened in the last tenure, it was one of the greatest disastrous Government that we have Mr. Veerappa Moily's Government ರಾಜಕೀಯವಾಗಿ ಒಂದು ರೀತಿಯ ಸುಳ್ಳು, ಒಂದು ಅಪವಿತ್ರತೆ ಎಂದು ನಾನು ಹೇಳಿದೆ. ಆದರೆ ಈ ಸರ್ಕಾರದಲ್ಲಿ ಈ ವ್ಯವಸ್ಥೆಯಲ್ಲಿ ಅತ್ಯಂತ ಪ್ರಬಲ ಮಂತ್ರಿಮಂಡಲ, ಇದೆ; ಒಳ್ಳೆ ಒಳ್ಳೆಯ ಮಂತ್ರಿಗಳನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡಾಗ ತಮ್ಮ ವ್ಯವಸ್ಥೆಯನ್ನು ತಾವು ಸರಿಪಡಿಸಿಕೊಳ್ಳಬೇಕು. ನನಗೆ ಇನ್ನು ಒಂದೈದು ನಿಮಿಷ ಅವಕಾಶ ಕೊಟ್ಟರೆ ಒಳ್ಳೆಯದು.

MR. SPEAKER : I am glad you are advising all the parties except your own party.

DR. JEEVARAJA ALVA : We want to be very effective and militant opposition party.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಕಡೆ ಇದ್ದುಕೊಂಡು ಕೆಲಸವನ್ನು ಮಾಡಿಕೊಂಡು ಜೊತೆಯಲ್ಲಿದ್ದವರು ಆ ಕಡೆ ವಿರುದ್ಧ ಎಂದು ಹೇಳುವುದಕ್ಕಾಗುವುದಿಲ್ಲ. ಕಳೆದ ಹತ್ತಾರು ವರ್ಷಗಳಿಂದ ನಮ್ಮನ್ನು ಬೈದುಕೊಂಡು ಹೊರಟಿದ್ದಾರೆ. ಈಗ ಅದನ್ನೇ ಕಂಟಿನ್ಯೂ ಮಾಡಿದ್ದಾರೆ.

DR. JEEVARAJA ALVA : I have been very critical ಜನರಲ್ ಆಗಿ ಏನನ್ನೂ ನಾನು ಹೇಳುತ್ತಿಲ್ಲ. ವೈಯಕ್ತಿಕವಾಗಿ ಕೂಡ ನಾನು ಟೀಕೆ ಮಾಡುತ್ತಿಲ್ಲ. ಆದರೆ ಒಬ್ಬ ಮುಖ್ಯಮಂತ್ರಿ ತನ್ನ ಚರ್ಯೆಗಳನ್ನು, ತನ್ನ ಗುಣಗಳನ್ನು ಬದಲಾವಣೆ ಮಾಡಿಕೊಂಡರೆ let him become the most historic Chief Minister and most successful Chief Minister.

ಇದು ಒಂದು ಮನೆ. ತಾವು ಇದನ್ನು ಅನ್ಯಥಾ ಭಾವಿಸಬಾರದು. ನನ್ನ ತಂದೆ ಡಾ ನಾಗಪ್ಪ ಆಳ್ವರವರು ತಮ್ಮ ಮಗ ಪೊಲಿಟಿಕಲ್ ಇಂಡಲ್‌ಜನ್ಸ್, ತಮ್ಮ ಮಗ ವಿಧಾನ ಸೌಧದ ಕಾರಿಡಾರ್‌ನಲ್ಲಿ ಸುತ್ತಾಡುತ್ತಿದ್ದಾರೆಂಬುದು ಗಮನಕ್ಕೆ ಬಂದಾಗ He disowned me.

ಇವತ್ತು ಪತ್ರಿಕೆಗಳಲ್ಲಿ ಬಂತು. ನಾವು ಹೇಗೆ ನಮ್ಮ ನಮ್ಮ ಮಕ್ಕಳನ್ನು ಬೆಳೆಸುತ್ತೇವೆ ಎಂದು. ನಮ್ಮ ನಮ್ಮ ಮಕ್ಕಳು ಒಂದು ರೀತಿಯ ಹೆಜ್‌ಮನಿ, ಅವರೇ ಒಂದು extra territorial, extra-Constititional authority ಆಗುತ್ತಾರೆಂದು ನಾವು ತಿಳಿದುಕೊಳ್ಳುವುದಿಲ್ಲ. ಹಿಂದೆ ನಾನು ಇದ್ದಂಥ ಜನತಾದಳದ ಸರ್ಕಾರದ ವ್ಯವಸ್ಥೆಯಲ್ಲಿ ನನಗೆ ಆದಂಥ ಅನುಭವದಿಂದ ಇದು ಆಗಕೂಡದು ಎಂದು ನನ್ನ ಮನಸ್ಸಿಗೆ ಬಂತು. ತಮಗೆ ಹೇಳುವುದಾದರೆ ಮಾನ್ಯ ರೇವಣ್ಣನವರು ನಮ್ಮ ಸಹ ಸದಸ್ಯರು he is a very brillant youngster.

ಮಾನ್ಯ ದೇವೇಗೌಡರು ರಾಜಕೀಯವಾಗಿ ತೀರ್ಮಾನ ಮಾಡಿದಾಗ ಅವರು ಸ್ವತಃ ಒಂದು ಮನೆಯಲ್ಲಿದ್ದರು. ತಮ್ಮ ಕುಟುಂಬದವರನ್ನು ಅಲ್ಲಿ ಸೇರಿಸಲಿಲ್ಲ. ಇದನ್ನೇ ಮುಂದೂರಿಸಿ ಕೊಂಡು ಹೋಗಬೇಕು. ಏಕೆಂದರೆ ಆ ಹೆದರಿಕೆ ನನಗಿದೆ. I have a very very genuine apprehension because at my side he is quite an emotional sentimental person.

ಅವರು ಕೆಲವಾರು ವಿಚಾರಗಳಲ್ಲಿ ಅತ್ಯಂತ ಭಾವುಕರಾಗುತ್ತಾರೆ. ಕಣ್ಣೀರು ಬರುತ್ತದೆ. ಮಿತೃತ್ವದಲ್ಲಿ ಬರುತ್ತದೆ, ಜಗಳವಾಡಿದಾಗ ಬರುತ್ತದೆ. ಆದರೆ let him not be a captive of sentimentality and emotional weakness.

ಇವತ್ತು ಅವರ ಮಗ ಅಧಿಕಾರದಲ್ಲಿದ್ದಾರೆ. I am quoting myself. ನನ್ನ ತಂದೆ ಆರೋಗ್ಯ ಮಂತ್ರಿಗಳಾಗಿದ್ದಾಗ, ನನ್ನ ಅಣ್ಣ ಜಯಪ್ರಕಾಶ ಆಳ್ವನನ್ನು ಒಂದು ಹಳ್ಳಿಗೆ ಕಳುಹಿಸಿದರು. ಏಕೆಂದರೆ ನಮಗೆ ಸ್ವಲ್ಪ ಗಮನ ಫೀಡ್ ಬ್ಯಾಕ್ ಅಂತ ಬರುತ್ತದೆ. ಏಕೆಂದರೆ ಇವತ್ತು ನಾವು ಇಲ್ಲಿ ಬಂದು ಕುಳಿತಿದ್ದೇವೆ. ಸರ್ಕಾರದ ವರ್ತುಲದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದವರು. These things will have to be very very strictly adhered to some code of conduct. ಅಂದರೆ ಅವರು ಬಹಳ ದೊಡ್ಡ ವ್ಯಕ್ತಿ, ಅವರಿಗೆ ಬುದ್ಧಿವಾದ ಹೇಳುವಂಥ ಶಕ್ತಿ ಇಲ್ಲ, ಆದರೆ ಗೊತ್ತಾಗದೇ ಹೋಗಬಹುದು. ಇವತ್ತು ಸಮಯ ದಿನೇ ದಿನೇ ಬೇಗ ಬೇಗ ಹೋಗುತ್ತದೆ. 2 ತಿಂಗಳು, 3 ತಿಂಗಳು, 4 ತಿಂಗಳು, 6 ತಿಂಗಳು ಹೀಗೆ ಕಾಲ ಯಾವಾಗ

ಹೋಗುತ್ತದೆಂಬುದು ಗೊತ್ತಾಗುವುದಿಲ್ಲ. ಏಕೆಂದರೆ ದೇಶದಾದ್ಯಂತ ಪ್ರವಾಸ ಹೋಗುತ್ತಾರೆ. ಬರುವುದರೊಳಗೆ ಅಚಾತುರ್ಯವಾಗಬಾರದು. ಒಂದು ವ್ಯವಸ್ಥೆ ನಡೆಯಬೇಕು. I am not being of the Congress. ಈ ವ್ಯವಸ್ಥೆ ಹಾಳಾಗಬಾರದು. ಆದ್ದರಿಂದ ನಾನು ಹೇಳುತ್ತಿದ್ದೇನೆ. ಅದು ಯಾರೇ ಆಗಿರಲಿ, ಅದು ತನ್ನ ಸ್ವಂತ ಮಗನೇ ಆಗಿರಲಿ, the discipline starts from home. ಆ ಅಧಿಕಾರಿಗಳನ್ನು ತಮ್ಮ ಮಕ್ಕಳನ್ನು ಮಂಗಳೂರು, ಬೆಂಗಳೂರಿನಲ್ಲಿ ಕೂಡಿಸಬಾರದು. ಇದು ನನ್ನ ಭಾವನೆ. ಆದರೆ ಅವನು ನನ್ನ ಮಗನೆಂದು ಶಿಕ್ಷೆ ಕೊಡಬೇಕೆಂದು ಅಲ್ಲ. Some basic code of conduct is required. ರೇವಣ್ಣನವರು ಜಿಲ್ಲಾ ಪರಿಷತ್ತಿನಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದಾರರೆ. ಒಳ್ಳೆಯ ವ್ಯಕ್ತಿತ್ವ ಇದೆ.......

ಶ್ರೀ ಕೆ. ಎನ್. ನಾಗೇಗೌಡ : ಪಾಯಿಂಟ್ ಆಫ್ ಆರ್ಡರ್ Mr. Revanna is Member of this House. He can move a privilege Motion against Dr. Alva. Hee is not an outsider.

(Interruptions)

ಡಾ. ಜೀವರಾಜ ಆಳ್ವ ನಮ್ಮ ಸಮಕಾಲೀನರು.

ಶ್ರೀ ಸಿ. ಎಸ್. ಪುಟ್ಟೇಗೌಡ : ಈಗ ರೇವಣ್ಣನವರು ದೇವೆಗೌಡರ ಮಗನಾಗಿಲ್ಲ. ಹೊಳೇ ನರಸಿಪೂರದ ಶಾಸಕರು ಅವರು. ಮಕ್ಕಳು ಮಾಡುವ ಅನ್ಯಾಯಕ್ಕಿಂತ ದತ್ತು ಮಕ್ಕಳನ್ನು ಇಟ್ಟುಕೊಂಡು ಎಷ್ಟೋ ಸರ್ಕಾರಗಳು ಹಾಳಾಗಿ ಹೋಗಿವೆ. ಯಾವ ಸರ್ಕಾರವೂ ಮಕ್ಕಳಿಂದ ಹಾಳಾಗಿ ಹೋಗಿಲ್ಲ. ನೀವು ಹಿಂದಿನ ಇತಿಹಾಸವನ್ನು ತೆಗೆದುನೋಡಿ. ದತ್ತು ಮಕ್ಕಳು ಸೇರಿದಾಗ ಬಹಳ ಸರ್ಕಾರಗಳು ಹಾಳಾಗಿ ಹೋಗಿವೆ. ಮಕ್ಕಳು ಅತ್ಯಂತ ಭಯದಿಂದ ಇರುತ್ತಾರೆ. ಈಗ ಅವರು ಹೊಳೇ ನರಸೀಪುರದ ಶಾಸಕರು.

ಅಧ್ಯಕ್ಷರು : ರೇವಣ್ಣನವರ ಬಗ್ಗೆ ಅವರು ಬಹಳ ಒಳ್ಳೆಯ ಮಾತನ್ನೇ ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಇದು ಒಂದು ಪ್ರಿನ್ಸಿಪಲ್ ವಿಚಾರ. ಮಾನ್ಯ ರೇವಣ್ಣನವರು ಮುಖ್ಯ ಮಂತ್ರಿಗಳು ಮಕ್ಕಳಾದರೆ, ಈ ಸದನದ ಸದಸ್ಯರಾಗದಿದ್ದರೆ ಅವರ ಮೇಲೆ ಯಾವುದೇ ರೀತಿಯ ಛಾರ್ಜಸ್ ಮಾಡತಕ್ಕದ್ದು, ಬಿಡತಕ್ಕದ್ದು ಎಲ್ಲಾ ಸದಸ್ಯರು ಹಕ್ಕು. ಈ ಸದನದ ಸದಸ್ಯರ, ಮೇಲೆ ಮಾತನಾಡಬೇಕಾದರೆ ತಮಗೆ ನೋಟೀಸ್ ಕೊಡಲಿ. ರೇವಣ್ಣನವರ ಮೇಲೆ ಮಾತನಾಡಬೇಕಾದರೆ ನಿಯಮಾವಳಿ ಪ್ರಕಾರ, ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟು ಅಡ್ವೈಸ್ ಮಾಡಬೇಕು. ಇಲ್ಲ, ನಾನು ಹಾಗೆಯೇ ಅಡ್ವೈಸ್ ಮಾಡುತ್ತೇನೆ ಎಂದು ಹೇಳುವುದಕ್ಕೆ ಬರುವುದಿಲ್ಲ ಸಾರ್. He is a Member of this House. You have to protect the Rules. He cannot even mention his name. He cannot caution the Member. He is a Member of this House.

MR. SPEAKER : No charges are levelled against the Hon'ble Member Sri Revanna by Dr. Alva. He is only paying compliments to Mr. Revanna. Why do you object to it?

SRI K.N. NAGEGOWDA : The record is not like that.

MR. SPEAKER : I shall go into the records.

SRI K.N. NAGEGOWDA : Kindly see the records and give a rulling. It is the question of principle. ಇವತ್ತು ರೇವಣ್ಣನವರಿಗೆ ಇರಬಹುದು, ನಾಳೆ ನಮಗಿರಬಹುದು, ಪುಟ್ಟಣ್ಣನವರಿಗಿರಬಹುದು. ಈ ಮೆಂಬರ್ಸ್‌ ಪ್ರಿವಿಲೈಜನ್ನು, ರೈಟ್ಸನ್ನು ಪ್ರೊಟೆಕ್ಟ್‌ ಮಾಡತಕ್ಕದ್ದು ತಮಗೆ ಬಿಟ್ಟಿದ್ದುದು. ನಾವು ನಿಯಮಾವಳಿ ಪ್ರಕಾರ ಯಾವುದೇ ಸದಸ್ಯರ ಮೇಲೆ ಮಾತನಾಡಬೇಕಾದರೆ ತಮಗೆ ನೋಟೀಸ್‌ ಕೊಟ್ಟು ಮಾತನಾಡಬೇಕು. ಕ್ಯಾಷುಯಲ್ಲಾಗಿ he cannot discuss.

MR. SPEAKER : I shall look into the records. If there is anything objectionable. I shall definitely justice to Hon'ble Member Sri Revanna.

SR. JEEVARAJ ALVA : If there is an iota of it .... ಒಂದು ಶಬ್ದ ಅಬ್ಜೆಕ್ಷನ್‌ ಬಲ್‌ ಇದ್ದರೆ ದಯವಿಟ್ಟು ತೆಗೆದುಹಾಕಿ. ಕ್ಷಮೆ ಕೇಳುತ್ತೇನೆ ನಾನು. I am not getting into the arguments.

MR. SPEAKER : My attention is only towards the Clock. I am worried about the time. You have to coËoperate with me.

ಡಾ. ಜೀವರಾಜ್‌ ಆಳ್ವ : ನಾನು ಇಷ್ಟೆ ಹೇಳಿದೆ. ನಮ್ಮ ಜೊತೆಗಾರ ವ್ಯಕ್ತಿತ್ವ ಇನ್ನೂ ಬೆಳೆಯಲಿ. ನಾವೂ ಜೊತೆಗೆ ಬೆಳೆಯೋಣ. ಸರಿಪಡಿಸಿಕೊಳ್ಳೋಣ. ಕೆಲವು ಸಾರಿ Knowinglyorunknowingly ತಪ್ಪುಗಳಾಗುತ್ತವೆ. ಅದನ್ನು ಸರಿಪಡಿಸಿಕೊಳ್ಳೋಣ ಎಂದು ಅಷ್ಟೇ ಸಲಹೆ ಕೊಟ್ಟೆ. ಅಷ್ಟೇ ಹೊರತು ಯಾವ ವ್ಯಕ್ತಿತ್ವದ ದೂಷಣೆ I am not levelling any charges against him . ಇವತ್ತು ಒಂದು ವ್ಯಕ್ತಿತ್ವವನ್ನು, ಒಂದು ಸ್ಥಾನದ ಮುಖ್ಯ ಮಂತ್ರಿ ಆದಾಗ ಅದಕ್ಕೆ ನಾವು as Opposition people, we have to contribute . We have to help him out. ಅದರಿಂದ ಇದನ್ನು ಹೇಳುತ್ತೇನೆಯೇ ಹೊರತು ಬೇರೆ ಮಾತನ್ನು ಹೇಳುತ್ತಿಲ್ಲ. ಸ್ವಾಮಿ, ಒಂದೆರಡು ವಿಚಾರಗಳ ಬಗ್ಗೆ ಮಾತ್ರ ಹೇಳಬೇಕಾಗಿದೆ. ಏಕೆಂದರೆ Yesterday there was a strong discussion regarding the Sports Complex.

ಸ್ಪೋರ್ಟ್‌ ಕಾಂಪ್ಲೆಕ್ಸ್‌ ಬಗ್ಗೆ ಚರ್ಚೆಯಾಗುತ್ತಾ ನನಗೆ ಏನು ಹೆದರಿಕೆ ಇದೆ ಎಂದರೆ ಈ ತೊಂದರೆಗಳಿಂದ ಏನಾದರೂ ನ್ಯಾಷನಲ್‌ ಗೇಮ್ಸ್ಗೆ ತೊಂದರೆಯಾಗಬಹುದೇ ಎಂದು. ಅಲ್ಲಿ ಇನ್‌ ಫ್ರಾಸ್ಟ್ರಕ್ಚರ್‌ ಕಮಿಟಿ ಎಂದು ಇದೆ. ನೀವು ಬೇಕಾದರೆ You just solve this project building 4000 quarters, you can make alternative arrangements.

4000ದಲ್ಲಿ 600 ಜನರಿಗೆ ಪಿ.ಡಬ್ಲ್ಯು.ಡಿ. ಗೆ ಕೊಡಬೇಕೆಂದು ಇದೆ. ಇದರಲ್ಲಿ the whole thing looks like a hoax, apart from the contract and other things that is not the priority.

ವಿಶ್ವ ಕನ್ನಡ ಸಮ್ಮೇಳನದಲ್ಲಿ ಕೂಡ ನಾವು 60 ಮನೆಗಳನ್ನು ಮಾಡಿದೆವು. ಅದೇನಾಯಿತು? ಏಕೆಂದರೆ somehow we lose our priority.

ಆ ಸ್ಟೇಡಿಯಂ ಮಾಡಬೇಕೇ ಹೊರತು ಬರುವ ಜನರಿಗೆ 4 ಸಾವಿರ ಮನೆ ಕಟ್ಟಬೇಕು ಎನ್ನುವ ವ್ಯವಸ್ಥೆ ಮಾಡುವುದು ಬೇಡ. ಅದನ್ನು ಪೂರ್ಣ ಸರಿಪಡಸಿಕೊಳ್ಳೋಣ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನನಗೆ ತಾವು ಸಮಯ ಕೊಟ್ಟಿದ್ದೀರಿ. ನನಗೆ ಒಂದು ಆಸೆ ಇತ್ತು. ಸಭಾಧ್ಯಕ್ಷರೇ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಒಂದು ದಿವಸ ಕಂಪ್ಲೀಟ್‌ ಹೊಸಬರಿಗೇ ಕೊಡಿ. ಏನಾಗುತ್ತದೆಂದರೆ ನಾಯಕರು,

ಉಪ ನಾಯಕರು, ಕಾಂಗ್ರೆಸ್ ನಾಯಕರು, ಆಮೇಲೆ ಅವರು, ಆಮೇಲೆ ಆರ್.ಪಿ.ಐ., ಕನ್ನಡ ಚಳವಳಿ ಎಂದು ಅರ್ಧ ಮುಕ್ಕಾಲು ಗಂಟೆಯಾಗಿ ಅವಕಾಶವೇ ಸಿಗುವುದಿಲ್ಲ. 5 ಸಾರಿ ಶಾಸಕನಾಗಿ ಕೂಡ ನಾನು ತಮ್ಮ ಕಣ್ಣು ಈ ಕಡೆ ಬರುವುದಕ್ಕೆ ನಾಲ್ಕು ದಿವಸ ಕಾಯುತ್ತೇನೆ ಎಂದು. ನಾವು ಹೆಚ್ಚು ಕಡಿಮೆ ಹೇಳುವವರು. ಇಷ್ಟು ಹೊತ್ತು ತಾವು ದಯಪಾಲಿಸಿದ್ದೀರಿ. ನನ್ನ ಭಾವನೆ ಇಷ್ಟೆ. ಎಲ್ಲರಿಗೂ ಕೊಡಿ. ಒಂದು ದಿವಸ Exclusively it can be for new MLAs who have come. Let them Learn. ಆ ದಿವಸ ನಾವು ಯಾರೂ ಮಾತನಾಡುವುದು ಬೇಡ. ಎಲ್ಲರೂ ಕುಳಿತುಕೊಳ್ಳೋಣ. ಈ ತರಹ ಮಾಡಬೇಕು ಎಂದು ಹೇಳಿ ಮತ್ತೊಮ್ಮೆ ಈ ಹತ್ತು ನಿಮಿಷಗಳ ಕಾಲ .....

ಅಧ್ಯಕ್ಷರು : ತಮಗೆ ಈ ಸ್ಥಿತಿ ಉಂಟು ಮಾಡುವ ಶಕ್ತಿ ನನಗಿಲ್ಲ, ತಾವೇ ಕಾರಣರು ಅದಕ್ಕೆ.

ಡಾ. ಜೀವರಾಜ್ ಆಳ್ವ : ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಟಿ. ರಾಮಸ್ವಾಮಿ (ಅರಕೂಲ ಗೂಡು) : ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಈ ಕಡೆ ಕುಳಿತು ನಾನು ವಿರೋಧ ಮಾಡತಕ್ಕಂಥಾದ್ದು ಅನಿವಾರ್ಯ. ಆದರೆ ಮತ್ತೊಂದು ಉದ್ದೇಶ. ಕರ್ನಾಟಕ ರಾಜ್ಯದ ಜನ ಯಾವ ಆಸೆ ಆಶೋತ್ತರಗಳನ್ನು ಇಟ್ಟುಕೊಂಡು ಇವರನ್ನು ಚುನಾಯಿಸಿದ್ದಾರೋ, ಆ ದಿಕ್ಕಿನಲ್ಲಿ ರಾಜ್ಯಪಾಲರ ಭಾಷಣ ಇಲ್ಲ, ರಾಜ್ಯಪಾಲರ ಭಾಷಣ ಬಹಳ ನೀರಸ ಭಾಷಣವಾಗಿದೆ ಎನ್ನತಕ್ಕ ದಿಕ್ಕಿನಲ್ಲಿ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ ನಾನು ಮಾತನಾಡಲಿಕ್ಕೆ ಇಚ್ಛಿಸಿದ್ದೇನೆ. ಇವತ್ತು ಮಾನ್ಯ ಅರ್ಥ ಮಂತ್ರಿಗಳು ಮಾತನಾಡುತ್ತ ಹೇಳಿದರು, ಕಾಂಗ್ರೆಸ್ ಆಡಳಿತದ ಬಗ್ಗೆ ಬೇಸತ್ತು ಜನ ನಮ್ಮ ಪಕ್ಷಕ್ಕೆ ಮಾತನ್ನು ಕೊಟ್ಟಿದ್ದಾರೆ ಎಂದು. ಅದು ನಿಜ, ಇವತ್ತು ಜನತಾ ದಳ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರೆ ಅದು ಅವರ ಪರವಾಗಿ ಕೊಟ್ಟ ಮತ ಅಲ್ಲ, ನಮ್ಮ ಪಕ್ಷದ ಆಡಳಿತದ ವಿರುದ್ಧರಾಗಿ ಕೊಟ್ಟ ಮತ. ನಮ್ಮ ಪಕ್ಷ ಕೆಲವು ತಪ್ಪುಗಳನ್ನು ಮಾಡಿರಬಹುದು. ಅದಕ್ಕಾಗಿ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಈ ಶಿಕ್ಷೆಯಾಗಿದೆ. ನಾನು ವೈಯಕ್ತಿಕವಾಗಿ ಪ್ರಾಮಾಣಿಕವಾಗಿ ನನ್ನ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆ. ಅದಕ್ಕಾಗಿ ಮೊಟ್ಟ ಮೊದಲನೆಯದಾಗಿ ತಮ್ಮ ಮುಖಾಂತರ ಈ ಸದನದ ಮೂಲಕ ನಾನು ಈ ರಾಜ್ಯದ ಜನರ ಕ್ಷಮೆಯನ್ನೂ ಕೂಡ ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ. ಕಾಂಗ್ರೆಸ್ ಪಕ್ಷದವರು ಜನರ ನಿರೀಕ್ಷೆಗೆ ತಕ್ಕಂತೆ ನಡೆಯಲಿಲ್ಲ ಎಂದು ಹೇಳಿ ನಮ್ಮ ಪಕ್ಷವನ್ನು ಬದಲಾವಣೆ ಮಾಡಿ ಜನತಾ ದಳ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ನಾನು ಅಂದು ಕೊಂಡಿರಲಿಲ್ಲ, ಇಷ್ಟು ಬೇಗ ಈ ಸರ್ಕಾರ ನುಡಿದಂತೆ ನಡೆಯುವುದಿಲ್ಲ ಎಂದು ಹೇಳಿ. ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಕಾಂಗ್ರೆಸ್ ಪಕ್ಷದಲ್ಲಿ ಚಾಕು ಚೂರಿ ಸಂಸ್ಕೃತಿ ಇದೆ, ನಾವು ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದವರು, ಈಗಾಗಲೇ ಅದರ ಬಗ್ಗೆ ಬಹಳ ಜನ ಮಾತನಾಡಿದ್ದಾರೆ. ಪ್ರಮಾಣ ವಚನ ಸ್ವೀಕಾರ ಮಾಡಿದ ದಿನ ಏನಾಯಿತು ಎಂದು ಹೇಳಿ. ಅದನ್ನೇ ಹೆಚ್ಚು ಲಂಭಿಸಿ ಹೇಳತಕ್ಕ ಅವಶ್ಯಕತೆ ಇಲ್ಲ ಎಂದು ನಾನು ಗಮನಿಸಿದ್ದೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಬಹಳ ದೊಡ್ಡತನ ಪ್ರದರ್ಶನ ಮಾಡಿ ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ಮತ್ತು ಬೊಮ್ಮಾಯಿಯವರಲ್ಲಿ ಕ್ಷಮೆಯನ್ನು ಯಾಚನೆ ಮಾಡಿದ್ದಾರೆ. ಅದು ನಿಜಕ್ಕೂ ಅವರ ದೊಡ್ಡತನವನ್ನು ಎತ್ತಿ ತೋರಿಸುತ್ತದೆ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಜನ ತಂತ್ರದ ವ್ಯವಸ್ಥೆಯಲ್ಲಿ ಅತ್ಯಂತ ಎತ್ತರವಾದ ದೇಗುಲ ಈ ಮನೆ. ಈ ವಿಧಾನ ಸೌಧ. ಇಂತಹ ವಿಧಾನ

ಸೌಧವನ್ನು ಛಿದ್ರ ಮಾಡತಕ್ಕ ಕೆಲಸವನ್ನು ಆ ಪಕ್ಷದ ಕಾರ್ಯಕರ್ತರು ಮಾಡಿದರು ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ.

ಆ ದಿಕ್ಕಿನಲ್ಲಿ ಹಳ್ಳಿಗಳಲ್ಲಿ ದ್ವೇಷಾಸೂಯೆಗಳು ಹೋಗಬೇಕು, ಘರ್ಷಣೆಗಳು ತಪ್ಪಬೇಕು, ಶೋಷಣೆ ಹೋಗಬೇಕು ಬಡತನವನ್ನು ನಿವಾರಣೆ ಮಾಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೆ ದಯಮಾಡಿ ಸಾರಾಯಿಯ ನಿಷೇಧವನ್ನು ಜಾರಿಗೆ ತರತಕ್ಕ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿಯೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಹೆಣ್ಣು ಮಕ್ಕಳು ಪಾನ ನಿಷೇಧದ ಬಗ್ಗೆ ಹೋರಾಟ ಮಾಡತಕ್ಕ ಸನ್ನಿವೇಶ ಬರುತ್ತದೆ ಎಂದು ಈ ಸಮಯದಲ್ಲಿ ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತೊಂದು ಬಹು ಮುಖ್ಯರಾದ ವಿಷಯ ಪ್ರಾಮಾಣಿಕ ಸರ್ಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ನಾನೂ ಕೂಡಾ ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ನಾನು ಪ್ರಥಮವಾಗಿ ಶಾಸಕನಾಗಿ ಆಯ್ಕೆಯಾಗಿ ಈ ಮನೆಗೆ ಬಂದಾಗ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದರು. ನಾನು ಅವರಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡಿಕೊಂಡಿದ್ದು ಎಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ ಕರ್ನಾಟಕ ರಾಜ್ಯದಲ್ಲಿ ಒಂದು ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರ ನಿರ್ಮೂಲನವಾಯಿತು ಎನ್ನುವುದು ಬೇಡ, ಕಡಿಮೆಯಾಯಿತು ಎನ್ನುವ ಭಾವನೆಯನ್ನು ಜನ ಸಾಮಾನ್ಯರಲ್ಲಿ ಮೂಡಿಸಿದರೆ ಸಾಕು. ಅದು ಒಂದೇ ಪ್ರಶಂಸೆಯಿಂದ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆನ್ನುವ ಮಾತನ್ನು ಹೇಳಿದ್ದೇನೆ. ಈ ಸರ್ಕಾರದಲ್ಲಿ ಕೂಡ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವೇನು ಪ್ರಾಮಾಣಿಕ ಸರ್ಕಾರವನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ ಈ ನಿಮ್ಮ ಜನತಾ ದಳದ ಸರ್ಕಾರ ಇರುವ ಅವಧಿಯಲ್ಲಿ ಭ್ರಷ್ಟಾಚಾರ ಕಡಿಮೆಯಾಯಿತು ಎನ್ನುವ ದಿಕ್ಕಿನಲ್ಲಿ ತಾವು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ಹೇಳುತ್ತೇನೆ. ಅನೇಕ ಸದಸ್ಯರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಹೇಳಿದರು, 1983-89ರವರೆಗೆ ನಾವು ಒಳ್ಳೆಯ ಸರ್ಕಾರವನ್ನು ಕೊಟ್ಟಿದ್ದೇವೆ. ಅದಕ್ಕೆ ಜನ ಮತ್ತೆ ಆರಿಸಿ ಕಳುಹಿಸಿದ್ದಾರೆಂದು. ತಾವು ಹಿಂದೆ ಅಧಿಕಾರದಲ್ಲಿದ್ದಾಗ 1983-89ರವರೆಗೆ ಒಳ್ಳೆಯ ಸರ್ಕಾರವನ್ನು ಕೊಡಲಿಲ್ಲ, ಒಳ್ಳೆಯ ಸರ್ಕಾರವನ್ನು ಕೊಟ್ಟಿದ್ದರೆ 1989ರಲ್ಲಿ ನಿಮಗೆ ಆ ಗತಿ ಬರುತ್ತಿರಲಿಲ್ಲ. ಬಹಳ ಒಳ್ಳೆಯ ಸರ್ಕಾರವನ್ನು ಕೊಟ್ಟಿದ್ದೀರಿಯೆಂದು ಜನ ನಿಮ್ಮನ್ನು ಈಗ ಆಯ್ಕೆ ಮಾಡಲಿಲ್ಲ.

ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ, ನಾವು ಸರಿಯಾಗಿ ಜನರ ನಿರೀಕ್ಷೆಗೆ ತಕ್ಕಂತೆ ಕಾಂಗ್ರೆಸ್ ಪಕ್ಷ ಆಡಳಿತವನ್ನು ಕೊಡಲಿಲ್ಲ ಅದಕ್ಕೆ ವಿರುದ್ಧವಾಗಿ ನಿಮಗೆ ಜನರು ಮತವನ್ನು ಕೊಟ್ಟಿದ್ದಾರೆಂದು ಹೇಳಿ. ತಾವು ಭ್ರಷ್ಟಾಚಾರವನ್ನು ಕುಗ್ಗಿಸಿದರೆ ಮಾತ್ರ ಈ ರಾಜ್ಯದಲ್ಲಿ ದಕ್ಷತೆ ಹೆಚ್ಚುತ್ತದೆ. ಭ್ರಷ್ಟಾಚಾರವನ್ನು ನಿಲ್ಲಿಸಿದರೆ ರಾಜ್ಯದಲ್ಲಿ ಅನ್ಯಾಯ ನಿಲ್ಲುತ್ತದೆ. ಆ ದಿಕ್ಕಿನಲ್ಲಿ ಭ್ರಷ್ಟಾಚಾರವನ್ನು ಕನಿಷ್ಠ ಕಡಿಮೆ ಮಾಡಲಿಕ್ಕೆ ದಿಕ್ಕಿನಲ್ಲಿ, ನಿರ್ಮೂಲನ ಮಾಡಲಿಕ್ಕೆ ಶಕ್ತಿ ಇಲ್ಲದಿದ್ದರೆ ನಿಮಗೆ ಪೊಲಿಟಿಕಲ್ ವಿಲ್ ಇಲ್ಲದಿದ್ದರೆ ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮಗೆ ತಿಳಿಸುತ್ತೇನೆ. ಇವತ್ತು ರಾಜ್ಯದ ಸಂಪನ್ಮೂಲವನ್ನು ನಾವು ಹೆಚ್ಚಿಸಿಕೊಳ್ಳುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿದ್ದೀರಿ. ಹೇಗೆ ಹೆಚ್ಚಿಸಿಕೊಳ್ಳುತ್ತೀರಿ ಎನ್ನತಕ್ಕ ವಿಚಾರವನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಲಿಲ್ಲ. ನಮ್ಮ ರಾಜ್ಯದ ಹಣಕಾಸು ಮಂತ್ರಿಯವರು, ಹಣಕಾಸು ಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ ಒಂದೆರಡು ದಿವಸಗಳಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಶ್ವೇತಪತ್ರವನ್ನು ಹೊರಡಿಸುತ್ತೇನೆಂದು ಹೇಳಿದರು. ಈ ಸರ್ಕಾರ ಅಧಿಕಾರಕ್ಕೆ ಬಂದು 15ದಿವಸಗಳಾಯಿತು. ಇವತ್ತಿನವರೆಗೂ ಶ್ವೇತಪತ್ರವನ್ನು ಹೊರಡಿಸಲಿಲ್ಲ. ಅದಕ್ಕೆ ನಾನು ಮೊದಲು ರಾಜ್ಯಪಾಲರ

ಭಾಷಣವನ್ನು ವಿರೋಧ ಮಾಡುತ್ತೇನೆಂದು ಹೇಳಿದ್ದುದು. ನೀವು ನುಡಿದಂತೆ ನಡೆಯುವ ಹಾಗೆ ಕಾಣುವುದಿಲ್ಲ. ಈ ರಾಜ್ಯದ ಸಂಪನ್ಮೂಲವನ್ನು ತಾವು ಹೇಗೆ ಒದಗಿಸಿಕೊಳ್ಳುತ್ತೀರಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಹೇಗೆ ಮಾಡುತ್ತೀರಿ ಎನ್ನುವ ಮಾತನ್ನು ತಾವು ಮುಂದಿನ ದಿವಸಗಳಲ್ಲಿ ಹೇಳಬೇಕು. ಅಬಕಾರಿ ಇಲಾಖೆಯಲ್ಲಿ ಮಾರಾಟ ತೆರಿಗೆಯಿಂದ ಬಹಳ ಹಣ ಸೋರಿ ಹೋಗುತ್ತದೆಂದು ಆ ಕಡೆ ಇರತಕ್ಕವರು ಈ ಕಡೆ ಕುಳಿತುಕೊಂಡಾಗ ಬಹಳ ವಿವರವಾಗಿ ಚರ್ಚೆ ಮಾಡಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳಾದ ಬೈರೇಗೌಡರು ಕನಿಷ್ಟ 1 ಕೋಟಿ ರೂಪಾಯಿ ಅಬಕಾರಿಯಲ್ಲಿ ಸೆಕೆಂಡ್ಸ್‌ನಲ್ಲಿ ಸೋರಿ ಹೋಗುತ್ತಿದೆ ಹಾಳಾಗುತ್ತಿದೆ ಅದರ ಬಗ್ಗೆ ನಾನು ಸಲಹೆ ಕೊಡುತ್ತೇನೆ. 1 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಆದಾಯವನ್ನು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ.

ಈಗ ಅವರು ಸರ್ಕಾರದ ಪಾಲುಗಾರರು ಆಗಿದ್ದಾರೆ. ಸೋರಿಕೆ ಏನು ಆಗುತ್ತಿದೆ ಅದನ್ನು ಅವರೇ ಹೇಳಿದ ಮಾತಿನಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅಬಕಾರಿಯಲ್ಲಿ ಏನು ಸೋರಿಕೆಯಾಗುತ್ತಿದೆ ಅದನ್ನು ತಡೆಗಟ್ಟತಕ್ಕ ಕೆಲಸವನ್ನು ಮಾಡಬೇಕು. ಅದರ ಮೂಲಕ ಸಂಪನ್ಮೂಲವನ್ನು ಹೆಚ್ಚು ಮಾಡಬಹುದು. ಮಾರಾಟ ತೆರಿಗೆ 2800 ರಿಂದ 3000 ಕೋಟಿಗಳು ಇರಬಹುದು. ನನ್ನ ಅಭಿಪ್ರಾಯದಲ್ಲಿ ಸುಮಾರು 3000 ಕೋಟಿ ಗಳಾದರೂ ಲೆಕ್ಕಾಚಾರವನ್ನು ಹಾಕಿಕೊಂಡು ಹೆಚ್ಚು ಆದಾಯವನ್ನು ಗಳಿಸುವುದಕ್ಕೆ ಸರಿಯಾಗಿ ದಕ್ಷತೆಯಿಂದ ನಿರ್ವಹಣೆ ಮಾಡಿದರೆ ಮಾರಾಟ ತೆರಿಗೆಯಿಂದ ಹೆಚ್ಚು ಸಂಪನ್ಮೂಲವನ್ನು ಕ್ರೋಢೀಕರಣ ಮಾಡಬಹುದು. ನಾನು ನೋಡಿದ್ದೇನೆ, ನಮ್ಮ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ 100 ಅಂಗಡಿಗಳು ಇದ್ದರೆ 10 ಅಂಗಡಿಗಳವರು ಮಾತ್ರ ರಿಜಿಸ್ಟ್ರೇಷನ್ ಮಾಡಿಸಿರುತ್ತಾರೆ. ಉಳಿದ 90ಜನ ರಿಜಿಸ್ಟ್ರೇಷನ್ ಮಾಡಿಸಿರುವುದಿಲ್ಲ. ವರ್ಷಕ್ಕೆ ಸಾವಿರ, ಐನೂರು ರೂಪಾಯಿ ಲಂಚ ಕೊಡುತ್ತಾರೆ. 90 ಜನ ರಿಜಿಸ್ಟ್ರೇಷನ್ ಮಾಡಿಸುವುದೇ ಇಲ್ಲ, 10 ಜನ ಮಾತ್ರ ಮಾಡಿಸಿರುತ್ತಾರೆ. ವರ್ಷಕ್ಕೆ ಮಾಮೂಲಿ ಐನೂರು, ಸಾವಿರ ರೂಪಾಯಿ ತೆಗೆದುಕೊಂಡು ಹೋಗುತ್ತಾರೆ. ಅವರು 25 ಲಕ್ಷ ವಹಿವಾಟು ಮಾಡಿದರೆ 5 ಲಕ್ಷಕ್ಕೆ ಮಾತ್ರ ತೆರಿಗೆಯನ್ನು ಕೊಡುತ್ತಾರೆ. ಬಾಕಿಯದನ್ನು ತೋರಿಸುವುದಿಲ್ಲ, ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಇವತ್ತು ಏನು ಮಾರಾಟ ತೆರಿಗೆಯಿಂದ ಸಂಗ್ರಹ ಮಾಡುತ್ತಿದ್ದೇವೆ ಅದನ್ನು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಣೆಯಿಂದ ಮಾಡಿದರೆ 2800 ಅಥವಾ 3000 ಕೋಟಿ ಏನು ನಿರೀಕ್ಷೆ ಮಾಡುತ್ತೇವೆ ಅದಕ್ಕೂ ಮೀರಿ ಅಂದರೆ 6000 ಕೋಟಿ ರೂಪಾಯಿಗಳನ್ನು ಇದರಿಂದಲೇ ವಸೂಲಿ ಮಾಡಬಹುದು. ಸಾರಾಯಿ ಮಾರಾಟದಿಂದ ಏನು ಹಣವನ್ನು ತೆಗೆದುಕೊಂಡು ರಾಜ್ಯದ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾರೆ, ಅದನ್ನು ನೂರಕ್ಕೆ ನೂರರಷ್ಟು ನಿಲ್ಲಿಸಬಹುದು. ಬಡವರ ಸಂಖ್ಯೆ ಜಾಸ್ತಿಯಾಗುತ್ತಿದೆ, ಬಡವರು ಸಾರಾಯಿಯನ್ನು ಕುಡಿದು ಹಾಳಾಗುತ್ತಿದ್ದಾರೆ. ಹೆಂಡತಿಯ ತಾಳಿಯನ್ನು ಮಾರಾಟ ಮಾಡಿ ಕುಡಿಸುವಂತಹ ಪರಿಸ್ಥಿತಿಗೆ ಅವರನ್ನು ಒಯ್ದಿದ್ದೇವೆ. ನಾವೆಲ್ಲರೂ ನಾಚಿಕೆಪಟ್ಟುಕೊಳ್ಳಬೇಕಾಗುತ್ತದೆ. ಅದರ ಕಡೆಗೆ ಸರ್ಕಾರ ಗಮನಹರಿಸಬೇಕೆಂದು ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ನಮ್ಮ ಕಾಲದಲ್ಲಿ ರಾಜಕೀಯ ಹಸ್ತಕ್ಷೇಪ ಬಹಳ ಇತ್ತೆನ್ನುವ ಮಾತನ್ನು ಕೆಲವರು ಮಾತನಾಡುತ್ತಾ ಹೇಳಿದರು. ನಾನೂ ಕೂಡ ಬಹಳ ಹತ್ತಿರದಿಂದ ನೋಡಿದ್ದೇನೆ. ಹಸ್ತಕ್ಷೇಪ 1983-89ರಲ್ಲಿ ಏನಿತ್ತು ಆ ಹಸ್ತಕ್ಷೇಪ ನಮ್ಮ ಕಾಲದಲ್ಲಿ ಇರಲಿಲ್ಲ, 1989-94ರ ಅವಧಿಯಲ್ಲಿ ಇರಲಿಲ್ಲ. ಬಹುಶಃ ಈಗಾಗಲೇ ಶುರುವಾಗಿ ಹೋಗಿದೆ. ನಾವು ಮುಖ್ಯ ಮಂತ್ರಿಗಳ ಕಡೆಯವರು, ನಾವು ಮಂತ್ರಿಗಳ ಕಡೆಯವರು, ನಾವು ಕಾರ್ಯಕರ್ತರ ಕಡೆಯವರು ನಾವು ಹೇಳಿದ ಹಾಗೆಯೇ ನೀವು ಕೆಲಸ ಮಾಡಬೇಕೆಂದು

ಅಧಿಕಾರಿಗಳನ್ನು ಕರೆದು ಹೆದರಿಸಿ ಬೆದರಿಸಿ ಅವರನ್ನು ಕೆಲಸ ಮಾಡದ ರೀತಿಯಲ್ಲಿ ಈಗಾಗಲೇ ಒಂದು ವ್ಯವಸ್ಥಿತವಾದ ಪದ್ಯಂತರ ನಡೆದಿದೆ. ಅವರು ಆ ದಿಕ್ಕಿನಲ್ಲಿದ್ದಾರೆ, ನಿಷ್ಪಕ್ಷಪಾತವಾಗಿ ಅಧಿಕಾರಿಗಳು ಕೆಲಸ ಮಾಡಲಿಕ್ಕೆ ಅವರು ಮುಕ್ತವಾಗಿ ಕೆಲಸ ಮಾಡಲಿಕ್ಕೆ ಅವಕಾಶ ಮಾಡಿಕೊಡಿ. 1989ರಲ್ಲಿ ಏನು ಗತಿ ಆಯಿತು ಅದು ಬಹುಬೇಗ ಬರುತ್ತದೆ. ಆ ಆ ದಿಕ್ಕಿನಲ್ಲಿ ತಾವು ಗಮನಹರಿಸಬೇಕೆಂದು ಮತ್ತೊಮ್ಮೆ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ರೈತರು ವಿದ್ಯುತ್ತನ್ನು ಏನು ತಮ್ಮ ಪಂಪ್ ಸೆಟ್ ಗಳಿಗೆ ಬಳಸುತ್ತಿದ್ದಾರೆ, ಅದಕ್ಕೆ ನಿರ್ವಹಣ ವೆಚ್ಚವನ್ನು ವಿಧಿಸಬೇಕಾಗುತ್ತದೆಂದು ಹೇಳುತ್ತಿದ್ದಾರೆ. ರೈತರಿಗೆ ಕೊಡತಕ್ಕ ಸೌಲಭ್ಯ ಮತ್ತು ಸವಲತ್ತುಗಳನ್ನು ವಾಪಸ್ಸು ತೆಗೆದುಕೊಳ್ಳಬಾರದು. ಸನ್ಮಾನ್ಯ ದೇವೇಗೌಡರು ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ರದ್ದು ಮಾಡಿದಾಗ ರೈತರ ಪರವಾಗಿದ್ದೇವೆಂದು ಬಹಳ ಹೋರಾಟ ಮಾಡಿದ್ದರೂ ಗೋಡೆಗಳ ಮೇಲೆ ಪೋಸ್ಟರುಗಳನ್ನು ಅಂಟಿಸಿಕೊಂಡಿದ್ದಾರೆ.

ರೈತರಿಗೆ ಕೊಡತಕ್ಕ ಸೌಲಭ್ಯ ಸವಲತ್ತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬಾರದೆಂದು ಹೇಳಿದ್ದರು. ಈ ಸವಲತ್ತನ್ನು ನೀವು ಹಿಂದಕ್ಕೆ ಪಡೆದರೆ ನೀವು ರೈತರಿಗೆ ಬಹಳ ಸವಲತ್ತುಗಳನ್ನು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿಕೊಂಡು ಏನು ಅಧಿಕಾರಕ್ಕೆ ಬಂದಿದ್ದೀರಿ ಅದಕ್ಕೆ ಮಾರಕವಾಗಿ ನೀವು ಕೆಲಸ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ.

ಈ ದಿಕ್ಕಿನಲ್ಲಿ ಆಲೋಚನೆ ಮಾಡಬೇಕು. ಮತ್ತೊಂದು ವಿಚಾರ, ನಾಮಿನೇಷನ್ ವಿಚಾರದಲ್ಲಿ ಬಹಳವಾಗಿ ಮಾತನಾಡಿದ್ದೀರಿ. ಕೋಆಪರೇಟಿವ್ ಸೊಸೈಟಿಗಳಿಗೆ ನಾಮಕರಣ ಮಾಡಬಾರದೆಂದೂ ಹಾಗೆ ಮಾಡುವುದರಿಂದ ಚುನಾಯಿತ ಸದಸ್ಯರ ಹಕ್ಕನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ, ಚುನಾಯಿತ ಸದಸ್ಯರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ತಾವು ನೆನಪಿನಲ್ಲಿಟ್ಟುಕೊಳ್ಳಬೇಕು, 1983-89ರವರೆಗೆ ಅಧಿಕಾರದಲ್ಲಿ ಇದ್ದೀರಿ. ನಾಮಕರಣ ಪದ್ಧತಿಯನ್ನು ಹೆಚ್ಚು ಸೃಷ್ಟಿ ಮಾಡಿದ್ದುದು ನೀವು. ಮಂಡಲ ಪಂಚಾಯಿತಿಗಳಿಗೆ ನಾಮಕರಣ ಪದ್ಧತಿಯನ್ನು ತಂದಿರಿ. ಯಾವಾಗಲಾದರೂ ಗ್ರಾಮ ಪಂಚಾಯಿತಿಗಳಿಗೆ ನಾಮಕರಣ ಮಾಡುವ ಪದ್ಧತಿ ಜಾರಿಯಲ್ಲಿತೇ ಸೊಸೈಟಿಗಳಿಗೆ ಇದ್ದ ನಾಮಕರಣ ಪದ್ಧತಿಯನ್ನು ನಮ್ಮ ಕಾಲದಲ್ಲಿ ತೆಗೆದು ಹಾಕಿದ್ದೇವೆ. ಸಹಕಾರ ಸಂಘಗಳಲ್ಲಿ ಇದ್ದ ನಾಮಕರಣ ಪದ್ಧತಿಯನ್ನು ನಮ್ಮ ಕಾಲದಲ್ಲಿ ತೆಗೆದುಹಾಕಿದ್ದೇವೆ. ನಾಮಕರಣ ಪದ್ಧತಿಯನ್ನು ಜಾರಿಗೆ ತಂದವರು ಪ್ರಪ್ರಥಮವಾಗಿ ಕೆಟ್ಟ ಇತಿಹಾಸವನ್ನು ಸೃಷ್ಟಿ ಮಾಡಿದವರು ನೀವು. ತಮಗೆ ಈಗ ಅಧಿಕಾರ ಸಿಕ್ಕಿದೆ, ತಾವು ಇಲ್ಲಿ ಕುಳಿತು ಏನು ಮಾತನಾಡುತ್ತಾ ಇದ್ದೀರಿ ನಾಮಕರಣ ಪದ್ಧತಿಯನ್ನು ತೆಗೆದು ಹಾಕಬೇಕೆಂದು, ಅದು ರೆಕಾರ್ಡ್ನಲ್ಲಿದೆ. ಅದನ್ನು ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಿ.

ಸಹಕಾರ ಸಂಘಗಳಿಗೆ ನಾಮಕರಣ ಮಾಡುವ ಪದ್ಧತಿ ಜಾರಿಯಲ್ಲಿತ್ತು. ತಾವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಮಂಡಲ ಪಂಚಾಯಿತಿಗಳಿಗೂ ಕೂಡ ನಾಮಕರಣ ಮಾಡಿ ಸದಸ್ಯರನ್ನಾಗಿ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ.

ಶ್ರೀ ಸಿದ್ಧರಾಮಯ್ಯ (ಆರ್ಥಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಡಲ ಪಂಚಾಯಿತಿಗಳಿಗೆ ನಾಮಕರಣ ಏಕೆ ಮಾಡಿದ್ದುದು ಅಂದರೆ, ಯಾವ ಸಮಾಜದಲ್ಲಿ ಅನ್ ರೆಪ್ರಸೆಂಟೆಡ್ ಕಮ್ಯೂನಿಟೀಸ್ ಇವೆ, ಆ ಜಾತಿಯವರಿಗೆ ಮಂಡಲ ಪಂಚಾಯಿತಿಗಳಲ್ಲಿ ಪ್ರಾತಿನಿಧ್ಯ ಇರಬೇಕೆನ್ನುವ ಕಾರಣದಿಂದ ಬೇರೆ ಉದ್ದೇಶದಿಂದ ಮಾಡಿದ್ದಲ್ಲ, ಯಾವ ಜಾತಿಯ ಜನಗಳು ಚುನಾವಣೆಯಲ್ಲಿ ಗೆದ್ದು ಬರಲಿಕ್ಕೆ ಸಾಧ್ಯವಿಲ್ಲ ಅಂತಹ ವರ್ಗದ ಅಶಕ್ತ ಜನರಿಗೆ ಅವರೂ ಕೂಡ ಇದರಲ್ಲಿ ಭಾಗಿಯಾಗಬೇಕೆಂದು ಮಾಡಿರತಕ್ಕದ್ದು.

MR. SPEAKER : I am trying to set the records straight. ...

DR. JEEVRAJ ALVA : You have every right to come to the rescue of every Member. But, you should be a little partial to this side than that side.

MR. SPEAKER : I am only interested in putting the facts before this House.

ಆಗ ನಾಮಿನೇಷನ್ಸ್ ಮಾಡಿದಾಗ, ಆ ಜಿಲ್ಲೆಯ ಜನಸಂಖ್ಯೆಯ ಶೇಕಡ ಒಂದಕ್ಕಿಂತ ಕೆಳಗಿರತಕ್ಕ ಜನಾಂಗ ಯಾರಿರುತ್ತಾರೆ, ಅವರಿಗೆ ಅವಕಾಶ ಕೊಡಬೇಕೆಂದು ಆದದ್ದು. ಮಂಡಲ್ ವಿಷಯವಾಗಿ ನಾನು ಹೇಳಿದೆ. ನಾವೆಲ್ಲರೂ ಗೆದ್ದು ಬಂದಿರುವವರು. ನಾಮಕರಣದ ಬಗ್ಗೆ ನಮಗೆ ಏಕೆ ತಲೆನೋವು, ಮುಂದಕ್ಕೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದಾಗ ಇದು ಬಂತು. ಕೋ-ಆಪರೇಟಿವ್ ಆಕ್ಟಲ್ಲೂ ಕೂಡ ಮಾಡಿದ್ದುದು ಇದೇ ಕಾರಣ. ಅನೇಕ ಅನ್ ರೆಪ್ರೆಂಸೆಂಟೆಡ್ ಸೆಕ್ಷನ್ ನಲ್ಲಿ ಎಲೆಕ್ಟ್ ಆಗಿ ಬರುವುದಿಲ್ಲ, ಯಾವ ಅನ್ ರೆಪ್ರೆಸೆಂಟೆಡ್ ಸೆಕ್ಷನ್ಸ್ ಇವೆ, ಅವುಗಳಿಗೆ ನಾಮಿನೇಟ್ ಮಾಡಬೇಕೆಂಬ ದೃಷ್ಟಿಯಿಂದಲೇ ಮೊದಲಿನಿಂದ ಪ್ರಾವಿಷನ್ ಮಾಡಿದ್ದುದು. ಈ ಪ್ರಾವಿಷನ್ ನ್ನು ಕೆಲವು ಜನರು ದುರುಪಯೋಗಪಡಿಸಿಕೊಂಡರು. ಏಕೆಂದರೆ ಯಾವ ವ್ಯಕ್ತಿ, ಅವರದೇ ಆದ ಕಾನೂನು, ಅದು ಎಷ್ಟೇ ಒಳ್ಳೆಯದಿದ್ದರೂ ಕೂಡ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗತಕ್ಕಂಥ ಮನುಷ್ಯ ಸರಿ ಇಲ್ಲದೇ ಹೋದರೆ, ಅದು ಕೆಟ್ಟದಾಗುತ್ತದೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಸಭಾಧ್ಯಕ್ಷರೇ, ನಾಮಕರಣ ಪದ್ಧತಿಯಲ್ಲಿ ಹೋದ ವರ್ಷ ಕಾಂಗ್ರೆಸ್ ಸರ್ಕಾರ ಇದ್ದಾಗ, ಜನರಿಂದ ಚುನಾಯಿತರಾದವರು ನಾವು 9 ಜನ, ಕಾಂಗ್ರೆಸ್ ನವರು 3 ಜನರಿದ್ದರು. ಮತ್ತೆ 5 ಜನರನ್ನು ನಾಮಕರಣ ಮಾಡಿದರು. ಒಟ್ಟು 8 ಜನರು ಮತ್ತು ಸರ್ಕಾರಿ ಅಧಿಕಾರಿಗಳು ಮೂರು ಜನರಿಗೆ ಓಟು ಕೊಡಬಹುದಾಗಿತ್ತು. ಇದೆಲ್ಲಾ ಸೇರಿ ಒಟ್ಟು 11 ಆಯಿತು. ಈ ಕೆಲಸವನ್ನು ಜನತಾ ಸರ್ಕಾರ ಮಾಡುವುದಿಲ್ಲವೆನ್ನುವ ವಿಷಯದ ಬಗ್ಗೆ ದಯಮಾಡಿ ತೀರ್ಮಾನಕ್ಕೆ ಬರಬೇಕು. ಅವರು ಮಾಡಿರುವ ತಪ್ಪನ್ನು, ನೀವು ಮಾಡುವುದಿಲ್ಲವೆಂದು ಹೇಳಿದರೆ ಪರವಾಯಿಲ್ಲ, ಅವರು ಮಾಡಿದ್ದಾರೆ. ನಾವು ಅದನ್ನೇ ಮುಂದುವರಿಸುತ್ತೇವೆ ಎಂದು ಹೇಳಿದರೆ, ಅವರಿಗೂ ನಿಮಗೂ ಏನು ವ್ಯತ್ಯಾಸ? ಕಾನೂನಿನಲ್ಲಿ ಕೇವಲ ಇಬ್ಬರಿಗೆ ಮಾತ್ರ ಇತ್ತು.

ಶ್ರೀ ಎ. ಟಿ. ರಾಮಸ್ವಾಮಿ : ಎಲ್ಲರೂ ಕೂಡ, ಏತಕ್ಕೆ ಮಾಡಿದ್ದೀರಿ ಎಂದು ಹೇಳಿದರೆ ಅದಕ್ಕೆ ಕಾರಣಗಳನ್ನು ಹೇಳುವುದ ಸಹಜ. ನಾನು ಈಗಾಗಲೇ ಹೇಳಿದೆ.

ಅಧ್ಯಕ್ಷರು : ನನ್ನ ಕಷ್ಟ ಏನೆಂದರೆ, ತಮ್ಮ ಪಕ್ಷದ ವತಿಯಿಂದ 13 ಹೆಸರನ್ನು ಕೊಟ್ಟಿದ್ದರು. ಸನ್ಮಾನ್ಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸನ್ಮಾನ್ಯ ಹಿರಿಯ ಸದಸ್ಯರಾದ ಘೋರ್ಪಡೆಯವರು ಬಹಳ ಸಮಯವನ್ನು ತೆಗೆದುಕೊಂಡಿದ್ದಾರೆ. ಇನ್ನು ಸಮಯ ಬಹಳ ಕಡಿಮೆ ಇದೆ. ಸಂಜೆ 4 ಗಂಟೆಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರವೂ ಇದೆ. ಹಾಗೆಯೇ ಪ್ರಯತ್ನ ಪಡುತ್ತೇನೆ. ಆ ಶಬ್ದ ಈ ಸದನದಲ್ಲಿ ಅಷ್ಟು ಚೆನ್ನಾಗಿ ಕಾಣುವುದಿಲ್ಲ,

ಶ್ರೀ ಎ.ಟಿ. ರಾಮಸ್ವಾಮಿ : ಏತಕ್ಕೆ ಮಾಡಿದ್ದಾರೆಂದು ಹೇಳಿದರೆ, ಅದಕ್ಕೆ ಕಾರಣಗಳನ್ನು ಹೇಳತಕ್ಕಂತಾದ್ದು ಇದ್ದೇ ಇರುತ್ತದೆ. ನಾನು ಪ್ರಾಮಾಣಿಕವಾಗಿ ಒಪ್ಪಿಕೊಂಡೆ, ನಮ್ಮ ಪಕ್ಷದ ಸರ್ಕಾರ ಅಥವಾ ಆಡಳಿತವಿದ್ದಾಗ, ಕೆಲವಾರು ತಪ್ಪುಗಳನ್ನು ಮಾಡಿದೆ, ನಾನು ಇಲ್ಲ್ ಎಂದು ಹೇಳುವುದಿಲ್ಲ, ಅದಕ್ಕೇ ಜನರು ಈ ಶಿಕ್ಷೆ ಕೊಟ್ಟಿದ್ದಾರೆ..

ಅದಕ್ಕಾಗಿಯೇ, ಈ ಸದನದ ಮುಖಾಂತರರ ಕ್ಷಮೆ ಕೋಡುತ್ತೇನೆಂದು ಹೇಳಿದೆ. ಇದರಲ್ಲಿ ಮುಚ್ಚುಮರೆ ಇಲ್ಲ. ಆದರೆ, ಇವರು ನೆಪಗಳನ್ನು ಹೇಳಿಕೊಂಡು ಮುಂದಕ್ಕೆ ಹಾಕುವುದು ಬೇಡ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಅವರೇನು ಇಲ್ಲಿ ಕುಳಿತುಕೊಂಡು ಮಾತನಾಡಿದ್ದಾರೆ, ಅದರಂತೆ ನಡೆದುಕೊಳ್ಳಿ ಎಂದು ಹೇಳಿದೆ. ಮತ್ತೊಂದು ವಿಷಯ. 23-12-94ರ ಪತ್ರಿಕೆಯಲ್ಲಿ ನೋಡಿದೆ. ಆಡಳಿತದಲ್ಲಿ ಶಾಸಕರು ಹಸ್ತಕ್ಷೇಪ ಮಾಡಿದಂತೆ ನೋಡಿಕೊಳ್ಳುವುದಾಗಿ ಹೇಳಿದ್ದಾರೆ ಎಂದು "ಹಸ್ತಕ್ಷೇಪ" ಎಂದರೆ ಯಾವ ರೀತಿಯಲ್ಲಿ ಎಂದು ನನಗೆ ಗೊತ್ತಾಗಲಿಲ್ಲ. ಶಾಸಕರನ್ನು ಆಡಳಿತದಲ್ಲಿ ಭಾಗಿಗಳಾಗಿ ಮಾಡಿಕೊಳ್ಳತಕ್ಕಂಥದ್ದು ಸರ್ಕಾರದ ಆದ್ಯ ಕರ್ತವ್ಯ.

ಚುನಾಯಿತರಾದ ಪ್ರತಿನಿಧಿಗಳು, ಗ್ರಾಮಪಂಚಾಯತಿ ಅಧ್ಯಕ್ಷರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಶಾಸಕರು ಆಡಳಿತದಲ್ಲಿ ಭಾಗಿಗಳಾಗಬಾರದು ಎಂದು ಹೇಳತಕ್ಕಂಥಾದ್ದು ನಿಜಕ್ಕೂ ಕೂಡ ಸೂಕ್ತವಲ್ಲ. ಶಾಸಕರು ಹಸ್ತಕ್ಷೇಪ ಮಾಡಬಾರದು, ಯಾವ ರೀತಿಯಲ್ಲಿ ಎಂದು ಹೇಳಿದರರೆ, ವರ್ಗಾವರ್ಗಿಯಲ್ಲಿ ಹಸ್ತಕ್ಷೇಪ ಮಾಡದ ಹಾಗೆ ಮಾಡಲಿ. ನಾವು ಕಾಗದಗಳನ್ನು ಹಿಡಿದುಕೊಂಡು ಮಂತ್ರಿಗಳ ಹತ್ತಿರ, ಹೋಗದಹಾಗೆ, ಅಧಿಕಾರಿಗಳ ಹತ್ತಿರ ಹೋಗದಹಾಗೆ ಕಟ್ಟುನಿಟ್ಟಾದ ಕಾನೂನನ್ನು ಜಾರಿಗೆ ತನ್ನಿ. ಶಾಸಕರು ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡಬಾರದು. ಆಡಳಿತದಲ್ಲಿ ಹಸ್ತಕ್ಷೇಪ ಎಂದರೆ, ಅಭಿವೃದ್ಧಿ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ನೀವು ಭಾಗಿಗಳನ್ನಾಗಿ ಮಾಡಿಕೊಳ್ಳಬೇಕು. ಶಾಸಕರರು ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದೆಂಬ, ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಂದರೆ, ಅಭಿವೃದ್ಧಿ ಕಾರ್ಯಗಳಲ್ಲಿ ನಾವವು ಹಸ್ತಕ್ಷೇಪ ಮಾಡಬೇಕಾಗುತ್ತದೆ. ತಾವು ಒಂದನ್ನು ಕಟ್ಟುನಿಟ್ಟಾಗಿ ಮಾಡಬೇಕು. ವರ್ಗಾವರ್ಗಿಯಲ್ಲಿ ನಿಮ್ಮ ಹತ್ತಿರ ಕಾಗದ ಹಿಡಿದುಕೊಂಡು ಬರದಹಾಗೆ, ಅಧಿಕಾರಿಗಳ ಹತ್ತಿರ ಕಾಗದ ಹಿಡಿದುಕೊಂಡು ಹೋಗದಹಾಗೆ, ದಯಮಾಡಿ ಮಾಡಿ.

ಇಂಥವರಿಗೆ ಕಾಂಟ್ರ್ಯಾಕ್ಟ್ ಕೆಲಸ ಕೊಡ ಎಂದು ಕೇಳುವುದಕ್ಕೆ ಹೋಗದ ಹಾಗೆ, ನೀವು ಕಟ್ಟುನಿಟ್ಟಾದ ಕಾನೂನನ್ನು ಜಾರಿ ಮಾಡಿ. ನೂರು ಸಾರಿ ಕೈಮುಗಿದು ನಮಸ್ಕಾರ ಮಾಡುತ್ತೇನೆ. ಈ ಸರ್ಕಾರ ಬಹಳ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುತ್ತೇನೆ.

ಆದರೆ, ಆಡಳಿತದಲ್ಲಿ ಶಾಸಕರನ್ನು ಭಾಗಿಗಳನ್ನಾಗಿ ಮಾಡಿಕೊಳ್ಳುವುದು ತಮ್ಮ ಕರ್ತವ್ಯ. ಆ ದಿಕ್ಕಿನಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಹೆಚ್ಚು ಅಧಿಕಾರ ಕೊಡಬೇಕೆಂದು ಹೇಳುತ್ತೀರಿ, ಇನ್ನೊಂದು ಕಡೆ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳುತ್ತೀರಿ. ಇದು ಸಿಬ್ಬಂದಿ ನೀತಿಯಾಗುತ್ತದೆ. ನೀವು ಹೇಳತಕ್ಕಂಥ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲವರೆಂದು ನಾವು ಹೇಳಬೇಕಾಗಿದೆ. ಈ 15 ದಿವಸದಲ್ಲಿ ಸರ್ಕಾರ ಏನು ನಡೆಸಿದ್ದೀರರಿ ಅದರಲ್ಲೇ ಗೊತ್ತಾಗುತ್ತದೆ, ನೀವು ನಡೆದಂತೆ ನಡೆದಲ್ಲವೆಂದು. ದಯಮಾಡಿ ತಾವು ಏನು ನುಡಿದ್ದೀರಿ, ಅದರಂತೆ ತಾವು ನಡೆದುಕೊಳ್ಳಬೇಕು. ಈ 15 ದಿವಸದಲ್ಲಿ ತಾವು ನುಡಿದಂತೆ ನಡೆದಿಲ್ಲವೆಂದು ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ಇದುವರೆಗಗೆ ಮಾತನಾಡಲು ಅವಕಾಶ ಕೊಟ್ಟ ಮಾನ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನೆಗಳನ್ನು ಸಲ್ಲಿಸತಕ್ಕಂಥ ವಿಚಾರದಲ್ಲಿ ನಾನು ಎರಡು

ಮಾತುಗಳನ್ನು ಹೇಳಲಿಕ್ಕೆ ಇಚ್ಛಿಪಡತ್ತೇನೆ. ಈ ಭಾಷಣದಲ್ಲಿ ಸರ್ಕಾರದ ಪಾಲಿಸಿಗಳು ಮೇಲೆ ನಿಜವಾದ ವಿವರಗಳನ್ನು ಸಾಕಷ್ಟು ಕೊಟ್ಟಿಲ್ಲ.

ಯುವಕರುಗಳಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ಹಾಗೂ ನಿರುದ್ಯೋಗ ನಿವಾರಣೆ ಮಾಡುವ ಬಗ್ಗೆ ಒಂದು ಮಾತನ್ನು ಇದರಲ್ಲಿ ಹೇಳದೆ ಇರುವುದರಿಂದ ಈ ಭಾಷಣವನ್ನು ವಿರೋಧಿಸಬೇಕಾಗಿದೆ. ಕೃಷ್ಣ ಮತ್ತು ಕಾವೇರಿ ಯೋಜನೆಗಳಿಂದ 2 ಸಾವಿರ ಇಸವಿಯ ಒಳಗೆ ನಮ್ಮ ಹಕ್ಕಿನ ಪೂರ್ಣ ನೀರನ್ನು ಬಳಕೆ ಮಾಡುವುದಕ್ಕೆ ಯೋಜನೆಗಳನ್ನು ಹಾಕಬೇಕಾದುದು ನಮ್ಮ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಮಾಡದೇ ಇದ್ದರೆ ನಮ್ಮ ಕರ್ನಾಟಕದ ಜನತೆಗೆ ಬಹಳ ಅನ್ಯಾಯ ಮಾಡದಂಥಾಗುತ್ತದೆಂದು ಇಲ್ಲಿ ಹೇಳಲಾಗಿದೆ. ಹೇಮಾವತಿ ನದಿ ನೀರನ್ನು ತುಮಕೂರು ಜಿಲ್ಲೆಯ ಅನೇಕ ಕಡೆಗಳಿಗೆ ನೀರು ಕೊಡತಕ್ಕಂಥ ವಿಚಾರ ಇದೆ. ನಮ್ಮ ಚಿಕ್ಕನಾಯಕನ ಹಳ್ಳಿ ಕ್ಷೇತ್ರದಲ್ಲಿ 10 ಸಾವಿರ ಎಕರೆಗಳಿಗಿಂತ ಹೆಚ್ಚು ಭೂಮಿಯಲ್ಲಿ ತೆಂಗು ಮತ್ತು ಅಡಿಕೆ ಬೆಳೆ ಇರುವುದಿಂದ ಹಾಗು ನಮ್ಮ ಕಡೆ ಇರುವ ಎಲ್ಲಾ ಕೆರೆಗಳಲ್ಲಿ ನೀರು ಬತ್ತಿಹೋಗಿವೆ; ಜೊತೆಗೆ ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರು ಸಿಗದೆ ಇರುವುದರಿಂದ ರೈತರುಗಳು ಮಾಡಿರುವರ ತೆಂಗು, ಅಡಿಕೆ ಬೆಳೆಗಳು ಒಣಗಿ ಹೋಗುವ ಸಂದರ್ಭ ಇದೆ.

ನಮ್ಮ ಚಿಕ್ಕನಾಯಕನ ಹಳ್ಳಿ ಕ್ಷೇತ್ರದ 8 ಕಿಲೋಮೀಟರ್ ದೂರದಲ್ಲಿ ಹೇಮಾವತಿ ಕೆನಾಲ್ ಹರಿಯುತ್ತಿರುವುದರಿಂದ ನಮ್ಮ ಕ್ಷೇತ್ರಕ್ಕೆ ಹೇಮಾವತಿ ನದಿ ನೀರನ್ನು ನೇರವಾಗಿ ವ್ಯವಸಾಯಕ್ಕೆ ಕೊಡದೇ ಇದ್ದರೂ ಪರವಾಗಿಲ್ಲ ಕನಿಷ್ಟ ಪಕ್ಷ ನಮ್ಮ ತೆಂಗು ಮತ್ತು ಅಡಿಕೆ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕಾಗಿಯಾದರೂ ನಮ್ಮ ಕೆರೆಗಳಿಗೆ ಹೇಮಾವತಿ ನದಿಯಿಂದ ನೀರು ಬರುವ ಹಾಗೆ ಮಾಡಬೇಕೆಂದು ಮಾನ್ಯ ಮಂತ್ರಿಗಳಾದ ದೇವೇಗೌಡರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ತುಮಕೂರು ಜಿಲ್ಲೆಯಲ್ಲಿ ಪರಮಶಿವಯ್ಯ ಎನ್ನುವವರು ಇಂಜಿನೀಯರ್ ಆಗಿದ್ದರು. ಅವರು ಈಗ ರಿಟೈರ್ಡ್ ಆಗಿದ್ದಾರೆ. ನೇತ್ರಾವತಿ ನದಿ ನೀರನ್ನು ಲಿಫ್ಟ್ ಇರಿಗೇಷನ್ ಮಾಡುವುದರ ಮೂಲಕ ಕೋಲಾರ ಜಿಲ್ಲೆಯವರೆಗೂ ನೀರನ್ನು ಹರಿಸುವುದಕ್ಕೆ ಸಾಧ್ಯವೆಂದು ಒಂದು ಪ್ಲಾನ್ ಮಾಡಿದ್ದರು.

ಅವರನ್ನು ವಿಶೇಷವಾಗಿ ಸನ್ಮಾನ್ಯ ಎಸ್.ಎಂ. ಕೃಷ್ಣಾರವರು ನೇಮಕ ಮಾಡಿಕೊಂಡು ನೀರಾವರಿ ಇಲಾಖೆಗೆ ಅನುಕೂಲವಾಗುವ ಹಾಗೆ ಮಾಡಿದ್ದರು. ಈಗಲೂ ಕೂಡಾ ಈ ಸರ್ಕಾರದವರು ಅವರನ್ನು ನೇಮಕ ಮಾಡಿಕೊಂಡು ಅವರು ಮಾಡಿರುವ ಪ್ಲಾನ್ ಪ್ರಕಾರ ಯೋಜನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರರೆ ಹಾಸನ ಜಿಲ್ಲೆಯಿಂದ ಹಿಡಿದು ಕೋಲಾರ ಜಿಲ್ಲೆಯವರೆಗೆ ನೀರನ್ನು ಕೊಡುವುದರ ಮೂಲಕ ರೈತರುಗಳಿಗೆ ಅನುಕೂಲ ಮಾಡಿಕೊಡಬೇಕು. ಹಾಗೆ ಮಾಡುವುದರಿಂದ ನಮ್ಮ ರಾಜ್ಯವು ಸಂಪದ್ಭರಿತವರಾಗುತ್ತಿದೆಂದು ಹೇಳುತ್ತೇನೆ. ಇನ್ನು ಕೋ-ಆಪರೇಟಿವ್ ಸೊಸೈಟಿಗಳಿಗೆ ನಾಮಕಾರಣ ಮಾಡುವುದನ್ನು ನಿಲ್ಲಿಸಬೇಕೆಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನನ್ನ ತಾಲ್ಲೂಕಿನ ಟಿ.ಎ.ಪಿ.ಸಿ.ಎಂ.ಎಸ್.ಗೆ ನಿನ್ನೆ ತಾನೆ 4 ಜನರನ್ನು ನಾಮಕರಣ ಮಾಡಿದ್ದಾರೆ. ಆ ಸೊಸೈಟಿಗೆ 17 ಲಕ್ಷ ರೂಪಾಯಿ ಸಾಲ ಇದೆ, ಇನ್ನೇನು ಅದು ಮುಳುಗುತ್ತದೆ. ಆ ಸೊಸೈಟಿ ಬಿಲ್ಡಿಂಗ್‌ನ್ನು ತೆಗೆದುಕೊಂಡರೂ ಇರುವ 17 ಲಕ್ಷ ರೂಪಾಯಿ ಸಾಲ ತೀರುವುದಿಲ್ಲ. ಆದುದರಿಂದ, ಚುನಾಯಿತಿ ಸದಸ್ಯರುಗಳ ಅಧಿಕಾರವವನ್ನು ಮೊಟಕು ಮಾಡುವುದು ಸರಿಯಲ್ಲವೆಂದು ಈ ಮೂಲಕ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ವೋಲ್ಟೇಜ್ ಹೆಚ್ಚು ಕಡಿಮೆಯಾಗುತ್ತಿರುವುದರಿಂದ ರೈತರುಗಳು ಹಾಕಿರುವ ಪಂಪುಸೆಟ್ಟುಗಳು ಸುಟ್ಟುಹೋಗುತ್ತಿವೆ. ಈ ಸುಟ್ಟು ಹೋದ

ಪಂಪುಸೆಟ್ಟುಗಳನ್ನು ರಿಪೇರಿ ಮಾಡಿಸುವ ಖರ್ಚನ್ನು ರೈತರುಗಳು ಭರಿಸುವುದಕ್ಕೆ ಬಹಳ ಕಷ್ಟವಾಗುತ್ತಿದೆ.

ಆದುದರಿಂದ, ಈ ಬಗ್ಗೆ ಗಮನಹರಿಸಿ ಸರಿಯಾದ ರೀತಿಯಲ್ಲಿ ವೋಲ್ಟೇಜ್ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ನಮ್ಮ ಕ್ಷೇತ್ರದಲ್ಲಿ ತೆಂಗಿನ ಬೆಳೆ ಹೆಚ್ಚಾಗಿರುವುದರಿಂದ ಕಾಯರ್ ಪ್ರಾಡಕ್ಟ್‌ನ ಒಂದು ಘಟಕವನ್ನು ಸರ್ಕಾರದ ವತಿಯಿಂದ ಅಲ್ಲಿ ಪ್ರಾರಂಭ ಮಾಡಿದರೆ ಮಹಿಳೆಯರಿಗೆ ಮತ್ತು ನಿರುದ್ಯೋಗಿ ಹುಡುಗರಿಗೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಐರನ್ ಓರ್ ಮತ್ತು ಮ್ಯಾಂಗನೀಸ್ ಹೇರಳವಾಗಿ ಸಿಗುತ್ತಿರುವುದರಿಂದ ಅಲ್ಲಿ ಒಂದು ಪಿಗ್ ಐರನ್ ಘಟಕವನ್ನು ಪ್ರಾರಂಭ ಮಾಡಿದರೆ ಆ ಭಾಗದ ಜನರಿಗೆ ಉದ್ಯೋಗ ಒದಗಿಸಿದಂತೆ ಆಗುತ್ತದೆಯೆಂದು ಈ ಮೂಲಕ ತಿಳಿಸುತ್ತಿದ್ದೇನೆ. ನಮ್ಮ ಭಾಗದಲ್ಲಿ ತೆಂಗಿನ ಮರಗಳಿಗೆ ಕಪ್ಪು ಹುಳದ ಹಾವಳಿ ಜಾಸ್ತಿಯಾಗಿ ಮರುಗಳು ಒಣಗುತ್ತಿವೆ.

ಇದನ್ನು ನಿವಾರಣೆ ಮಾಡುವುದಕ್ಕೆ ಬೇಕಾದ ಔಷಧಿಗಳು ಇಲ್ಲವೆಂದು ಅಸಿಸ್ಟೆಂಟ್ ಡೈರೆಕ್ಟರ್‌ರವರು ಹೇಳುತ್ತಿದ್ದಾರೆ ಆದ್ದರಿಂದ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಈ ಕಡೆ ಗಮನ ಹರಿಸಿ ಶೀಘ್ರವಾಗಿ ಔಷಧಿಗಳನ್ನು ಒದಗಿಸಿಕೊಡುವ ಬಗ್ಗೆ ಏರ್ಪಾಡು ಮಾಡಬೇಕು, ನಮ್ಮ ಹಳ್ಳಿನಾಯಕನ ಹಳ್ಳಿಯು ತೆಂಗಿಗೆ ಬಹಳ ಪ್ರಸಿದ್ಧವಾಗಿದ್ದು ಈಗ ಆ ಬೆಳೆಯನ್ನು ಕಳೆದುಕೊಂಡು ರೈತರುಗಳು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ, ಆದಷ್ಟು ಬೇಗ ಔಷಧಿಯನ್ನು ಒದಗಿಸಿಕೊಟ್ಟು ಆ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆಮೇಲೆ ರೈತರುಗಳು ಮಾಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಂತರ ಬಡವರಿಗೆ ಮೂರುವರೆ ರೂಪಾಯಿ ಒಂದು ಕೆ.ಜಿ. ಅಕ್ಕಿ ಕೊಡುವ ವಿಚಾರವನ್ನು ಹೇಳಿದ್ದಾರೆ, ಎಂಟು ಹತ್ತು ರೂಪಾಯಿಗಳನ್ನು ಒಂದು ಕೆ.ಜಿ. ಅಕ್ಕಿಗೆ ಕೊಡುವುದಕ್ಕೆ ಸಾಧ್ಯವಿಲ್ಲದೆ ಬಡವರು ದಿನ ನಿತ್ಯ ಜೀವನ ನಿರ್ವಹಣೆಗೆ ಬಹಳ ಕಷ್ಟಪಡುತ್ತಿದ್ದಾರೆ. ಈ ಕಾರಣದಿಂದಾಗಿಯೇ ಕಾಂಗ್ರೆಸ್ ಸರ್ಕಾರ ಸೋಲುವಂಥ ಪರಿಸ್ಥಿತಿ ಬಂತು. ಅದೇ ತರಹದ ಸೋಲನ್ನು ಅನುಭವಿಸುವುದಕ್ಕೆ ತಾವು ಹೋಗಬೇಡಿ. ದಯಮಾಡಿ ತಾವು ಘೋಷಿಸಿರುವಂತೆ ಮೂರೂವರೆ ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಅದೇ ರೀತಿ ನೀವೂ ಕೂಡ ಜಾರಿಗೆ ತರಬೇಕೆಂದು ಹೇಳುತ್ತೇನೆ.

ರೈತರುಗಳು ಮಾಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಯಾವ ರೀತಿ ಮನ್ನಾ ಮಾಡಿದ್ದೀರೋ ಅದೇ ರೀತಿ ಬಡ ನೇಕಾರರು ಮಾಡಿರುವ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನೂ ಮನ್ನಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಿ. ಬೆಲೆಗಳ ಏರಿಳಿತಗಳಿಂದಾಗಿ ಬಡ ನೇಕಾರರು ಬಹಳ ಕಷ್ಟದಲ್ಲಿ ಸಿಲುಕಿದ್ದಾರೆ. ಆದ್ದರಿಂದ ಅವರಿಗೂ ಮನ್ನಾ ಮಾಡುವ ಕೆಲಸವನ್ನು ಮಾಡಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಜರಾಯಿಯ ಬಗ್ಗೆ ಏಕರೂಪವಾದ ಕಾನೂನು ಇಲ್ಲ, ಮದ್ರಾಸ್ ಎಂಡೋಮೆಂಟೇ ಬೇರೆ, ಬೊಂಬಾಯಿ ಎಂಡೋಮೆಂಟೇ ಬೇರೆ, ಹಳೆ ಮೈಸೂರು ಭಾಗದ ಎಂಡೋಮೆಂಟೇ ಬೇರೆ ಆಗಿರುವುದರಿಂದ ಇದನ್ನು ವಕ್ಫ್ ಬೋರ್ಡ್ ಇರುವ ಮಾದಿರಯಲ್ಲೇ ನಮ್ಮದನ್ನೂ ಒಂದು ಏಕರೂಪವಾದ ಎಂಡೋಮೆಂಟ್ ರೂಲ್ ಮಾಡಿ ಒಂದು ಬೋರ್ಡ್ ಮಾಡಬೇಕೆಂದು ತಿಳಿಸುತ್ತೇನೆ. ಯಾವ ಯಾವ ದೇವಸ್ಥಾನಗಳಲ್ಲಿ ಎಷ್ಟೆಷ್ಟು ಆಭರಣಗಳಿವೆಯೆಂದು ಒಬ್ಬರಿಗೂ ಗೊತ್ತಿಲ್ಲ, ಆದ್ದರಿಂದ ದಯಮಾಡಿ ಬೋರ್ಡ್ ಮಾಡಿ ಅದ ಮುಖಾಂತರ ಎಲ್ಲಾ ದೇವಸ್ಥಾನಗಳಿಗೆ

ಸೇರಿರುವ ಆಸ್ತಿ ಪಾಸ್ತಿಗಳನ್ನು ಮತ್ತು ಒಡವೆ ವಸ್ತ್ರಗಳನ್ನು ಪರಿಶೀಲನೆ ಮಾಡುವಂಥ ರೀತಿಯಲ್ಲಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇದರ ಜೊತೆಗೆ ಎಲ್ಲಾ ಜಾತಿಯವರಲ್ಲೂ ಪೂಜಾರಿಗಳು ಆಗುವ ರೀತಿ ನೋಡಿಕೊಳ್ಳಬೇಕು. ನಾನು ಮುಜರಾಯಿ ಮಿನಿಸ್ಟರ್ ಆಗಿದ್ದಾಗ ಒಂದು ಸಣ್ಣ ಕಮಿಟಿ ಮಾಡಿ ಅದರ ಮುಖಾಂತರ 3 ತಿಂಗಳ ಒಂದು ಪೂಜೆ ಮಾಡುವ ತರಬೇತಿ ಕೊಟ್ಟು ಅಪಾಯಿಂಟ್ ಮಾಡಬೇಕೆಂಬ ನಿಯಮ ಮಾಡಿದ್ದೆ. ಆದರೆ ನಮ್ಮ ಸರ್ಕಾರದ ಒಂದು ವರ್ಷದಲ್ಲಿ ಬಿದ್ದು ಹೋಗಿದ್ದರಿಂದ ಆ ನಿಯಮ ಜಾರಿಗೆ ಬರಲಿಲ್ಲ, ಅದೇ ರೀತಿಯ ಕಾರ್ಯಕ್ರಮವನ್ನು ತಾವು ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಎಲ್ಲಾ ತಾಲ್ಲೂಕುಗಳಲ್ಲಿ ಫಸ್ಟ್‌ಗ್ರೇಡ್ ಕಾಲೇಜುಗಳು ಇದ್ದರೂ ಬರೀ ಕಲಾ ವಿಭಾಗವನ್ನು ಮಾತ್ರ ಕೊಟ್ಟಿರುವುದರಿಂದ ವಾಣಿಜ್ಯ ಮತ್ತು ಸೈನ್ಸ್ ಓದತಕ್ಕಂಥ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರುವುದರಿಂದ ಇನ್ನು ಮುಂದೆ ಫಸ್ಟ್ ಗ್ರೇಡ್ ಕಾಲೇಜು ಇರುವ ಕಡೆಗಳಿಗೆಲ್ಲಾ ವಾಣಿಜ್ಯ ಮತ್ತು ಸೈನ್ಸ್ ವಿಭಾಗಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವುದಕ್ಕಾಗಿ ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಕೈಗಾರಿಕೆಗಳನ್ನು ಮಾಡತಕ್ಕಂಥ ಯೋಜನೆಗಳಿಗೆ ಆದ್ಯತೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿ ಯುವಕರುಗಳಿಗೆ, ನಿರುದ್ಯೋಗಿಗಳಿಗೆ ಯಾವ ಸವಲತ್ತನ್ನು ಕೊಡದೇ ಇರುವ ಬಗ್ಗೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಪುರಸಭೆಗಳು ಬಹಳ ಹೀನ ಸ್ಥಿತಿಯಲ್ಲಿರುವುದನ್ನು ನಾವು ನೋಡಿದ್ದೇವೆ, ಅವುಗಳಿಗೆ ಯಾವುದೇ ಆದಾಯವಿರುವುದಿಲ್ಲ, ಸರ್ಕಾರ ಕೊಡತಕ್ಕಂಥ ಗ್ರ್ಯಾಂಟ್‌ನಿಂದಲೂ ಅವರು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ, ವಾಟರ್-ಸಪ್ಲೈ ಮತ್ತು ಎಲೆಕ್ಟ್ರಿಸಿಟಿಗಳು ಅವುಗಳಿಗೆ ಬಹಳ ಹೊರೆಯಾಗಿದೆ. ಈ ವಾಟರ್ ಸಪ್ಲೈ ಸ್ಕೀಮ್‌ನ್ನು ಪುರಸಭೆಗಳಿಂದ ತೆಗೆದು ವರರಾಟರ್ ಬೋರ್ಡ್‌ನವರಿಗೆ ವಹಿಸುವುದರಿಂದ ಮುನಿಸಿಪಾಲಿಟಿಗಳಿಗೆ ಹೊರೆ ಕಡಿಮೆಯಾಗುತ್ತದೆ. ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುತ್ತಿರುವ ನೌಕರುಗಳಿಗೆ ತಿಂಗಳ ಕೊನೆಯಲ್ಲಿ ಸಂಬಳ ಕೊಡುವಂಥ ಪರಿಸ್ಥಿತಿ ಬರುತ್ತಿರುವುದರಿಂದ ಮುನಿಸಿಪಾಲಿಟಿಗಳು ಕಟ್ಟಬೇಕಾದ ವಿದ್ಯುಚ್ಛಕ್ತಿ ಬಿಲ್ಲನ್ನು ಮನ್ನಾ ಮಾಡಬೇಕೆಂದು ಈ ಮೂಲಕ ಹೇಳುತ್ತೇನೆ. ಆಮೇಲೆ, ರೈತರುಗಳು ಪಂಪ್‌ಸೆಟ್ಟುಗಳ ಮೇಲೆ ನಿರ್ವಹಣಾ ವೆಚ್ಚವನ್ನು ಹಾಕುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆಯೆಂದು ತಿಳಿದು ಬಂದಿದೆ. ಹಾಗೇನಾದರೂ ಮಾಡಿದರೆ ರೈತರುಗಳು ಬಹಳ ಕ್ರೂರವಾಗುತ್ತಾರೆ, ಮತ್ತು ನಿಮಗೆ ಎಗೆನೆಸ್ಟ್ ಆಗುತ್ತಾರೆ. ಆದ್ದರಿಂದ, ಈಗ ಯಾವ ರೀತಿ ಪೂರ್ತಿ ಮನ್ನಾ ಮಾಡಲಾಗಿದಿಯೇ ಅದೇ ರೀತಿ ಮುಂದುವರಿಸಿಕೊಂಡು ಹೋಗಬೇಕೆಂದು ತಿಳಿಸುತ್ತೇನೆ.

ಹಿಂದೆ ಆರಾಧನ, ಅಕ್ಷಯ, ಆಶ್ರಯ ಮತ್ತು ವಿಶ್ವ ಕಾರ್ಯಕ್ರಮಗಳಿಂದ ಜನೋಪಕಾರಿ ಕೆಲಸಗಳಾಗಿದ್ದವು, ಆದ್ದರಿಂದ, ಅದೇ ಹೆಸರುಗಳನ್ನು ಮುಂದುವರಿಸುವುದಕ್ಕೆ ತಮಗೆ ಇಚ್ಛೆ ಇಲ್ಲದದ್ದರೆ ಬೇರೆ ಹೆಸರಿನ ಮೂಲಕವಾದರೂ ಆ ಕೆಲಸಗಳನ್ನು ಮುಂದುವರಿಸುವುದಕ್ಕೆ ತಮಗೆ ಇಚ್ಛೆ ಇಲ್ಲದಿದ್ದರೆ ಬೇರೆ ಹೆಸರಿನ ಮೂಲಕವಾದರೂ ಆ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಪ್ರಾರ್ಥನೆ ಮಾಡುತ್ತಾ, ಸನ್ಮಾನ್ಯ ದೇವೇಗೌಡರಿಗೆ ರೈತರ ಬಗ್ಗೆ ಕಾಳಜಿ ಇರುವುದರಿಂದ, ಯಾವ ರೀತಿಯಿಂದಲಾದರೂ, ಎಷ್ಟೇ ಕೋಟಿ ರೂಪಾಯಿ ಖರ್ಚಾದರೂ ನೇತ್ರಾವತಿ ನದಿಯಿಂದ ನೀರನ್ನು ರಾಜ್ಯದ ಎಲ್ಲಾ ಕಡೆ ಹರಿಸುವ ಬಗ್ಗೆ ಯೋಜನೆ ಹಾಕಿಕೊಳ್ಳಬೇಕು. ಇದಕ್ಕೆ ಬೇಕಾದ ಹಣವನ್ನು ಕೊಡುವುದಕ್ಕೆ ರೈತರುಗಳಾದ ನಾವೆಲ್ಲಾ ಮುಂದೆ ಬರುತ್ತೇನೆ ಆದ್ದರಿಂದ ತಾವುಗಳು ಈ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡರೆ

ಬಹಳ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾ ಅಧ್ಯಕ್ಷರನ್ನು ವಂದಿಸಿ, ಮಾನ್ಯ ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ SRI S. RAJENDRAN (EGF) : Mr. Speaker, Sir, I am representing from KGF located in Karnataka State. I am proud to stand here to express our views regarding Scheduled Castes and Scheduled Tribes. Most of the Government.

ಶ್ರೀಮತಿ ಎಸ್. ಪ್ರಮೀಳಾ : ಮಾನ್ಯ ರಾಜೇಂದ್ರನ್‌ರವರು ಕೋಲಾರದವರು, ಅವರಿಗೆ ಕನ್ನಡ ಬರುತ್ತದೆ, ಕನ್ನಡದಲ್ಲಿ ಮಾತನಾಡ ಬಹುದಲ್ಲವೇ? ಕೆಜಿಎಫ್‌ನವರು ಇಲ್ಲಿ ಕನ್ನಡ ಮಾತನಾಡಿದರೆರ ಒಳ್ಳೆಯದಲ್ಲವೇ? ದಯವಿಟ್ಟು ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಲಿ. ಕೆಜಿಎಫ್ ಕರ್ನಾಟಕದಲ್ಲಿ ಲೋಕೇಟ್ ಆಗಿದೆ ಎಂದು ಹೇಳುತ್ತಿದ್ದಾರೆ, ಅದರ ಅರ್ಥ ಏನು?

MR. SPEAKER : He is a new Member, let him continue his speech.

SRI S. RAJENDRAN : Sir, for the kind information of our Madam, why I said it is located is that none of the Government has comeforward to develop Kolar Gold Fields so far. That is the reason I said it. 15 years back, we are the people went out for study.

MR. SPEAKER : Hon. Member has to address the Chair.

Sri S. Rajendran : Sir, there is a reason to tell like that. Scheduled Castes and Backward classes amounting to 80 to 90% people are located in Kolar Gold Fields. Therefore, we need more opportunities from this Government to develop KGF. More welfare measures should be taken up in KGF for the upliftment of these people. That is the reason I said I represent that constitutency. Top Officials, Ministers and other Officers should tour that place. The Kolar District, we are pround to say it is famous for silk, milk and gold but we people never wear silk because we are in the lowest level; we never see gold and that too the Scheduled Castes and Scheduled Tribes can never think of these things in that district; but still proudly we are using the word that we are the people famous for silk, famous for gold and milk and when I was taking our seniorËmost Member Sri Vatal Nagaraj has mentioned very clearly this is Karnataka State ನೀವೆಲ್ಲಾ ಕನ್ನಡದಲ್ಲಿಯೇ ಮಾತನಾಡಬೇಕು ಎಂದರು.

There is no dispute about that. We are proud to say we belonged to this State. Our blood is in this country. Why we are not able to speak kannada, there is a reason behind this. There are 16,000 graduates and not even a single College in Kannada medium, not even 3/4 schools in Kannada medium in our KGF. Our senior Member. Sri Vatal Nagarj has mentioned ಕೆಜಿಎಫ್‌ನಲ್ಲಿ ಕನ್ನಡ ಸಿನೇಮಾಗಳು ಓದುತ್ತಿಲ್ಲ? ಕೇರಳ, ತಮಿಳುನಾಡಿನಲ್ಲಿಯೂ ಕನ್ನಡಿಗರು ಇದ್ದಾರೆ, ಅಲ್ಲಿ ಕನ್ನಡ ಸಿನೇಮಗಳು ಓದುತ್ತಿಲ್ಲ? ಎಂದು ಹೇಳಿದ್ದಾರೆ. ಹೌದು, ಅದು

ಆಗಬೇಕು. ಆದರೆ ಕನ್ನಡ ಕಲಿಕೆಗೆ ಸೌಲಭ್ಯಗಳನ್ನು ಕೆಜಿಎಫ್‌ನಲ್ಲಿ ಒದಗಿಸಲು ಅವರು ಒತ್ತಾಯ ಮಾಡಲಿ.

why are they not stressing for Kannada medium schools in Kolar Gold Fields? You must give more opportunity, you must give more facilities for the improvement of Kannada and other things. The Government should come forward to develop this Kolar Gold Fields. Therefore, our sincere request to this Government is please comeforward and give more opportunities for this constitutency.

This is urgently needed because there were 35,000 employee working in BGML, Now slowly it has come down to 7,000. I would like to give one example here. The highest suicide takes place only in Kolar district particularly in KGF Constitutency. Why this suicide? It is because distress in life. No employment opportunities; no facilities. 16,000 graduates are there, they are not able to walk on the street because not even one rupee is in coming Budget and give small scale industries so as to create more employment opportunities in that constitutency.

Why I am saying this is that though there is a major factory like BEML and BGML but now sloly the infrastructure is being transferred to Mysore. Now the citizens of KGF are getting scareed and they started travelling places to settle. Just for the information of this House, previously there were 1,30,000 voters registered in this constitutency, now it has come down to 93,000. What is the reason behind that? The people are totally depressed and they have no hopes that Government will comeforward to rescue them. That is the reason they started moving from that place to other areas. I think when I become 60 years, I can see in Kolar Gold Fields only rocks and muds and no human beings in that place. Which ever Government so far ruled whether they have done good or bad, I am not worried about that. My only request to this Government is that the people of this State particulerly Scheduled Castes and Scheduled Tribes should get more opportunitis in all fields.

Sir, there is a First Grade Government aided College but the Government has not comeforward to take care of that administration. My community people should be avoided. Why the Government is nelgecting this Kolar Gold Fields?

They have sanctioned a B.Ed., college two years back. This is purely meant for Scheduled Castes and Scheduled Tribes. That is the reason why they have sanctioned that college. After a period of 2 years the College has been shifted to Bangarpet. When we represented this to the Government they said very casually we appointed a Committee to find out the reason. Is it not the duty of the Government then and there permission to stop that? They

should have told them that the is given to run the college at KGF.

When that being the situation what is the necessity to shift this college? Now they are saying that wee have appointed a Committee. The Bangalore University vice-chanceller has very clearly said you are not supposed to shift but still a single man has taken his power in his hands and shifted the college. That shows very clearly particular individuals are not bothering about the State Government orders. It shows clearly they are having links with the Ministers just thinking other people cannot do anything. These things are going on and it is time that the concerned people should take necessarry action. Another example I want to say one Dr. S. Subramani who belongs to Scheduled Caste, has got eligibility to do his P.hd., in Plastic Surgery; For 4 years, this poor man is suffering for want of relieving order. Our friends are saying there is no suitable candidates in SC/STS., but when there is a suitable candidate, the Government si not coming forward to provde them opportunity.

Our Leader Babasaheb Dr. Ambedkar has written very clearly that my community said 27% we have reserved for Scheduled Castes and Schduled Tribes. Like that we are reserving 30% for women. Fine. I agree. Butt no women among Scheduled Castes and Scheduled Tribes got the benefit of thiis reservation. Literally they are saying scheduled castes and scheduled tribes people are getting more opportunities but it is not so. How many Harijan Hostels they have developed in Karnataka State. How much money they have spent for the welfare of Harijans. How many medical seats they have given for Scheduled Castes and Scheduled Tribes. Why all these things are not coming to us because the Head of the Committee is not prepared to ask. That is the reason, we are not able to get the facilities provided to us by the Government should take necessary action and provide more opprotunities to Scheduled Castes and Scheduled Tribes. Now at present the Kolar Gold Fields is going day by day to lower limit...

MR. SPEAKER : I would request you to conclude. You have another 2 minutes.

SRI S. RAJENDRAN : I request the Government to consider the problems being faced by the citizens of KGF and provide a factory and give them more employment opportunities especially to the Scheduled Castes and Scheduled Tribes. I request them also to provide all other facilities and extend maximum benefit for the Kolar Gold Fields. I thank the Hon'ble Speaker for giving me time to speak. Thank you very much.

ಅಧ್ಯಕ್ಷರು : ಕರಡಿ ಸಂಗಣ್ಣನವರು ಹತ್ತು ನಿಮಿಷದಲ್ಲಿ ಮುಗಿಸಬೇಕು.

+ ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಾ ಕೆಲವು ಅಭಿಪ್ರಾಯಗಳನ್ನು ಸದನಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಜನತಾದಳದ ಸರ್ಕಾರ ರಚನೆಯಾದದ್ದು ಮತ್ತು ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾದದ್ದು ಒಂದು ಹೆಮ್ಮೆಯ ವಿಷಯವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಅವರು ಒಂದು ರೈತ ಕುಟುಂಬದಿಂದ ಬಂದಂಥವರು ಅವರು ಮುಖ್ಯಮಂತ್ರಿಯಾದದ್ದು ಬಹಳ ಸಂತೋಷವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ರಾಜ್ಯಪಾಲರ ಭಾಷಣವನ್ನು ನೋಡಿದಾಗ, ಹಳ್ಳಿಗಾಡಿನ ಒಂದು ಚಿಂತನೆಯನ್ನು ಇದರಲ್ಲಿ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಬಯಲುಸೀಮೆ ಹೊಂದಿರುವಂಥ ಅನೇಕ ಜಿಲ್ಲೆಗಳನ್ನು ನಾವು ಮತ್ತು ತಾವು ತಂದಿದ್ದೀವೆ ಎನ್ನುವುದನ್ನು ಹೇಳುತ್ತೇನೆ. ಇಲ್ಲಿ ತಮಗೆ ಗೊತ್ತಿರುವ ಹಾಗೆ ಮಳೆಯನ್ನೇ ಅವಲಂಬಿಸಿರುವಂಥ ರೈತರು ಮಳೆ ಯಾವ ರೀತಿ ಬರುತ್ತದೆ ಎಂದು ತಿಳಿದುಕೊಂಡಿದ್ದಾರೆ ಮಳೆ ಮಾಪನದ ಮೂಲಕ ನೋಡಿದಾಗ ಮಳೆ ಚೆನ್ನಾಗಿ ಆಗಿದೆ ಎನ್ನುವುದನ್ನೂ ಸಹಾ ಗುರುತಿಸುತ್ತೇವೆ. ಆದರೆ ಇವತ್ತು ಒಂದು ಭಿತ್ತನೆಯ ಕಾಲವನ್ನು ನೋಡಿದಾಗ, ಆ ಕಾಲದ ಒಂದು ಪ್ರಮಾಣದಲ್ಲಿ ಮಳೆಯಾದಾಗ ಬೇಸಾಯವನ್ನೇ ಅವಲಂಬಿಸಿರುವ ರೈತ ಆ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಾವು ಆ ಒಂದು ಹಿನ್ನೆಲೆಯನ್ನು ನೋಡಿದಾಗ ಮುಖ್ಯವಾಗಿ ರೈತ ಬೇಸಾಯವನ್ನು ಅವಲಂಬಿಸಿರುವಂಥವನು, ಆ ಬೇಸಾಯದ ಬಗ್ಗೆ ವಿಶ್ವಾಸವನ್ನೇ ಹೊಂದಿಲ್ಲ ಎಂದು ನಾವು ಭಾವಿಸಬೇಕಾಗುತ್ತದೆ.

ಇವತ್ತು ಅನೇಕ ಹಿರಿಯ ಸದಸ್ಯರು ಸದನದಲ್ಲಿ ಕುಡಿಯುವ ನೀರಿನ ವಿಷಯವಾಗಿ ಮಾತನಾಡಿದ್ದಾರೆ. 100 ಅಡಿ ಡೀಪ್ ಆಗಿ ಬೋರನ್ನು ಕೊರೆಸಿದರೂ ನೀರು ಸಿಗುತ್ತಿಲ್ಲ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದರ ಹಿನ್ನೆಲೆಯನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಾವೆಲ್ಲರೂ ಆರಿಸಿ 10ನೇ ವಿಧಾನಸಭೆಗೆ ಬಂದಿದ್ದೇವೆ. ಏತಕ್ಕೆ ನೀರು ಸಿಗುತ್ತಿಲ್ಲ? ಕಾಲಕ್ಕೆ ಸರಿಯಾಗಿ ಮಳೆ ಏತಕ್ಕೆ ಬರುತ್ತಿಲ್ಲ ಎನ್ನುವ ಬಗ್ಗೆಯೂ ಕೂಡ ನಾವೆಲ್ಲಾ ಚಿಂತನೆಯನ್ನು ಮಾಡಬೇಕಾಗುತ್ತದೆ. ಮಳೆಯೇ ಬಾರದಿದ್ದರೆ ಯಾವ ರೀತಿಯ ಬದುಕನ್ನು ರೈತ ಮಾಡಬೇಕು ಎನ್ನುವುದನ್ನೂ ಕೂಡ ಈ ಸದನವು ವಿಚಾರ ಮಾಡಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ನನ್ನ ಒಂದು ಅಭಿಪ್ರಾಯವೇನೆಂದರೆ ಇವತ್ತು ಯಾವುದೇ ಒಬ್ಬ ನಾಲ್ಕು ಎಕರೆ ಜಮೀನನ್ನು ಹೊಂದಿರುವಂಥ ರೈತನು ಹತ್ತು ಗುಂಟೆ ಜಮೀನಿನಲ್ಲಿಯಾದರೂ ಮರ ಮತ್ತು ಗಿಡಗಳನ್ನು ಬೆಳೆಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಇನ್ನು ಹತ್ತು-ಹದಿನೈದು ವರ್ಷದಲ್ಲಾದರೂ ಮಳೆ ಅಥವಾ ಸಮೃದ್ಧಿ ನಾಡನ್ನು ಕಾಣುವುದಕ್ಕೆ ಸಾಧ್ಯವಾಗಬಹುದು. ಇದನ್ನು ನಾನು ಬಹಳ ಗಂಭೀರವಾದ ವಿಷಯವೆಂದು ನಾನು ಭಾವಿಸಿದ್ದೇನೆ. ಪ್ರತಿಯೊಂದು ಗ್ರಾಮದಲ್ಲಿ ಸುಮಾರು 200 ಬಡ ಕುಟುಂಬದ ರೈತರು, ಕೃಷಿ ಕಾರ್ಮಿಕರುಗಳು ಇವತ್ತು ಹಳ್ಳಿಯನ್ನು ಬಿಟ್ಟು ಬೇರೆ ಕಡೆ ಉಪಜೀವನ ಮಾಡುವುದಕ್ಕಾಗಿ ಹೋದಂಥ ಅನೇಕ ಉದಾಹರಣೆಗಳು ಉಂಟು. ಆ ಹಿನ್ನೆಲೆಯಲ್ಲಿ ಮಾನ್ಯ ಸಭಾಧ್ಯಕ್ಷರಲ್ಲಿ ನಾನು ಕೋರುತ್ತೇನೆ, ಈ ಒಂದು ವಿಷಯವನ್ನು ಒಂದು ಶಾಸನರೂಪದಲ್ಲಿ ಇದನ್ನು ತರಬೇಕು. ಇನ್ನು ಇರತಕ್ಕಂಥ ಸ್ವಲ್ಪ ನೀರಿನಲ್ಲಿ ಇವತ್ತು ಹಾರ್ಟಿಕಲ್ಚರ್, ಅಂದರೆ ಹಣ್ಣಿನ ಬೆಳೆಯನ್ನು ಬೆಳೆಯುವುದಕ್ಕೆ ಒಂದು ತುಂತುರು ನೀರಾವರಿಯ ಮಾಧ್ಯಮವನ್ನು ಸರ್ಕಾರ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಶಿಕ್ಷಣದ ಬಗ್ಗೆ ಮಾತನಾಡಬೇಕೆಂದರೆ, ಇವತ್ತು ಯಾವ ಮಟ್ಟದಲ್ಲಿ ಶಿಕ್ಷಣವಾಗಿದೆ ಎಂದರೆ ಒಂದರಿಂದ ಏಳನೆಯ ತರಗತಿಯವರೆಗೆ ಇಬ್ಬರು ಇಲ್ಲವೇ

ಒಬ್ಬರು ಜನ ಶಿಕ್ಷಕರು ಇರತಕ್ಕ ಪರಿಸ್ಥಿತಿ ಇದೆ. ಒಂದು ಉದಾಹರಣೆಯನ್ನು ಕೊಟ್ಟು ಹೇಳಬೇಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ರೈತ ನೂರು ಕುರಿಯನ್ನು ಸಾಕಿರುತ್ತಾನೆ, ಅವನ್ನು ಸಾಕಬೇಕಾದರೆ ಮೂರು ಜನರನ್ನು ನೇಮಕ ಮಾಡಿ ಅಡವಿಯಲ್ಲಿ ಮೇಯಿಸಿ ಕೊಂಡು ಬರಲು ವ್ಯವಸ್ಥೆ ಮಾಡಿರುತ್ತಾನೆ. ಅಡವಿಯಲ್ಲಿ ಜೋಪಾನವಾಗಿ ಅವುಗಳನ್ನು ಮೇಯಿಸಿಕೊಂಡು ಬರಬೇಕಾದರೆ ಮೂರು ಜನರು ಬೇಕಾಗುತ್ತದೆ. ಆದರೆ ಅನಿವಾರ್ಯ ಪ್ರಸಂಗದಿಂದ ಎರಡು ಮಂದಿ ಕುರಿಗಳನ್ನು ಮೇಯಿಸಲು ಹೋಗಲು ಆಗದಿದ್ದರೆ ಆಗ ಒಬ್ಬನೇ ಅವುಗಳನ್ನು ಅಡವಿಯಲ್ಲಿ ಮೇಯಿಸಲು ತೆಗೆದುಕೊಂಡು ಹೋಗುತ್ತಾನೆ. ಆಗ ಆ ಕುರಿಗಳು ಆ ಒಬ್ಬನಿಗೆ ಹತೋಟಿಗೆ ಬರುವುದಿಲ್ಲ. ಕುರಿಗಳು ಬೇರೆಯವರ ಜಮೀನಿನಲ್ಲಿ ಮೇಯಿಸಲು ಪ್ರಯತ್ನ ಪಟ್ಟಾಗ ಅವನು ಅವುಗಳನ್ನೆಲ್ಲಾ ಒಂದು ಕಡೆಯಲ್ಲಿ ಕೂಡಿಹಾಕಲು ಪ್ರಯತ್ನಪಡುತ್ತಾನೆ. ನಮ್ಮ ಶಿಕ್ಷಣದ ಮಟ್ಟವೂ ಸಹ ಅದೇ ಮಟ್ಟದಲ್ಲಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇವತ್ತು ಒಂದು ಶಾಲೆಯಲ್ಲಿ 700-800 ಮಕ್ಕಳು ಇದ್ದಾಗ ಒಬ್ಬನೇ ಒಬ್ಬ ಶಿಕ್ಷಕ ಏನು ಮಾಡಲು ಸಾಧ್ಯ? ಯಾವ ರೀತಿಯಲ್ಲಿ ಪಾಠವನ್ನು ಹೇಳಿಕೊಡಲು ಸಾಧ್ಯ ಎಂಬುದನ್ನು ತಾವು ಗಮನಿಸಬೇಕು. ಮೊದಲು ನಾವು ಎಲ್ಲರಿಗೂ ಜ್ಞಾನ ಸಂಪತ್ತನ್ನು ಕೊಟ್ಟರೆ ಅದರಿಂದ ಎಲ್ಲರೂ ಬದುಕಬಹುದು.

ಇದನ್ನು ಸರ್ಕಾರ ತೀವ್ರಗತಿಯಲ್ಲಿ ಪರಿಗಣಿಸಬೇಕೆನ್ನುವುದು ನನ್ನ ಮುಖ್ಯವಾದ ಒಂದು ಕೋರಿಕೆ. ಇವತ್ತು ಉಪ ಮುಖ್ಯ ಮಂತ್ರಿಗಳಾದ ಮಾನ್ಯ ಜೆ.ಹೆಚ್. ಪಟೇಲ್ ಅವರು ಒಂದು ಹೇಳಿಕೆಯನ್ನು ಕೊಟ್ಟು ವಿದ್ಯುಚ್ಛಕ್ತಿಯಲ್ಲಿ 10 ಹೆಚ್‌ಪಿ ಇರತಕ್ಕದ್ದಕ್ಕೆ ಪುನಃ ದರವನ್ನು ನಿಗದಿ ಮಾಡುತ್ತೇವೆಂದು ಹೇಳಿದ್ದಾರೆ. ಆ ವಿಷಯದಲ್ಲಿ ನೀವು ಏನಾದರೂ ಪ್ರಯತ್ನ ಮಾಡಿದ್ದೇ ಆದರೆ ರೈತರು ನಮ್ಮ ಕ್ಷೇತ್ರದಲ್ಲಿ ನಾವು ಇರಲಿಕ್ಕೆ ಬಿಡುವುದಿಲ್ಲ, ನೀವು ಬೆಂಗಳೂರಿಗೆ ಹೋಗಿ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಆದ್ದರಿಂದ ತಾವು ಇದರ ಬಗ್ಗೆ ಬೇರೆ ರೀತಿಯಲ್ಲಿ ಸಂಪನ್ಮೂಲಗಳನ್ನು ಕಂಡುಹಿಡಿದು ಸರ್ಕಾರದ ಹಣಕಾಸಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಮ್ಮ ಭಾಗದಲ್ಲಿ ಕೆರೆಯ ಮಧ್ಯದಲ್ಲಿ ತೆಗೆಯತಕ್ಕ ಗುಂಡಿಗಳನ್ನು ಹೆಚ್ಚು ಹೆಚ್ಚು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಮೈಸೂರು ವಿಭಾಗದಲ್ಲಿ ಹೆಚ್ಚು ಕೆರೆಗಳು ಇವೆ. ಆದರೆ ನಮ್ಮ ಭಾಗದಲ್ಲಿ ಕೆರೆಗಳ ನಿರ್ಮಾಣದ ಕೆಲಸ ಬಹಳ ಕಡಿಮೆ ಇದೆ. ಏಕೆಂದರೆ ಸ್ವಲ್ಪ ಪ್ರಮಾಣದಲ್ಲಿ ಬಿದ್ದಂಥ ಮಳೆಗೆ ನಾವು ಕೆರೆಗಳನ್ನು ನಿರ್ಮಾಣ ಮಾಡಿದರೆ ಬಿದ್ದಂಥ ಸ್ವಲ್ಪ ನೀರನ್ನು ಕ್ರೋಢೀಕರಿಸುವ ಸಲುವಾಗಿ ಆ ಮೂಲಕ ಅಂತರ್‌ಜಲದ ಮಟ್ಟವನ್ನು ವೃದ್ಧಿಸಲು ಸಾಧ್ಯವಾಗುತ್ತದೆ. ಮತ್ತು ನೀರಾವರಿಯನ್ನು ಮಾಡಲು ನಮಗೆ ಸಾಧ್ಯವಾಗುತ್ತದೆ. ಇನ್ನು ಪರಿಶಿಷ್ಟ ಜಾತಿ ಮತ್ತು ವರ್ಗದವರ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಹಾಕಿಕೊಳ್ಳಬೇಕು. ಹಿಂದೆ ಮಾನ್ಯ ದೇವೇಗೌಡರು ಗಂಗಾಕಲ್ಯಾಣ ಕೆಲಸವನ್ನು ತೆಗೆದುಕೊಂಡಿದ್ದರು. ಅಂಥಹ ಕೆಲಸಗಳಿಗೆ ಹೆಚ್ಚಿನ ಒತ್ತು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಸಿರು ಕಾರ್ಡಿನ ಬಗ್ಗೆ ಮಾತನಾಡುವುದಾದರೆ, ಅನೇಕ ನಿರ್ಗತಿಕ ಮತ್ತು ಬಡ ಕುಟುಂಬಗಳನ್ನು ಸರ್ವೆ ಮಾಡುವಾಗ ಎಷ್ಟೋ ಕುಟುಂಬಗಳ ಹೆಸರು ಬಿಟ್ಟು ಹೋಗಿದೆ. ಆದ್ದರಿಂದ ಅದರ ಬಗ್ಗೆ ರೀಸರ್ವೆ ಮಾಡಲು ತಾವು ಆದೇಶವನ್ನು ಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ತಾಂಡಾಗಳ ಬಗ್ಗೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಅಲ್ಲಿ 500 ಜನಸಂಖ್ಯೆ ಇರಬೇಕು, ಇಷ್ಟು ನಿಗದಿಯಾದ ಏರಿಯಾ ಇರಬೇಕೆಂದು ಮುಂತಾಗಿ ಹೇಳಿದರು. ಆ ಬಗ್ಗೆ ಕಾಯಿದೆ ಇದೆ ಎಂದು ಹೇಳಿದರು. ಆದರೆ ಈ ಕಾಯಿದೆಯನ್ನು ಸಡಿಲಗೊಳಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಅನೇಕ ಗ್ರಾಮಗಳು ಅದರಿಂದ

ಹೊರತುಪಡಿಸಿದೆ. ಇವತ್ತು ಕಂದಾಯ ಗ್ರಾಮವಾಗದಿದ್ದರೆ ಆ ಗ್ರಾಮಕ್ಕೆ ಸರ್ಕಾರದ ಏನೂ ಸಹಾಯಧನವನ್ನು ಕೊಡಲು ಆಗುವುದಿಲ್ಲ. ಆದ್ದರಿಂದ ಆ ಕಾಯಿದೆಯನ್ನು ಇನ್ನಷ್ಟು ಸಡಿಲ ಮಾಡಬೇಕೆಂದು ಕೋರುತ್ತೇನೆ. ಇನ್ನು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಅನೇಕ ಜನ ಹಿರಿಯ ಸದಸ್ಯರು, ಶಾಸಕರು ಮಾತನಾಡಿದ್ದಾರೆ. ಇವತ್ತು ಎಲ್ಲೆಲ್ಲಿ ಬೋರ್‌ವೆಲ್ ಒಣಗಿ ಹೋಗಿದೆಯೋ ಅಥವಾ ಸವಳು ನೀರು ಬಂದಂಥ ನೀರಿನ ಜಾಗದಲ್ಲಿ ಬೇರೆ ಕಡೆಯಿಂದ ನಾವು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕೆ ಜಿಲ್ಲಾಪರಿಷತ್‌ನ ಮೂಲಕ ಹೆಚ್ಚು ಹಣವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ನಮ್ಮ ನೇಕಾರರ ಸಮಸ್ಯೆ ಸಹ ಜಟಿಲವಾಗಿದೆ. ಅವರಿಗೆ ವಸತಿಯನ್ನು ಕಟ್ಟಿಸಿಕೊಡತಕ್ಕ ಕೆಲಸವನ್ನು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ ನನಗೆ ಬಹಳ ಆತಂಕವಿತ್ತು ಹನ್ನೊಂದು ವರ್ಷದ ಅನುಭವದಿಂದ ಇಲ್ಲಿ ಎಲ್ಲಿ ಮಹಾಪೌರರೇ ಎಂದು ಹೇಳಿಬಿಡುತ್ತೇನೊ ಎಂದು. ಆ ರೀತಿ ತಪ್ಪು ಮಾಡದೇ ತಮ್ಮನ್ನು ಸಭಾಧ್ಯಕ್ಷರೇ ಎಂದು ಸಂಭೋಡಿಸಿದ್ದೇನೆ. ಬಹಳ ಉತ್ಸಾಹದಿಂದ ಈ ಸಭೆಗೆ ನಾವೆಲ್ಲಾ ಯುವಕರು ಬಂದೆವು. ಆದರೆ ಈ ರಾಜ್ಯಪಾಲರ ಭಾಷಣವನ್ನು ನೋಡಿದಾಗ ಯಾವುದೇ ರೀತಿಯ ಲವಲವಕೆಯಿಲ್ಲದೆಯೆ ಅಧಿಕಾರ ತಮಗೆ ಬಂದಿದೆ ಎನ್ನತಕ್ಕ ಉತ್ಸಾಹಕ್ಕಿಂತ ತಲೆಯ ಮೇಲೆ ಯಾವುದೋ ಆಕಾಶ ಬಿದ್ದದೆ ಎನ್ನತಕ್ಕ ಭಾರದಿಂದ ಕುಳಿತಿರುವ ನಮ್ಮ ಮಿತ್ರರನ್ನು ನೋಡಿದಾಗ ಗೊತ್ತಾಗುತ್ತದೆ. ನನಗೆ ನಮ್ಮ ಮುಂದಿನ ರಾಜ್ಯಪಾಲರ ಭಾಷಣಗಳು ಯಾವ ರೀತಿ ಇರಬಹುದೆಂದು, ಈ ಭಾಷಣದಲ್ಲಿ ನಾವು ಹುಡುಕಿದರೂ ಸಹ ಯಾವುದೇ ಲವಲವಿಕೆಯ ಅಂಶಗಳನ್ನು ಕಾಣಲು ಆಗುತ್ತಿಲ್ಲ, ಅನೇಕ ಸಲ ನಮ್ಮ ನಗರ ಪಾಲಿಕೆಯ ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರ ಭಾಷಣವೇ ಬಹಳ ಚೆನ್ನಾಗಿರುತ್ತಿತ್ತು. ಕೊನೆಯ ಪಕ್ಷ ರೋಸಿ ಷಿಕ್ಷರ್ ಆದರೂ ಕೊಡುತ್ತಿದ್ದರು. ಇದರಲ್ಲಿ ಯಾವುದೇ ಉತ್ಸಾಹದ ವಾತಾವರಣವನ್ನು ಕಾಣುತ್ತಿಲ್ಲ, ತಾವು ಹೇಳುತ್ತಾ ಬಹಳ ಒಂದು ಮುಖ್ಯವಾದ ಅಂಶವನ್ನು ಆಡಿದ್ದೀರಿ. ಜನಸಾಮಾನ್ಯರ ಅಗತ್ಯಗಳಿಗೆ ಸ್ಪಂಧಿಸತಕ್ಕ ಪ್ರಮಾಣಿಕ ಪಾರದರ್ಶಕ ಸರ್ಕಾರವೆಂದು. ಪಾರದರ್ಶಕವೆಂದರೆ ಏನು ಎಂದು ನಾನು ನಿಘಂಟಿನಲ್ಲಿ ಹೋಗಿ ನೋಡಿದೆ. ಪ್ರಾಯಶಃ ಅದು ಜನತಾದಳದವರು ಮಾಡಿರತಕ್ಕ ನಿಘಂಟಿರಬಹುದು, ಆದರಲ್ಲಿ ಪಾರದರ್ಶಕವೆಂದರೆ ಬೆಂಗಳೂರಿನಲ್ಲಿ ಬೆಂಗಳೂರಿನ ನಾಗರೀಕರಿಗೆ ಒಳ್ಳೆಯ ಜೀವನ, ಒಳ್ಳೆಯ ಶಾಂತಿ ದಿನಗಳನ್ನು ತಂದುಕೊಟ್ಟಿದ್ದ ಕೊಂದಂಡರಾಮಯ್ಯ ಎನ್ನತಕ್ಕ ನಿಷ್ಠಾವಂತ ಅಧಿಕಾರಿಯನ್ನು ಯಾವುದೇ ಕಾರಣ ಕೊಡದೆ 11ನೇ ತಾರೀಖು ನಡೆದ ಘಟನೆಯ ಬಗ್ಗೆ ವರದಿಯನ್ನು ಕೊಡಬೇಕು ಎನ್ನತಕ್ಕ ಹಿನ್ನೆಲೆಯಲ್ಲಿ ಕೆಲಸಕ್ಕೆ ಬಾರದ ಇಪ್ಪತ್ತು ಎಕರೆ ಜಮೀನೂ ಇಲ್ಲದಿರುವ ಕಡೆ ಸೈಟು ಮಾಡುವುದು, ಪೋಲೀಸ್‌ನವರಿಗೆ ಮನೆಯನ್ನು ಕಟ್ಟಿಕೊಡಿ ಎಂದು ಬೋರ್ಡ್‌ಗೆ ಕಳುಹಿಸಿದ್ದಾರಲ್ಲಾ ಇದು ನಿಮ್ಮ ಪಾರದರ್ಶಕವೆಂದು ಅರ್ಥ ಮಾಡಿಕೊಳ್ಳಬೇಕೇ?

MR. SPEAKER : You should raise the level of debate. I will guide you.

ಶ್ರೀ ಎಸ್. ಸುರೇಶ್‌ಕುಮಾರ್ : ಈಗ ತಾವು ತಮ್ಮ ಭಾಷಣದಲ್ಲಿ ವ್ಯರ್ಥ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡುತ್ತೇವೆಂದು ಹೇಳುತ್ತೀರಿ. ಸುಮಾರು 183 ಸದಸ್ಯರಿದ್ದ ಕಾಂಗ್ರೆಸ್ ಪಕ್ಷದಲ್ಲಿ 43 ಜನರನ್ನು ಮಂತ್ರಿಗಳನ್ನಾಗಿ ಮಾಡಿದಾಗ ತಾವುಗಳು ಅದನ್ನು ಏರ್‌ಬಸ್, ಜಂಬೋ ಮಂತ್ರಿಮಂಡಲವೆಂದು ಕರೆದಿರಿ. ಈಗ ನಿಮಗೆ ಇದ್ದಿದ್ದೇ 116 ಜನ ಸದಸ್ಯರು. ಅದರಲ್ಲಿ 37 ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದೀರಿ,

ನನ್ನ ಪ್ರಕಾರ ಇದು ಫುಲ್‌ಸ್ಟಾಪ್ ಅಲ್ಲ, ಕಾಮ ಅಷ್ಟೆ. ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳುತ್ತಿದ್ದರು, ಮುಂದಿನ ಏಪ್ರಿಲ್ ಅಥವಾ ಮೇ ತಿಂಗಳವರೆಗೆ ಕಾಯಿರಿ, ಮುಂದಿನ ಇನ್ಸ್ಟಾಲ್‌ಮೆಂಟ್ ಬರುತ್ತದೆಂದು. ಈ ರೀತಿ ಅನಗತ್ಯವಾದ ವೆಚ್ಚವನ್ನು ಮಾಡಿ....

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ, ತಾವೇನೂ ಮಾತನಾಡಬೇಕೆಂದು ಎದ್ದು ನಿಂತಿರಲ್ಲಾ, ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರೇನು ಪೋಲೀಸ್ ಖಾತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಉತ್ತರವನ್ನು ಕೊಡುವಾಗ ಹೇಳುತ್ತೇನೆ ಅಧ್ಯಕ್ಷರೇ.

ಶ್ರೀ ಎಸ್. ಸುರೇಶ್‌ಕುಮಾರ್ : ಈ ಗಾತ್ರದ ಮಂತ್ರಿಮಂಡಲ ಏಕೆ ಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು 17-12-94ರಂದು ಇಂಡಿಯನ್ ಎಕ್ಸ್‌ಪ್ರಸ್‌ನಲ್ಲಿ ಏನು ಹೇಳಿದ್ದಾರೆಂದರೆ :

"In order to face Panchayat elections effectively, we wanted to give adequate representation to all districts and communities."

ಅಂದರೆ ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡಬೇಕು ಎಂಬುದಕ್ಕಿಂತ, ನಾವೇನು ಈಗ ಅಧಿಕಾರಕ್ಕೆ ಬಂದಿದ್ದೇವೆ ಅದನ್ನು ಉಳಿಸಿಕೊಂಡು ಪಂಚಾಯಿತಿ ಚುನಾವಣೆಯಲ್ಲಿ ಗೆಲ್ಲಬೇಕು, ಅದಕ್ಕೆ ಎಲ್ಲಾ ಸಮುದಾಯಗಳಿಗೆ ಎಲ್ಲಾ ಜಿಲ್ಲೆಗಳಿಗೆ ನಾವು ರೆಪ್ರಸೆಂಟೇಷನ್ ಕೊಡಬೇಕು ಎನ್ನತಕ್ಕ ಕಾರಣವನ್ನು ರಾಜ್ಯದ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಇದಕ್ಕೋ ನಾವು ರಾಜ್ಯದ ಜನತೆಗೆ ಭರವಸೆಯನ್ನು ಕೊಟ್ಟು ಓಟನ್ನು ಪಡೆದುಕೊಂಡು ಇಲ್ಲ ಅಧಿಕಾರವನ್ನು ನಡೆಸಲು ಬಂದಿರುವುದು? ಅನಂತರ ತಾವು ತಮ್ಮ ರಾಜ್ಯಪಾಲರ ಭಾಷಣದಲ್ಲಿ ನಾವು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೋಸ್ಕರ ಸೋರಿಕೆಯನ್ನು ತಡೆಗಟ್ಟುತ್ತೇವೆಂದು. ನಾನು ಇದರ ಬಗ್ಗೆ ಯೋಚನೆ ಮಾಡಿದೆ we have this leakage culture. ನಮ್ಮಲ್ಲಿ ಬೆಂಗಳೂರು ನಗರದ ನೀರಿನ ಪೈಪ್ ಲೀಕ್ ಆಗುತ್ತವೆ, ಪ್ರಶ್ನೆ ಪತ್ರಿಕೆಗಳು ಲೀಕ್ ಆಗುತ್ತದೆ, ಭೂಪಾಲ್‌ನಲ್ಲಿ ಗ್ಯಾಸ್ ಲೀಕ್ ಆಗುತ್ತದೆ, ಆದರೆ ಜನತಾ ಶಾಸಕಾಂಗ ಪಕ್ಷದಲ್ಲಿ ಏನು ನಡೆಯುತ್ತದೆಯೋ ಅದೂ ಸಹ ಲೀಕ್ ಆಗುತ್ತದೆ. ಒಟ್ಟಿನಲ್ಲಿ ಸೋರುವಿಕೆಯ ಸಂಸ್ಕೃತಿ ಏನಿದೆ ಅದು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನೂ ಸಹ ಪ್ರತಿಬಿಂಬಿಸುತ್ತಿದೆ, ತಾವು ಏನಾದರೂ ಸಹ ಈ ಸೋರುವಿಕೆಯನ್ನು ನಿಲ್ಲಿಸುವುದಕ್ಕೆ ಅದು ಅಬ್ಕಾರಿಯಲ್ಲಿರಬಹುದು ಅಥವಾ ಯಾವುದೇ ಇಲಾಖೆಯಲ್ಲಿರಬಹುದು, ತಾವು ಇದರ ಬಗ್ಗೆ ಪ್ರಮಾಣಿಕವಾದ ಪ್ರಯತ್ನ ಮಾಡದಿದ್ದರೆ ಈ ರಾಜ್ಯಕ್ಕೆ ಯಾವುದೇ ರೀತಿಯ ಒಳ್ಳೆಯ ಆಡಳಿತವನ್ನು ಕೊಡಲು ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ತಾವು 37 ಜನರನ್ನು ಸಚಿವರನ್ನಾಗಿ ಮಾಡಿದ್ದೀರಿ. ಆದರೆ ವೀರಪ್ಪಮೊಯಿಲಿಯವರು ಒಂದು ಒಳ್ಳೆಯ ಕೆಲಸ ಮಾಡಿದ್ದರು. ಬೆಂಗಳೂರು ನಗರದ ಬದುಕು ಇಷ್ಟೊಂದು ಸಂಕೀರ್ಣವಾಗುತ್ತಾ ಹೋಗುತ್ತಿದೆ, ಬೆಂಗಳೂರಿನ ಸಮಸ್ಯೆ ಇಷ್ಟೊಂದು ದುಸ್ತರವಾಗುತ್ತ ಹೋಗುತ್ತಿದೆ ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಬೆಂಗಳೂರು ನಗರಕ್ಕೆ ಒಬ್ಬರು ಉಸ್ತುವಾರಿ ಸಚಿವರನ್ನು ಮಾಡಿದ್ದರು. ಇವತ್ತು ಬೆಂಗಳೂರು ನಗರದ ಬಗ್ಗೆ ಯಾರ ಹತ್ತಿರ ಹೋಗಿ ನಮ್ಮ ಸಮಸ್ಯೆಯನ್ನು ಹೇಳಿಕೊಳ್ಳಬೇಕೋ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಇವೊತ್ತು ಬೆಂಗಳೂರು ನಗರ ಜನತೆಯ ಪರಿಸ್ಥಿತಿ ಏನಾಗಿದೆಯೆಂದರೆ, ಬೆಳಿಗ್ಗೆ ಹೊತ್ತು ಕುಡಿಯುವುದಕ್ಕೆ ನೀರು ಸಿಕ್ಕುವುದಿಲ್ಲ, ವಿದ್ಯುಚ್ಛಕ್ತಿ ಅಭಾವ, ಬಸ್ಸಿಗೋಸ್ಕರ ಕ್ಯೂ ನಿಲ್ಲಬೇಕು, ಪರದಾಟ ತಪ್ಪಿದ್ದಲ್ಲ, ಒಂದು ವೇಳೆ ಬಸ್ ಬಂದರೆ ನೇತಾಡಿಕೊಂಡು ಹೋಗಬೇಕು. ಬಸ್ ಸಂಚಾರ ಅವ್ಯವಸ್ಥೆಯಲ್ಲಿ ಮಧ್ಯೆ ಸಿಕ್ಕಿಹಾಕಿಕೊಂಡು ತೊಳಲಾಡಬೇಕು.

ಇಷ್ಟೆಲ್ಲಾ ಪರಿಸ್ಥಿತಿಯಿರುವಾಗ ನೀವು ಇದಕ್ಕೆ ಪರಿಹಾರ ಹುಡುಕುವುದು ಬಿಟ್ಟು ಯಾವುದೋ 'ಮೆಗಾಸಿಟಿ' ಮಾಡುತ್ತೇವೆಂದು ಪ್ರಚಾರ ಮಾಡುತ್ತಿದ್ದೀರಿ. ಈ ಹಂತದಲ್ಲಿ ನಾನು ಹೇಳುತ್ತಿದ್ದೇನೆ. ಬೆಂಗಳೂರು ನಗರಕ್ಕೆ ನಿಜವಾಗಲೂ ನಾವು ಏನಾದರೂ ಪರಿಹಾರ ಹುಡುಕಬೇಕೆಂದಿದ್ದರೆ ಹಾಗೂ ಬೆಂಗಳೂರು ನಗರದ ಬೆಳವಣಿಗೆಯನ್ನು ನಿಲ್ಲಿಸುವ ದೃಷ್ಟಿಯಲ್ಲಿ ತಾವೇನಾದರೂ ಯೋಚನೆ ಮಾಡಬೇಕು. ಯಾವುದೇ ರೀತಿಯ ಉದ್ಯಮವನ್ನು ನಾನು ಇಲ್ಲಿ ಪ್ರಾರಂಭಿಸುವುದಿಲ್ಲ, ಬದಲಾಗಿ ಬೆಂಗಳೂರು ನಗರಕ್ಕೆ ಪರ್ಯಾಯವಾಗಿ ಕೆಲವಾರು ಮ್ಯಾಗ್ನೆಟ್ ಸಿಟಿಗಳನ್ನು ನಾವು ಅಭಿವೃದ್ಧಿಗೊಳಿಸಿ ಅಲ್ಲಿ ಬೆಳವಣಿಗೆ ಮಾಡಿ ಬೆಂಗಳೂರನ್ನು ನಿಯಂತ್ರಿಸುತ್ತೇವೆಂಬ ನಿರ್ಧಾರ ತೆಗೆದುಕೊಳ್ಳಬೇಕು. ನನ್ನ ಪ್ರಕಾರ ಹೇಳಬೇಕೆಂದರೆ, ವಿಧಾನಸೌಧ ಬಂತು, ಬೆಂಗಳೂರನ್ನು ರಾಜಧಾನಿಯನ್ನಾಗಿ ಮಾಡಿದೆವು. ಬೆಂಗಳೂರು ನಗರಕ್ಕೆ ರಾಜಧಾನಿಯಾಗುವ ಮುಖ್ಯ ಲಕ್ಷಣವೇ ಇಲ್ಲ, ಹತ್ತಿರದಲ್ಲಿ ಯಾವುದೂ ಕುಡಿಯುವ ನೀರಿನ ಆಸರೆ ಇಲ್ಲ, ಇವೊತ್ತು ಕಾವೇರಿ ಒಂದನೇ, ಎರಡನೇ, ಮೂರನೇ ಹಂತ ಮುಗಿದಿದ್ದು ಈಗ ನಾಲ್ಕನೇ ಹಂತಕ್ಕೆ ಫೌಂಡೇಷನ್ ಸ್ಟೋನ್ ಹಾಕಿದ್ದೇವೆ. ಇನ್ನು ಎಷ್ಟು ಹಂತಗಳನ್ನು ತರುತ್ತಾರೆ? ಇಂತಹ ಒಂದು ಹಂತದಲ್ಲಿ ಬೆಂಗಳೂರು ನಗರ ಇನ್ನಷ್ಟು ಬೆಳೆಯುತ್ತಿದೆ.

ಇದಕ್ಕೆ ತಾವು ಬೇರೇನಾದರೂ ಯೋಜನೆ ಮಾಡುವ ದಿಸೆಯಲ್ಲಿ ಪ್ರಯತ್ನಿಸಬೇಕೆಂದು ನನ್ನ ಅನಿಸಿಕೆಯಾಗಿದೆ. ಕಳೆದ 15-20 ದಿವಸಗಳಿಂದ ನಾವು ಶಾಸಕರಾದ ನಂತರ ಅನೇಕ ಬೇರೆ ಬೇರೆ ಇಲಾಖೆಗಳಿಗೆ ಭೇಟಿ ಕೊಡುತ್ತಿದ್ದೇವೆ. ಬಹಳ ವಿಚಿತ್ರವಾದ ಸಂಗತಿಯೆಂದರೆ 'ಬೆಂಗಳೂರು ನಗರ ಪ್ರಾಧಿಕಾರ' ಎಂದು ಬೆಂಗಳೂರಿನಲ್ಲಿದೆ. ಇದರ ಸ್ಥಿತಿ ಕೇಳಿದರೆ ನಮಗೆ ನಗು ಬರುತ್ತದೆ. ಪ್ರತಿ ತಿಂಗಳ 10 ಅಥವಾ 12ನೇ ತಾರೀಖಿನಂದು ಅವರು ಯಾವುದಾದರೂ ಸ್ಟ್ರೇ ಸೈಟ್ ಹುಡುಕುವುದಕ್ಕೆ ಶುರು ಮಾಡುತ್ತಾರೆ. ನಂತರ ಅದನ್ನು ಹರಾಜು ಹಾಕಿ ಅದರಿಂದ ಬರುವ ಹಣದಲ್ಲಿ ಸಂಬಳ ತೆಗೆದುಕೊಳ್ಳುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಕಾರ್ಯಗಳಾಗಬೇಕೆಂಬುದರ ಕಡೆ ಇವರಿಗೆ ಗಮನವಿದ್ದಂತಿಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ ಬಿ.ಡಿ.ಎ. ನಿಂದ ಬೆಂಗಳೂರಿಗೆ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲವಾದ್ದರಿಂದ ಇದನ್ನು ಸಾಧ್ಯವಾದಷ್ಟು ಬೇಗ ವೈಂಡ್-ಅಪ್ ಮಾಡಿ ಪ್ಲಾನಿಂಗ್‌ಗೋಸ್ಕರ ಯಾವುದಾದರೂ ಸೆಲ್‌ವೊಂದನ್ನು ಇಟ್ಟುಕೊಳ್ಳಿ. ಇವರು ಯಾವುದೇ ದೃಷ್ಟಿಯಿಂದ ಕೆಲಸ ಮಾಡದಿರುವುದರಿಂದ ಬಿ.ಡಿ.ಎ. ಸಂಸ್ಥೆಯನ್ನು ವೈಂಡ್-ಅಪ್ ಮಾಡುವುದೊಳ್ಳೆಯದೆಂದು ಹೇಳುತ್ತಿದ್ದೇನೆ. ನಿನ್ನೆ ಸದನದಲ್ಲಿ ಬಹಳ ಗಂಭೀರವಾದಂಥ ಚರ್ಚೆ ಕೋರಮಂಗಲದ ಬಳಿ ಕ್ರೀಡಾ ಸಮುಚ್ಚಯ ನಿರ್ಮಾಣ ಮಾಡುವ ಬಗ್ಗೆ ನಡೆಯಿತು.

ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಯಾವ ಜಾಗದಲ್ಲಿ ಸರ್ಕಾರದವರು ಕ್ರೀಡಾ ಸಮುಚ್ಚಯವನ್ನು ಕಟ್ಟಬೇಕೆಂದಿದ್ದಾರೋ, ನನ್ನ ಪ್ರಕಾರ the Government of Karnataka has found the national games to be a convenient excuse to develop a major Housing project in total violation of the law and demonstrating an extreme bias against the needs of the urban poor.ಯಾವ ಜಾಗದಲ್ಲಿ ಇವರು ಕ್ರೀಡಾ ಸಮುಚ್ಚಯವನ್ನು ಕಟ್ಟುವುದಕ್ಕೆ ಹೊರಟ್ಟಿದ್ದಾರೋ ಅದು ಹೌಸಿಂಗ್ ಬೋರ್ಡಿಗೆ ಸೇರಿದ್ದಲ್ಲ, 1996ನೇ ಇಸವಿಯಲ್ಲಿ ರಾಷ್ಟ್ರೀಯ ಕ್ರೀಡೆಗಳಾಗಬೇಕು, ನಿಜ. ಕ್ರೀಡೆಗಳು ಜರುಗುವುದು ಕೆಂಗೇರಿ ಬಳಿ ಇಲ್ಲವೇ ಕಂಠೀರವ ಸ್ಟೇಡಿಯಂನಲ್ಲಿ, ಆದರೆ, ಸ್ಥಳದ ಆಯ್ಕೆಯಾಗಿರುವುದು ಕೋರಮಂಗಲದಲ್ಲಿ, ಅದು ವಿಮಾನ ನಿಲ್ದಾಣಕ್ಕೆ ಹತ್ತಿರವಾಗಿದೆಯೆನ್ನುವ ಕಾರಣಕ್ಕಾಗಿ ಜಾಗ ಆಯ್ಕೆ ಮಾಡಿದ್ದಾರೋ ಏನೋ. ಅದೊಂದು ವೆಟ್ ಲ್ಯಾಂಡ್ ಆಗಿದ್ದು, ಬೆಂಗಳೂರಿನ ಸಿ.ಟಿ.ಪಿ. ಪ್ರಕಾರ

ಅದನ್ನು ಗಾರ್ಡನ್ ಇಲ್ಲವೇ ಪಾರ್ಕ್ ಎಂದು ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದ ದಾಖಲೆ ನಮ್ಮ ಹತ್ತಿರವಿದೆ. ಸರ್ಕಾರಿ ಅಧಿಕಾರಿಗಳು ಇದನ್ನು ದಿನಾಂಕ 5.11.94ರಂದು ಚರ್ಚೆಗೆ ತೆಗೆದುಕೊಂಡು ಹೇಳುತ್ತಾರೆ.

"In the recently approved comprehensive development plan of Bangalore, the proposed land is classified as a park and open space".

ಸರ್ಕಾರದ ನಿಯಮ ಇದೆ. ಯಾವುದೇ ಪಾರ್ಕ್ ಅಂಡ್ ಓಪನ್ ಸ್ಪೇಸ್ನಲ್ಲಿ ಈ ರೀತಿಯ ಚಟುವಟಿಕೆಗಳು ನಡೆಯಬಾರದು ಎಂದು. ಜೊತೆಗೆ ಅದು ಕೆರೆ ಅಂಗಳ ಆಗಿರುವುದರಿಂದ ಯಾವುದೇ ರೀತಿಯ ಕಾಮಗಾರಿ ಬಂದರೆ, ಆಗ ಏನಾಗಬಹುದು ಎಂಬುದಕ್ಕೆ ಬೆಂಗಳೂರಿನ ಜಕ್ಕರಾನಕೆರೆ ನಮಗೆ ಜೀವಂತ ಉದಾಹರಣೆಯಾಗಿದೆ. ಇದನ್ನು ಕೇವಲ 11 ದಿವಸದ ಸುಖಕ್ಕೋಸ್ಕರ ಕಟ್ಟಿ ಸರ್ಕಾರೀ ಅದಿಕಾರಿಗಳಿಗೆ ಮತ್ತು ಇನ್ನಿತರ ಅಧಿಕಾರಿಗಳಿಗೆ ಕೊಡುವ ಒಂದು ಹುನ್ನಾರ ಇದರಲ್ಲಿ ಇದೆ. ದಯವಿಟ್ಟು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ, ಈ ರೀತಿಯ ಓಪನ್ ಸ್ಪೇಸ್ ಎಂದು ಸಿ.ಡಿ.ಪಿ. ಯಲ್ಲಿ ಏನು ಇದೆ, ಯಾವುದು ಲಂಗ್ ಸ್ಪೇಸ್ ಎಂದು ಇದೆ ಇದಕ್ಕೆ ವಿರುದ್ಧವಾಗಿ ಇದ್ದಾರೆ. ಅಲ್ಲಿ ನೀವು ಈ ಕಟ್ಟಡ ಕಟ್ಟುವುದನ್ನು ದಯವಿಟ್ಟು ಬಿಟ್ಟು ಬೇರೆ ಎಲ್ಲಾದರೂ ಕಟ್ಟಿ. ನಮ್ಮ ನಾಯಕರಾದ ಯಡಿಯೂರಪ್ಪನವರು ಏನು ವಿರೋಧ ಮಾಡಿದ್ದಾರೆ ಅದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಯಾವುದೇ ಸಮುಚ್ಚಯ ಅಲ್ಲಿ ಬರಬಾರದು. ನನಗೆ ಆಶ್ಚರ್ಯವಾಯಿತು ನಾನು ಒಬ್ಬ ನಗರಪಾಲಿಕಾ ಸದಸ್ಯ. ಅಲ್ಲಿಯ ಅನ್ಯಾಯವನ್ನು ನಾನು ಪ್ರತಿಭಟಿಸುತ್ತಿದ್ದೇನೆ. ಮುಖ್ಯ ಮಂತ್ರಿಗಳ ಪರಿಹಾರನಿಧಿ ಎಂದು ಇದೆ, ಅದರಿಂದ ಪ್ರಕೃತಿಯ ವಿರೋಪಕ್ಕೆ ಒಳಗಾದರೆ ಅಥವಾ ಯಾರಿಗಾದರೂ ಆರೋಗ್ಯ ಸರಿ ಇಲ್ಲದಿದ್ದರೆ ಕೊಡಬೇಕು. ಇಲ್ಲಿ ನನ್ನ ಹತ್ತಿರ ಒಂದು ಪತ್ರ ಇದೆ. ಅದನ್ನು ಕರ್ನಾಟಕ ರಾಜ್ಯ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣಪ್ಪನವರು ಬರೆದಿದ್ದಾರೆ. ನನಗೆ ಬಹಳ ಆಶ್ಚರ್ಯ ಆಯಿತು. 1994ರಲ್ಲಿ ನಡೆದ ಬೆಂಗಳೂರಿನ ಸಮಾವೇಶವನ್ನು ತಾವುಗಳೆಲ್ಲಾ ಸ್ಮರಿಸಬಹುದು.

ಇದನ್ನು ವೈಭವದಿಂದ ನಡೆಸಲು ಹಣದ ಕೊರತೆ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ ಪರಿಹಾರನಿಧಿಯಿಂದ ಸುಮಾರು 25 ಲಕ್ಷ ರೂಪಾಯಿಗಳನ್ನು ಪಡೆದೆವು. ನೌಕರರ ಸಮ್ಮೇಳನ ಮಾಡುವುದಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ 25 ಲಕ್ಷ ರೂಪಾಯಿ ಪಡೆದು, ಅದರಲ್ಲಿ ಕೆಲವು ಲಕ್ಷ ರೂಪಾಯಿಗಳನ್ನು ಸಮಾವೇಶಕ್ಕೆ ಖರ್ಚು ಮಾಡಿದೆವು. ಹಾಗೂ ಒಂದು ಕಾಂಟೆಸ್ಸಾ ಕಾರನ್ನು ಸಂಘಕ್ಕೆ ಕೊಂಡುಕೊಂಡೆವು, ಉಳಿದವನ್ನು ಅಂದರೆ ಹತ್ತೂವರೆ ಲಕ್ಷ ರೂಪಾಯಿಗಳನ್ನು ನಾವು ಡೆಪಾಸಿಟ್ ಇಟ್ಟಿದ್ದೇವೆ. ಹಿಂದಿನ ಸರ್ಕಾರ 1994ರಲ್ಲಿ ಇದು ಆಯಿತು. ಈ ರೀತಿ ನಡೆಯುತ್ತಿರುವ ನೌಕರರ ಸಂಘದ ಒಳಜಗಳ ಇಂದು ಬೀದಿಗೆ ಬಂದಿದೆ. ಆದುದರಿಂದ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಈ ನೌಕರರ ಸಂಘಕ್ಕೆ ಕೂಡಲೇ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಆಗಿನ ಅವ್ಯವಹಾರ ಏನಿದೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತೆಗೆದು ಅವರು ಮೋಜ್ ಮಾಡುವುದು ಸರ್ಕಾರೀ ನೌಕರರಿಗೆ ನಾಮ ಹಾಕುವುದು, ಇದರ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಬೇಕು. ಇಲ್ಲಿಂದ ಹಣ ತೆಗೆದುಕೊಂಡು ಏನೋ ಮಾಡುವುದು ಅಥವಾ ಚುನಾವಣೆ ನಡೆಸುವುದು ಈ ರೀತಿ ಆಗಬಾರದು, ನಮ್ಮ ಸ್ನೇಹಿತರಾದ ಸಭಾಪತಿಯವರು ಬಹಳ ಚೆನ್ನಾಗಿ ಹೇಳಿದರು.

ಓಟು ಕೊಟ್ಟು ಜನ ನಮ್ಮನ್ನು ಏಕೆ ಕಳುಹಿಸಿದ್ದಾರೆ, ನಾವು ಯಾರ ವಿಶ್ವಾಸದಿಂದ ಬಂದಿದ್ದೇವೆ ಎಂದು ನಾನು ಮೂರು ದಿವಸಗಳಿಂದ ನೋಡುತ್ತಿದ್ದೇನೆ, ಅಲ್ಲಿ ಶಾಲಾ

ಮಕ್ಕಳು ಬಹಳ ಗಂಭೀರವಾಗಿ ಸಾಲಿನಲ್ಲಿ ಬಂದು ಕುಳಿತು ಸದ್ದು ಮಾಡದೆ ನಮ್ಮ ಕಲಾಪವನ್ನು ವೀಕ್ಷಿಸಿಕೊಂಡು ಹೋಗುತ್ತಿದ್ದಾರೆ. ಅನೇಕ ಜನ ವಿಧಾನಸೌಧಕ್ಕೆ ಕೈ ಮುಗಿಯುವುದನ್ನು ನಾನು ನೋಡಿದ್ದೇನೆ. ಇಂತಹ ಸಂದರ್ಭ ಬಂದಿರುವಾಗ, ಮುಂದಿನ ಐದು ವರ್ಷಗಳು ನಾವು ಬಹಳ ಒಳ್ಳೆಯ ಜನಪ್ರತಿನಿಧಿಗಳಾಗಿ ಕೆಲಸ ಮಾಡಬೇಕು. ಇಂಡಿಯನ್ ರೆಡ್ಕ್ರಾಸ್ನಲ್ಲಿ ಒಂದು ಸ್ಲೋಗನ್ ಇದೆ.

"Don't grumble about cost of living, think on whose cost you are living." ಎಂದು ನಾವುಗಳೆಲ್ಲರೂ ಯಾರ ಖರ್ಚಿನಲ್ಲಿ ಇವತ್ತು ಶಾಸಕರಾಗಿ ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಇಲ್ಲಿ ಬಂದಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ನೆನಪಿನಲ್ಲಿಟ್ಟುಕೊಂಡು ನಮ್ಮನ್ನು ಆರಿಸಿದ ಪ್ರಭು ಯಾರಿದ್ದಾರೆ. ಆ ಪ್ರಜೆ ಅವನ ಅನಿಸಿಕೆಗಳಿಗೆ, ಅವನ ಅಪೇಕ್ಷೆಗಳಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು. ಈ ರೀತಿ ಕೆಲಸ ಮಾಡುವ ಸೂಚನೆಗಳು ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣುತ್ತಿಲ್ಲ, ಡಿಸಂಬರ್ನಲ್ಲಿ ಎಲೆಕ್ಷನ್ ನಡೆಯಿತು, ಆದ್ದರಿಂದ ರಿಚ್ಯುಯಲಿಸ್ಟಿಕ್ ಆಗಿ ಮಾಡಿಬಿಟ್ಟಿದ್ದೀರಿ. ಆದುದರಿಂದ ಮುಂದಿನ ರಾಜ್ಯಪಾಲರ ಭಾಷಣದಲ್ಲಿ ಲವಲವಿಕೆ ಕಾಣುತ್ತದೆ ನಮಗೂ ಉತ್ಸಾಹ ಬರುತ್ತದೆ, ಹಿರಿಯರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇವೆ ಎಂದು ಅಂದುಕೊಂಡು ಮುಂದೆ ಯಾರಿಗೂ ಕೂಡ ಅಧಿಕಾರಿಗಳಿಗೆ ಈ ರೀತಿ ವರ್ಗಾವಣೆ ಮಾಡಬೇಡಿ. ಜನರಿಗೆ ವಿಶ್ವಾಸ ಬರುವ ಅಧಿಕಾರ ಮಾಡಿ. ಎಂದು ಕೇಳಿಕೊಂಡು ತಾವು ಕೊಟ್ಟಿರುವ 10 ನಿಮಿಷಗಳಲ್ಲಿ ವಿಚಾರ ಬಹಳ ಗೊಂದಲವಾಯಿತು. ಆದರೂ ಕೂಡ ಪ್ರಯತ್ನ ಪಟ್ಟಿದ್ದೇನೆ. ತಮಗೆ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಸನ್ಮಾನ್ಯ ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಶಾಸನಸಭೆಯಲ್ಲಿ ಇರತಕ್ಕಂಥ ಶಾಸಕರು ಎಲ್ಲಾ ಖಾಲಿಯಾಗುವುದಕ್ಕೆ ಮೊದಲೇ ಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ತಿಳಿದುಕೊಂಡೆ ಕೊನೆಗೆ ನಾನು ನೀವು ಮತ್ತು ಇನ್ಯಾರಾದರೂ ಮಾತನಾಡುವುದಕ್ಕೆ ಅವಕಾಶ ಸಿಗದೇ ಇರುವಂತಹ ಕೆಲಸ ಸ್ನೇಹಿತರು ಮಾತ್ರ ಇಲ್ಲಿ ಉಳಿದುಕೊಳ್ಳಬಹುದು, ಆದರೂ ಪರವಾಗಿಲ್ಲ ಮಾತನಾಡಲೇಬೇಕು, ಎಂದು ನಾಲ್ಕು ದಿವಸದಿಂದ ಕಾಯುತ್ತಿದ್ದೇನೆ. ಕರ್ನಾಟಕದಲ್ಲಿ ಏನು ಒಂದು ಶಾಸನ ಸಭೆ ಚುನಾವಣೆ ನಡೆಯಿತು ಅದರಲ್ಲಿ ಕರ್ನಾಟಕದ ಜನತೆ ಒಂದು ಮಹತ್ವವಾದ ತೀರ್ಪನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ನಾನು ಅಖಿಲಭಾರತ ಅಣ್ಣಾ ಡಿಎಂಕೆ ಪಕ್ಷದ ಪರವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಜನ ಏನು ತೀರ್ಪನ್ನು ಕೊಟ್ಟಿದ್ದಾರೆ. ನನ್ನನ್ನು ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರು ಮಹಾ ನಗರದ ಹೃದಯ ಭಾಗವಾಗಿರುವಂತಹ ಗಾಂಧಿನಗರ ಕ್ಷೇತ್ರದಿಂದ ನಾನು ಅಖಿಲ ಭಾರತ ಅಣ್ಣಾ ಡಿಎಂಕೆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ತಮ್ಮ ಮುಂದೆ ಮಾತನಾಡುವಂತಹ ಸಂದರ್ಭ ನನಗೆ ಒದಗಿದೆ. ನಾನು ಯಾವ ವಾತಾವರಣದಲ್ಲಿ ಇದ್ದೇವೆಂದರೆ ಬೆಳಿಗ್ಗೆ ಮಾತನಾಡಿದಂತಹ ಹಿರಿಯ ಸದಸ್ಯರು ಹೇಳಿದರು, ಚುನಾವಣೆ ಮುಂಚೆ ಪತ್ರಿಕೆಗಳು ನಮ್ಮ ಪರ ಬರೆಯಲಿಲ್ಲ, ವಿರೋಧ ಬರೆಯಲಿಲ್ಲ ಎಂದು ಗೆದ್ದಮೇಲೂ ಕೂಡ ವಿರೋಧವನ್ನು ಸಂಪಾದನೆ ಮಾಡಿಕೊಂಡು ಗಾಂಧಿನಗರದಲ್ಲಿ ಅಖಿಲಭಾರತ ಅಣ್ಣಾ ಡಿಎಂಕೆ ಹೇಗೆ ಗೆದ್ದಿತು, ಕೆಲವು ಮೇಧಾವಿಗಳು ಎಂದು ಹೇಳುವ ಜನ ಬುದ್ಧಿಜೀವಿಗಳು, ಅಣ್ಣಾ ಡಿಎಂಕೆ ಪಕ್ಷ ಅಲ್ಲಿ ಗೆದ್ದಿರುವುದು ಬಹಳ ಅಪಾಯಕಾರಿಯಾದಂತಹ

ಒಂದು ಬೆಳವಣಿಗೆ ಎಂದು ಪತ್ರಿಕಾ ಹೇಳಿಕೆಯನ್ನು ಕೊಡುವಂತಹ ಸಂದರ್ಭದಲ್ಲಿ ನನಗೆ ಅರ್ಥವಾಗಲಿಲ್ಲ.

ನಾನು ಏನಾದರೂ ಈ ದೇಶದ ರಹಸ್ಯವನ್ನು ಬೇರೆ ದೇಶಕ್ಕೆ ಹೆರ್ಗಾವಣೆ ಮಾಡಿ ಅಥವಾ ಈ ದೇಶದ ಗಡಿ ಭಾಗಗಳ ಮ್ಯಾಪ್ ಒಂದನ್ನು ಪ್ರಿಂಟ್ ಮಾಡಿ ಅದು ಬೇರೆ ದೇಶಕ್ಕೆ ಸೇರುವ ರೀತಿಯಲ್ಲಿ ಏನಾದರೂ ಮಾಡಿದ್ದೇನೋ ಅಥವಾ ನಮ್ಮ ಪಕ್ಷ ಅದರಲ್ಲಿ ಸೇರಿದೆಯೇ ಎಂಬುದು ನನಗೆ ಅರ್ಥವಾಗಲಿಲ್ಲ. ಅಂತಹ ಒಂದು ವಾತಾವರಣದಲ್ಲಿ ಇವತ್ತು ನಾನು ಗಾಂಧೀನಗರ ಕ್ಷೇತ್ರದ ಎಂಎಲ್ಎ ಆಗಿ ಮಾತನಾಡುವಂತಹ ಸಂದರ್ಭ ಬಂದಿದೆ. ಬೆಂಗಳೂರಿನ ಒಂದು ಹೃದಯ ಭಾಗವಾದ ರೈಲ್ವೆ ನಿಲ್ದಾಣ ಬಸ್ ನಿಲ್ದಾಣ ಕೆಂಪೇಗೌಡ ರಸ್ತೆ, ಬೆಂಗಳೂರು ನಗರದಲ್ಲಿ ಇರತಕ್ಕಂಥ ಬಹು ಪಾಲು ಚಲನ ಚಿತ್ರಮಂದಿರಗಳನ್ನು ಹೊಂದಿರತಕ್ಕಂಥ ಗಾಂಧೀನಗರ ಪ್ರದೇಶವಾದ ಕೆಂಪೇಗೌಡ ರಸ್ತೆ ಏನಿದೆ ಇವೆಲ್ಲಾ ನನ್ನ ಕ್ಷೇತ್ರಕ್ಕೆ ಇವತ್ತು ಕರ್ನಾಟಕದ ಬರುತ್ತದೆ. ರಾಜ್ಯದ ಜನಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಭಾಗ ಒಂದು ಅರ್ಧ ಕೋಟಿ ಜನಸಂಖ್ಯೆಯನ್ನು ಹೊತ್ತಿರತಕ್ಕಂಥ ಈ ಬೆಂಗಳೂರಿನ ಭೂಮಿಯನ್ನು ನಾನು ಜ್ಞಾಪಕ ಮಾಡಿಕೊಳ್ಳುತ್ತಿದ್ದೇನೆ. ತಮಗೆ ಗೊತ್ತಿದೆ. ನಾವು ಕಾಲೇಜು ದಿನಗಳಲ್ಲಿ ಮಲ್ಲೇಶ್ವರದಲ್ಲಿ ಇದ್ದಂತಹವರು. ನಾನು ಮಲ್ಲೇಶ್ವರದ ಪ್ರಜೆ. ಇವತ್ತೂ ಕೂಡ ಮಲ್ಲೇಶ್ವರದ ಮತದಾರ. ನಾನು ಒಂದು ಕಾಲದಲ್ಲಿ ಮಲ್ಲೇಶ್ವರದ ಒಂದನೇ ಕ್ರಾಸಿನಿಂದ 18ನೇ ಕ್ರಾಸ್ನವರೆಗೂ ನಡೆದು ಬೀದಿಯಲ್ಲಿ ಬಂದರೆ, ಬೀದಿಯಲ್ಲಿ ಹೋಗುವವರು ಇಂತಿಂಥ ಮನೆಯವರು ಎಂದು ಗುರುತ್ತಿಸುತ್ತಿದ್ದೆವು. ಇವತ್ತು ನನ್ನ ಮನೆಯ ಪಕ್ಕದಲ್ಲಿ ಇರತಕ್ಕಂಥವರನ್ನು ಯಾರಾದರೂ ವಿಳಾಸ ಕೇಳಿಕೊಂಡು ಬಂದರೆ ಗುರುತಿಸುವುದಕ್ಕೆ ಆಗುತ್ತಾ ಇಲ್ಲ.

ಅಷ್ಟು ವೇಗವಾಗಿ ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು ನಗರ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಯಶವಂತ ಪುರದಿಂದ ವಿಧಾನಸೌಧಕ್ಕೆ, ರಾಜಾಜಿನಗರದಿಂದ ವಿಧಾನಸೌಧಕ್ಕೆ ಬರಬೇಕಾದರೆ ಒಂದು ಗಂಟೆ ಕಾಲ ವೆಚ್ಚ ಮಾಡಬೇಕಾಗಿದೆ. ಅಂದು ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ಮಹಾನಗರ ಪಾಲಿಕೆ ಮುಂದೆ ಏನು ಒಂದು ಸುರಂಗ ಮಾರ್ಗ, ಮೇಲು ಸೇತುವೆ ಕಟ್ಟುವುದಕ್ಕೆ ಅಲ್ಲಿ ಶಂಕುಸ್ಥಾಪನೆ ಮಾಡಿದರು ಈವತ್ತಿನವರೆಗೂ ಅದು ನೆರವೇರಿಲ್ಲ. ಇವತ್ತು ಬೆಂಗಳೂರಿನಿಂದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕಾದರೆ ಒಂದು ದೊಡ್ಡ ಹೋರಾಟವನ್ನು ಮಾಡಬೇಕಾಗಿದೆ. ಬೆಂಗಳೂರು ನಗರದಲ್ಲಿ ಇವತ್ತು ದಿನನಿತ್ಯ ದ್ವಿಚಕ್ರ ವಾಹನಗಳು, ಹೊಸ ಹೊಸ ಕಾರುಗಳು, ಬಸ್ಸುಗಳು, ವಿಧವಿಧ ವ್ಯಾನುಗಳು ಬಂದಿದೆ. ಹೊರಗಡೆ ಎಂದರೆ ಹೊರ ದೇಶಗಳಿಂದ, ಸುಂದರವಾದಂತಹ ಕನ್ನಡ ನಾಡು, ಬೆಂಗಳೂರು ನಗರವನ್ನು ನೋಡುವುದಕ್ಕೆ ಬರುತ್ತಿದ್ದಾರೆ. ಆದರೆ ಬೆಂಗಳೂರಿನಲ್ಲಿ 25 ವರ್ಷಗಳ ಮೊದಲು ಆಗಬೇಕಾಗಿದ್ದ ಸುರಂಗ ಮಾರ್ಗಗಳು, ಮೇಲು ಸೇತುವೆಗಳು ಇವುಗಳನ್ನು ಮಾಡುವುದಕ್ಕೆ ಆಗಿಲ್ಲ. ಇವತ್ತು ನಾವು ಶಾಸನ ಸಭೆಗೆ ಬರಬೇಕು ಎಂದರೆ ಕೂಡ ಸರಿಯಾದ ಸಮಯದಲ್ಲಿ, ಸಿಗ್ನಲ್ಗಳನ್ನು ದಾಟಿಕೊಂಡು ಬರುವುದಕ್ಕೆ ಆಗುತ್ತಾ ಇಲ್ಲ.

ನಾನು ಡೆಲ್ಲಿ ನೋಡತಕ್ಕಂಥ ಸಂದರ್ಭದಲ್ಲಿ ಹೇಳುವುದಾದರೆ, ಅಲ್ಲಿ ಇರತಕ್ಕಂಥ ಕೇಂದ್ರ ಸರ್ಕಾರವೇ ಅಲ್ಲಿ ರೋಡ್ಗಳಿಗೆ ಟಾರುಗಳನ್ನು ಹಾಕುವುದು, ಉದ್ಯಾನವನ ಮಾಡುವಂತಹ ವ್ಯವಸ್ಥೆ ಅಲ್ಲಿ ಇದೆ ಎಂದು ಹೇಳುವಾಗ ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ಇವತ್ತು ಕೇಂದ್ರ ಸರ್ಕಾರದ ಯಾವುದಾದರೂ ರೀತಿಯ ಹಣವನ್ನು ತೆಗೆದುಕೊಂಡು ರಾಜ್ಯ ಸರ್ಕಾರ ಮಾಡಬೇಕು. ಹಾಗೆಯೇ ಬೆಂಗಳೂರು ಮಹಾನಗರ ಪಾಲಿಕೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ಮಿತ್ರರಾದ ಸುರೇಶ್ ಕುಮಾರ್ರವರು ಹೇಳಿದರು. ಬಿಡಿಎನಲ್ಲಿ ಅಲ್ಲಿ ಪ್ರತಿ ವರ್ಷ, ಪ್ರತಿ

ತಿಂಗಳು ಸೈಟುಗಳನ್ನು ಮಾಡಿ ಅಲ್ಲಿ ಸಿಬ್ಬಂದಿಗಳಿಗೆ ಸಂಬಳ ಕೊಡುವಂತಹ ಪರಿಸ್ಥಿತಿ ಎಂದು. ಅದೇ ರೀತಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇರತಕ್ಕಂಥ ನೌಕರರಿಗೆ ಸಂಬಳ ಕೊಡಬೇಕಾದರೆ ಬಹಳ ಕಷ್ಟ ಪರಿಸ್ಥಿತಿ ಇದೆ. ಆಕ್ಟ್ರಾಯ್ ತೆಗೆದಮೇಲೆ ಪ್ರತಿ ತಿಂಗಳು, ಪ್ರತಿ ವಾರ, ಪ್ರತಿ ದಿವಸ ಕೂಡ ರಾಜ್ಯ ಸರ್ಕಾರದ ಬಳಿ ಬಂದು ಅಲ್ಲಿ ಬರತಕ್ಕಂಥ ಮೇಯರ್‌ಗಳು, ಕಮಿಷನರ್‌ಗಳು ಭಿಕ್ಷೆ ಪಾತ್ರೆಗಳನ್ನು ತೆಗೆದುಕೊಂಡು ಭಿಕ್ಷೆ ಕೇಳುವಂತಹ ಪರಿಸ್ಥಿತಿಯಲ್ಲಿ ಇವತ್ತು ಬೆಂಗಳೂರು ಮಹಾನಗರ ಪಾಲಿಕೆ ಇದೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಂಡಿತವಾಗಿಯೂ ಕೂಡ ಇನ್ನು ನೂರು ವರ್ಷ ಹೋದರೂ ಕೂಡ ಸುರಂಗ ಮಾರ್ಗ, ಮೇಲು ಸೇತುವೆ ನಿರ್ಮಾಣವಾಗುವುದಿಲ್ಲ. ಬೆಂಗಳೂರಿನಲ್ಲಿ ಯಾರೂ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಬರಲು ಸಾಧ್ಯವಾಗದಂಥ ವಾತಾವರಣ ಉಂಟಾಗಿದೆ. ಹೊಸ ಸರ್ಕಾರ ಸಾಧ್ಯವಾದಷ್ಟು ಬೇಗ ಸುರಂಗ ಮಾರ್ಗವನ್ನು ಹಾಗೂ ಮೇಲು ಸೇತುವೆಯನ್ನು ನಿರ್ಮಾಣ ಮಾಡಲು ಮುಂದೆ ಬರಬೇಕಾಗಿದೆ. ಬೆಳಿಗ್ಗೆ ಮಾತನಾಡುವಾಗ ಮತ್ತು ಮೂರು ನಾಲ್ಕು ದಿವಸದಿಂದ ಇಲ್ಲಿ ಮಾತನಾಡಿದಂತಹ ಸದಸ್ಯರು ನಿಮ್ಮ ಆಡಳಿತದಲ್ಲಿ ಇಂತಿಂತಹ ಕೆಲಸಗಳು ನಡೆದಿವೆ. ನಮ್ಮ ಆಡಳಿತದಲ್ಲಿ ಇಂತಿಂತಹ ಕೆಲಸಗಳನ್ನು ನಡೆದಿವೆ ಎಂಬ ಆಪಾದನೆ ಪಟ್ಟಿಗಳ ಸುರಿಮಳೆಗಳನ್ನು ನಾವು ನೋಡಿದ್ದೇವೆ.

ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಎಂತಹ ವಾತಾವರಣ ಬೇಕೆಂದರೆ, ಈ ರಾಜ್ಯದ ಜನ ಅದು ಆಯೋಧ್ಯೆ ಘಟನೆ ಇರಬಹುದು, ಕಾವೇರಿ ಘಟನೆ ಇರಬಹುದು, ಅಥವಾ ಟಿ.ವಿಯಲ್ಲಿ ಉರ್ದು ಸುದ್ದಿಯನ್ನು ತೋರಿಸುವ ಘಟನೆಯಾದರೂ ಸರಿ, ಇವುಗಳ ಬಗ್ಗೆ ಈ ನಾಡಿನ ಜನರು ಬಹಳ ನೊಂದಿದ್ದಾರೆ, ಅವರು ನೆಮ್ಮದಿ ಇಲ್ಲದೆ ಇದ್ದಾರೆ. ಆ ಜನರಿಗೆ ನೆಮ್ಮದಿಯ ಜೀವನವನ್ನು ನೀಡುವಂತಹ ಒಂದು ಭರವಸೆಯನ್ನು, ವಾತಾವರಣವನ್ನು ಈ ಹೊಸ ಸರ್ಕಾರ ನಿರ್ಮಾಣ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಹೊಸ ಸರ್ಕಾರ ಒಂದು ವಾರದಲ್ಲೋ, ತಿಂಗಳಲ್ಲೋ ಆಕಾಶವನ್ನೇ ಧರೆಗೆ ಇಳಿಸುತ್ತಾರೆಂದು ಯಾರೂ ಎದುರು ನೋಡುವುದಿಲ್ಲ, ಅದನ್ನು ಎದುರು ನೋಡುವುದಕ್ಕೂ ಬಯಸುವುದಿಲ್ಲ, ನಾನು ಗಾಂಧೀನಗರ ಕ್ಷೇತ್ರವೆಂದು ಹೇಳಿದೆ. ಬೆಂಗಳೂರು ನಗರದಲ್ಲಿ ಶಾಸನಸಭಾ ಚುನಾವಣೆಯಾದ ಮೇಲೆ ನೀರು ಇಲ್ಲ, ವಿದ್ಯುತ್ ಇಲ್ಲ, ಗಾಂಧೀನಗರದಲ್ಲಿ ಅಣ್ಣಾ ಡಿ.ಎಂ.ಕೆ.ಗೆ ಓಟು ಹಾಕಿದ್ದಕ್ಕೆ ನೀರಿಲ್ಲ, ವಿದ್ಯುತ್ ಬಂದಿಲ್ಲವೆಂದು ಹೇಳುತ್ತಾರೆ. ನಾನು ಇರುವಂತಹ ಮಲ್ಲೇಶ್ವರದಲ್ಲಿ ಚಕ್ರದ ಗುರುತಿಗೆ ಓಟು ಹಾಕಿದ್ದಕ್ಕೆ ನೀರಿಲ್ಲ, ವಿದ್ಯುತ್ ಇಲ್ಲವೆಂದು ಒಂದೊಂದು ರಾಜಕೀಯ ಪಕ್ಷದ ಕಾರ್ಯಕರ್ತರು ಹೇಳುತ್ತಿದ್ದಾರೆ. ಆದರೆ ಇವತ್ತು ರಾಜ್ಯದ ವಿದ್ಯುತ್ ಅನ್ನು ನಾವು ಬೇರೆ ರಾಜ್ಯದಿಂದ ತೆಗೆದುಕೊಳ್ಳುವಂತಹ ಪರಿಸ್ಥಿತಿ ಇದೆ. ಇದು ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ, ಬೆಂಗಳೂರು ನಗರದಲ್ಲಿ ನೀರಿನ ತೊಂದರೆ ಮತ್ತು ವಿದ್ಯುತ್ ತೊಂದರೆ ಇದೆ. ಈ ತೊಂದರೆಗಳನ್ನು ಬಗೆಹರಿಸಬೇಕಾಗಿದೆ. ಇನ್ನು ಒಂದು ಬಹಳ ಮುಖ್ಯವಾದ ವಿಚಾರ. ಮಹಿಳೆಯರ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹೇಳಿದ್ದೀರಿ. ನಾನು ಅದನ್ನು ಅಭಿನಂದಿಸುತ್ತೇನೆ.

ಆದರೆ ಇವತ್ತಿನ ದಿವಸ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಎದುರು ಲಕ್ಷ್ಮೀಪುರಿ ಎಂಬ ಗುಡಿಸಲು ಪ್ರದೇಶದಲ್ಲಿ 26ನೇ ತಾರೀಖು ಒಂದು ಸಾರಾಯಿ ಅಂಗಡಿಯನ್ನು ತೆಗೆದಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಸರ್ಕಾರಕ್ಕೆ ಹಣ ಮಾತ್ರ ಬೇಕಾದರೆ ಬೀದಿ. ಬೀದಿಯಲ್ಲಿ ಕೊಳಾಯಿ ಪೈಪ್ ಮೂಲಕ ಸಾರಾಯಿ, ವಿಸ್ಕಿ, ಬ್ರಾಂದಿ ಕೊಡಿ. ಆದರೆ ಹೆಣ್ಣು ಮಕ್ಕಳು ಕೊಳಾಯಿಯಲ್ಲಿ ನೀರು ಹಿಡಿಯುವಂತಹ ಪ್ರದೇಶಗಳಲ್ಲಿ, ಬೋರ್‌ವೆಲ್ಲಗ್ಗಿರುವಂತಹ ಜಾಗ, ವಾಸವಾಗಿರುವಂತಹ ಮನೆಗಳ ಹತ್ತಿರ, ದೇವಸ್ಥಾನ, ಮಸೀದಿ, ಇವುಗಳು ಇರುವ ಕಡೆಗಳಲ್ಲಿ ಇವತ್ತಿನ

ದಿವಸ ಸಾರಾಯಿ ಅಂಗಡಿಗಳನ್ನು ತೆಗೆಯಬೇಡಿ. ಲಕ್ಷ್ಮೀಪುರಿ ಎನ್ನುವಂತಹ ಸ್ಥಳದಲ್ಲಿ ಎಲ್ಲಿಗೋ ತೆಗೆದುಕೊಂಡಂತಹ ಲೈಸೆನಸ್ಸು ಉಪಯೋಗಿಸಿ ಸಾರಾಯಿ ಅಂಗಡಿಯನ್ನು 26ನೇ ತಾರೀಖು ತೆಗೆದಿದ್ದಾರೆ. ಅಲ್ಲಿರತಕ್ಕಂಥವರು ಮುನಿಯಪ್ಪನೇ ಸಾರಾಯಿ ಅಂಗಡಿ ತೆಗೆದಿದ್ದಾರೆ ಎನ್ನತಕ್ಕ ಆಪಾದನೆ ನನ್ನ ಮೇಲೆ ಬಂದಿದೆ. ನಾನು ಈ ಸದನದಲ್ಲಿ ತಾಳ್ಮೆಯಿಂದ ಕೇಳಿಕೊಳ್ಳುತ್ತಿದ್ದೇನೆ. ಈ ರೀತಿ ಮನೆಗಳು, ಇರುವಂತಹ ಪ್ರದೇಶಗಳಲ್ಲಿ ಸಾರಾಯಿ ಅಂಗಡಿಗಳು, ವೈನ್ ಶಾಪ್ಗಳನ್ನು ತೆಗೆಯುವುದಕ್ಕೆ ಅವಕಾಶ ಕೊಡಬೇಡಿ. ಹೆಣ್ಣು ಮಕ್ಕಳು ಮಾನ ಮರ್ಯಾದೆಯಿಂದ ಬೀದಿಯಲ್ಲಿ ಓಡಾಡುವಂತಹ ರೀತಿಯಲ್ಲಿ ವಾತಾವರಣ ನಿರ್ಮಾಣ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಗಾಂಧೀನಗರ ವಿಧಾನಸೌಧಕ್ಕೆ ಹತ್ತಿರದಲ್ಲಿದೆ, ನೀವು ಯಾವಾಗ ಬೇಕಾದರೂ ಬಂದು ಕೆಲಸ ಮಾಡಿಸಿಕೊಳ್ಳಬಹುದು. ನೀವೆಲ್ಲಾ ಹಳೆಯ ಸ್ನೇಹಿತರು. ನೀವು ಸಹಕಾರ ಕೊಡಲೇ ಹೋದರೆ ಹೇಗೆ?

ಶ್ರೀ ಬಿ. ಮುನಿಯಪ್ಪ : ಈ ರೀತಿ ಸಮಸ್ಯೆಯಾಗಿರುವುದರಿಂದ ನಾನು ಮಾತನಾಡುತ್ತಿದ್ದೇನೆ. ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ತಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡದೇ ನಾನು ಮೊದಲೇ ಹೇಳಿದ ರೀತಿಯಲ್ಲಿ ಜನರು ನೆಮ್ಮದಿಯಿಂದ ಉಸಿರಾಡುವಂತಹ ವಾತಾವರಣ ನಿರ್ಮಾಣವಾಗಬೇಕಾಗಿದೆ. ಆಯೋಧ್ಯ ಘಟನೆ, ದೂರದರ್ಶನದಲ್ಲಿ ಉರ್ದು ವಾರ್ತೆಯನ್ನು ತೋರಿಸುವ ಘಟನೆ, ಕಾವೇರಿ ಘಟನೆಯಿಂದ ಆದಂತಹ ನೋವು ಇವುಗಳನ್ನು ಜನರು ಇನ್ನು ಮರೆತಿಲ್ಲ, ಜನರು ನೆಮ್ಮದಿಯಿಂದ ಜೀವನ ಮಾಡವಂತಹ ವಾತಾವರಣ ಉಂಟು ಮಾಡಬೇಕಾಗಿದೆ. ಇವತ್ತಿನ ದಿವಸ ಸರ್ಕಾರಗಳು ಬದಲಾವಣೆಯಾದರೂ, ಮುಖ್ಯಮಂತ್ರಿಗಳು ಬದಲಾವಣೆಯಾದರೂ ಕೂಡ ಆ ನೊಂದು ಬಿಂದಂತಹ ಜನರಿಗೆ ಪರಿಹಾರ ಇವತ್ತಿನವರೆಗೂ ಸಿಕ್ಕಿಲ್ಲ, ಅದು ಬೆಂಗಳೂರು, ಕೊಳ್ಳೆಗಾಲ, ಹುಣಸೂರು, ಹನೂರು, ಯಾವುದಾದರೂ ಆಗಿರಬಹುದು. ಕಾವೇರಿ ಘಟನೆಯಲ್ಲಿ ನೊಂದಂತಹ ಜನರಿಗೆ ಇವತ್ತಿನವರೆಗೂ ಸರಿಯಾದ ರೀತಿಯಲ್ಲಿ ಸೂಕ್ತವಾದ ರೀತಿಯಲ್ಲಿ ಪರಿಹಾರ ದೊರಿತಿಲ್ಲ, ಅದೇ ರೀತಿ ಉರ್ದು ಸುದ್ದಿ ಪ್ರಸಾರ ಮಾಡುವಂತಹ ಸಂದರ್ಭದಲ್ಲಿ ನೊಂದಂತಹ ಜನರಿಗೆ ಇವತ್ತಿನವರೆಗೂ ಸರಿಯಾದಂತಹ ಪರಿಹಾರ ಸಿಕ್ಕಿಲ್ಲ, ಆದುದರಿಂದ ಈ ಹೊಸ ನೊಂದಂತಹ ಜನರಿಗೆ ಸೂಕ್ತವಾದಂತಹ ರೀತಿಯಲ್ಲಿ ಬಡವರಿಗೆ, ಕಡುಬಡವರಿಗೆ, ಪರಿಹಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ನಿಮ್ಮ ಬಳಿ ಯಾರೂ ಬಂದು ಇದರ ಬಗ್ಗೆ ಮಾತನಾಡುತ್ತಿಲ್ಲ, ನಾನು ಇನ್ನು ಮಾತನಾಡಬೇಕೆಂದು ಬಯಸಿದರೂ ನಿಮ್ಮ ದೃಷ್ಟಿ ನನ್ನ ಮೇಲೆ ಇರುವ ಕಾರಣ ಹೆಚ್ಚು ಸಮಯ ತೆಗೆದುಕೊಳ್ಳದೆ ಮುಂದೆ ಅವಕಾಶ ಸಿಕ್ಕಂತಹ ಸಂದರ್ಭದಲ್ಲಿ ಸಮಸ್ಯೆಗಳನ್ನು ನಾನು ಇಲ್ಲಿ ಚರ್ಚೆ ಮಾಡುತ್ತೇನೆ. ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳು.

+ ಶ್ರೀ ಸೈಯದ್ ಜುಲ್ಫೀಕರ್ ಹಶಮಿ (ಬೀದರ್) : ಸನ್ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟ ತಮಗೆ ವಂದಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ತಮ್ಮ ಸರ್ಕಾರವು ರಾಜ್ಯದಲ್ಲಿ ಶೇಕಡ 31ರಷ್ಟು ಜನರಿರುವ ದಲಿತರ, ಹಿಂದುಳಿದ ವರ್ಗದವರ ಮತ್ತು ಅಲ್ಪಸಂಖ್ಯಾತರ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿದ್ದು, ಈ ದಿಸೆಯಲ್ಲಿ ತಮ್ಮ ಸರ್ಕಾರವು ಪ್ರಬಲವಾಗಿದ್ದು ತಮ್ಮ ಸರ್ಕಾರ ಹಮ್ಮಿಕೊಳ್ಳುವ ಯಾವುದೇ ಕಾರ್ಯಗಳು ನ್ಯಾಯಯುತವಾಗಿ ದಲಿತರ, ಹಿಂದುಳಿದ ವರ್ಗದವರ ಮತ್ತು ಅಲ್ಪಸಂಖ್ಯಾತರ ಮೆಚ್ಚುಗೆ ಗಳಿಸಲೆಂದು ಆಶಿಸುತ್ತೇನೆ.

ಕರ್ನಾಟಕದಲ್ಲಿ ಅಲ್ಪಸಂಖ್ಯಾತರೆಂದೆನಿಸಿಕೊಂಡವರು ಒಂದು ರೀತಿಯಲ್ಲಿ ಮೇಲ್ಜಾತಿಯವರಿಂದ ಕಿರುಕುಳ ಅನುಭವಿಸುತ್ತಾ ಅಂಜಿಕೆ, ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಮುಸ್ಲಿಮರೂ ಸಹ ದೇಶ ಭಕ್ತರೆಂಬುದನ್ನು ಮರೆಯಬಾರದು. ಬಹುಸಂಖ್ಯಾತರಿಂದ ಶೋಷಣೆಗೊಳಗಾಗುತ್ತಿರುವ ಈ ಜನರಿಗೆ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕಾಗಿ ವಿನಂತಿಸುತ್ತೇನೆ.

ರಾಜ್ಯದ ಹತ್ತನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಹುಮತ ಹೊಂದಿ ಸರ್ಕಾರ ರಚಿಸಿರುವ ತಮ್ಮ ಪಕ್ಷವಾದ ಜನತಾ ದಳವನ್ನು ನಮ್ಮ ಪಕ್ಷವಾದ ಬಹುಜನ ಸಮಾಜವಾದಿ ಪಕ್ಷ (ಬಿಎಸ್ಪಿ) ಸ್ವಾಗತಿಸುತ್ತದೆ. ಕರ್ನಾಟಕದಲ್ಲಿ ದೇವರಾಜ ಅರಸುರವರು ಮುಖ್ಯಮಂತ್ರಿಯಾದಾಗ ಸಮಾಜದಲ್ಲಿರುವ ಎಲ್ಲಾ ವರ್ಗದ ಜನರ ಸರ್ವತೋಮುಖ ಏಳಿಗೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೂಕ್ತ ಪ್ರಾತಿನಿಧ್ಯ ಕೊಟ್ಟು ಅವರು ನೆಮ್ಮದಿಯಿಂದ ಜೀವಿಸಲು ಅವಕಾಶ ಮಾಡಿಕೊಟ್ಟರು. ಅವರು ಅಧಿಕಾರ ವಹಿಸಿಕೊಳ್ಳುವುದಕ್ಕಿಂತ ಮುಂಚೆ ರಾಜ್ಯದಲ್ಲಿ ದಲಿತರ ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ ಮುಖ್ಯವಾಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರದ ಅನ್ಯಾಯದ ಪ್ರಕರಣಗಳಾಗುತ್ತಿದ್ದರೆ ಪೋಲೀಸರು ಸುಮ್ಮನಿದ್ದು ಯಾವುದೇ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಿರಲಿಲ್ಲ. ಆದರೆ, ದೇವರಾಜ ಅರಸುರವರು ರಾಜ್ಯದಲ್ಲಿ ಮುಖ್ಯಮಂತ್ರಿಯಾದ ನಂತರ ಈ ವರ್ಗದ ಜನರಲ್ಲಿ ಒಂದು ಹೊಸ ಚೈತನ್ಯ ಮೂಡಿತು. ಈಗ ತಮ್ಮ ಜನತಾ ದಳ ಸರ್ಕಾರ ಅಧಿಕಾರ ವಹಿಸಿಕೊಂಡಿದ್ದು ರಾಜ್ಯದ ಜನರ ಏಳಿಗೆಗಾಗಿ ಯಾವ ತರಹದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆಂದು ಬಹು ಜನರು ಕಾತರದಿಂದ ನಿರೀಕ್ಷಿಸುತ್ತಿದ್ದು ಅವರ ಮೆಚ್ಚುಗೆ ಪಡೆಯುವ ರೀತಿಯಲ್ಲಿ ತಮ್ಮ ಸರ್ಕಾರ ಜನಪರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಇನ್ನು ರಾಜ್ಯದಲ್ಲಿ ವಾಸಿಸುತ್ತಿರುವ ದುರ್ಬಲ ವ್ಯಕ್ತಿಗಳ ಮೇಲೆ ಟಾಡಾ ಕಾನೂನಿನನ್ವಯ ಇಲ್ಲಸಲ್ಲದ ಖಟ್ಲೆಗಳನ್ನು ಪೋಲೀಸರು ಹಾಕಿ ಕಿರುಕುಳ ಕೊಡುತ್ತಿರುವುದರಿಂದ ಸರ್ಕಾರ ಈ ಕುರಿತು ಸೂಕ್ತ ಕ್ರಮ ಕೈಗೊಂಡು ಅವರಿಗೆ ರಕ್ಷಣೆ ಒದಗಿಸಬೇಕಾಗಿದೆ. ಅದೇ ರೀತಿ ರಾಜ್ಯದಲ್ಲಿನ ಪರಿಶಿಷ್ಟ ಜಾತಿ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದಿರುವುದರಿಂದ ವಿದ್ಯಾರ್ಥಿ ನಿಲಯಗಳ ಸುಧಾರಣೆ ಕಡೆಗೆ ತಮ್ಮ ಸರ್ಕಾರ ತೀವ್ರ ಗಮನ ಹರಿಸಬೇಕು.

ಕೊನೆಯದಾಗಿ, ಕೇರಳ ಸರ್ಕಾರವು ಅಲ್ಲಿನ ಅಲ್ಪಸಂಖ್ಯಾತರಿಗೆ ಸರ್ಕಾರಿ ರಂಗದ ಎಲ್ಲಾ ಕ್ಷೇತ್ರಗಳಲ್ಲೂ ಶೇಕಡ 13ರಷ್ಟು ಮೀಸಲಾತಿ ನೀಡಿದ್ದು ನಮ್ಮ ರಾಜ್ಯದಲ್ಲೂ ಅಲ್ಪಸಂಖ್ಯಾತರಿಗೆ ತಮ್ಮ ಸರ್ಕಾರ ಅದೇ ರೀತಿಯ ಮೀಸಲಾತಿ ನೀತಿ ಜಾರಿಗೊಳಿಸಬೇಕೆಂದು ಹೇಳುತ್ತಾ, ಚಿನ್ನಪ್ಪ ರೆಡ್ಡಿ ವರದಿಯನ್ನು ಯಥಾವತ್ತಾಗಿ ಜಾರಿಗೆ ತಂದು ಅಲ್ಪಸಂಖ್ಯಾತರಿಗೆ ಸಂವಿಧಾನ ರೀತ್ಯ ಹಕ್ಕು, ರಕ್ಷಣೆ ಒದಗಿಸಬೇಕೆಂದು ಕೋರುತ್ತೇನೆ.

ಮೈನಾರಿಟಿ ಕಮಿಷನ್ಗೆ ನ್ಯಾಯಬದ್ಧವಾಗಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಚಿನ್ನಪ್ಪರೆಡ್ಡಿ ಕಮಿಷನ್ನಲ್ಲಿ ಏನು ಶಿಫಾರಸುಗಳನ್ನು ಮಾಡಿದೆ ಅದನ್ನು ಯಥಾವತ್ತಾಗಿ ಜಾರಿಗೆ ತರಬೇಕು. ಎಸ್.ಸಿ.ಎಸ್.ಟಿ ಹಾಸ್ಟೆಲ್ಗಳಲ್ಲಿ ಯಾವುದೇ ರೀತಿಯ ಸೌಲಭ್ಯವಿಲ್ಲ, ನೀರಿನ ಸೌಲಭ್ಯವಿಲ್ಲ, ಆ ಮಕ್ಕಳಿಗೋಸ್ಕರ ತಂದು ಹಾಕಿದ ಆಹಾರ ಪದಾರ್ಥಗಳನ್ನು ಸ್ವಚ್ಛ ಮಾಡಿ ಅಡಿಗೆ ಮಾಡಿಹಾಕಲು ಅಡಿಗೆಯವರೂ ಇಲ್ಲ. ನಮ್ಮ ವಕ್ಫ್ ಬೋರ್ಡ್ಗೆ ಹೆಚ್ಚು ಅಧಿಕಾರ ಕೊಟ್ಟು ವಕ್ಫ್ ಆಸ್ತಿಪಾಸ್ತಿ ಏನಿದೆ ಅದನ್ನು ರಕ್ಷಣೆ ಮಾಡಬೇಕು. ಬಿಜಾಪುರ ಕ್ಷೇತ್ರ ಮತ್ತು ಹೈದ್ರಾಬಾದ್ ಕರ್ನಾಟಕ ಕ್ಷೇತ್ರ ಬಹಳ ಹಿಂದುಳಿದಿರುವುದರಿಂದ ನಮ್ಮ ಬೇಡಿಕೆ ಏನಿದೆ ಅದನ್ನು ಪೂರೈಸಿಕೊಡಬೇಕು. ನಮ್ಮ ಅಪ್ಪರ್ ಕೃಷ್ಣಾ ಯೋಜನೆ ಏನಿದೆ 2000 ದ ಇಸವಿಯೊಳಗೆ ಪೂರ್ತಿಗೊಳಿಸಬೇಕಲ್ಲದೆ ಅಲ್ಲಿ ಕೆಲಸ

ಮಾಡತಕ್ಕ ಸುಮಾರು 440 ಜನ ಇಂಜಿನಿಯರ್ಗಳು ಯಾರಿದ್ದಾರೆ ಅವನ್ನೆಲ್ಲಾ ಖಾಯಂ ಮಾಡಬೇಕು. ಸರ್ಕಾರೀ ನೇಮಕಾತಿ ಬಗ್ಗೆ ಹೇಳುವುದಾದರೆ ನಮ್ಮ ಹೈದ್ರಾಬಾದ್ ವಿಭಾಗದ ಜನರಿಗೆ ಕೇವಲ 2 ಪರ್ಸೆಂಟ್ನಷ್ಟು ಉದ್ಯೋಗ ಸಿಕ್ಕಿದೆ. ನಮ್ಮ ಹೈದ್ರಾಬಾದ್ ಕರ್ನಾಟಕದ ಶಾಸಕರು ಮತ್ತು ಮಂತ್ರಿಗಳು ಯಾರಿದ್ದಾರೆ ಅವರು ಇದರ ಬಗ್ಗೆ ಗಮನಹರಿಸಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಸದಸ್ಯರಿಗೆ ಹಾಗೂ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ಇನ್ನು ಕೊನೆಯದಾಗಿ ಹೇಳುವುದಾದರೆ,

(ಮಾನ್ಯ ಸದಸ್ಯರು ಉರ್ದುವಿನಲ್ಲಿ ಭಾಷಣ ಮಾಡಿದ್ದನ್ನು ರೆಕಾರ್ಡ್ ಮಾಡುವ ವ್ಯವಸ್ಥೆ ಇಲ್ಲ)

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಅದ್ಯಕ್ಷರೆ ನಮ್ಮ ದೂರದರ್ಶನದಲ್ಲಿ ಉರ್ದುವಿನಲ್ಲಿ ವಾರ್ತಾ ಪ್ರಸಾರ ಮಾಡಿದಾಗ ಏನಾಯಿತೆಂಬುದು ತಮಗೆ ಗೊತ್ತಿದೆ. ನಮ್ಮ ಈ ಸಭೆಯಲ್ಲೂ ಕೂಡ ಉರ್ದು ಭಾಷೆ ಬಂದರೆ ಇದರ ಪರಿಣಾಮ ಏನಾಗಬಹುದೆಂದೆಂಬ ಬಗ್ಗೆ ತಾವು ಗಮನಹರಿಸಬೇಕು.

ಅಧ್ಯಕ್ಷರು : ಅವರು ಏನು ಹೇಳಿದರೆಂದರೆ, ಕನ್ನಡ ಇಲ್ಲಿಯ ರಾಜ್ಯದ ಆಡಳಿತಭಾಷೆ. ಅದರಲ್ಲೇ ಮಾತನಾಡಲು ಪ್ರಯತ್ನ ಮಾಡುತ್ತೇನೆ. ಇಂಗ್ಲಿಷ್ ಪರದೇಶದ ಭಾಷೆ. ಕನ್ನಡ ಇಲ್ಲಿಯ ಆಡಳಿತಭಾಷೆಯಾಗಿರುವುದರಿಂದ ನಾನು ಮಾತನಾಡುತ್ತೇನೆ. ಇಷ್ಟು ಹೊತ್ತು ನನ್ನ ಮಾತನ್ನು ಕೇಳಿದ್ದಕ್ಕೆ ನನ್ನ ಭಾಷೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆಂದು ಅವರು ಒಳ್ಳೆಯ ಅರ್ಥದಲ್ಲೇ ಹೇಳಿದ್ದಾರೆ. ಆದರೆ ನಿಮಗೆ ಹಿಂದಿ ಬರದೇ ಇರುವುದರಿಂದ ನಾನು ಅವರು ಹೇಳಿದ್ದನ್ನು ತರ್ಜುಮೆ ಮಾಡಿ ಹೇಳಿದ್ದೇನೆ. ನಾವು ಸಂದರ್ಭವನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕು.

+ ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇನೆ. ಈಗಾಗಲೇ ಸರ್ಕಾರದ ವತಿಯಿಂದ ಮಾನ್ಯ ರಾಜ್ಯಪಾಲರ ಮುಖಾಂತರ ಬಹಳ ಮಾರ್ಮಿಕವಾದ ನುಡಿಗಳನ್ನು ಆಡಿಸಿದ್ದಾರೆ. ಅದರಲ್ಲಿ 4ನೇ ಪ್ಯಾರಾದಲ್ಲಿ ವಸ್ತು ಸ್ಥಿತಿಯನ್ನು ಮೀರಿ ಸಂಪನ್ಮೂಲಗಳನ್ನು ಉತ್ಪ್ರೇಕ್ಷಿಸುವ ಹಾಗೂ ರಾಜ್ಯದ ಪ್ರಸಕ್ತ ಹಣಕಾಸಿನ ಪರಿಸ್ಥಿತಿಯನ್ನು ಆಧರಿಸದ ಪೊಳ್ಳು ಭರವಸೆಗಳನ್ನು ಕೊಡುವ ಪ್ರಲೋಭನೆಗೆ ನನ್ನ ಸರ್ಕಾರವು ಒಳಗಾಗುವುದಿಲ್ಲ, ಅಂದರೆ ಸುಳ್ಳು ಭರವಸೆಗಳನ್ನು ಕೊಡಲಾರದೆ, ಒಳ್ಳೆಯ ಕೆಲಸಗಳನ್ನು ಮಾಡಿ, ಒಳ್ಳೆಯ ಹೆಸರನ್ನು ಪಡೆಯುವಂಥ ಸರ್ಕಾರವೆಂದು ಅವರ ಮುಖಾಂತರ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾದರೆ ಅದೇ ನಿರೀಕ್ಷೆಯನ್ನು ರಾಜ್ಯದ ಜನತೆ ಮಾಡುತ್ತಿದ್ದಾರೆ. ಒಳ್ಳೆಯ ಸರ್ಕಾರ ಬಂದಮೇಲೆ ಒಳ್ಳೆಯ ಕೆಲಸ ಆಗಲೆಂದುದು ನನ್ನ ಅಭಿಪ್ರಾಯ ಕೂಡ ಆಗಿದೆ. ಅನೇಕ ವಿಚಾರಗಳನ್ನು ಹೇಳುವ ಸಂದರ್ಭದಲ್ಲಿ ನಮ್ಮ ಮಾನ್ಯ ಹಿರಿಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾನು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡದೆ ಬಹುಶಃ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ನನ್ನ ಅಭಿಪ್ರಾಯವನ್ನು ಸೀಮಿತಗೊಳಿಸಿಕೊಂಡು ಮಾತನಾಡಿದರೆ ಒಳ್ಳೆಯದಾದೀತೆಂದು ತಿಳಿದುಕೊಂಡು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ.

ಮಾನ್ಯ ರಾಜ್ಯಪಾಲರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. "ಕೃಷ್ಣಾ ಜಲಾನಯನ ಯೋಜನೆಗೆ ನಿರ್ದಿಷ್ಟವಾಗಿ ಸಂಬಂಧಿಸಿದಂತೆ ನನ್ನ ಸರ್ಕಾರವು ಬಚಾವತ್ ತೀರ್ಪಿನಲ್ಲಿ ನಿರೂಪಿಸಲಾಗಿರುವಂತೆ ಕ್ರಿ.ಶ. 2000ದ ಹೊತ್ತಿಗೆ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿದೆ ಎಂಬ ಬಗ್ಗೆ ನನ್ನ ಸರ್ಕಾರಕ್ಕೆ ಸಂಪೂರ್ಣ ಅರಿವಿದೆ ಎಂದು ಹೇಳಿದ್ದಾರೆ. ಇದು ನನಗೂ ಕೂಡ ಒಂದು ಸಂತೋಷ. ಆದರೆ ಮುಖ್ಯವಾಗಿ

ಈ ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆ ಅದರ ಹಿನ್ನೆಲೆಯನ್ನು ನೋಡಿದಾಗ ನಮ್ಮ ಕರ್ನಾಟಕದ ಭೌಗೋಲಿಕದಲ್ಲಿ ಸುಮಾರು 60 ಪರ್ಸೆಂಟ್ ಭೌಗೋಲಿಕ ಪ್ರದೇಶವನ್ನು ಹೊಂದಿರತಕ್ಕ ಯೋಜನೆ ಇದು. ಈ ಯೋಜನೆಯಲ್ಲಿ ಮಲಪ್ರಭ ನದಿ ಆಗಲಿ, ಘಟಪ್ರಭ ನದಿ, ಭೀಮಾ ನದಿ ಆಗಲಿ ಅಥವಾ ಇನ್ನೂ ಅನೇಕ ಉಪ ನದಿಗಳನ್ನು ಒಳಗೊಂಡಿರತಕ್ಕ ಈ ಪ್ರದೇಶ ಏನಿದೆ ಇದರಲ್ಲಿ ಸುಮಾರು 30 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶ ಇದೆ. ಹಿಂದೆ ಈ ಸರ್ಕಾರವನ್ನು ಪ್ರತಿನಿಧಿಸಿದವರು ಈ ನಾಡಿಗೆ, ಅಥವಾ ಬಹಳ ಹಿಂದುಳಿದಿರತಕ್ಕ ಪ್ರದೇಶಗಳಿಗೆ ಹೆಚ್ಚಿನ ನೀರಾವರಿ ಸೌಲಭ್ಯವನ್ನು ಒದಗಿಸಿದರೆ ಈ ಯೋಜನೆಗಳು ಕಾರ್ಯಗತವಾದರೆ ಈ ಕರ್ನಾಟಕ ರಾಜ್ಯ ಬಹಳ ಸಮೃದ್ಧವಾದ ರಾಜ್ಯವಾಗಬಹುದೆಂದು ಕನಸು ಕಂಡು ಈ ಯೋಜನೆಗಳಿಗೆ ಬಹಳ ಉತ್ತೇಜನ ಕೊಟ್ಟು ಬಹಳಷ್ಟನ್ನು ಕಾರ್ಯಗತ ಮಾಡಿರುವುದನ್ನು ನಾವು ನೋಡಿದ್ದೇವೆ. 1947ರಿಂದ 66ನೇ ಇಸವಿಯ ಮಧ್ಯದಲ್ಲ ನೀರಾವರಿ ಬಗ್ಗೆ ಸೆನ್ಸಸ್ ಮಾಡಿದವರು ಹೇಳಿರುವ ಪ್ರಕಾರ ಸುಮಾರು 62 ಸಾವಿರ ಹೆಕ್ಟೇರ್ ಪ್ರದೇಶ ಇತ್ತು.

ಆಂಧ್ರಪ್ರದೇಶ 6 ಲಕ್ಷ ಹೆಕ್ಟೇರ್ಗಳು. ಮಹಾರಾಷ್ಟ್ರ 96,963 ಹೆಕ್ಟೇರ್ಗಳು. ಆಗ ಈ ಹಿನ್ನೆಲೆಯನ್ನು ನೋಡಿ ಬಹುಶಃ ಕರ್ನಾಟಕ ರಾಜ್ಯದ ನೀರಾವರಿ ಪ್ರದೇಶ ಬಹಳ ಹಿಂದುಳಿದಿದೆ ಎಂದು ತಿಳಿದುಕೊಂಡು ಆಗಿನ ಸರ್ಕಾರದವರು ಬಹಳ ಹೆಚ್ಚು ಮುತುವರ್ಜಿ ವಹಿಸಿ ನೀರಾವರಿ ಪ್ರದೇಶವಾಗಬೇಕೆಂದು ಬಹಳ ಕಳಕಳಿಯನ್ನು ವ್ಯಕ್ತಪಡಿಸಿ ಅವರೂ ಕೂಡ ಈ ವಿಚಾರದಲ್ಲಿ ಹೆಚ್ಚಿಗೆ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರು. ಒಂದು ಅಭಿಮಾನದಿಂದ ಹೇಳುತ್ತೇನೆ, ದೇವೇಗೌಡರು ಮುಖ್ಯಮಂತ್ರಿ ಆದಮೇಲೆ ಅವರು ದೂರದರ್ಶನದಲ್ಲಿ ಒಂದು ಮಾತು ಹೇಳಿದರು. ಅನೇಕ ವಿದ್ವಾಂಸರ ಜೊತೆ ಸಂದರ್ಶನ ನಡೆದಂಥ ಸಂದರ್ಭದಲ್ಲಿ ಡಾ ನಂಜುಂಡಪ್ಪನವರು, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿರತಕ್ಕ ರಾಮೇಗೌಡರು, ಅನೇಕ ವಿದ್ವಾಂಸರ ಜೊತೆ ಕುಳಿತುಕೊಂಡು ರಾಜ್ಯದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮುಖ್ಯವಾಗಿ ಹೇಳಿರತಕ್ಕ ವಿಚಾರ ಏನೆಂದರೆ ಬಹುಶಃ ರಾಜ್ಯದ ಹಿತದೃಷ್ಟಿಯಿಂದ ಹೇಳುವುದಾದರೆ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ ನಾವು ಅಧಿಕಾರ ಸ್ವೀಕರಿಸಿದಕ್ಕೂ ಸಾರ್ಥಕ ಎಂಬ ಅಭಿಪ್ರಾಯ ಹೇಳಿದಾಗ ನನಗೂ ಕೂಡ ಬಹಳ ಅಭಿಮಾನ ಆಯಿತು. ಬಹುಶಃ ನೀರಾವರಿ ಬಗ್ಗೆ ಹೆಚ್ಚಿಗೆ ಅಭಿಮಾನ ಇರುವವರು, ಈ ರಾಜ್ಯದ ರಾಜ್ಯಭಾರವನ್ನು ಹೊತ್ತಿದ್ದಾರೆ ಎಂದು ಬಹಳ ಸಂತೋಷವಾಯಿತು. ಆ ಹಿನ್ನೆಲೆಯಲ್ಲಿ ಇವತ್ತು ನಾನೂ ಕೂಡ ಮುಖ್ಯ ಮಂತ್ರಿಗಳಲ್ಲಿ ಬಹಳ ಅಭಿಮಾನದಿಂದ ಕಾಣತಕ್ಕ ವಿಚಾರ ಎಂದರೆ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಯತ್ತ ಒಯ್ಯುತ್ತಾರೆಂದು.

ಆದರೆ ಒಂದು ದುರಾದೃಷ್ಟ ಏನೆಂದರೆ ಕೃಷ್ಣಾ ಮೇಲ್ದಂಡೆ ಯೋಜನೆಗಳ ಹುಟ್ಟುವಾಗಲೇ ಏನೋ ಗ್ರಹಚಾರ ಇತ್ತೋ ಏನೋ ನನಗೆ ಗೊತ್ತಿಲ್ಲ, ಯಾವಾಗ ಪ್ರಾರಂಭವಾಗಬೇಕಾಗಿತ್ತೋ ಅದು ಆಗಲಿಲ್ಲ, ಅನೇಕ ಎಡರುತೊಡರುಗಳನ್ನು ಎದುರಿಸಿದೆ ಈಗಾಗಲೇ ಅದು ಅಭಿವೃದ್ಧಿಯಾಗಬೇಕಾಗಿತ್ತು ಕಾರ್ಯಕ್ರಮ ಮುಗಿಯಬೇಕಾಗಿತ್ತು ದುರಾದೃಷ್ಟ ಎಂದು ಹೇಳಿದರೆ ಬಹುಶಃ ಅದೆಲ್ಲಾ ಪರೀಕ್ಷೆ ಮಾಡಿ ನಿಗದಿ ಮಾಡುವುದಕ್ಕೆ ಹತ್ತಾರು ವರ್ಷಗಳಾಯಿತು. ಆಲಮಟ್ಟಿ ಡ್ಯಾಮ್ ಎಲ್ಲಿ ಕಟ್ಟಬೇಕು ನಾರಾಯಣಪುರ ಡ್ಯಾಮ್ ಎಲ್ಲಿ ಕಟ್ಟಬೇಕು ಎಂಬ ಬಗ್ಗೆ ನಿರ್ಧಾರ ಮಾಡುವುದಕ್ಕೆ ಹತ್ತಾರು ವರ್ಷ ಹೋಯಿತಿ. ತದನಂತರ ಪುನಃ ರಾಜ್ಯಗಳ ನಡುವೆ ಏನು ಒಪ್ಪಂದ ಆಗದೇ ಇರುವುದಕ್ಕೆ ಆ ನದಿಯ ದುರಾದೃಷ್ಟ ಇರಬಹುದು. ಆ ದೃಷ್ಟಿಯಿಂದ ಅದರ ತೀರ್ಮಾನ ಆಗುವುದಕ್ಕೆ ಕೂಡ ಹತ್ತಾರು ವರ್ಷಗಳು ಹೋಯಿತು. ಮೇಲಾಗಿ ಇದರ ಮಧ್ಯದಲ್ಲಿ ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದಾಗಲೀ ಕೇಂದ್ರ ಜಲ

ಆಯೋಗದಿಂದಾಗಲೀ ಸಮ್ಮತಿ ತೆಗೆದುಕೊಳ್ಳುವುದಕ್ಕೆ ಅನೇಕ ಅಡೆತಡೆಗಳನ್ನು ಅನುಭವಿಸಿ 1978ರಲ್ಲಿ ಸನ್ಮಾನ್ಯ ದೇವರಾಜ ಅರಸ್ ಅವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗಿದೆ.

ಅವರು ಬಹಳ ಚಿಂತನೆಯನ್ನು ಮಾಡಿ ಈ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಬಹಳ ಶ್ರಮವಹಿಸಿ ವಿಶ್ವ ಬ್ಯಾಂಕಿನಿಂದ ಹಣವನ್ನು ತರುವುದಕ್ಕೆ ವ್ಯವಸ್ಥೆ ಮಾಡಿದರು. 1978ರಿಂದ ಈಚೆಗೆ ಕೃಷ್ಣ ಮೇಲ್ದಂಡೆ ಯೋಜನೆಗಳಿಗೆ ಒಂದು ಚಾಲನೆಯನ್ನು ಕೊಡತಕ್ಕ ಕೆಲಸ ಆವತ್ತಿನಿಂದ ನಡೆಯಿತು. ಆವತ್ತಿನಿಂದ ಇಲ್ಲಿಯವರೆಗೆ ನೋಡಿದರೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ನೀರಾವರಿ ಮಾಡುವುದಕ್ಕಾಗಲಿಲ್ಲ. ಅದಕ್ಕೆ ಅನೇಕ ಎಡರುತೊಡರುಗಳಿರಬಹುದು. ಇವತ್ತು ಕಾಲುವೆ ಮಾಡತಕ್ಕ ಕೆಲಸದಲ್ಲಾಗಲೀ ಗುತ್ತಿಗೆದಾರರು ಕೆಲಸ ಮಾಡುವುದರಲ್ಲಾಗಲೀ ಮತ್ತು ಕೆಲವು ಕಡೆ ಮಾಡಿದ ಕೆಲಸದಲ್ಲಾಗಲೀ ಎಡರುತೊಡರುಗಳು ಮಾಡಿದರೂ ಕೂಡ ಆ ಕೆಲಸ ಇವತ್ತಿನ ದಿವಸ ಸಮಾಧಾನಕರವಾಗಿ ಆಗದೆ ನಿರೀಕ್ಷೆ ಮಟ್ಟಕ್ಕೆ ಮುಟ್ಟಿಸುವುದಕ್ಕಾಗಲಿಲ್ಲ. ಅದಕ್ಕೆ ಅನೇಕ ಕಾರಣಗಳಿರಬಹುದು. ಇವತ್ತು ಒಂದು ಸರ್ಕಾರವನ್ನು ದೋಷಾರೋಪಣೆ ಮಾಡುವುದಕ್ಕಿಂತಲೂ ಯೋಜನೆಯನ್ನು ಒಟ್ಟಾರೆ ರಾಜ್ಯದ ಹಿತದೃಷ್ಟಿಯಿಂದ ನೋಡುವುದಾದರೆ ನನಗನ್ನಿಸಿದ ಮಟ್ಟಿಗೆ ಕೃಷ್ಣಾ ಮೇಲ್ದಂಡೆ ಯೋಜನೆ ಬಿಜಾಪುರ, ಗುಲ್ಬರ್ಗ ಜಿಲ್ಲೆಯಲ್ಲಿ ಇರಲಾರದೆ ಬಹುಶಃ ಮಂಡ್ಯ, ಹಾಸನದ ಕಡೆ ಇದ್ದಿದ್ದರೆ ಈಗಾಗಲೇ ಚಿನ್ನದ ಭೂಮಿಯಾಗಿ ಚಿನ್ನದ ಒಂದು ಅಣೆಕಟ್ಟಾಗಿ ಮಾಡುತ್ತಿದ್ದರು ಎಂದು ನನಗನ್ನಿಸುತ್ತದೆ. ದುರಾದೃಷ್ಟ ಬಹುಶಃ ಅದು ನಮ್ಮ ಪ್ರದೇಶದಲ್ಲಿರುವುದರಿಂದ ಅದರ ಬಗ್ಗೆ ಲಕ್ಷ್ಯ ವಹಿಸದೇ ಇರುವುದರಿಂದ ಅದರ ಬಗ್ಗೆ ಯಾವುದೇ ಸರ್ಕಾರ ಇರಲಿ ಯಾವುದೇ ಹಣಕಾಸಿನ ವ್ಯವಸ್ಥೆಯನ್ನು ಮಾಡದೇ ಇರುವುದರಿಂದ ಯೋಜನೆ ಕುಂಠಿತವಾಗಿದೆ, ಯೋಜನೆ ಮುಗಿಯುವುದಕ್ಕೆ ಆಸ್ಪದ ಆಗಿರಲಿಕ್ಕಿಲ್ಲ.

ಅಧ್ಯಕ್ಷರು : ಎಷ್ಟೇ ಗಂಭೀರವಾಗಿ ನಿಮ್ಮ ಭಾವನೆಗಳನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಇದೆ. ಸ್ವಲ್ಪ ಹಾದಿ ತಪ್ಪಿದಾಗ ಏನಾಗುತ್ತದೆಂದರೆ, ಪ್ರಾದೇಶಿಕ ಅಸಮತೋಲನ ಎಂಬ ಮಾತನಾಡಿ ಎಲ್ಲೋ ಒಂದು ಕಡೆ ಪ್ರಚೋದನೆ ಕೊಟ್ಟಂತೆ ಆಗಿ ಪತ್ರಿಕೆಗಳ ಮೂಲಕ ಹೊರಗೆ ಬಂದರೆ ರಾಜ್ಯದ ಹಿತಕ್ಕೆ ಒಳ್ಳೆಯದಾಗುವುದಿಲ್ಲ. ಆ ಭಾಗದಲ್ಲಿ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಆಗಬೇಕೋ ಅಷ್ಟು ಆಗಿಲ್ಲ ಎಂದು ಭಾವನೆ ವ್ಯಕ್ತ ಮಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ. ಆದರೆ ಈ ಭಾಗದಲ್ಲಿ ಆಗಿದ್ದರೆ ಆಗಿಹೋಗುತ್ತಿತ್ತು ಎಂದು ಹೇಳಿದರೆ ಇನ್ನೊಂದು ಭಾಗದ ಜನ ಹೊರಗಡೆ ಕೇಳುವವರಿಗೆ ಆ ಭಾಗಕ್ಕೆ ಅನ್ಯಾಯ ಮಾಡಿದ್ದಾರೋ ಏನೋ ಈ ಭಾಗದವರು ಎಂಬ ಭಾವನೆ ಬರಬಹುದು. ಆದ್ದರಿಂದ ಸ್ವಲ್ಪ ಜಾಗ್ರತೆ ವಹಿಸಿ. ಏಕೆಂದರೆ ಇದು ಇಡೀ ಸಮಗ್ರ ಕರ್ನಾಟಕ ಜನತೆಯ ಶಾಸನಸಭೆ. ಆದ್ದರಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಆ ದೃಷ್ಟಿಯಿಂದ ಹೇಳಲಿಲ್ಲ, ಅವರಲ್ಲಿ ಇರತಕ್ಕ ರಚನಾತ್ಮಕ ಏನೊಂದು ವಿಚಾರ ಇತ್ತು, ಅದು ನಮ್ಮಲ್ಲಿಲ್ಲ ಎಂದು ನನ್ನನ್ನೇ ನಾನು ದೂಷಣೆ ಮಾಡಿಕೊಳ್ಳುವುದಕ್ಕೆ ಹತ್ತಿದ್ದೇನೆ. ಅಂದರೆ ಹೆಚ್ಚು ಆಸಕ್ತಿ ವಹಿಸಿ ಸಾಮಾಜಿಕ ಕೆಲಸವಾಗಲಿ, ಸರ್ಕಾರದ ಕೆಲಸಗಳಾಗಲಿ, ಹೋರಾಟ ಮಾಡಿ ಮಾಡಿಸತಕ್ಕ ವ್ಯವಸ್ಥೆಯನ್ನು ನೋಡಿದರೆ ಇವತ್ತು ನಮಗೆ ನಾಚಿಕೆ ಬರತಕ್ಕಂತಹ ವಿಚಾರ. ಅವರ ಬಗ್ಗೆ ನಾನು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ. ಅವರಲ್ಲಿರತಕ್ಕ ನೀರಾವರಿ ಯೋಜನೆಗಳ ಬಗ್ಗೆ ಎಷ್ಟೋ ಯೋಜನೆಗಳನ್ನು ತಂದು ಅವುಗಳನ್ನು ಕಾರ್ಯರೂಪಕ್ಕೆ ತರುತ್ತಾರೋ, ಅಷ್ಟೇ ಪ್ರಮಾಣದಲ್ಲಿ ಜನರ ಪ್ರತಿನಿಧಿಯಾಗಿರತಕ್ಕ ನಾವುಗಳು ಆ ಕೆಲಸದಲ್ಲಿ ಹಿಂದೇಟು ಹಾಕುತ್ತಿದ್ದೇವೆ ಎಂದು ಹೇಳಿದರೆ ನನ್ನ ದೃಷ್ಟಿಯಲ್ಲಿ ತಪ್ಪಾಗಲಾರದು. ಆ ಕೆಲಸ ಆಗಬೇಕಾಗಿತ್ತು. ಅದು ಆಗಿಲ್ಲ ಎಂದು ಹೇಳುತ್ತೇನೆ. ಆದರೂ ಕೂಡ ಸರ್ಕಾರ ಬದಲಾವಣೆಯಾಗಿದೆ. ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ

ತಿಳಿದುಕೊಳ್ಳಬೇಕಾಗಿದೆ. ಸರ್ಕಾರದ ನಿಲುವು ಏನೆಂಬುದನ್ನು ಇದರಲ್ಲಿ ಅವರು ಹೇಳಬೇಕಾಗುತ್ತದೆ. ಅಂದರೆ 2 ಸಾವಿರ ಇಸವಿಯೊಳಗೆ ಈ ಯೋಜನೆಗಳನ್ನು ಮುಗಿಸಬೇಕು ಎಂದು ತಾವು ನಿರ್ಣಯ ಮಾಡಿದ್ದೀರಿ. ಅಂದರೆ 2 ಸಾವಿರ ವರ್ಷದೊಳಗೆ ಸುಮಾರು ಇನ್ನು 4 ವರ್ಷದೊಳಗೆ ಅವುಗಳನ್ನು ಮುಗಿಸುವುದಾದರೆ ತಾವು ಪ್ರತಿ ವರ್ಷ 600 ಕೋಟಿ ರೂ.ಗಳನ್ನು ಈ ಯೋಜನೆಗಳಿಗೆ ಕೊಡಬೇಕಾಗುತ್ತದೆ. ಈ ಯೋಜನೆಗಳಿಗೆ 600 ಕೋಟಿ ರೂ.ಗಳನ್ನು ಕೊಡತಕ್ಕಂಥದ್ದರ ಬಗ್ಗೆ ಸರ್ಕಾರ ಹೇಗೆ ನಿರ್ಣಯ ಮಾಡಿದೆ? ಎಷ್ಟು ಹಣವನ್ನು ಕೊಡುತ್ತೀರಿ ಎಂಬುದು ಇದರಲ್ಲಿ ಸ್ಪಷ್ಟತೆ ಇಲ್ಲ. ಕೇವಲ 600 ಕೋಟಿ ಕೊಟ್ಟರೆ ಈ ಯೋಜನೆಯಾಗುವುದಿಲ್ಲ. ಕೇವಲ 600 ಕೋಟಿ ಕೊಡುವುದರ ಜೊತೆಗೆ ಸಿಬ್ಬಂದಿ ವ್ಯವಸ್ಥೆ ಮಾಡಬೇಕಾಗುತ್ತದೆ. ಅನೇಕ ಎಡರುತೊಡರುಗಳು ಇರುತ್ತವೆ.

ಶ್ರೀ ಎಂ.ಆರ್. ಲಕ್ಷ್ಮಯ್ಯ : ತಾವು ನೀರಾವರಿ ಸಚಿವರಾಗಿದ್ದಿರೆಂದು ಕೇಳಿದ್ದೇನೆ. 5 ವರ್ಷ ಅವರದ್ದೇ ಸರ್ಕಾರ ಇತ್ತು. ಈ ಸರ್ಕಾರ ಬದಲಾವಣೆಯಾಗಿ 17 ದಿವಸಗಳಾಗಿವೆ. ನೀರಾವರಿ ಮಂತ್ರಿಗಳು ಮಾಡಬೇಕು ಎಂದು ಹೇಳುತ್ತಿದ್ದಾರೆ. 5 ವರ್ಷಗಳ ಕಾಲ ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ಉತ್ತರ ಕರ್ನಾಟಕದಲ್ಲಿ ಅವರು ಮಾಡಿರತಕ್ಕ ಅಭಿವೃದ್ಧಿ ಕಾರ್ಯಗಳು ಏನು ಎಂಬುದನ್ನು ತಿಳಿಸುತ್ತೀರಾ? ತಾಳಿ ಕಟ್ಟಿ ಇನ್ನೂ 3 ದಿವಸವಾಗಿದೆ.

ಅಧ್ಯಕ್ಷರು : ಶ್ರೀ ಲಕ್ಷ್ಮಯ್ಯನವರು ಇನ್ನೂ ಊಟಕ್ಕೆ ಹೋಗಿಲ್ಲವಲ್ಲಾ ಎಂಬುದು ಯೋಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೂಸಿನ ಲಕ್ಷಣ ತೊಟ್ಟಿಲಿನಲ್ಲಿಯೇ ಚೆನ್ನಾಗಿ ಇಲ್ಲ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಶ್ರೀ ಚಿಮ್ಮನಕಟ್ಟಿಯವರೇ ಬೇಗ ಮುಗಿಸಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಾವು ಮಾಡಿರುವುದು ಏನು ಎಂಬುದನ್ನು ತಾವು ಆ ಜಲಾಶಯಕ್ಕೆ ಹೋಗಿ ನೋಡಿ ಗೊತ್ತಾಗುತ್ತದೆ. ತಾವು ಹೋಗಿ ನೋಡಿ.

ಅಧ್ಯಕ್ಷರು : ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ. ಅವರನ್ನು ನೋಡಬೇಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಇಷ್ಟೆಲ್ಲಾ ಯೋಜನೆಗಳಿಗೂ ನೀವು ಹೇಳಬಹುದು. ಸರ್ಕಾರಕ್ಕೆ ಅನೇಕ ತೊಂದರೆಗಳು ನೀವು ಹೇಳಬಹುದು. ಸರ್ಕಾರಕ್ಕೆ ಅನೇಕ ತೊಂದರೆಗಳು ಇರಬಹುದು. ಅಥವಾ ಅವರಲ್ಲಿರತಕ್ಕ ವಿಚಾರಗಳನ್ನು ಹೇಳತಕ್ಕಂತಹ ಸಂದರ್ಭದಲ್ಲಿ ಇವತ್ತು ಮುಖ್ಯವಾಗಿ ನಾವು ಕೆ.ಇ.ಬಿ. ವಿಚಾರವನ್ನೇ ತೆಗೆದುಕೊಳ್ಳಿ, ನೀರಾವರಿ ವಿಚಾರವನ್ನು ತೆಗೆದುಕೊಳ್ಳಿ. ಅಥವಾ ಇನ್ನಾವುದೇ ಯೋಜನೆಯನ್ನು ತೆಗೆದುಕೊಳ್ಳಿ, ಆರ್ಥಿಕ ದೃಷ್ಟಿಯಿಂದ ವಿಚಾರ ಮಾಡಿ ನೋಡಿದಾಗ ಸರ್ಕಾರ ಯಾವ ರೀತಿ ಇದನ್ನು ಸರಿದೂಗಿಸುತ್ತದೆಂಬುದು ಬಹಳ ಗಮನಾರ್ಹವಾದ ವಿಚಾರ. ನೀವು ಹೇಳಬಹುದು. ದುಡ್ಡು ಇಲ್ಲ ಎಂದು ಹೇಳಬಹುದು. ಮತ್ತೆ ಇನ್ನೇನಾದರೂ ಹೇಳಬಹುದು. ಹಾಗೂ ಈ ಕೆಲಸಕ್ಕೆ ಒದಗಿಸತಕ್ಕ ಹಣವನ್ನು ಎಲ್ಲಿಂದ ತರುತ್ತೀರಿ? ಯಾವ ರೀತಿಯಿಂದ ತರುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ನಾನು ಒಬ್ಬ ವಿರೋಧ ಪಕ್ಷದ ಸದಸ್ಯನಾಗಿ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಈ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಆ ಎಲ್ಲಾ ಯೋಜನೆಗಳನ್ನು ಬಿಟ್ಟು, ಈ ರಾಜ್ಯದ ಹಿತದೃಷ್ಟಿಯಿಂದ ಹೇಳುವುದಾದರೆ, ಬಹುಶಃ ತಾವು ಇನ್ನೆರಡು ವರ್ಷಗಳ ಕಾಲ ಮನೆಗಳನ್ನು ಕಟ್ಟುವುದು ಬಿಟ್ಟರೂ

ನಡೆಯುತ್ತದೆ, ರಸ್ತೆಗಳನ್ನು ಮಾಡುವುದು ಬಿಟ್ಟರೂ ನಡೆಯುತ್ತದೆ. ಶಾಲಾ ಕಟ್ಟಡಗಳನ್ನು ಕಟ್ಟುವುದನ್ನು ಬಿಟ್ಟರೂ ನಡೆದೀತು. ಬಹುಶಃ ಈ ರಾಜ್ಯದ ಹಿತದೃಷ್ಟಿಯಿಂದ ಸಮೃದ್ಧವಾಗಬೇಕು ಎಂದಿದ್ದರೆ ನಾವೆಲ್ಲರೂ ಒಕ್ಕೊರಲಿನಿಂದ ನಮ್ಮ ಕರ್ನಾಟಕದಲ್ಲಿರತಕ್ಕ ಬೃಹತ್ ಪ್ರಮಾಣದಲ್ಲಿರತಕ್ಕ ಈ ಯೋಜನೆಗಳಿಗೆ ಆದ್ಯತೆ ಮೇಲೆ ಹೆಚ್ಚು ಹಣವನ್ನು ಕೊಟ್ಟು 2 ವರ್ಷಗಳಲ್ಲಿ ಅವುಗಳನ್ನು ಮುಗಿಸಿದರೆ ಬಹುಶಃ ಸರ್ಕಾರದೊಳಗೆ ಇದ್ದದ್ದಕ್ಕೂ ಸಾರ್ಥಕವಾಗುತ್ತದೆ. ಈ ಸಲಹೆಗಳನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೆಲ್ಲಾ ಪ್ಲಾನ್ಡ್ ಸ್ಕೀಮ್ಸ್‌ಗಳು ಇವು 30-40 ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಯೋಜನೆಗಳು. ತಾವು ಯೋಜನಾ ವೆಚ್ಚದಲ್ಲಿ ಕೊಡತಕ್ಕ ಹಣದಿಂದಲೇ ಈ ಯೋಜನೆಯನ್ನು ಮುಗಿಸುವುದಾದರೆ ಇನ್ನೂ 30 ವರ್ಷಗಳಾದರೂ ಈ ಯೋಜನೆಗಳು ಮುಗಿಯುವುದಿಲ್ಲ. ಬಹುಶಃ ಬೃಹತ್ ಪ್ರಮಾಣದ ಈ ಯೋಜನೆಗಳನ್ನು ಮುಗಿಸುವುದಕ್ಕೆ ಏನಾದರೂ ಒಂದು ದೃಢ ಸಂಕಲ್ಪ ಮಾಡಿದರೆ ಮಾತ್ರ ಈ ಯೋಜನೆಗಳನ್ನು ಮುಕ್ತಾಯ ಹಾಡುವುದಕ್ಕೆ ಸಾಧ್ಯ. ಇಲ್ಲದೆ ಹೋದರೆ ನಾವು ಯಾವುದೇಯೋಜನೆಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಮೇಲಾಗಿ ಬಚಾವತ್ ಅವಾರ್ಡ್‌ನ ಪ್ರಕಾರ ನಾವು ಈ ಯೋಜನೆಗಳನ್ನು ಮಾಡಿ ನೀರಾವರಿಯನ್ನು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಯೋಜನೆ ಮಾಡುವುದಾದರೆ, ಈ ಯೋಜನೆಗಳಿಗೆ ಹೆಚ್ಚು ಆದ್ಯತೆಯನ್ನು ಕೊಡುವುದಾದರೆ, ತಮ್ಮಲ್ಲಿರತ್ಕ ಸಂಪನ್ಮೂಲದ ಎಲ್ಲಾ ಹಣವನ್ನು ಕೂಡಿ ಹಾಕಿ ಈ ನೀರಾವರಿ ಯೋಜನೆಯನ್ನು ಮಾಡಿದರೆ ಬಹುಶಃ ಸಾರ್ಥಕವಾಗುತ್ತದೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಪ್ರತಿಯೊಬ್ಬ ಸದಸ್ಯರೂ ನೀರಾವರಿ ಸಲುವಾಗಿ ಅಪ್ಪರ್ ಕೃಷ್ಣಾ ಯೋಜನೆಯನ್ನು ಬೇಗ ಮುಗಿಸಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಚಿಮ್ಮನಕಟ್ಟಿಯವರನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ಅಪ್ಪರ್ ಕೃಷ್ಣಾ ಯೋಜನೆಯಿಂದ 140 ಹಳ್ಳಿಗಳು ಮುಳುಗಡೆಯಾಗುತ್ತವೆ. ಅದರ ಬಗ್ಗೆ ಯಾರಾದರೂ ಯೋಜನೆ ಮಾಡಿದ್ದೀರಾ? ಅವುಗಳ ಪುನರ್ ವಸತಿಯ ಬಗ್ಗೆ ಯಾರಾದರೂ ಹೇಳಿದ್ದೀರಾ? ಅಪ್ಪರ್‌ಕೃಷ್ಣಾ ಯೋಜನೆಯಷ್ಟೇ ಮಹತ್ವದ್ದು ಆಗನವಾಡಿ ಬ್ಯಾರೇಜ್, ನಮ್ಮ ಜಿಲ್ಲೆಗೆ ಪ್ರತಿಯೊಂದು ಕಡೆಗೆ ಸಂಪರ್ಕ ಕಲ್ಪಿಸಬೇಕಾದರೆ ಬ್ಯಾರೇಜ್ ಹಾಗೂ ಬ್ರಿಡ್ಜ್ ಕೆಲಸ ಆಗಬೇಕಾಗಿದೆ. ಅದನ್ನು ಮಾನ್ಯ ಚಿಮ್ಮನಕಟ್ಟಿಯವರು ಹೇಳಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳಿದ್ದಾರೆ ನಿಜ. ಇನ್ನೊಂದು ಸಲ ಅವಕಾಶಸಿಕ್ಕಾಗ ಅದಕ್ಕೆ ಹೇಳಿ ಚಿಮ್ಮನಕಟ್ಟಿಯವರು ಈಗ ತಾವು ದಯವಿಟ್ಟು ಬೇಗ ಮುಗಿಸಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಈ ಯೋಜನೆಗಳನ್ನು ಮಾಡುವುದಕ್ಕೆ ಮುಂಚೆ ಈಗಿರುವ ಯೋಜನೆಗಳನ್ನು ಮುಗಿಸಿದ ಮೇಲೆ, ನನ್ನ ವೈಯಕ್ತಿಕ ಸಲಹೆ ದೆ. ಮಹಾರಾಷ್ಟ್ರ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ನೀರಾವರಿ ಯೋಜನೆಗಳನ್ನು ಮಾಡುವುದನ್ನು ನೋಡಿದಾಗ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿ ಸಾವಿರಾರು ಕೋಟಿ ರೂಪಾಯಿಗಳನ್ನು ಅಲ್ಲಿ ಹಾಕಿ ನೂರಾರು ವರ್ಷಗಳು ಕಾಯುವುದಕ್ಕಿಂತ ಸಣ್ಣ ಸಣ್ಣ ಡ್ಯಾಮ್‌ಗಳನ್ನು ಚೆಕ್ ಡ್ಯಾಮ್‌ಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸುಮಾರು 50-60 ಬಾಂಧ್ರಗಳನ್ನು ಕಟ್ಟಿಸಿದರೆ ನನಗೆ ಅನಿಸಿದ ಮಟ್ಟಿಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಹೆಚ್ಚಾಗಿ ನೀರಾವರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬೋರ್‌ವೆಲ್‌ಗಳಲ್ಲಿ ನೀರಿಲ್ಲವೆಂದು ಏನು ಹೇಳುತ್ತಿದ್ದೇವೆ, ತಾಲ್ಲೂಕುಗಳಲ್ಲಿ ಎಲ್ಲಾ ಕಡೆಗೆ ಬಾಂಧ್ರಗಳನ್ನು ಮಾಡಿದರೆ, ಸಣ್ಣ ಸಣ್ಣ ಕೆರೆಗಳನ್ನು ಮಾಡುವುದರಿಂದ ಸ್ವಲ್ಪ ದುಡ್ಡಿನಲ್ಲಿಯೇ ಹೆಚ್ಚು ಉಪಯೋಗವಾಗತಕ್ಕ ಕೆಲಸವಾಗುತ್ತವೆ. ಆ ದೃಷ್ಟಿಯಿಂದ ನಾನು

ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ದೊಡ್ಡ ದೊಡ್ಡ ಯೋಜನೆಗಳನ್ನು ಮಂಜೂರು ಮಾಡಿ ಅಡಿಗಲ್ಲು ಸಮಾರಂಭ ಮಾಡುವುದಕ್ಕೆ ಬದಲಾಗಿ, ಸಣ್ಣ ಸಣ್ಣ ಚೆಕ್ ಡ್ಯಾಮ್ಸ್ ಗಳನ್ನು ಪ್ರತಿ ತಾಲ್ಲೂಕಿಗೆ 50-60 ಮಾಡುವುದಕ್ಕೆ ಸಾಧ್ಯವಿದೆ. ಹಾಗೆ ಮಾಡಿದರೆ ಬೋರ್‌ವೆಲ್‌ಗಳಲ್ಲಿ ಹೆಚ್ಚು ನೀರು ದೊರೆಯುತ್ತದೆ. ಭೂಮಿಯ ನೀರಿನ ಸಮಪಾತಳಿ ಹೆಚ್ಚಾಗುವುದಕ್ಕೆ ಸಾಧ್ಯವಿದೆ. ತಾವೇನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ನಿಮಗ ಸ್ಥಾಪನೆ ಮಾಡಿ ಅದರ ಮುಖಾಂತರ ನೀರಾವರಿ ಬಾಂಡ್‌ಗಳನ್ನು ಮಾಡಿ ನಾವು ಹಣವನ್ನು ಕೊಡಿಸುತ್ತೇವೆಂದು ಏನು ಹೇಳುತ್ತಿದ್ದೀರಿ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಕೃಷ್ಣಾ ಮೇಲ್ದಂಡೆಯಲ್ಲಿರತಕ್ಕ ರೈತರ ಹತ್ತಿರ ಹೋದರೆ ಬಾಂಡ್ ಗಳನ್ನು ಕೊಳ್ಳುವುದಕ್ಕೆ ಯಾರೂ ಮುಂದೆ ಬರುವುದಿಲ್ಲ, ಇದುವರೆಗೆ ನೀರು ಕೊಡದಿರುವುದರಿಂದ 500, 1000 ಮತ್ತು 2000 ರೂಪಾಯಿಗಳನ್ನು ಕೊಡುವುದಕ್ಕೆ ಅವರು ಮುಂದೆ ಬರಲಿಕ್ಕಿಲ್ಲವೆಂದು ನನ್ನ ಅನುಮಾನ ಆ ದೃಷ್ಟಿಯಿಂದ ನನ್ನ ವಿಚಾರ ಏನೆಂದರೆ ನೀರು ಕೊಡಲಾರದ ಪ್ರದೇಶಗಳಲ್ಲಿ ಹಣ ವಸೂಲಿ ಮಾಡುವುದಕ್ಕೆ ಮುಂಚೆ, ತಾವು ಅನೇಕ ಯೋಜನೆಗಳನ್ನು ಮಾಡಿ ಕಾರ್ಯಗತಗೊಳಿಸಿರತಕ್ಕ ಪ್ರದೇಶಗಳಲ್ಲಿ

ಅಧ್ಯಕ್ಷರು : ಇನ್ನು ಏಳು ಜನ ಸದಸ್ಯರು ಮಾತನಾಡುವವರು ಇದ್ದಾರೆ. ಮಾನ್ಯ ಸದಸ್ಯರು ಬೇಗ ಮುಗಿಸಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಂಡ್ಯ, ಹಾಸನ ಜಿಲ್ಲೆಯ ರೈತರಿಂದ ಮತ್ತು ತುಂಗಭದ್ರಾ ಜಲಾಶಯದಿಂದ ನೀರನ್ನು ಪಡೆದು ಪ್ರತಿಫಲವನ್ನು ಪಡೆದಿರತಕ್ಕ ರೈತರು ಏನಿದ್ದಾರೆ ಅವರ ಕಡೆಯಿಂದ ಬೆಟರ್ ಮೆಂಟ್ ಲೆವಿ ಇತರೆ ಟ್ಯಾಕ್ಸ್‌ಗಳನ್ನು ಹಾಕಿ ಇಂಥಹ ಡ್ಯಾಮ್‌ಗಳನ್ನು ಕಟ್ಟಿದರೆ ಹೆಚ್ಚು ಉಪಯೋಗವಾಗುತ್ತದೆ. ನೀರು ಕೊಡಲಾರದ ಪ್ರದೇಶಗಳಲ್ಲಿರತಕ್ಕ ಜನರಿಗೆ ಹೆಚ್ಚು ತೊಂದರೆ ಕೊಟ್ಟು ಅವರಿಂದ ಹಣ ತೆಗೆದುಕೊಳ್ಳುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಯಾವುದಾದರೂ ಒಂದು ಕರವನ್ನು ವಸೂಲಿ ಮಾಡುವುದಕ್ಕೆ ಯೋಚನೆ ಮಾಡಬೇಕೇ ವಿನಹ, ಯಾವುದಾದರೂ ನಿಗಮ ಸ್ಥಾಪನೆ ಮಾಡಿ ಬಾಂಡ್ ಗಳ ಮುಖಾಂತರ ಹಣ ಸಂಪಾದನೆ ಮಾಡುತ್ತೇವೆಂದರೆ ಅದು ಪ್ರಾಕ್ಟಿಕಲ್ ಆಗಿ ಸಾಧ್ಯವಾಗುವುದಿಲ್ಲವೆನ್ನುವ ವಿಚಾರವನ್ನು ಹೇಳುತ್ತೇನೆ. ನೀರಾವರಿ ಯೋಜನೆಗಳಿಗೆ ತಾವು ಹೆಚ್ಚು ಆಸಕ್ತಿಯನ್ನು ವಹಿಸಿ ಹೆಚ್ಚಿನ ಹಣವನ್ನು ಕೊಡುತ್ತೀರಿ. ಮಲಪ್ರಭಘಟಪ್ರಭ ಯೋಜನೆಗಳು 30 ವರ್ಷಗಳ ಹಿಂದೆ ಪ್ರಾರಂಭವಾಗಿ ಮುಗಿಯುವ ಹಂತದಲ್ಲಿದ್ದೇವೆ. ಇನ್ನು 8-10 ಕಿಲೋಮೀಟರ್ ಕೆಲಸ ಆದರೆ ಬಹುಶಃ ಆ ಯೋಜನೆಗಳು ಮುಕ್ತಾಯವಾಗುತ್ತವೆ. ಮುಕ್ತಾಯವಾಗತಕ್ಕ ಯೋಜನೆಗಳಿಗೆ ಹೆಚ್ಚಿಗೆ ಹಣವನ್ನು ಕೊಟ್ಟರೆ ತಾವು ಹೆಚ್ಚಿನ ಆಧ್ಯತೆಯನ್ನು ನೀರಾವರಿಗೆ ಕೊಟ್ಟಹಾಗೆ ಆಗುತ್ತದೆ. ಇನ್ನು ಕೆ.ಇ.ಬಿ. ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಬಿಜಾಪುರ ಜಿಲ್ಲೆ ಬರಗಾಲ ಪೀಡಿತಪ್ರದೇಶೆಂದು ಅನೇಕ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಕೆ.ಇ.ಬಿ. ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಕೆ.ಇ.ಬಿ. ನವರು ಈಗಾಗಲೇ ಒಂದು ಆದೇಶವನ್ನು ಹೊರಡಿಸಿದ್ದಾರೆ. 5 ಕಂಬಗಳಿಗಿಂತ ಒಳಗಿರುವವರೆಗೆ ಮಾತ್ರ ವಿದ್ಯುತ್ ಕನೆಕ್ಷನ್ ಕೊಡುತ್ತೇವೆ, 5 ಕಂಬಗಳಿಗಿಂತ ಹೆಚ್ಚು ದೂರ ಇದ್ದವರಿಗೆ ವಿದ್ಯುತ್ ಕನೆಕ್ಷನ್ ಕೊಡುವುದಿಲ್ಲವೆಂದು ಆದೇಶ ಹೊರಡಿಸಿದ್ದಾರೆ. ಬಿಜಾಪುರ ಜಿಲ್ಲೆಗೆ ಈ ರೀತಿಯ ಯಾವುದೇ ರಿಸ್ಟ್ರಿಕ್ಷನ್ ಇರಲಿಲ್ಲ, ಬಿಜಾಪುರ ಜಿಲ್ಲೆಯವರಿಗೆ ಅದು ಬರಗಾಲ ಪೀಡಿತ ಪ್ರದೇಶವಾದ್ದರಿಂದ ಅವರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಾರೆ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ನವರು ವಿಧಿಸಿರತಕ್ಕ ಷರತ್ತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅಲ್ಲಿನ ಜನರಿಗೆ

ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ನಾನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER : Hon'ble Member Smt. Pramila Nesargi, you are the kindest soul to me in this House. You Should co-operate with

ಶ್ರೀಮತಿ ಪ್ರಮೀಳನೇಸರ್ಗಿ : (ಚಾಮರಾಜಪೇಟೆ) ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ವಿನಂತಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

Reservation of 30% to women. ಆದ್ದರಿಂದ 30 ಪರ್ಸೆಂಟ್ ಸಮಯವನ್ನು ಮಹಿಳೆಯರ ಪರವಾಗಿ ಮಾತನಾಡಲಿಕ್ಕೆ ಕೊಡಬೇಕು. ಆ ರೀತಿ ಕೊಟ್ಟಾಗ ತಾವು ಹೇಳಿದ ಮಾತಿಗೆ ಸಾರ್ಥಕವಾಗುತ್ತದೆ. ಆ ಕೆಲಸವನ್ನು ತಾವು ಮಾಡುತ್ತೀರಿ ಎಂದು ಅಂದುಕೊಂಡು ನನ್ನ ಮಾತನ್ನು ಪ್ರಾರಂಭ ಮಾಡುತ್ತಿದ್ದೇನೆ.

ಅಧ್ಯಕ್ಷರು : ಅದು ಅವರ ಸರ್ಕಾರದ ಪ್ರಪೋಸಲ್.

ಶ್ರೀ ಟಿ.ಬಿ. ಜಯಚಂದ್ರ : ಮಹಿಳೆಯರು 30 ಪರ್ಸೆಂಟ್ ಆಯ್ಕೆಯಾಗಿ ಬಂದಮೇಲೆ 30 ಪರ್ಸೆಂಟ್ ರಿಸರ್ವೇಷನ್.

MR. SPEAKER : I don't belong to either of you. I am an Independent.

ಶ್ರೀಮತಿ ಪ್ರಮೀಳನೇಸರ್ಗಿ : ನನಗೆ ಗೊತ್ತು. ಮಹಿಳೆಯರು ಯಾರೂ ಮಾತನಾಡದಿರತಕ್ಕ ಸಂದರ್ಭದಲ್ಲಿ ನಾನು ಮಹಿಳೆಯರ ಪರವಾಗಿ ಮಾತನಾಡುವುದಕ್ಕೆ ಅವರಿಗಿಂತ ಸ್ವಲ್ಪ ಹೆಚ್ಚಿಗೆ ಸಮಯವನ್ನು ತೆಗೆದುಕೊಂಡರೆ ಅದನ್ನು ತಾವು ತಪ್ಪೆಂದು ಭಾವಿಸಬಾರದು. ನಾನು ಬಹಳ ಆಸಕ್ತಿಯಿಂದ ಸಿ.ಎಂ. ಉದಾಸಿಯವರು ಮತ್ತು ಕೃಷ್ಣಾರವರು ಮಾತನಾಡಿದ್ದನ್ನು ಆಲಿಸಿದೆ. ಪ್ರಾಯಶಃ ಶ್ರೀಮಾನ್ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿ 1989ನೇ ಇಸವಿಯಲ್ಲಿ ಈ ಕಡೆ ಇದ್ದಾಗ, ಕಾಂಗ್ರೆಸ್ ಪಕ್ಷದವರು ಆ ಕಡೆಗೆ ಕುಳಿತಿದ್ದಾಗ ಆ ಸಂದರ್ಭದಲ್ಲಿಒಂದು ಮಾತನ್ನು ಹೇಳಿದರು. ಏನು ಹೇಳಿದರೆಂದರೆ, ಅಂಕಿ ಅಂಶಗಳಿಂದ ಜನ ನಿಮಗೆ ಓಟು ಕೊಟ್ಟಿಲ್ಲ, ಅಂಕಿ ಅಂಶಗಳ ಬಗ್ಗೆ ಹೆಚ್ಚು ಗಮನ ಕೊಡಬೇಡಿ, ಜನ ನಿಮಗೆ ಓಟು ಕೊಟ್ಟಿಲ್ಲ, 170ಕ್ಕಿಂತ ಜಾಸ್ತಿ ಜನ ಆರಿಸಿ ಬಂದಿದ್ದೇವೆಂದು ಹೇಳಿದರು. ಪ್ರಾಯಶಃ ಶ್ರೀಮಾನ್ ಉದಾಸಿಯವರು ಈ ಸದನದಲ್ಲಿದ್ದರು ಎಂದು ಅಂದುಕೊಂಡಿದ್ದೇನೆ. ಆ ಮಾತನ್ನು ಕೇಳಿ, ಅವರ ಪಕ್ಷದವರೇ ಮಾತನಾಡಿದ ಸಂದರ್ಭದಲ್ಲಿ ಈಗ ಅವರ ಪಕ್ಷ ಕೇವಲ 116 ಜನ ಆರಿಸಿ ಬಂದಿದ್ದಾರೆ. ನಾವು ಬಹುಮತದಿಂದ ಬಂದಿದ್ದೇವೆಂದು ಬೀಗತಕ್ಕದ್ದು ಸರಿಯೇ ಎನ್ನುವ ಪ್ರಶ್ನೆಯನ್ನು ಸಭಾಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ. ಅದಕ್ಕೆ ಒಂದು ಕಾರಣವಿದೆ. ಅಂದುಕೊಂಡಿರಬಹುದು, ನಾವು ಅಧಿಕಾರಕ್ಕೆ ಬಂದಿದ್ದೇವೆ ನಮಗೆ ಬಹುಮತ ಬಂದಿದೆಯೆಂದು ಮಂತ್ರಿಮಂಡಲವನ್ನು ರಚಿಸಿದ್ದೀರಿ. ಅಂಕಿಅಂಶಗಳ ಬಲದಿಂದ ಬಂದಿದ್ದೇವೆಂದು ಅಂದುಕೊಂಡರೆ ಅದು ತಪ್ಪು. ಚುನಾವಣೆ ಯಾವರೀತಿ ಆಯಿತು ಎನ್ನುವುದು ತಮಗೆ ಗೊತ್ತಿದೆ. ಚುನಾವಣೆಯಲ್ಲಿ ಶೇಷನ್ ರವರ ಆದೇಶ ಏನಿತ್ತು? ಅದೂ ಸಹ ತಮಗೆ ಗೊತ್ತಿದೆ. ಈ ಭಾರಿ ಒಬ್ಬ ಅಭ್ಯರ್ಥಿ 1 ಲಕ್ಷದ 35 ಸಾವಿರಕ್ಕಿಂತ ಹೆಚ್ಚು ಖರ್ಚುಮಾಡಬಾರದೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ಓದಿದ್ದೀರಿ, ನಾನೂ ಸಹ ಓದಿದ್ದೇನೆ ತಾವೆಲ್ಲರೂ ಓದಿದ್ದೀರಿ. ಚುನಾವಣೆ 15 ದಿವಸಗಳು ಇರುವಾಗ ಆ ಸಂದರ್ಭದಲ್ಲಿ ಪತ್ರಿಕೆಗಳವರು ಹೇಳುತ್ತಾ ಬಂದರು. ಈ ಸಾರಿ ಎರಡೇ ಹಾರ್ಸ್ ಇರತಕ್ಕದ್ದು. ಒಂದು ಜನತಾದಳ ಮತ್ತೊಂದು ಕಾಂಗ್ರೆಸ್ ಎಂದು ಹೇಳಿ, ಶೇಷನ್ ರವರ ಯಾವ ಪ್ರತಿಬಂಧಕಾಜ್ಞೆಯಿತ್ತು ಜಾಹಿರಾತು ಕೊಟ್ಟ 1 ಲಕ್ಷದ 35 ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡಬಾರದೆಂದು ಹೇಳಿದ್ದರು, ಆದ

ಪತ್ರಕರ್ತರು ಜನತಾದಳದವರಿಗೆ ಹೆಚ್ಚು ಜಾಹಿರಾತು ಪ್ರಕಟಿಸಿ ಅವರೇ ಗೆಲ್ಲುತ್ತಾರೆಂದೂ ಎರಡೇ ಹಾರ್ಸ್ ಇರತಕ್ಕದ್ದು ಎಂದು ಸಂದರ್ಭದಲ್ಲಿ ಜನ ಅಂದುಕೊಂಡರು, ಏನು ಜನತಾದಳಕ್ಕೆ ಕೊಡಬೇಕು ಕಾಂಗ್ರೆಸ್ ಪಕ್ಷವಂತೂ ಬೇಡ. ಆಂಟಿ ಕಾಂಗ್ರೆಸ್ ಗೆ ವೇವ್ ಈ ಕರ್ನಾಟಕದಲ್ಲಿ ನಡೆಯುತ್ತಿತ್ತು. ಕಾಂಗ್ರೆಸ್ ಬೇಡ ಅಂದಮೇಲೆ ಜನತಾದಳಕ್ಕೆ ಕೊಡಬೇಕೇ ಭಾರತೀಯ ಜನತಾ ಪಕ್ಷಕ್ಕೆ ಕೊಡಬೇಕೇ ಎನ್ನತಕ್ಕ ಸಂದರ್ಭದಲ್ಲಿ ಪತ್ರಿಕೋದ್ಯೋಗಿಗಳ ಸಹಾಯ ಪಡೆದು ಈವತ್ತು ಈ ಜನತಾದಳ ಅಧಿಕಾರಕ್ಕೆ ಬಂದಿದೆಯೆಂಬುದನ್ನು ತಾವು ಮರೆಯಬಾರದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಬೇರೆಯವರು ಮಾತನಾಡುವುದಕ್ಕೆ ಈಲ್ಡ್ ಆಗುವುದಿಲ್ಲ. ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಾಗ ಮಾತನಾಡಿ. ನೀವು ಮಾತನಾಡುವಾಗ ನಾನು ಕೇಳುತ್ತಾ ಕುಳಿತಿದ್ದೆ. ನೀವು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಇವರು ಎಂತಹ ಮುಹೂರ್ತದಲ್ಲಿ ಅಧಿಕಾರಕ್ಕೆ ಬಂದರು, 5 ದಿವಸ ಆಯಿತು ತಾಳಿಕಟ್ಟಿ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ನಮ್ಮ ಪಕ್ಷಕ್ಕೆ ತಾಳಿ ಕಟ್ಟಿ 5 ದಿವಸಗಳಾಯಿತು ಎಂದು ಲಕ್ಷ್ಮಯ್ಯನವರು ಹೇಳಿದ ಮಾತನ್ನು ಕೇಳಿದ್ದೇನೆ. ಆದರೆ ತಾಳಿಕಟ್ಟಿದ ಆ ಮುಹೂರ್ತ ಸರಿಯಿಲ್ಲ ಆ ಮುಹೂರ್ತ ಸರಿಯಾಗಿ ಇದ್ದಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಮಾನ್ಯ ಲಕ್ಷ್ಮಯ್ಯನವರು ಗಮನಿಸಬೇಕು. ಇವತ್ತು ಚುನಾವಣೆಗೆ ಬರುವುದಕ್ಕೆ ಮುಂಚೆ ಜನತಾದಳದಲ್ಲಿರುವವರು, 1989ಕ್ಕಿಂತ ಮುಂಚೆ ಆರು ವರ್ಷ ಅಧಿಕಾರದಲ್ಲಿದ್ದರು. ಆಗ ಆದಂತಹ ಹಗರಣಗಳೆಲ್ಲಾ ತಮಗೆ ಗೊತ್ತಿದೆ. ಅದನ್ನು ಜನತೆ ಇನ್ನೂ ಕೂಡ ಮರೆತಿಲ್ಲ, ಬಾಟ್ಲಿಂಗ್ ಹಗರಣವಾಗಲೀ, ರೇವಜಿತ್ ಪ್ರಕರಣವಾಗಲೀ ಅವುಗಳನ್ನು ಯಾರೂ ಕೂಡ ಮರೆತಿಲ್ಲ. ಆದರೆ ಈಗ ನನಗೆ ತಿಳಿದ ಪ್ರಕಾರ ರೇವಜಿತ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಏನು ತೀರ್ಮಾನವಾಗಿತ್ತು ಆ ತೀರ್ಮಾನವನ್ನು ಬದಿಗೊತ್ತಿ ನಿಮ್ಮ ಸರ್ಕಾರದಲ್ಲಿರತಕ್ಕವರು ಅಧಿಕಾರ ದುರುಪಯೋಗಮಾಡಿಕೊಂಡು ಕಾಂಗ್ರೆಸ್ ನವರು ಮತ್ತು ನೀವು ಒಗ್ಗಟ್ಟಾಗಿ ಒಂದೇ ವಿಧದಲ್ಲಿ, ಒಂದು ವಿಧವಾದ ಅಂಡರ್ ಸ್ಟಾಂಡಿಂಗ್ ನಿಮ್ಮಿಬ್ಬರಲ್ಲಿ ಇದೆಯೆಂದು ನಾನು ಅಂದುಕೊಂಡಿದ್ದೇನೆ. ರೇವಜಿತು ಪ್ರಕರಣದಲ್ಲಿ, ಯಾವ ಒಂದು ಜಮೀನು ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ಕೊಟ್ಟಿತ್ತು, ಆ ಜಮೀನಿನ ರಿಜಿಸ್ಟ್ರೇಷನ್ ಆಗಿದೆ. ಅದು ಹೇಗಾಯಿತು, ಯಾರು ಮಾಡಿದರು. ಇದಕ್ಕೆ ಯಾರು ಕಾರಣಕರ್ತರು ಸುಪ್ರೀಂ ಕೋರ್ಟ್ ತೀರ್ಪು ಆದಮೇಲೂ ಕೂಡ, ನೀವು ಈ ಹಗರಣದಲ್ಲಿದ್ದಂಥ ಜಮೀನನ್ನು ಹೇಗೆ ರಿಜಿಸ್ಟ್ರೇಷನ್ ಮಾಡಿಕೊಂಡಿರಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಇದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ನಿಮಗೆ ಮತ್ತು ಕಾಂಗ್ರೆಸ್ ನವರಿಗೆ ಏನಾದರೂ ಅಂಡರ್‌ಸ್ಟಾಂಡಿಂಗ್ ಇತ್ತೇ? ಅರ್ಬನ್ ಸೀಲಿಂಗ್ ನಲ್ಲಿ ಹೇಗೆ ಇದಕ್ಕೆ ಎಕ್ಸೆಮ್ಷನ್ ಕೊಟ್ಟರು, ಯಾವರೀತಿ ಕೊಟ್ಟರು ಎನ್ನುವ ಮಾತನ್ನು ಕೇಳಬೇಕಾಗುತ್ತದೆ. ಒಂದು ವೇಳೆ ಇದೇ ಕಾರಣದಿಂದ, ಇವತ್ತು ತಾವು, ರೈಲ್ವೆ ಮಂತ್ರಿಗಳ ಭೂ ಹಗರಣದಲ್ಲಿ, ನಾವು ಏನೂ ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ, ಇದರ ಬಗ್ಗೆಯೂ ಕೂಡ ತಾವು ಉತ್ತರ ಕೊಡಬೇಕಾಗುತ್ತದೆ. ಈ ಸಭೆಯಲ್ಲಿ ಏನು ಒಂದು ಮಾತನ್ನು ಕೇಳಬೇಕಾಗುತ್ತದೆ. Caesar's wife must be above uspicion,

ಎನ್ನತಕ್ಕಂಥಾದ್ದು ತಮಗೂ ಕೂಡ ಗೊತ್ತಿದೆ.

ಈ ಸಂದರ್ಭದಲ್ಲಿ ಇಲ್ಲಿರತಕ್ಕಂಥ ಸಭಾನಾಯಕರಾಗಲೀ, ಯಾರಾದರೂ ಆಗಲಿ, ಪ್ಪು ಮಾಡಿದ್ದರೆ, ಅದನ್ನು ಜನತೆಯ ಮುಂದೆ ಇಡಬೇಕಾಗುತ್ತದೆ.

MR. SPEAKER : Not only that, it also appear to be so.

SMT. PRAMILA NESARUI : Apper to be so ಹೌದು ಸಭಾಧ್ಯಕ್ಷರೆ, ಆದರೆ, ಸಿ.ಓ.ಡಿ. ವರದಿ ಈ ಒಂದು ಭೂ ಹಗರಣದ ವಿಷಯದಲ್ಲಿ ಸಭಾನಾಯಕರ ಮೇಲೆ ಬಂದಂಥದ್ದನ್ನು, ಕಾಂಗ್ರೆಸ್ ಪಕ್ಷದವರು,ಸಿ.ಓ.ಡಿ ವರದಿಯನ್ನು ಎತ್ತಿಹಾಕಿರುವುದು ನಿಜವೇ, ಮುಚ್ಚಿಹಾಕಿರುವುದು ನಿಜವೇ, ಏತಕ್ಕೋಸ್ಕರ ಮುಚ್ಚಿಹಾಕಿದರು? ಈ ದೇಶದ ಜನತೆ ಕೇಳುವುದಕ್ಕೆ ಇಷ್ಟಪಡುತ್ತಾರೆ. ನಾನು ಕೇಳತಕ್ಕಂಥಾದ್ದು, ಸಭಾನಾಯಕರು ಈ ಭೂ ಹಗರಣದಲ್ಲಿ, ಒಳಗೊಂಡಿದ್ದಾರೆಂದಲ್ಲ, ಆದರೆ, ಜನತೆ ಇದನ್ನು ತಿಳಿದುಕೊಳ್ಳುವುದಕ್ಕೆ ಆಸೆ ಇದೆ, ಆಸಕ್ತಿ ಇದೆ. ಏಕೆಂದರೆ ಅವರೇನೂ ತಪ್ಪು ಮಾಡಿಲ್ಲ, ನಮ್ಮ ಸಭಾನಾಯಕರು ಈ ದೇಶದ ಜನತೆಗೆ ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಸಭಾನಾಯಕರಾಗಿರತಕ್ಕಂಥ ಸಂದರ್ಭದಲ್ಲಿ, ಅವರು ಉತ್ತರ ಕೊಡಬೇಕಾದುದು ಅನಿರೀಕ್ಷಿತ ಅಲ್ಲ, ಅತಿ ಅವಶ್ಯಕತೆ ಎನ್ನತಕ್ಕಂಥ ಮಾತನ್ನು ಈ ಸಭೆಯಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಸಭಾನಾಯಕರು ಉತ್ತರವನ್ನು ಕೊಡುತ್ತಾರೆಂದೂ ಕೂಡ ನಾನು ಅಂದುಕೊಂಡಿದ್ದೇನೆ. ಇವತ್ತು ಈ ರಿಪೋರ್ಟ್ ಕೊಟ್ಟಿದ್ದಾರೆ.

ರಾಜ್ಯಪಾಲರ ವರದಿ ಎಂದು ಕೊಟ್ಟು, ಇದರಲ್ಲಿ ಏನಾದರೂ ಇದೆಯೇ? ಯಾವುದಾದರೊಂದು ಸಬ್ಜೆಕ್ಟೇ ಇದ್ದರೆ ಪ್ರಪೋಸರ್ ಬೇಕು, ಮತ್ತೆ ಸೆಕೆಂಡರ್ ಬೇಕು. ಸಬ್ಜೆಕ್ಟೇ ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಪ್ರಪೋಸರ್ ಇರುವುದಕ್ಕೆ ಸಾಧ್ಯವಿಲ್ಲ ಮತ್ತು ಸೆಕೆಂಡರ್ ಕೂಡ ಇರುವುದಕ್ಕೆ ಸಾಧ್ಯವಿಲ್ಲ. ನಮ್ಮ ಕೋರ್ಟ್‌ನಲ್ಲಿ ಇಂತಾದ್ದು ಏನಾದರೊಂದು ಅರ್ಜಿ, ಯಾರಾದರೂ ಹಾವಾ ಹಾಕಿದರೆ, it has no locus standi ಪ್ರೈಮಾಫೇಸಿ ಕೇಸ್ ಇಲ್ಲವೆಂದು ಹೇಳಿ, ತಕ್ಷಣ ಅದನ್ನು ತೆಗೆದುಕೊಂಡು ಹೋಗಿ ರಿಜೆಕ್ಟ್ ಮಾಡುತ್ತಿದ್ದರು. ಈ ರಿಪೋರ್ಟ್ ಕೂಡ ಅದೇ ರೀತಿ ಇದೆ. ಹೇಳಿಲ್ಲ, ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಅದನ್ನೂ ಕೂಡ ಹೇಳಿಲ್ಲ, ಇದು ಯಾರಾದರೂ ಎಂಟನೆಯ ತರಗತಿ ಓದತಕ್ಕ ವಿದ್ಯಾರ್ಥಿಗೆ, ಗವರ್ನರ್ ಸ್ಪೀಚ್ ಬರೆಯಿರಿ ಎಂದು ಏನಾದರೂ ಟಿಪ್ಪಣಿ ಅಥವಾ ಪ್ರಬಂಧ ಬರೆಯಿರಿ ಎಂದು ಹೇಳಿದರೆ, ಇದಕ್ಕಿಂತ ಚೆನ್ನಾಗಿ ಬರೆದುಕೊಡುತ್ತಾರೆನ್ನುವುದನ್ನು ಶಾಲೆಗಳಲ್ಲಿರತಕ್ಕ ವಿದ್ಯಾರ್ಥಿಗಳು ಹೇಳುತ್ತಾರೆ. ಅಂದಮೇಲೆ, ಇಂತಹ ರಿಪೋರ್ಟ್ ಕೊಡುವುದರ ಬದಲು, ಸುಮ್ಮನೇ ಇರಬಹುದಾಗಿತ್ತು. ಈ ರೀತಿ ಮಾಡುತ್ತೇವೆ, ಎಲ್ಲವನ್ನೂ ಮಾಡುತ್ತೇವೆ, ಎಂದು ಹೇಳುವುದರ ಬದಲು ಒಂದೇ ಮಾತಿನಲ್ಲಿ ಹೇಳಬೇಕಾಗಿತ್ತು. ಸಮಾಜವನ್ನು ಉದ್ಧಾರ ಮಾಡತಕ್ಕಂಥ ಎಲ್ಲಾ ಕೆಲಸವನ್ನೂ ಮಾಡುತ್ತೇವೆಂದು ಹೇಳಿ, ಒಂದು ವಾಕ್ಯ ಬರೆದು ಕುಳಿತುಕೊಂಡಿದ್ದರೆ ಆಗುತ್ತಿತ್ತು. ಇದರಲ್ಲಿ ಏನೂ ಇಲ್ಲ, ಮಾನ್ಯ ಸಭಾಧ್ಯಕ್ಷರೇ, ನನಗನಿಸುತ್ತದೆ. ಮಾನ್ಯ ರಾಜಶೇಖರಮೂರ್ತಿಯವರು, 1989ನೇ ಇಸವಿಯಲ್ಲಿ ಅಧಿಕಾರದಲ್ಲಿದ್ದಂಥ ಜನತಾದಳ ಸರ್ಕಾರದ ಹಣಕಾಸು ಪರಿಸ್ಥಿತಿ ಏನಿತ್ತು, ಅದರ ಬಗ್ಗೆ ಒಂದು ಕ್ಷಕಿರಣ ಬೀರುತ್ತಾರೆ. ಅವರು ಏನು ಹೇಳಿದ್ದಾರೆಂದರೆ, ಅದು ತಮಗೂ ಗೊತ್ತಿರಬಹುದು. ಹಣವೇ ಇಲ್ಲ, ಹಣ ಇಲ್ಲವೆಂದು ನೀವು ಹೇಳುತ್ತಿದ್ದೀರಿ. 200 ಕೋಟಿ ರೂಪಾಯಿಗಳನ್ನು ಪಿಯರ್ ಲೆಸ್ ಕಂಪನಿಯಿಂದ ತೆಗೆದುಕೊಂಡಿದ್ದಾರೆ. ಈ ಕಾಂಗ್ರೆಸ್ ನವರು ಖಜಾನೆ ಲೂಟಿ ಮಾಡಿ ಹೋಗಿದ್ದಾರೆ, ಹಣವಿಲ್ಲವೆಂದು ನೀವು ಹೇಳುತ್ತಿದ್ದೀರಿ. ಆದರೆ, ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ಮಾನ್ಯ ರಾಜಶೇಖರ ಮೂರ್ತಿಯವರು ಏನು ಹೇಳಿದ್ದಾರೆ ಎನ್ನುವುದನ್ನು, ದಯವಿಟ್ಟು ತಾವು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಕಾಂಗ್ರೆಸ್ ನವರು ಖಜಾನೆ ಲೂಟಿ ಮಾಡಿದ್ದಾರೆಂದು ಹೇಳಿದ್ದಕ್ಕೆ ಉತ್ತರ ಹೇಳಬೇಕಲ್ಲಾ. ನಾನು ಹೇಳುತ್ತೇನೆ. ಪಿಯರ್ ಲೆಸ್ ಕಂಪನಿಯಿಂದ ಹಣ ತೆಗೆದುಕೊಂಡು, ಲೋನ್ ತೆಗೆದುಕೊಂಡು ಲೂಟಿ ಮಾಡಿದರು ಎಂದು ಹೇಳಿದರು. ಅದೇನು ಅದೊಂದು ರುಜುವಾತು ಇದೆಯೆ?

ವರ್ಲ್ಡ್ ಬ್ಯಾಂಕ್‌ನವರು ಲೋನ್ ಕೊಡದೇ ಇದ್ದಾಗ, ಬೇರೆ ಕಂಪನಿಗಳಿಂದ ಲೋನ್ ತೆಗೆದುಕೊಂಡು, ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ಅವರು ಹೇಳಿದ್ದುದು. ಈ ಕಡೆಯವರು, ಕಾಂಗ್ರೆಸ್‌ನವರು ಖಜಾನೆ ಲೂಟಿ ಮಾಡಿ ಹೋಗಿದ್ದಾರೆ ಎಂದು ಹೇಳಿದ್ದೀರಿ. ನೀವು ಮಾಡಿದ್ದನ್ನು ಮಾನ್ಯ ರಾಜಶೇಖರ ಮೂರ್ತಿಯವರು ಹೇಳಿದ್ದಾರೆ ಎಂದು ಅವರು ಹೇಳಿದರು. Unnecessarily you are guilty ಏತಕ್ಕೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ 1989-90ನೇ ಇಸವಿಯಲ್ಲಿ ಓಪನಿಂಗ್ ಬ್ಯಾಲೆನ್ಸ್ ಎಷ್ಟತ್ತು, ಅನ್ ಪೇಯ್ಡ್ ಬಿಲ್ಸ್ ಎಷ್ಟಿತ್ತು. ಅನ್ ಬಡ್ಜೆಟೆಡ್ ಲೈಯಾಬಿಲಿಟೀಸ್ ಎಷ್ಟಿತ್ತು, ವೇರಿಯಸ್ ಸಬ್ಸಿಡೀಸ್ ಎಷ್ಟಿತ್ತು ಎನ್ನುವುದರ ಬಗ್ಗೆ, ಬಹಳ ಚೆನ್ನಾಗಿ ಶ್ರೀಮಾನ್ ರಾಜಶೇಖರ ಮೂರ್ತಿಯವರು ಈ ಸಭೆಯಲ್ಲಿಟ್ಟಿದ್ದಾರೆ. ಅಂದರೆ, ನೀವು ಸರ್ಕಾರ ನಡೆಸತಕ್ಕ ಆರು ವರ್ಷಗಳಲ್ಲಿ, ಬಿಲ್ಲುಗಳು ಹಾಗೆಯೇ ಉಳಿದಿದ್ದವು ಬಡ್ಜೆಟ್ ಇಲ್ಲದೇ ಇರತಕ್ಕ ಲೈಯಾಬಿಲಿಟೀಸ್‌ಗಳು ಬಹಳ ಇದ್ದವು. ಎಷ್ಟೊಂದು ಸಬ್ಸಿಡಿ ಮಾಡಿದ್ದಿರಿ ಎಂದರೆ, ಪ್ಲಾನ್, ಇನ್‌ಕಮ್‌ಗೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಹಣ ಇಟ್ಟಿರಲಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿ ಹೋಗಿದ್ದಾರೆ.

ನಾವು ಕಾಂಗ್ರೆಸ್‌ನವರೂ ಅಲ್ಲ ಜನತಾದಳದವರೂ ಅಲ್ಲ, ನೀವೂ ಹಣವನ್ನು ಇಟ್ಟಿಲವೆಂದ ಮೇಲೆ ಈ ಹಿಂದೆ ನೀವು 6 ವರ್ಷಗಳ ಕಾಲ ಅಧಿಕಾರ ಮಾಡತಕ್ಕ ಸಂದರ್ಭದಲ್ಲಿ ಈ ರೀತಿ ಹಣಕಾಸಿನ ಪರಿಸ್ಥಿತಿ ಇತ್ತು ಎಂದರೆ ಈಗ ನಿಮಗೆ ಬಂದಿರತಕ್ಕಂಥ 5 ವರ್ಷಗಳ ಅಧಿಕಾರದಲ್ಲಿ ಏನು ಮಾಡಬಲ್ಲಿರಿ? ಯಾವ ರೀತಿ ಆಗಬಲ್ಲದು? ಅದರ ಬಗ್ಗೆ ಊಹೆ ಮಾಡಲಿಕ್ಕೂ ಬಹಳ ಕಷ್ಟವಾಗುತ್ತದೆ. ಅದರ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ. ಗೌರ್ನರ್ ಮುಖಾಂತರ ತಾವು ಏನು ಹೇಳಿದ್ದೀರೆಂದರೆ

"My Government will avoid all nonËproductive expenditure"

ಮಾನ್ಯ ಸಭಾಧ್ಯಕ್ಷರೇ, ಹಾಗೆಯೇ ಅಕ್ಕಿ ಕೊಡುವ ಬಗ್ಗೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದಾರೆ. ಇದು ಪ್ರೊಡಕ್ಟೀವೂ ಅಥವಾ ನಾನ್ ಪ್ರೊಡಕ್ಟೀವ್ ಎಕ್ಸ್‌ಪೆಂಟೇಚರ್? ಇದರ ಬಗ್ಗೆ ತಾವು ಗಮನ ಹರಿಸಬೇಕಾಗುತ್ತದೆ. ಒಂದು ಕಡೆ ಹೇಳುವುದೇ ಬೇರೆ ಮತ್ತೊಂದು ಕಡೆ ಮಾಡುವುದನ್ನೇ ಮಾಡುತ್ತಿದ್ದೀರಿ. ಶ್ರೀಮಾನ್ ರಾಜಶೇಖರ ಮೂರ್ತಿಯವರು ಏನು ಹೇಳಿದ್ದರೋ ಅದೇ ಹಾದಿಯಲ್ಲಿ ತಾವೂ ಹೋಗುತ್ತಿದ್ದೀರಿ, ಇದರಿಂದ ಕರ್ನಾಟಕ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ, ನಾನ್-ಪ್ರೊಡಕ್ಟೀವ್ ಯಾವುದೇ ಇದ್ದರೂ ಅದನ್ನು ಅವಾಯ್ಡ್ ಮಾಡಬೇಕಾಗುತ್ತದೆ. ಪ್ರೊಡಕ್ಟೀವ್ ಅದನ್ನು ತೆಗೆದುಹಾಕಿ ಏನಿದೆ, ಪ್ಲಾನ್ಡ್ ಎಕ್ಸ್‌ಪೆಂಡೇಚರ್ ಏನಿದೆ, ಅದರ ಬಗ್ಗೆ ತಾವು ಗಮನ ಹರಿಸಿ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಸಬ್ಸಿಡೈಸ್ಡ್ ರೈಸ್ ಕೊಡುವುದು ಬೇಡ ಎನ್ನುವುದು ತಮ್ಮ ಅಭಿಪ್ರಾಯವೇ?

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನಾನು ಬೇಡ ಎಂದು ಹೇಳುತ್ತಿಲ್ಲ. ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರತಕ್ಕಂಥ ವಿಷಯದಲ್ಲಿ ಯಾವ ರೀತಿ ವೈಪರೀತ್ಯ ಇದೆ? ಹೇಳುವುದು ಒಂದು, ಮಾಡುವುದು ಒಂದು ಎನ್ನುವುದರ ಬಗ್ಗೆ ಮಾನ್ಯ ಉದಾಸಿಯವರು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಸಾಲ ಮನ್ನಾ ಮಾಡಬೇಕೆಂದು ತಾವು ಹೇಳಿದರೂ ತಮಗೆ ವೋಟು ಕೊಟ್ಟಿಲ್ಲ.

ಶ್ರೀಮತಿ ಎಸ್. ಪ್ರಮೀಳ ನೇಸರ್ಗಿ ; ಸಾಲದ ವಿಷಯವನ್ನು ಮಾನ್ಯ ಉದಾಸಿಯವರು ನೆನಪು ಮಾಡಿದರು. ಮಾನ್ಯ ಮಂತ್ರಿಯಾಗಿದ್ದಾಗ ಇದೇ ಕಡೆ ಕುಳಿತಿದ್ದ ಮಾನ್ಯ ಚಂದ್ರೇಗೌಡರು, 10 ಸಾವಿರ ರೂಪಾಯಿವರೆಗೆ ಸಾಲ ಮನ್ನಾ ಮಾಡುತ್ತೇವೆಂದು ನೀವು ಹೇಳಿದಿರಿ, ಅದರಂತೆ ಸಾಲ ಮನ್ನಾ ಮಾಡಿ ಎಂದು ಹೇಳಿದ್ದರು, ಸನ್ಮಾನ್ಯ ವಿ.ಪಿ. ಸಿಂಗ್‌ರವರು ಹೇಳಿದ್ದರು, ಮಾಡಿ ಸ್ವಾಮಿ ನಾವು ಬೇಡ ಎಂದು ಹೇಳುವುದಿಲ್ಲ, ಆದರೆ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ರೈತರು ಮಾಡಿರುವ 10 ಸಾವಿರ ರೂಪಾಯಿ ಅಲ್ಲದೇ ಇದ್ದರೂ ಎಲ್ಲಾ ಸಾಲವನ್ನು ಮನ್ನಾ ಮಾಡಿ. ಈ ಹಿಂದೆ ವೇದಿಕೆ ಮೇಲೆ ಮಾತನಾಡುವಾಗ ಮಾನ್ಯ ಸಿಂಧ್ಯಾರವರು ಏನು ಹೇಳಿದ್ದರೆಂದರೆ, ಬೆಂಗಳೂರು, ಗುಲ್ಬರ್ಗಾ, ಧಾರವಾಡ ನಗರಗಳನ್ನು ಇಂಪ್ರೂವ್ ಮಾಡುವುದಕ್ಕೋಸ್ಕರ 600 ಕೋಟಿ ರೂಪಾಯಿಗಳ ಪ್ರೋಗ್ರಾಂ ಮೂಲಕ ಏನು ಮಾಡಿದ್ದೀರೆಂದು ನೀವು ಕೇಳಿದ್ದುದು ನನಗೆ ಜ್ಞಾಪಕ ಇದೆ. ಅದರ ಬಗ್ಗೆ ಈಗ ತಾವು ಏನು ಮಾಡುತ್ತೀರಿ? ಆಮೇಲೆ ಹೆಣ್ಣು ಮಕ್ಕಳಿಗೆ ಅಧಿಕಾರ ಕೊಡುವುದಕ್ಕೋಸ್ಕರ 30 ಪರ್ಸೆಂಟ್ ರೆಕಮಂಡೇಷನ್ ಯಾವುದನ್ನು ನಿಮ್ಮಿಂದ ಮಾಡುವುದಕ್ಕಾಗುವುದಿಲ್ಲವೋ ಅದನ್ನು ಗೌರ್ನರ್ ಮುಖಾಂತರ ಹೇಳಿಸಿದ್ದೀರಿ. ಇದರಿಂದ ಮಹಿಳೆಯರಿಗೆ ಸಂತೋಷವಾಗಬಹುದೆಂದು ನೀವು ತಿಳಿದುಕೊಂಡಿರಬಹುದು. ಇದರಿಂದ ಮಹಿಳೆಯರಿಗೆ ಖಂಡಿತಾ ಸಂತೋಷವಾಗುವುದಿಲ್ಲ, ನೀವು ಹೇಳುವ ಬದಲು ಮಾಡಿ ತೋರಿಸಿದರೆ ಸಂತೋಷವಾಗುತ್ತದೆ. ಇವತ್ತು ಡೆಪ್ಯುಟಿ ಸ್ಪೀಕರ್ ಆಯ್ಕೆಯಾದರು. ನಿಮ್ಮ ಪಕ್ಷದಲ್ಲಿ 6 ಜನ ಮಹಿಳೆಯರಿದ್ದಾರೆ, ಅದರಲ್ಲಿ ಒಬ್ಬರನ್ನು ಕ್ಯಾಬಿನೆಟ್ ದರ್ಜೆ ಮಂತ್ರಿಗಳನ್ನಾಗಿ ಮಾಡಬಹುದಾಗಿತ್ತು, ಇನ್ನೊಬ್ಬರನ್ನು ಡೆಪ್ಯುಟಿ ಮಿನಿಸ್ಟರ್ ಆಗಿ ಮಾಡಬಹುದಾಗಿತ್ತು. ಹೋಗಲಿ ಡೆಪ್ಯುಟಿ ಸ್ಪೀಕರ್ ಆದರೂ ಮಾಡಬಹುದಾಗಿತ್ತು. ಅದು ಬಿಟ್ಟು ಯಾವುದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೋ ಅದನ್ನು ಮಾಡುತ್ತೇವೆಂದು ಗೌರ್ನರ್ ಮುಖಾಂತರ ಹೇಳಿಸುವುದು ಅನಿಶ್ಚಿತೆಯನ್ನು ತೋರಿಸುತ್ತದೆ. ಹಾಗೂ ಮಾಡುವುದಕ್ಕೆ ಅಪೇಕ್ಷೆ ಇಲ್ಲವೆಂದು ಇದರ ಮೂಲಕ ತೋರಿಸುತ್ತದೆ. National Commission for women ಎಂದು ಬಂತು, ಅದಕ್ಕೆ ಸೆಂಟ್ರಲ್ ಗೌರ್ನಮೆಂಟ್ ನವರು ಒಪ್ಪಿಗೆ ಕೊಟ್ಟು ಅದು ಆಕ್ಟ್ ಬಂದು ಎಷ್ಟು ವರ್ಷವಾಯಿತು? ಕಾಂಗ್ರೆಸ್ ಗೌರ್ನಮೆಂಟಿನವರಂತೂ ಮಾಡಲಿಲ್ಲ. ಹೆಂಗಸರಿಗೆ ಬಸ್‌ನಲ್ಲಿ ಎರಡು ಸೀಟುಗಳನ್ನು ಮಾತ್ರ ರಿಸರ್ವ ಮಾಡಿದ್ದಾರೆ, ಅದೂ ಗಂಡಸರು ಇಲ್ಲದೇ ಇದ್ದಾಗ, ಅವರು ಬಂದರು ಎಂದರೆ ಇವರು ಎದ್ದು ನಿಂತು ಕೊಳ್ಳಬೇಕು. ಎಂಪವರ್ ಮೆಂಟ್ ಬಗ್ಗೆ ತಮಗೆ ನಿಜವಾಗಿ ಆಸಕ್ತಿ ಇದ್ದರೆ ಅದನ್ನು ಕೃತಿಯಲ್ಲಿ ಮಾಡಿ ತೋರಿಸಿ. ಈಗ 6 ಜನ ಸದಸ್ಯರುಗಳನ್ನು ನಾಮಕರಣ ಮಾಡಬೇಕಾಗಿದೆ. ಆಗ ಹೆಂಗಸರಿಗೆ ಪ್ರಾಶಸ್ತ್ಯ ಕೊಟ್ಟು ಬರೀ ಹೆಂಗಸರುಗಳನ್ನು ನಾಮಕರಣ ಮಾಡಿ. ನೀವು ಮಾಡುವುದರಲ್ಲಿ ತೋರಿಸಬೇಕೇ ವಿನಃ ಬರೀ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ, ಯಾವುದನ್ನು ಮಾಡುವುದಕ್ಕಾಗುತ್ತದೆಯೋ ಅದನ್ನು ಮಾತ್ರ ನಾವು ಹೇಳುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಹೇಳಿದ್ದಾರೆ. ಅದರಂತೆ ತಾವು ನಡೆದುಕೊಳ್ಳಬೇಕು. ನಾನಾದರೂ ಕೇಳುವುದಿಷ್ಟೆ. Representation of the People Act. ನಿಮ್ಮ ಕೈಯಲ್ಲಿ ಅಮೆಂಡ್ ಮಾಡುವುದಕ್ಕಾಗುವುದಿಲ್ಲ, ಅಥವಾ ಪಾರ್ಲಿಮೆಂಟ್‌ನಲ್ಲಿ ಮಾಡಿಸುವುದಕ್ಕೂ ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ, women's empowerment ಎಂದು ಹೇಳಿ, ಮಾಡುತ್ತೇವೆಂದು ಹೇಳಿ ಮಾಡುವುದಕ್ಕೆ ಆಗದೇ ಇದ್ದುದನ್ನು ಮಾತ್ರ ಭಾಷಣದಲ್ಲಿ ಹೇಳಿಸುವುದಕ್ಕೆ ಹೋಗಬೇಡಿ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಸದಸ್ಯರಿಗೆ ಒಂದು ಉದಾಹರಣೆ ಹೇಳುವುದಾದರೆ, ಮಾಡುವುದಕ್ಕೆ ಆಗದೇ ಇದ್ದುದನ್ನೂ ಮಾಡಿದ್ದೇವೆ. ನಾಯಕ ಜನಾಂಗವನ್ನು ಷೆಡ್ಯೂಲ್ಡ್ಟ್ರೈಬ್‌ಗೆ ಸೇರಿಸುವ ಅಧಿಕಾರ ಇರುವುದು ಪಾರ್ಲಿಮೆಂಟಿಗೆ.

ಹಿಂದೆ ನಮ್ಮ ಸರ್ಕಾರ ಇದ್ದಾಗ ಸಿನಾನಿಮ್ಸ್ ಕಳುಹಿಸುವಾದ ಟ್ರೈಬ್ ಲಿಸ್ಟ್ ಗೆ ನಾಯಕ ಜನಾಂಗವನ್ನು ರೆಕಮೆಂಡ್ ಮಾಡಿ ಕಳುಹಿಸಿದ್ದರಿಂದ ಅವರು ಮಾಡಿದರು. ನಾವು ಮಾಡುತ್ತೇವೆಂದು ಹೇಳಿದೆವೋ? ಈ ಸದನ ರೆಸಲ್ಯೂಷನ್ ಮಾಡಿ ಕಳುಹಿಸಲಿ. ಪಾರ್ಲಿಮೆಂಟಿನಲ್ಲಿ ಅವರು ಮಾಡಲಿ ಎಂದು.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನಿಮಗೆ ಏನು ಅವಕಾಶ ಇದೆಯೋ ಅದನ್ನು ಏಕೆ ಮಾಡಿಲ್ಲವೆಂದು ಕೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಶ್ರೀಮತಿ ಪ್ರಮೀಳಾರವರ ವಾಗ್ಝರಿ ಭಯಂಕರವಾಗಿ ಹೋಗುತ್ತಿದೆ. ನಾನು ಮೊದಲಿನಿಂದಲೂ ಅವರ ಅತ್ಯಂತ ಅಭಿಮಾನಿ. ಮಾನ್ಯ ಮುಖ್ಯ ಮಂತ್ರಿಗಳಾದ ದೇವೇಗೌಡರು ಹಾಗೂ ಮಾನ್ಯ ಜೆ.ಹೆಚ್. ಪಟೇಲರು ಯೋಚನೆ ಮಾಡಿದರೋ ಇಲ್ಲವೋ ಗೊತ್ತಿಲ್ಲ. 30 ಪರ್ ಸೆಂಟ್ ಎಂದರೆ, ಈ ಸದನಕ್ಕೆ ಸುಮಾರು 70 ಜನ ಮಹಿಳೆಯರು ಬಂದರೆ ನಿಮ್ಮಗಳ ಗತಿ ಏನು? ನಮ್ಮಗಳ ಗತಿ ಏನು? ಎಂಬ ಬಗ್ಗೆ ಯೋಚನೆ ಮಾಡಬೇಕು. ಮಹಿಳೆಯರಿಗೆ ಅನುಕೂಲ ಮಾಡಿ ಕೊಡಬೇಕೆಂದು 30 ಪರ್ ಸೆಂಟ್ ಮೀಸಲಾತಿ ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಲ್ಲಾ, ಇದರ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ? ಇದನ್ನು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಬಹಳ ಯೋಚನೆ ಮಾಡಿ ಹೇಳುತ್ತಿದ್ದೇನೆ. ಮಹಿಳೆಯರು ಅಷ್ಟು ಸುಲಭ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಎ. ಬಿ. ಪಾಟೀಲ್ : 30 ಪರ್ ಸೆಂಟ್ ಮಹಿಳೆಯರು ಬಂದರೆ ಆಗ ಚೆನ್ನಾಗಿ ನಡೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇವರ ಅನುಭವ ಹೇಗಿದೆಯೋ ನನಗೆ ಗೊತ್ತಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ರವರು ಹೇಳಿದ್ದ ಮಾತಿನಿಂದ ನನಗೆ ಒಂದು ಮಾತು ನೆನಪು ಬಂತು. ಮನೆಯಲ್ಲಿ ಎಲ್ಲಾ ಗಂಡಸರುಗಳು ಹೆಂಡತಿಯನ್ನು ರಮಿಸಬೇಕಾದರೆ ತಪ್ಪು ಮಾಡಿ ಬಂದಾಗ ನೀನೇ ಚಂದ್ರ, ಇಂದ್ರ ಎಂದು ಹೊಗಳಿ ಸುಮ್ಮನೆ ಇರಿಸುತ್ತಾರೆ. ಅದೇ ರೀತಿ ಏನಾದರೂ ತಾವು ನಮ್ಮ ಮಹಿಳೆಯರಿಗೆ ಹೇಳಿ ಸುಮ್ಮನೆ ಇರುತ್ತೇವೆಂದರೆ ನಾವು ಅಂತಹವರಲ್ಲ, ಕರ್ನಾಟಕದಲ್ಲಿರತಕ್ಕಂಥ ಮಹಿಳೆಯರು ಗಂಡಸರು ಏನು ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಮರಳು ಮಾಡುವ ಮಾತಿಗೆ ಯಾರು ಬೆರಗು ಆಗುವುದಿಲ್ಲವೆಂಬುದನ್ನು ದಯವಿಟ್ಟು ಎಲ್ಲರೂ ತಿಳಿದುಕೊಳ್ಳಬೇಕು. 30 ಪರ್ ಸೆಂಟ್ ಅಲ್ಲ, ತಾವು ತಪ್ಪು ತಿಳಿದುಕೊಂಡಿದ್ದೀರಿ, ಪಾಪ್ಯುಲೇಷನ್ ಪ್ರಕಾರ ಪರ್ ಸೆಂಟ್ ಪ್ರಕಾರ ರಿಸರ್ವೇಷನ್ ಮಾಡಬೇಕು. There is reservation for backward classes and SC/STs on the basis of population. ಎಸ್ ಸಿ ಮತ್ತು ಎಸ್ ಟಿ 23 ಪರ್ ಸೆಂಟ್ ಏಕೆ? ಜನ ಹೆಚ್ಚಾಗಿದ್ದಾರೆ. 30 ಪರ್ ಸೆಂಟ್ ಅಲ್ಲ, ಮಾನ್ಯ ಸಭಾಧ್ಯಕ್ಷರೇ, ಪಾಪ್ಯುಲೇಷನ್ ಪ್ರಕಾರ 50 ಪರ್ ಸೆಂಟ್ ಬರುತ್ತದೆ, 30 ಪರ್ ಸೆಂಟ್ ರಿಸರ್ವೇಷನ್ ಆಗಬೇಕು.

ಅಧ್ಯಕ್ಷರು : ಅದು 50 ಪರ್‌ಸೆಂಟ್‌ಗೆ ಬರುತ್ತದೆ, 30 ಪರ್‌ಸೆಂಟ್ ಹೆಣ್ಣು ಮಕ್ಕಳಿಗೆ ಕೊಡುತ್ತೇವೆ, ಗಂಡಸರಲ್ಲಿ 20 ಪರ್‌ಸೆಂಟ್ ಹೆಣ್ಣು ಮಕ್ಕಳ ತರಹ ಇರುತ್ತಾರೆ. ಅವೆರಡನ್ನು ಸೇರಿಸಿದರೆ ಟೋಟಲ್ 50 ಪರ್‌ಸೆಂಟ್‌ಗೇ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಒಳ್ಳೆಯ ಸಲಹೆ ಈ ಸಲಹೆಯನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, exceptions one there every where. ಇವತ್ತು ನಾವು ಸೆಲ್ಫ್ ಸಫಿಷಿಯೆಂಟ್ ಇದ್ದೇವೋ? ಸೆಲ್ಫ್ ಸಫಿಷಿಯೆಂಟ್ ಇಲ್ಲದಿದ್ದರೆ ನಾವು ಏನು ಮಾಡಬೇಕಾಗಿದೆ. ಅದಕ್ಕೆ ಒಂದು ದಿಕ್ಸೂಚಿಯನ್ನು ಕೊಡಬೇಕಾಗುತ್ತದೆ. ಪಾನ ನಿರೋಧದ ಬಗ್ಗೆ ಬಹಳ ಜನ ಹೇಳಿದರು. ಈ ದೇಶದಲ್ಲಿ ನೀರು ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ, ಕಾಂಗ್ರೆಸ್ ಮತ್ತು ಜನತಾ ದಳ ಸರ್ಕಾರದ ಅವಧಿಯಲ್ಲಿ ಬೀರು ಅಂಗಡಿಗಳನ್ನು ರೋಡಿಗೆ ಒಂದೊಂದು ತೆಗೆದಿದ್ದಾರೆ. ಇದು ತಪ್ಪಬೇಕಾಗುತ್ತದೆ. ಹೆಣ್ಣು ಮಕ್ಕಳಿಗೆ ಆಗತಕ್ಕಂಥ ಕಷ್ಟವನ್ನು ನೋಡಬೇಕಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಅಲ್ಲಿನ ಮುಖ್ಯ ಮಂತ್ರಿಗಳು ಪಾನ ನಿರೋಧವನ್ನು ಜಾರಿಗೆ ತಂದಿದ್ದಾರೆ. ನಮ್ಮಲ್ಲಿ ಪಾನ ನಿರೋಧ ತರುವುದಕ್ಕೆ ಏನು ಕಷ್ಟ ಇದೆ?

ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಇವೊತ್ತು ನಾವು ಮಕ್ಕಳಿಗೆ ಬುದ್ಧಿ ಹೇಳಬೇಕಾದರೆ, ಜೀವನ ಮಾಡಬೇಕಾದರೆ ನಾವೇನು ಹೇಳುತ್ತೇವೆ ಅಂದರೆ, ನೀನು ಕಷ್ಟಪಟ್ಟು ಜೀವನ ಮಾಡಿ ಮುಂದುವರಿಯಬೇಕೆಂದು ಹೇಳುತ್ತೇವೆ. ಕಳ್ಳತನ ಮಾಡಬಾರದು ಎಂದು ಉಪದೇಶ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಯವರು ಮೇಲ್ಮನೆಯಲ್ಲಿ ಉತ್ತರ ಕೊಡಬೇಕಾಗಿದೆ. ನಾವು ಇಲ್ಲಿ ನಾಲ್ಕು ಗಂಟೆಗೆ ಅವರ ಉತ್ತರ ಎಂದು ನಿಗದಿ ಮಾಡಿಕೊಂಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಹೆಚ್ಚು ಸಮಯ ಬಳಸದೆ ಸಹಕರಿಸಬೇಕು. ನಮ್ಮಲ್ಲಿ ಇನ್ನೂ ಐದು ಜನರು ಮಾತನಾಡಲು ಇದ್ದಾರೆ. ತಾವು ನನ್ನ ಸಮಸ್ಯೆಯನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ : ನಾನು ಯಾರನ್ನೂ ಮಾತನಾಡಲೂ ಅಡ್ಡಿ ಬರುವುದಿಲ್ಲ, ಮೇಲ್ಮನೆಯಲ್ಲಿ ನಾನು ಹೋಗಿ ಉತ್ತರಿಸಬೇಕಾಗಿದೆ. ಅಲ್ಲಿ ನಾನು ಉತ್ತರ ಹೇಳದೆ ಸಭೆ ನಡೆಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ತಮ್ಮ ಮಾತಿಗೆ ಗೌರವ ಕೊಟ್ಟು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಿಚ್ಛಿಸುವುದಿಲ್ಲ. ಮಾನ್ಯ ಅಧ್ಯಕ್ಷರೆ, ನ್ಯಾಷನಲ್ ಕಮಿಷನ್ ಫಾರ್ ವುಮೆನ್ ಎಂದು ದೆಹಲಿಯಲ್ಲಿ ಮಾಡಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಅದನ್ನು ತಂದಿದ್ದಾರೆ. ಆದರೆ ಅದನ್ನು ಕರ್ನಾಟಕದಲ್ಲಿ ತಂದಿಲ್ಲ, ಮಹಿಳೆಯರನ್ನು ಉದ್ಧಾರ ಮಾಡಬೇಕು ಎಂಬುದು ತಮ್ಮ ಆಸಕ್ತಿಯಾಗಿದ್ದರೆ ದಯಮಾಡಿ ನ್ಯಾಷನಲ್ ಕಮಿಷನ್ ಫಾರ್ ವುಮೆನ್ ನ್ನು ಕೂಡಲೇ ಮಾಡಿ. ವುಮೆನ್ಸ್ ಡೆವಲಪ್ ಮೆಂಟ್ ಕೌನ್ಸಿಲನ್ನು ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಮಾಡಿಲ್ಲ, ಕನ್ ಜ್ಯೂಮರ್ಸ್ ಫೋರಂನಲ್ಲಿ ಮಹಿಳಾ ವಕೀಲರಿಗೆ ಅವಕಾಶವನ್ನು ಕೊಡಿ. ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಮಹಿಳೆಯರಿಗೆ ಅವಕಾಶ ಮಾಡಿಕೊಡಬೇಕು. ಇಲ್ಲವಾದಲ್ಲಿ ನೀವು ಆಡುವ ಮಾತುಗಳು ಮಹಿಳೆಯರ ಬಗ್ಗೆ ಕೇವಲ ಬಾಯಿ ಮಾತಾಗಿ ಇರುತ್ತದೆಯೇ ಹೊರತು ಕೃತಿಯಲ್ಲಿ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಿಳೆಯರ ಮತ್ತು ಮಕ್ಕಳ ಶಿಕ್ಷಣದ ಬಗ್ಗೆ ತಾವುಗಳು ಹೆಚ್ಚು ಆಸಕ್ತಿಯನ್ನು ಕೊಡಬೇಕಾಗುತ್ತದೆ. 14 ವರ್ಷದೊಳಗಿನ ಮಕ್ಕಳಿಗೆ ರಾಜ್ಯಾಂಗದ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ನಲ್ಲಿ ಕಂಪಲ್ಸರಿ ಎಜುಕೇಷನ್ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ತಾವು ಏನು ಮಾಡುತ್ತೀರಿ ಎನ್ನುವ ಬಗ್ಗೆ ಹೇಳಬೇಕು. ವಿದ್ಯಾಭ್ಯಾಸ ಇದ್ದರೆ, ನಮ್ಮ ಜನರು ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆಯೂ ಕೂಡ ತಾವು

ಒಂದು ನಿರ್ದೇಶನವನ್ನು ಕೊಡಬೇಕಾಗುತ್ತದೆ. ಹಾಗೆಯೇ ತಮ್ಮ ಅಧಿಕಾರಾವಧಿ ಇರತಕ್ಕಂಥ ಸಂದರ್ಭದಲ್ಲಿ ನ್ಯಾಷನಲ್ ಸ್ಪೋರ್ಟ್ಸ್ ಕಾಂಪ್ಲೆಕ್ಸನ್ನು ಮಾಡಲು ಹೊರಟಿದ್ದೀರಿ ಆದರೆ ಅದಕ್ಕೂ ಮುಂಚೆ ತಮ್ಮ ಅಧಿಕಾರ ಇದ್ದ ಸಮಯದಲ್ಲಿ ಡಯೆಟ್ ಕಿಟ್ ಎಂದು ಹೇಳಿ ಸ್ಪೋರ್ಟ್ಸ್‌ನಲ್ಲಿ ಕ್ರೀಡಾಪಟುಗಳಿಗೆ ಡಯಟ್ ಕಿಟ್ ಎಂದು ಕ್ರೀಡಾಪಟುಗಳಿಗೆ 500 ರೂ.ಗಳನ್ನು ಕೊಡುತ್ತಾ ಇದ್ದೀರಿ. ಹೀಗೆ ಪ್ರತಿಭಾವಂತ ಕ್ರೀಡಾಪಟುಗಳಿಗೆ ಕೊಡುತ್ತಿದ್ದುದು ಕಾರಣಾಂತರಗಳಿಂದ ನಿಂತು ಹೋಗಿದೆ. ವಿಧವೆಯರಿಗೆ ಕೊಡತಕ್ಕಂಥ ಮಾಸಾಶನ ನಿಂತು ಹೋಗಿದೆ.

ಅಂಗವಿಕಲರಿಗೆ ಕೊಡುತ್ತಿದ್ದಂಥ ಮಾಸಾಶನವು ನಿಂತು ಹೋಗಿದೆ. ಇವೆಲ್ಲವನ್ನೂ ಕೂಡ ಡೆವಲಪ್ ಮೆಂಟ್ ಆಕ್ಟಿವಿಟೀಸ್‌ಗಳ ಜೊತೆಯಲ್ಲಿ ಸೋಷಿಯಲ್ ಆಬ್ಲಿಗೇಷನ್ಸ್ ಏನಿವೆ ಇದನ್ನು ಕೂಡ ಪೂರೈಸುವುದಕ್ಕೆ ಅವಕಾಶ ಮಾಡಿಕೊಡ ಬೇಕು. ಇದನ್ನು ಮಾಡಿದಾಗ ಮಾತ್ರ, ಒಂದು ದೇಶದ ಸರ್ವತೋಮುಖ ಪ್ರಗತಿಗೆ ಸಾಧ್ಯವಾಗುತ್ತದೆ. ಅದನ್ನು ದಯಮಾಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟು ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಯಾವಗಲ್ ರವರು ನಾನು ಈ ಕಡೆಯಲ್ಲಿ ಇರತಕ್ಕಂಥ ಸದಸ್ಯರಿಗೆ ಅವಕಾಶ ಕೊಟ್ಟಿಲ್ಲ, ಅವರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ.

+ಶ್ರೀ ಬಿ. ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳು. ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ವಿಚಾರದಲ್ಲಿ ನಾನು ಬಹಳ ಸೀಮಿತವಾಗಿ ಮಾತನಾಡ ಬಯಸುತ್ತೇನೆ. ಬಹಳ ಮುಖ್ಯವಾಗಿ ರಾಜ್ಯದಲ್ಲಿ ರಾಜಕೀಯ ಬದಲಾವಣೆಗಳು ಆಗಿ ಹೊಸ ಸರಕಾರ ಬಂದಿದೆ. ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಬಹಳ ಸೂಕ್ಷ್ಮವಾಗಿ, ಸ್ಪಷ್ಟವಾಗಿ, ಕೆಲವು ಆದ್ಯತೆಗಳ ಬಗ್ಗೆ ತಮ್ಮೆದುರು ಇಟ್ಟಿದೆ. ಬಹಳ ಮುಖ್ಯವಾದ ಅಂಶಗಳನ್ನು ನಾವೆಲ್ಲರೂ ಕಂಡಿದ್ದೇವೆ. ಅದು ನಮ್ಮ ಪಕ್ಷದ ಸದಸ್ಯರಾಗಿರಬಹುದು, ಅಥವಾ ಬೇರೆ ಪಕ್ಷದ ಸದಸ್ಯರು ಆಗಿರಬಹುದು. ಈ ಚುನಾವಣೆಯಲ್ಲಿ ಮುಖ್ಯವಾಗಿ, ಯುವಕರು, ಬಡವರು, ರೈತರು, ಹಳ್ಳಿಗಾಡಿನ ಜನರು, ಬಡವರು, ಹೀಗೆ ಎಲ್ಲಾ ವರ್ಗದ ಜನರು ನಮ್ಮ ಪರವಾಗಿ, ನಮ್ಮ ನಿರೀಕ್ಷೆಗೆ ಮೀರಿ ಬೆಂಬಲವನ್ನು ನೀಡಿದ್ದಾರೆ. ಆ ಮಹಾಜನರ ಬೆಂಬಲವನ್ನು ಎದುರು ಇಟ್ಟುಕೊಂಡು ಈ ಒಂದು ಸೂಚನೆಯನ್ನು ನೀಡಲಾಗಿದೆ ಎಂದು ನಾನು ಭಾವಿಸುತ್ತೇನೆ. ಬಹಳ ಮುಖ್ಯವಾಗಿ ಗ್ರಾಮೀಣಾಭಿವೃದ್ಧಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಹಿರಿಯರಾದ ಘೋರ್ಪಡೆಯವರು ವಿಕೇಂದ್ರಿಕರಣದ ವ್ಯವಸ್ಥೆ ಒಂದು ಹೆಜ್ಜೆ ಮುಂದು ಎಂದು ಹೇಳುವ ವಾದವನ್ನು ಮಾಡಿದ್ದರು. ಇದನ್ನು ನಾನು ಸತ್ಯಕ್ಕೆ ಸಮೀಪವಾದುದಲ್ಲವೆಂದು ಹೇಳ ಬಯಸುತ್ತೇನೆ. ಇದರಲ್ಲಿ ಯಾವುದೇ ಸತ್ಯಾಂಶ ಇಲ್ಲ, ಗ್ರಾಮೀಣ ಮಟ್ಟದಲ್ಲಿ ರಾಜಕೀಯದಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸಬೇಕೆಂಬ ಇಚ್ಛೆಯಿಂದ ರಿಸರ್ ವೇಶನ್ ವಿಚಾರದಲ್ಲಿ ಕೊನೆ ಕೊನೆಗೆ ಎಕ್ಸಿಕ್ಯೂಟಿವ್ ಆರ್ಡರ್ಸ್ ಮಾಡಿ, 10 ಸಾವಿರ ಸಂಖ್ಯೆಯೊಳಗಿರುವಂಥ ಜನಗಳಿಗೆ ಅರ್ಹತೆಯನ್ನು ನೀಡಿ, ಸ್ಥಾನಿಕ ಸಂಸ್ಥೆಗಳನ್ನು ಹುಟ್ಟು ಹಾಕುವಾಗ ಯಾವುದೇ ಒಂದು ನಿಬಂಧನೆಗಳನ್ನು ಇಡದೆ ಮಾಡಿದಂಥ ಸಂಸ್ಥೆಗಳನ್ನು ಕೊನೆಗೆ ಎಲ್ಲಿಯ ಹಂತಕ್ಕೆ ತಂದರು ಅಂದರೆ ಇವೊತ್ತು ಅಧ್ಯಕ್ಷ ಅಧ್ಯಕ್ಷಿಣಿಯರು ಯಾರಾಗಿದ್ದಾರೆ, ಆ ಸಂಸ್ಥೆಗಳ ಪಾತ್ರ ಏನು ಮತ್ತು ಅವುಗಳೆಲ್ಲವನ್ನೂ ನಿರ್ವೀರ್ಯವಾಗಿ ಮಾಡಿದ್ದರು.

ಹಿಂದಿನ ಮಂಡಲ ಪಂಚಾಯಿತಿ ದಿವಂಗತ ನಜೀರ್ ಸಾಬರವರ ಮತ್ತು ಹೆಗಡೆಯವರ ಕನಸಿನಂತೆ ಏನು ರಜೆಯಾಗಿತ್ತು ಅವುಗಳ ಉದ್ದೇಶದಲ್ಲಿರುವ ಪ್ರಾಥಮಿಕ ಹಂತದ ಅವಶ್ಯಕತೆಗಳನ್ನು ಅವರೇ ಮಾಡಿಕೊಳ್ಳಲಿ ಅವರೇ ನಿರ್ಧಾರ ತೆಗೆದುಕೊಳ್ಳಲು ಅವರೇ ಅನುಷ್ಠಾನ ಮಾಡಲಿ ಎಂಬ ಉದ್ದೇಶದಿಂದ ನಿರ್ಮಾಣವಾಗಿದ್ದುದು. ಜಿಲ್ಲಾ ಪರಿಷತ್ತು ಅಷ್ಟು ಪ್ರಶಸ್ತ್ಯದ ಸಂಸ್ಥೆಯಾಗಿರಲಿಲ್ಲ, ಮತ್ತೆ ಬಂದಂತಹ ತಾಲ್ಲೂಕು ಪಂಚಾಯಿತಿಗಳು ಕೂಡ ಒತ್ತಡದ ಮೇಲೆ ನಿರ್ಮಾಣವಾಗಿದ್ದವು. ಅದು ನಾಮಕರಣ ಮತ್ತೊಂದು ಆಗಿದ್ದು ತಮ್ಮ ಗಮನಕ್ಕೆ ಬಂದಿದೆ. ಅದಲ್ಲದೆ ಇವತ್ತು ತಾವು ನಿರ್ಮಾಣ ಮಾಡಿದಂತಹ ಪಂಚಾಯಿತಿಗಳು ಅದರ ಗಾತ್ರ ಏನಿದೆ ಕೆಲಸ ಮಾಡಲಿಕ್ಕೆ ಯಾವುದೇ ರೀತಿಯಿಂದ ಆಗದಂತಹ ಪರಿಸ್ಥಿತಿಯಲ್ಲಿ ಆ ಸಂಸ್ಥೆಗಳು ನಿರ್ಮಾಣವಾಗಿವೆ. ಅಷ್ಟೇ ಅಲ್ಲದೆ ಚುನಾಯಿತ ಸದಸ್ಯರು ಯಾರೋ ಅವರು ಒಬ್ಬರೇ ಆರಿಸಿ ಬಂದಂತಹ ಮೀಸಲಾತಿಯಿಂದಾಗಿ ಮಹಿಳೆ ಇರಬಹುದು ಅಥವಾ ಹಿಂದುಳಿದ ವರ್ಗದವರು ಇರಬಹುದು ಅವರು ಅಧ್ಯಕ್ಷರಾದರು. ಆದರೆ ಅವರಿಗೆ ಅಧಿಕಾರ ಹಸ್ತಾಂತರಕ್ಕೆ ಹಲವಾರು ತಿಂಗಳೇ ಹಿಡಿಯಿತು. ಪಂಚಾಯಿತಿಗಳ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿರುವ ಸೆಕ್ರೆಟರಿ, ಬಿಡಿಓ ಆಗಲಿ ಅವರ ಹಿಂದೆ ಆಯ್ಕೆ ಮಾಡಿ ಬಂದಂತಹ ಸದಸ್ಯರು ಅಧ್ಯಕ್ಷರು ಅವರ ಕೈ ಚೀಲಗಳನ್ನು ಹೊತ್ತುಕೊಂಡು ಹೋಗುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಒಂದು ರೀತಿಯಿಂದ ಹಾಳು ಬಿದ್ದ ಪರಿಸ್ಥಿತಿ ಇವತ್ತಾಗಿದೆ. ಯಾವುದೇ ಎಕ್ಸಿಕ್ಯುಟಿವ್ ಪವರ್ಸ್ ಇವತ್ತು ಅಧ್ಯಕ್ಷರಾದವರಿಗೆ ಇಲ್ಲ ಎಂದು ನಾನು ಸ್ಪಷ್ಟವಾಗಿ ಕ್ಲಾರಿಫಿಕೇಷನ್ ವೇಳೆಯಲ್ಲಿ ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ಅದಕ್ಕಾಗಿ ಇವುಗಳನ್ನು ಬದಲಾವಣೆ ಮಾಡುವುದು ಸಹ ಸೂಕ್ತವೆಂದು ನಾನು ಭಾವಿಸುತ್ತೇನೆ. ಇನ್ನು ಈ ರಾಜ್ಯದಲ್ಲಿ ಆದಂತಹ ಪ್ರಕೃತಿ ವಿಕೋಪದ ಬಗ್ಗೆ ಸಭೆಯ ಗಮನಕ್ಕೆ ಹಿಂದೆ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಅವತ್ತು ಕೋಟ್ಯಂತರ ರೂ. ಖರ್ಚಾಗಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ, ಆಘಾತಕ್ಕೆ ಒಳಪಟ್ಟಂತಹ ಜನರ ಪರಿಸ್ಥಿತಿಯನ್ನು ಸ್ವಯಂವಾಗಿ ಮಾನ್ಯ ಮುಖ್ಯ ಮಂತ್ರಿಗಳು ಬಂದು ನೋಡಿದ್ದಾರೆ. ಹಂದಿ ನಾಯಿಗಳಿಗಿಂತ ಸಹಿತ ಕಡೆಯಾಗಿ ಅವರು ಇರುವಂತಹ ಪರಿಸ್ಥಿತಿ ಅವರು ಕಣ್ಣಾರೆ ಕಂಡಿದ್ದಾರೆ, ಅನುಭವಿಸಿದ್ದಾರೆ, ಬಡವರು ವಿಶೇಷವಾಗಿ ಹರಿಜನರು ಮನೆಗಳು ಯಾರು ಜನತಾ ಮನೆಗಳಲ್ಲಿದ್ದವರು ಇವರಿಗೆ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಅವರಿಗೆ ಪರಿಹಾರ ದೊರೆಯಲಿಕ್ಕೆ ಹತ್ತಾರು ತಿಂಗಳು ಹಿಡಿಯಿತು ಅಷ್ಟೇ ಅಲ್ಲ.

ಮಧ್ಯದ ದಳ್ಳಾಳಿಗಳಿಂದಾಗಿ ಬೇರೆ ಕಡೆ ಆ ಹಣ ಹೋಯಿತು. ಎಲ್ಲಿ ಪ್ರಕೃತಿ ವಿಕೋಪ ಆಗಿಲ್ಲ ಅಲ್ಲಿಗೆ ಹೋಗುವಂತಹ ಪರಿಸ್ಥಿತಿ ಇವತ್ತಾಗಿದೆ. ಅದಕ್ಕೆ ನಾನು ಅಗ್ರಹ ಮಾಡುತ್ತೇನೆ. ಯಾರಿಗೆ ಆ ರೀತಿ ತೊಂದರೆಯಾಗಿದೆಯೋ ಅವರನ್ನು ಸ್ಥಳಾಂತರಿಸಬೇಕು ಮತ್ತು ಆ ಮನೆಗಳ ವ್ಯವಸ್ಥೆ ಆಗಬೇಕು, ಅವರಿಗೆ ಹಿಂದಿನ ಮೊಯಿಲಿ ಸರ್ಕಾರ ವಿಶ್ವಬ್ಯಾಂಕಿಗೆ ಆ ಬಗ್ಗೆ ನಾವು ಪ್ರಪೋಸಲ್ ಕಳಿಸಿದ್ದೇವೆ, ಅದು ಬರುತ್ತದೆ ಎಂದು ಹೇಳಿದ್ದರು, ಅದೇನಾದರೂ ಇದ್ದರೆ ದಯವಿಟ್ಟು ಅದಷ್ಟು ಬೇಗ ಕಾರ್ಯಗತಗೊಳಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ, ಅದರಲ್ಲಿ ಎಷ್ಟರ ಮಟ್ಟಿಗೆ ಅದನ್ನು ಅಡಚಣೆ ಮಾಡಿದರು ಅವಾಸ್ತವಿಕ ಮಾಡಿದರು ಎಂಬ ಬಗ್ಗೆ ತಮ್ಮ ಗಮನವನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆ. ಎರಡು ಕೋಟಿ ರೂ. ಪರಿಹಾರಧನ ಧಾರವಾಡ ಜಿಲ್ಲೆಗೆ ಬಂದಿತ್ತು, ಬೆಳೆ ಪರಿಹಾರದ ಹಣವಾಗಿ ನಿಬಂಧನೆಗಳೇನು? ಅಡಿಷನಲ್ ಚೀಫ್ ಸೆಕ್ರೆಟರಿ ಬಂದು ಒಂದು ಹಳ್ಳಿಯನ್ನು ವಿಸಿಟ್ ಮಾಡಿದರು. ಅನೇಕ ಕಡೆ ಹೋಗಿ ಬೆಳೆಗಳನ್ನು ನೋಡಿದರು. ಮನೆಗಳನ್ನು ನೋಡಿದರು. ಎಲ್ಲಾ ನೋಡಿ ಕೊನೆಗೆ ಎಲ್ಲಿಗೆ ನಿಬಂಧನೆಗಳನ್ನು ಹಾಕಿದರು ಎಂದರೆ ಅವರಿಗಿದ್ದ ಒಟ್ಟು ಜಮೀನಿನಲ್ಲಿ ಅರ್ಧ ಜಮೀನಿನಷ್ಟು ಬೆಳೆ ನಾಶವಾಗಿರಬೇಕು,

ಅವರ ಆದಾಯ 10 ಸಾವಿರದ ಮೇಲಾಗಿರಬಹುದು, ಅವರಿಗೆ ಎರಡು ಸಾವಿರದ ಮೇಲೆ ಸಿಗಬಾರದು. ಈ ಎಲ್ಲಾ ನಿಬಂಧನೆ ಹಾಕಿದಾಗ ಎರಡು ಕೋಟಿಯಲ್ಲಿ ಒಂದು ಪೈಸೆಯನ್ನೂ ಅವರು ಖರ್ಚು ಮಾಡಲಿಲ್ಲ. ಬಹಳ ದುರ್ದೈವದಿಂದ ನೊಂದು ಹೇಳುತ್ತೇನೆ, ಆ ಎರಡು ಕೋಟಿ ಹಣವನ್ನು ಡೈವರ್ಟ್ ಮಾಡುವುದಕ್ಕೆ ಜಿಲ್ಲಾಧಿಕಾರಿಗಳು ಬರೆದಿದ್ದರು. ಇನ್ನು ಕೊನೆಯದಾಗಿ, ನೀರಾವರಿ ಬಗ್ಗೆ ನಾನು ಬಹಳ ಅಗ್ರಹಪೂರ್ವಕವಾಗಿ ಹೇಳುತ್ತೇನೆ, ಇದೊಂದು ಬರೀ ಮಾತಾಗಿ ಉಳಿಯಬಾರದು ಎನ್ನುವ ಉದ್ದೇಶದಿಂದ ನಾನು ಹೇಳುತ್ತೇನೆ. ಇವತ್ತು ನಮಗೆಲ್ಲ ಬಹಳ ಇಚ್ಛೆ ಇದೆ. ಹಿಂದಿನ ಸರ್ಕಾರಗಳಿಗೂ ನಮಗೂ ಅದು ಒಂದು ರೀತಿಯಿಂದ ಅದು ನಮ್ಮ ಸುದೈವ ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಅವರೇ ಸ್ವತಃ ನೀರಾವರಿಯ ಬಗ್ಗೆ ಗ್ರಾಮೀಣ ಪ್ರದೇಶದ ಜನರ ಬಗ್ಗೆ 70 ಪಾಲು ಹಣವನ್ನು ಖರ್ಚು ಮಾಡಿಸುತ್ತೇನೆ ಎನ್ನುವ ಒಂದು ಉದ್ದೇಶ ಏನಿತ್ತು, ಇವತ್ತು ಅದು ಬರೀ ಇಚ್ಛೆಯಾಗಿಯೇ ಉಳಿಯಬಾರದು. ಅದು ಕೃಷ್ಣಾ ಕಣಿವೆಯಾಗಿರಬಹುದು, ಅಥವಾ ಕಾವೇರಿ ಜಲಾನಯನ ಪ್ರದೇಶವಾಗಿರಬಹುದು, ಈ ಎಲ್ಲಾ ಅವಧಿಗಿಂತ ಪೂರ್ವದಲ್ಲಿ ಎರಡು ಸಾವಿರ ವರ್ಷಗಳವರೆಗೆ ಆಗುವಾಗ ಯಾವ ಮಟ್ಟದ ಒಂದು ಚಾಲನೆ ಅದಕ್ಕೆ ಬೇಕು, ಅದು ಇವತ್ತು ಇಲ್ಲ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನೊಮ್ಮೆ ಇದರ ಬಗ್ಗೆ ವಿಷದವಾಗಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಾಗ ಹೇಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದನೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇನ್ನು ನಾಲ್ಕು ಜನ ಸದಸ್ಯರುಗಳ ಹೆಸರು ಪಟ್ಟಿಯಲ್ಲಿತ್ತು. ಸಮಯಾಭಾವದಿಂದ ಅವರಿಗೆ ಈ ಅವಕಾಶ ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ ವಿಷಾದ ವ್ಯಕ್ತ ಮಾಡುತ್ತೇನೆ. ಈಗ ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ. ಸನ್ಮಾನ್ಯ ಸಭಾನಾಯಕರು ಉತ್ತರವನ್ನು ಶುರು ಮಾಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ. ಸಮಯವಿಲ್ಲ. ಎಲ್ಲಾ ನಿಮ್ಮ ಮುಖಂಡರುಗಳೆಲ್ಲಾ ಮಾತನಾಡಿದ್ದಾರೆ. ಕ್ಲಾರಿಫಿಕೇಷನ್ಸ್ ಕೇಳುವಾಗ ದಯಮಾಡಿ ತಾವು ಸಮಯವನ್ನು ಪಡೆದುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ರೂಲಿಂಗ್ ಪಾರ್ಟಿಯಲ್ಲಿರುವವರು ಮಾತನಾಡದಿದ್ದರೂ ನಡೆಯುತ್ತದೆ. ಆದರೆ ಹೊಸದಾಗಿ ಬಂದಿರುವ ಸದಸ್ಯರುಗಳು ಇದ್ದಾರೆ.

ಅಧ್ಯಕ್ಷರು : ಆ ಕಡೆಯಿಂದ ಎಲ್ಲಾ ಸೇರಿ ಮಾತನಾಡಿದ್ದುದು ಮೂವರೇ ಸದಸ್ಯರು. ರೂಲಿಂಗ್ ಪಾರ್ಟಿ ಕಡೆಗೆ ನಾನು ಕೊಡಲೇ ಇಲ್ಲ. ಇಲ್ಲಿಯೇ ಹೆಚ್ಚು ಜನ ಮಾತನಾಡಿರುವವರು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಮೊದಲನೆಯ ಸಲ ಸಭೆ ಸೇರುತ್ತಿದೆ. ಆದ್ದರಿಂದ ಎಲ್ಲಾ ಸದಸ್ಯರಿಗೆ ಐದೈದು ನಿಮಿಷ ಅವಕಾಶವನ್ನು ಕೊಟ್ಟು ಬಿಡಿ.

(ಗೊಂದಲ)

ಅಧ್ಯಕ್ಷರು : ಸಭಾನಾಯಕರು ಮೇಲ್ಮನೆಗೆ ಹೋಗಿ ಉತ್ತರವನ್ನು ಕೊಡಬೇಕಾಗಿದೆ. ಇಲ್ಲಿ ಆ ಕೆಲಸವನ್ನು ಮಾಡದೆ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ. ಸಮಯ ಕಡಿಮೆ ಇದೆ. ಮಾನ್ಯ ಜ್ಞಾನೇಂದ್ರರವರೇ, ಪ್ರತಿ ಸಂದರ್ಭ ಬಂದಾಗಲೆಲ್ಲಾ ನಾನು ತಮಗೆ ಅವಕಾಶಗಳನ್ನು ಕೊಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲಾ ಸಾರ್. ನಾನು ಯಾವಾಗಲೂ ಉಪಯೋಗಿಸಿಕೊಂಡಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಕುನ್ನೂರ್‌ರವರೇ, ಬೆಲ್ಲದರವರೇ ದಯಮಾಡಿ ಕುಳಿತುಕೊಳ್ಳಿ. ಕ್ಲಾರಿಫಿಕೇಷನ್ಸ್ ಕೇಳತಕ್ಕಂಥ ಸಂದರ್ಭದಲ್ಲಿ ತಾವು ಅವಕಾಶವನ್ನು ಪಡೆದುಕೊಳ್ಳಬಹುದು. ಮಾನ್ಯ ಜ್ಞಾನೇಂದ್ರರವರೇ, ತಮಗೂ ನಾನು ಅಷ್ಟೇ ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಈಗ ಉತ್ತರವನ್ನು ಪ್ರಾರಂಭ ಮಾಡಲಿ. ನನಗೂ ಕೂಡ ಅಧ್ಯಕ್ಷನಾದ ಮೇಲೆ ಇದು ಮೊದಲನೇ ಅಧಿವೇಶನ. ನನಗೂ ಸ್ವಲ್ಪ ಕಾಲ ಬೇಕಾಗುತ್ತದೆ. ಇದಕ್ಕೆಲ್ಲಾ ಅಡ್ಜಸ್ಟ್ ಆಗಿ ತಮ್ಮನ್ನು ಸಹಕರಿಸಿಕೊಂಡು ಎಲ್ಲರಿಗೂ ಟೈಮ್ ಕೊಡುವುದಕ್ಕೆ, ಈ ಬೆಲ್‌ನ್ನು ಉಪಯೋಗಿಸಬಾರದು, ಇದರ ಶಬ್ದ ಬಹಳ ಗರ್ಕಶವಾಗಿರುತ್ತದೆ ಎಂದು ಹೇಳಿ ನಾನು ಹಾಗೆಯೇ ತಮ್ಮನ್ನೆಲ್ಲಾ ಸಹಕರಿಸಿಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಭಾವನೆಯನ್ನು ವ್ಯಕ್ತ ಮಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ನಿಮ್ಮ ಹಿರಿಯರ ಬಗ್ಗೆ ನೀವೇ ಆ ರೀತಿ ಮಾತನಾಡಿದರೆ ಬೇರೆಯವರ ಅವರ ಹಿರಿಯತನವನ್ನು ಒಪ್ಪುತ್ತಾರೆಯೇ? ಈ ಕಡೆಯವರೇ ಎಲ್ಲಾ ಹಿರಿಯರು ಹೆಚ್ಚು ಮಾತನಾಡಿರುವುದು. ಆ ಕಡೆಯಿಂದ ಯಾರೂ ಮಾತನಾಡಿಲ್ಲ. ಆ ರೀತಿ ಮಾತನಾಡಬಾರದು. ಮುಖ್ಯ ಮಂತ್ರಿಗಳು ಉತ್ತರ ಪ್ರಾರಂಭ ಮಾಡಬಹುದು.

ಶ್ರೀ ಅರಗ ಜ್ಞಾನೇಂದ್ರ : ವಯಸ್ಸಿನ ಅನುಭವದ ಆಧಾರದ ಮೇಲೆ ಇಲ್ಲಿ ಅವಕಾಶ ಸಿಗುವುದಾದರೆ ನಾವು ಏನು ಮಾಡುವುದು?

ಅಧ್ಯಕ್ಷರು : ದಯಮಾಡಿ ಸಹಕರಿಸಿ.

(ಗೊಂದಲ)

ಶ್ರೀ ಟಿ.ಬಿ. ರಾಮಚಂದ್ರ : ನಾನು ಬಹಳ ಪರ್ಟಿಕ್ಯುಲರ್ ಆಗಿ ಇರುವುದು ಎಂಬು ಹೇಳಿ ಮಧುಗಿರಿ ಕಡಗತ್ತೂರಿನ ಅಲ್ಲಿ ಶ್ರೀನಿವಾಸ ರೆಡ್ಡಿ ಎಂಬುವರ ಮಧುಗಿರಿ ತಾಲ್ಲೂಕಿನ ಯುವಕ ಕಾಂಗ್ರೆಸ್ ಅಧ್ಯಕ್ಷರಾಗಿರುವಂಥ ಅವರ ಅಣ್ಣನವರನ್ನು ಹಾಡು ಹಗಲಿನಲ್ಲೇ ಮೊನ್ನೆ 18ನೇ ತಾರೀಖು ಜನತಾದಳದ ಕರ್ತರು ಅವರ ಮನೆಯ ಹತ್ತಿರ 10 ಗಂಟೆಗೆ ಹೋಗಿ ಹತ್ತು ಕಾಲು ಗಂಟೆಯೊಷ್ಟೊತ್ತಿಗೆ ಅವರನ್ನು ಕೊಲೆ ಮಾಡಿರುವಂಥ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿತ್ತು. ನಾನು ಸಾಂಕೇತಿಕವಾಗಿ ಹೇಳಿದೆ, ದಯಮಾಡಿ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಇವತ್ತು ಜನತಾ ದಳದ ಕಾರ್ಯಕರ್ತರಿಂದ ಎಲ್ಲೇ ಕೊಲೆ ದೌರ್ಜನ್ಯಗಳ ಆಗಿದ್ದರೆ ಜೊತೆಗೆ ಆ ವಿಷಯದ ಬಗ್ಗೆ ಅವರು ಉತ್ತರವನ್ನು ಕೊಡಬೇಕು ಎಂದು ಹೇಳುತ್ತಿದ್ದೇನೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

MR. SPEAKER : The matter is pending investigation. How can you discuss over such matters?

ಶ್ರೀ ಟಿ. ಬಿ. ಜಯಚಂದ್ರ : ಯಾರನ್ನು ಅರೆಸ್ಟ್ ಮಾಡಿಲ್ಲ, ಆ ಅಪರಾಧಿಗಳೆಲ್ಲ ಜನತಾ ದಳದ ಕಾರ್ಯಾಲಯದಲ್ಲಿ ಕುಳಿತಿದ್ದಾರೆ. ದಯವಿಟ್ಟು ಅದಕ್ಕೋಸ್ಕರ ಹೇಳುತ್ತಿರುವುದು.

ಅಧ್ಯಕ್ಷರು : ತಾವು ದಯಮಾಡಿ ಕ್ಲಾರಿಫಿಕೇಷನ್ಸ್ ಕೇಳುವಾಗ ಕೇಳಿ. ಮಾನ ಮುಖ್ಯ ಮಂತ್ರಿಗಳು ಉತ್ತರ ಪ್ರಾರಂಭ ಮಾಡಲಿ.

ಶ್ರೀ ಹೆಚ್. ಡಿ. ದೇವೇಗೌಡ : ಚುನಾವಣೆ ಆದ ಮೇಲೆ ನಡೆದಂತಹ ಗಲಭೆಗಳ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಡುತ್ತಾರೆ.

MR. SPEAKER : On any such matters where the hón. members hav an apprehension that the Government has failed to discharge its duties, pleas offer them reasonable explanation.

ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ತಾವು ಕೊಡಿ. ತೊಂದರ ಇಲ್ಲ, ಕ್ರಮವೂ ತೆಗೆದುಕೊಂಡಿಲ್ಲ. ಅರೆಸ್ಟ್ ಮಾಡಿಲ್ಲ ಎಂದು ಹೇಳುತ್ತಿದ್ದಾರೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಿರತಕ್ಕ ಈ ಸಂದರ್ಭದಲ್ಲಿ ಸದನದ ಎರಡೂ ಕಡೆಯ ಸದಸ್ಯರುಗಳು, ವಿರೋಧ ಪಕ್ಷದ ನಾಯಕರು ಮತ್ತು ವಿವಿಧ ಪಕ್ಷಗಳ ನಾಯಕರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಸಂದರ್ಭದಲ್ಲಿ ದೀರ್ಘವಾಗಿ ನಮ್ಮ ಪಕ್ಷದ ನಿಲುವು ಮತ್ತು ನಮ್ಮ ಪಕ್ಷದ ಮುಂದಿನ ಐದು ವರ್ಷದ ಕಾರ್ಯಕ್ರಮಗಳ ಬಗ್ಗೆ ನಮ್ಮ ಸಭಾ ನಾಯಕರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ದೀರ್ಘವಾಗಿ ಉತ್ತರ ಕೊಡುವವರು ಇದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ರಾಜ್ಯದ ಕಾನೂನು ವ್ಯವಸ್ಥೆಗೆ ಸಂಬಂಧಪಟ್ಟ ಹಾಗೆ, ಗೃಹ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಚಾರಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಮುನ್ನ ಪ್ರಸ್ತಾಪ ಮಾಡುವುದಕ್ಕೆ ಉತ್ತರ ರೂಪದಲ್ಲಿ ಬಯಸುತ್ತೇನೆ. ಗೌರವಾನ್ವಿತ ಸದಸ್ಯರುಗಳು ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳಲ್ಲಿ ನಾನು ಎಲ್ಲವನ್ನೂ ಸಹ ಉತ್ತರ ಕೊಡುವುದಕ್ಕೆ ಕಷ್ಟ ಆಗಬಹುದು. ಆದರೂ ಸಹ ಸಮಯದ ನಿಬಂಧನೆಯಲ್ಲಿ ನಾನು ಪ್ರಯತ್ನವನ್ನು ಮಾಡುತ್ತೇನೆ. ಬಹು ಮುಖ್ಯವಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಈ ಸರ್ಕಾರರ ಅಧಿಕಾರಕ್ಕೆ ಬಂದ ದಿನ 12 ತಾರೀಖಿನ ನಂತರ ಸುಮಾರು 15-20 ದಿನಗಳ ಕಾಲದಲ್ಲಿ ದುರ್ಬಲ ವರ್ಗದವರು, ಅಲ್ಪಸಂಖ್ಯಾತರು ಇರುವ ಬದಲಾವಣೆಗಳಲ್ಲಿ ದಬ್ಬಾಳಿಕೆ ಆಗಿದೆ. ದೌರ್ಜನ್ಯ ಹೆಚ್ಚು ಆಗಿದೆ. ಈ ಸರ್ಕಾರದ ಕುಮ್ಮಕ್ಕು ಅವರಿಗೆ ಇದೆ ಎನ್ನತಕ್ಕ ಭಾವನೆ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತಿದೆ ಎನ್ನತಕ್ಕ ಅಪಾದನೆಯನ್ನು ಮಾಡಿದ್ದಾರೆ. ಮತ್ತು ಕೆಲವರಿಗೆ ದೈವ ಬಂದ ಹಾಗೆ ಏನೋ ನಮಗೆ ರಾಜಕೀಯ ಪ್ರೇರಣೆ ಶಕ್ತಿ ಬಂದಿದೆ. ಅದಕ್ಕೋಸ್ಕರವಾಗಿ ಬಡವರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ ಎನ್ನತಕ್ಕ ಮಾತನ್ನು ಸಹ ಅವರು ಹೇಳಿದ್ದಾರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದು 20 ದಿನಗಳು ಆಗಿದೆ. 19 ದಿನಗಳ ಕಾಲ ಮುಗಿದಿದೆ. 20 ದಿನಗಳಲ್ಲಿ ಇಂತಹ ತೀರ್ಪಿಗೆ ಬರತಕ್ಕದ್ದು ಎಷ್ಟೊಂದು ಸೂಕ್ತ ಎನ್ನುವುದನ್ನು ನಾವೆಲ್ಲರೂ ಸಹ ವಿಚಾರ ಮಾಡಬೇಕಾಗುತ್ತದೆ. ಒಂದು ಬಹಳ ಮುಖ್ಯವಾಗಿ ನಾನು ಈ ಸಂದರ್ಭದಲ್ಲಿ ಅವರು ಹೇಳಿದ ಹಾಗೆ ಒಂದು ಸಂದೇಶವನ್ನು ರಾಜ್ಯದ ಜನತೆಗೆ ಈ ಪವಿತ್ರವಾದ ಸದನದ ಮೂಲಕ ಕೊಡಬೇಕಾಗುತ್ತದೆ. ಯಾರು ದುರ್ಬಲ ವರ್ಗದವರು ಇದ್ದಾರೆ, ಅಲ್ಪಸಂಖ್ಯಾತರು ಯಾರು ಇದ್ದಾರೆ, ಯಾರಿಗೆ ಕಾನೂನು ಪ್ರಕಾರ ರಕ್ಷಣೆ ಕೊಡಬೇಕಾಗುತ್ತದೆ, ಅಂತಹ ವಿಚಾರದಲ್ಲಿ ಈ ಸರ್ಕಾರ ಯಾವತ್ತೂ ಸಹ ಹಿಂತೆಗೆಯುವುದಿಲ್ಲ ಎನ್ನತಕ್ಕದ್ದನ್ನು ನಾನು ಬಹಳ ಮುಖ್ಯವಾಗಿ ಹೇಳಲಿಕ್ಕೆ ಬಯಸುತ್ತೇನೆ.

ತಮಗೆ ಈ ಸದನದಲ್ಲಿನ ಯಾವುದೇ ಸದಸ್ಯರಿಗೂ ಸಹಿತ ಈ ಸರ್ಕಾರ ವಿಶೇಷವಾಗಿ ಅಲ್ಪ ಸಂಖ್ಯಾತರು, ದುರ್ಬಲ ವರ್ಗದವರು, ಹರಿಜನ ಗಿರಿಜನರು ಬಡವರು ಯಾರು ಇದ್ದಾರೆ, ಅವರಿಗೆ ರಕ್ಷಣೆ ಮಾಡುವುದರಲ್ಲಿ ನಾವು ಯಾವುದೇ ಸಮಯದಲ್ಲಿಯೂ ಸಹ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಈಗ ನಾಲ್ಕು ವಿಚಾರಗಳನ್ನು ಬಹು ಮುಖ್ಯವಾಗಿ ಗೃಹ ಇಲಾಖೆಗೆ ಸಂಬಂಧಪಟ್ಟ ಹಾಗೆ, ಗೌರವಾನ್ವಿತ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ವೀರಪ್ಪನ ವಿಚಾರವಲ್ಲಿ, ಎರಡನೆಯದು ಈದ್ಗಾ ಮೈದಾನದ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರಾದ ಗೌರವಾನ್ವಿತ ಶ್ರೀಮಾನ್ ಯಡಿಯೂರಪ್ಪನವರು ಮತ್ತು ಹಲವಾರು ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ವಿಧಾನ ಸೌಧದ ಮುಂದೆ ಮಾನ್ಯ ದೇವೇ ಗೌಡರು ಮುಖ್ಯ ಮಂತ್ರಿಗಳಾಗಿ ಪ್ರಮಾಣ ವಚನವನ್ನು ತೆಗೆದುಕೊಳ್ಳುವ ಮುನ್ನ ನಡೆದಿರತಕ್ಕ ಘಟನಾವಳಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಇದಾದ ನಂತರ ಚುನಾವಣೆಯಾದ ಬಳಿಕೆ ಆಗಿರತಕ್ಕ ಹಿಂಸಾಚಾರದ ಬಗ್ಗೆ ಮಾತನಾಡಿದ್ದಾರೆ. ವೀರಪ್ಪನ್ ಬಗ್ಗೆ ನಾನು ಈಗಾಗಲೇ ಸ್ಪಷ್ಟಪಡಿಸಿದ್ದು, ಸಂದರ್ಭ ಬಂದಾಗ ಸದನವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಈ ಸರ್ಕಾರ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹಲವಾರು ವಿಚಾರಗಳಲ್ಲಿ ಎಷ್ಟನ್ನು ಗುಪ್ತವಾಗಿಡಬೇಕೋ ಅಷ್ಟು ಬಿಟ್ಟು ಉಳಿದಿರತಕ್ಕಂಥ ವಿಚಾರವನ್ನು ಸಾರ್ವಜನಿಕರಿಗೆ ತಿಳಿಸುತ್ತೇವೆನ್ನುವ ಮಾತನ್ನು ಹೇಳಿದ್ದೇವೆ. ನಿನ್ನೆಯಿಂದೀಚೆಗೆ ಯಾವುದೇ ತರಹದ ಬದಲಾವಣೆಯಾಗಿಲ್ಲ. ಈದ್ಗಾ ಮೈದಾನ ವಿಚಾರಧ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮತ್ತು ಸದಸ್ಯರಾದ ಶ್ರೀ ಖಮಯಲ್ ಇಸ್ಲಾಂರವರು ಏನು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ, ಇವರ ಭಾವನೆಗಳೇನೆಂಬುದು ನಮಗೆ ಅರ್ಥವಾಗಿದೆ. ಮುಂಬರುವ ಜನವರಿ 26ನೇ ತಾರೀಖಿನ ದಿವಸ ಅಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ನಮ್ಮ ದೇಶದ ಸಂವಿಧಾನವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ನೆಲದ ಕಾನೂನನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತದೆನ್ನುವ ಭರವಸೆ ಕೊಟ್ಟು ಹಿಂದೆ ಮಾನ್ಯ ವೀರಪ್ಪ ಮೊಯಿಲಿಯವರ ನೇತೃತ್ವದಲ್ಲಿದ್ದಂಥ ಸರ್ಕಾರ ಕಳೆದ ಆಗಸ್ಟ್ ತಿಂಗಳ 15ನೇ ತಾರೀಖಿನಂದು ಹುಬ್ಬಳ್ಳಿಯಲ್ಲಿ ನಡೆದಂಥ ಘಟನೆಗಳ ಬಗ್ಗೆ ನ್ಯಾಯಾಧೀಶರಾಗಿರುವ ಮಾನ್ಯ ರಾಜಶೇಖರ್‌ರವರ ನೇತೃತ್ವದಲ್ಲಿ ರಚಿಸಿರತಥ ವಿಚಾರಣಾ ಆಯೋಗ ಏನಿದೆ, ಅದು ತನ್ನ ಕೆಲಸವನ್ನು ಸಧ್ಯದಲ್ಲೇ ಪ್ರಾರಂಭ ಮಾಡುತ್ತದೆ. ಅದಕ್ಕೆ ಬೇಕಾಗಿರತಕ್ಕ ಎಲ್ಲಾ ಸಹಾಯ - ಸಹಕಾರವನ್ನು ಸರ್ಕಾರ ಕೊಡುತ್ತದೆ ಎನ್ನುವ ವಿವರಣೆಯಿಂದ ಈ ಸಂದರ್ಭದಲ್ಲಿ ಸದನಕ್ಕೆ ಕೊಡ ಬಯಸುತ್ತೇನೆ. ಇನ್ನು ನಮ್ಮ ಸರ್ಕಾರ ರಚನೆಯಾಗುವುದಕ್ಕಿಂತ ಮುಂಚಿತವಾಗಿ ವಿಧಾನಸೌಧದ ಮುಂದೆ ನಡೆದಂಥ ಘಟನಾವಳಿಗಳ ಕುರಿತು ನಾನು ಕೊನೆಯಲ್ಲಿ ಪ್ರಸ್ತಾಪಿಸುತ್ತೇನೆ. ಇದಕ್ಕೂ ಮುನ್ನ ಚುನಾವಣೆಗಳು ನಡೆದಂಥ ಸಂದರ್ಭದಲ್ಲಿ ರಾಜ್ಯದಲ್ಲಾಗಿರತಕ್ಕಂಥ ಅಹಿತಕರ ಘಟನೆಗಳ ಬಗ್ಗೆ ನಾನು ವಿವರಣೆಯನ್ನು ಕೊಡ ಬಯಸುತ್ತೇನೆ. 1994ರ ಚುನಾವಣಾ ಸಂದರ್ಭದಲ್ಲಿ ರಾಜ್ಯದಲ್ಲಿ ದ್ವೇಷದ ಅಥವಾ ಹಿಂಸಾಚಾರದ ಘಟನೆಗಳು ನಡೆದಿರುವಂಥಾದ್ದು ಒಟ್ಟು 276. ಈ ಘಟನಾವಳಿಗಳಲ್ಲಿ ಸುಮಾರು 66 ರಾಯಿಟಿಂಗ್ ಕೇಸ್‌ಗಳು, 91 ಅಸಾಲ್ಟ್ ಕೇಸ್‌ಗಳು ಮತ್ತು ಒಂದು ಮರ್ಡರ್ ಕೇಸ್‌ಅನ್ನು ಪೋಲೀಸಿನವರು ಈಗಾಗಲೇ ದಾಖಲಿಸಿಕೊಂಡಿದ್ದಾರೆ. ನಡೆದಿರುವ ಅನೇಕ ಘಟನಾವಳಿಗಳ ವಿವರಣೆಗಳ ಬಗ್ಗೆ ನಾನು ಬಹಳ ದೀರ್ಘವಾಗಿ ಹೋಗಬಯಸುವುದಿಲ್ಲ, ಆದರೆ, ಚುನಾವಣಾ

ನಂತರದ ಘಟನೆಗಳು ಏನು ಆಗಿವೆ, ಇವು ಸಾಮಾನ್ಯವಾಗಿ ಹಳೆದ ದ್ವೇಷದಿಂದ ಕೂಡಿದ್ದು ಅಥವಾ ಆಸ್ತಿ - ಹಣ ವಿಚಾರಕ್ಕೆ ಸಂಬಂಧಿಸಿದ್ದಾಗಿದೆ. ಈ ವಿವಾದಗಳು ಹೆಚ್ಚಾಗಿ ಅಣ್ಣ ತಮ್ಮಂದಿರಲ್ಲಿ ನೆಂಟರಲ್ಲಿ ಉಂಟಾಗಿರುತ್ತದೆ. ಚುನಾವಣಾ ಸಂದರ್ಭಗಳು ಇದಕ್ಕೆ ಒಂದು ನಿಮಿತ್ತವಾಗಿ ಅದನ್ನು ದುರುಪಯೋಗಪಡಿಸಿಕೊಂಡು ಘರ್ಷಣೆಗಳು ನಡೆದಿವೆ. ಆದರೆ ಯಾವುದೇ ಸಾಮಾನ್ಯ ಸಂದರ್ಭಗಳಲ್ಲಿ ಘರ್ಷಣೆಗಳು ನಡೆದಿಲ್ಲ. ಈಗ ತಮಗೆ ಗೊತ್ತಿರುವಂತೆ 1989ರಲ್ಲಿ ವಿಧಾನ ಸಭೆ ಚುನಾವಣೆ ನಡೆಯಿತು. ಆಗ ರಾಷ್ಟ್ರಪತಿ ಆಡಳಿತ ಕರ್ನಾಟಕದಲ್ಲಿತ್ತು. ಆಗ ಒಟ್ಟು 558 ಘಟನಾವಳಿಗಳು ಈ ರೀತಿಯದವುಗಳಾಗಿವೆ. ಅದರಲ್ಲಿ 5 ಜನರು ಸತ್ತಿದ್ದು, 700 ಜನರಿಗೆ ಗಾಯಗಳಾಗಿವೆ.

ಆದಾದನಂತರ 1991ರಲ್ಲಿ ನಡೆದಂಥ ಪಾರ್ಲಿಮೆಂಟರಿ ಚುನಾವಣೆಯ ಸಂದರ್ಭದಲ್ಲಿ ಸಹ ಪೋಲೀಸ್ ಇಲಾಖೆಯ ಅಂಕಿ ಅಂಶಗಳ ಮತ್ತು ಕಡತಗಳ ಪ್ರಕಾರವಾಗಿ 128 ಘಟನೆಗಳು ಈ ರೀತಿ ನಡೆದಿವೆ. ಆಗಲೂ ಸಹ 5 ಜನ ಸತ್ತಿದ್ದಾರೆ.

ಪಂಚಾಯಿತಿ ಚುನಾವಣೆಗಳು ಮತ್ತು ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳಲ್ಲಿ 12 ಜನರು ಚುನಾವಣೆಯ ನಂತರ ಸತ್ತಿದ್ದಾರೆ. ಸುಮಾರು ನಾಲ್ಕೂ ನೂರಕ್ಕೂ ಹೆಚ್ಚು ಜನರಿಗೆ ಏಟಾಗಿದೆ ಎನ್ನತಕ್ಕದ್ದು ತಮಗೆಲ್ಲಾ ಈಗಾಗಲೆ ತಿಳಿದಿರತಕ್ಕದ್ದು. ಮೊನ್ನೆ ನಡೆದಂಥ ಚುನಾವಣೆಯ ಸಂದರ್ಭದಲ್ಲಿ ....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಕೊಲೆಗಳ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿದರು, ಒಂದೇ ಒಂದು ಕೊಲೆಯಾಗಿದೆ ಎಂದು. ಆ ಕೊಲೆಯು ಸವದತ್ತಿಯಲ್ಲಿ 3ನೇ ತಾರೀಖಿನಂದು ಬಸ್ ಸ್ಟ್ಯಾಂಡಿನಲ್ಲಿ ನಡೆದಂಥ ಕಲ್ಲಪ್ಪ ಬಲ್ಲಪ್ಪ ಸಿರ್ ಕೋಳ್ ಇವರ ಕೊಲೆಯ ಬಗ್ಗೆ ಅವರಲ್ಲಿ ಮಾಹಿತಿ ಬಂದಿದೆಯೇ ? ಇಲ್ಲವೇ ಎನ್ನುವ ಬಗ್ಗೆ ಕೇಳ ಬಯಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ಹತ್ತಿರ ಅದರ ಬಗ್ಗೆ ಮಾಹಿತಿ ಇಲ್ಲ. ವರದಿಯನ್ನು ಕೊಡುತ್ತೇನೆ. ರಾಜ್ಯದಲ್ಲಿ ವಿಧಾನ ಸಭೆಯ ಚುನಾವಣೆಯಲ್ಲಿ ಗೋಕಾಕ್ ನ ಘಟನೆಯನ್ನು ಸೇರಿಸಿಕೊಂಡು ಒಟ್ಟು 5 ಜನರು ಸತ್ತಿದ್ದಾರೆ. ಇವರ ಪೈಕಿ ಮೂರು ಜನರು ಕಾಂಗ್ರೆಸ್‌ನವರು, ಇಬ್ಬರು ಜನತಾ ದಳ ಪಕ್ಷದವರಾಗಿದ್ದಾರೆ. ಇದರ ಜೊತೆಗೆ ಗೋಕಾಕ್ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದರು. ಗೋಕಾಕ್‌ನಲ್ಲಿ ತಮಗೆ ಗೊತ್ತಿರುವಂತೆ ಮೂಲಭೂತವಾಗಿ ಎರಡು ಧಾರ್ಮಿಕ ಗುಂಪುಗಳ ಮಧ್ಯ ಆಗಿರತಕ್ಕ ಘರ್ಷಣೆ. ಇದು ಸಾಮಾನ್ಯವಾದ ಘರ್ಷಣೆ, ಸರ್ಕಾರ ಮತ್ತು ಪೋಲೀಸ್ ಸುಮ್ಮನೆ ಇರಬೇಕೇ ಎಂಬ ಪ್ರಶ್ನೆ ಬಂದಿದೆ, ಇದರ ಬಗ್ಗೆ ಸರ್ಕಾರ ಸುಮ್ಮನೆ ಇಲ್ಲ, ಅದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ನಾವು ಜನತಾದಳದವರು ಮತ್ತು ಕಾಂಗ್ರೆಸ್ ನವರೆಂದು ತಾರತಮ್ಯವನ್ನು ಮಾಡಲು ಹೋಗಿಲ್ಲ. ನಮ್ಮ ಸಚಿವ ಸಂಪುಟದ ರಚನೆಯಾದ ಕೂಡಲೇ ಲೋಕೋಪಯೋಗಿ ಸಚಿವರಾದ ಶಿವಾನಂದ ಕೌಜಲಗಿಯವರು, ವೈದ್ಯಕೀಯ ಶಿಕ್ಷಣ ಇಲಾಖೆಯ ಮಂತ್ರಿಗಳಾದ ಮಾನ್ಯ ಎ.ಬಿ. ಪಾಟೀಲರನ್ನು ತಕ್ಷಣ ಗೋಕಾಕ್‌ಗೆ ಕಳುಹಿಸಿ ಕೊಟ್ಟಿದ್ದೇವೆ. ಅವರ ಅಧ್ಯಕ್ಷತೆಯಲ್ಲಿಯೇ ಶಾಂತಿ ಸಭೆಯನ್ನು ಮಾಡಿಸಿದ್ದೇವೆ.

ಆ ಘಟನಾವಳಿಗಳು ಅಲ್ಲಿ ನಡೆಯುತ್ತಿದ್ದಂತೆ ಎಸ್‌ಪಿ, ಡಿಜಿಪಿರವರನ್ನು ಅಲ್ಲಿಗೆ ಕಳುಹಿಸಿ ಅದನ್ನು ಶಾಂತ ಸ್ಥಿತಿಗೆ ತರಲು ಪ್ರಯತ್ನವನ್ನು ಸಹ ಮಾಡಿರತಕ್ಕದ್ದು ತಮ್ಮ ಮುಂದಿದೆ. ಕಾನೂನಿನ ಮುಂದೆ ಯಾರೂ ಸಹ ದೊಡ್ಡವರಲ್ಲ. ಅವರು ಮಾಜಿ ಶಾಸಕರಿರಲಿ, ಹಾಲಿ ಶಾಸಕರಿರಲಿ, ಮತ್ತೊಬ್ಬರಿರಲಿ, ನಾನೇ ಆಗಿರಲಿ, ತಪ್ಪು ಮಾಡಿದರೆ ತಪ್ಪೇ, ಈ ದೃಷ್ಟಿಯಿಂದಾಗಿ ಕ್ರಮ ತೆಗೆದುಕೊಂಡಿದ್ದೇವೆ. ನಾವು ಕ್ರಮವನ್ನು ತೆಗೆದುಕೊಳ್ಳದಿದ್ದರೆ ತಾವು ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲವೆಂದು

ಹೇಳಬಹುದಿತ್ತು. ಇನ್ನು ಮಧುಗಿರಿರ ಪ್ರಕರಣದ ಬಗ್ಗೆ ಮಾನ್ಯ ಸದಸ್ಯರಾದ ಜಯಚಂದ್ರರವರು ಪ್ರಸ್ತಾಪ ಮಾಡುತ್ತಿದ್ದಾರೆ. ಶ್ರೀನಿವಾಸರೆಡ್ಡಿ ಮತ್ತು ಅವರ ಸಹೋದರರೆಂದು ಇದು ಬಹಳ ಮುಖ್ಯವಾಗಿ ಆಗಿರತಕ್ಕದ್ದು; ಇದು ರಾಜಕೀಯ ಕೊಲೆಯಲ್ಲ. ಇದು ಅವರಲ್ಲಿ ಇರತಕ್ಕಂಥ ದ್ವೇಷ. ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಇಲ್ಲಿ ಹೊಡೆದಾಟಗಳು ಆಗಿಕೊಂಡೇ ಬಂದಿದೆ. ಇದು ಇವತ್ತು ನಡೆದಿರತಕ್ಕಂಥ ಘಟನೆಯಲ್ಲ. ಅದೇ ರೀತಿಯಲ್ಲಿ ಅನೇಕಲ್ ತಾಲ್ಲೂಕಿನ ಜಿಗಣಿ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ : ನಾವು ತಮ್ಮ ಹೇಳಿಕೆಗೆ ಅಡ್ಡಿ ಮಾಡುವುದಿಲ್ಲ. ಆದರೆ ತಾವು ಈ ರೀತಿ ತೀರ್ಪು ಕೊಟ್ಟುಕೊಂಡು ಇದು ರಾಜಕೀಯ, ಇದು ವೈಯಕ್ತಿಕ ಎಂದು ಹೇಳಿದರೆ ಪೋಲೀಸ್‌ನವರು ವಿಚಾರಣೆ ಮಾಡುವುದಕ್ಕೆ ಏನು ಉಳಿಯುವುದಿಲ್ಲ. ಗೃಹ ಮಂತ್ರಿಗಳಿಗೆ ಇವುಗಳ ಬಗ್ಗೆ ಕಾರಣವನ್ನು ಕೊಟ್ಟುಬಿಟ್ಟರೆ ಹೇಗೆ? ಇವೆಲ್ಲವುಗಳೂ ವಿಚಾರಣೆಯಾಗತಕ್ಕಂಥ ಕೇಸುಗಳು, ತಾವು ಈ ರೀತಿ ಇದಕ್ಕೆ ಕಾರಣವನ್ನು ಕೊಟ್ಟುಕೊಂಡು ಹೋದರೆ ಕೇಸು ಎಲ್ಲಿ ಉಳಿಯುತ್ತದೆ. ಆದ್ದರಿಂದ ದಯಮಾಡಿ ಗೃಹಮಂತ್ರಿಗಳು ಇವುಗಳನ್ನು ಪೋಲೀಸ್‌ನವರಿಗೆ ವಿಚಾರಣೆ ಮಾಡಲು ಬಿಟ್ಟುಕೊಡಿ. ಈ ಕೇಸುಗಳು ಯಾವುದೇ ಕಾರಣದಿಂದ ಆಗಿರಬಹುದು. ಆದರೆ ತಾವು ಇದರ ಬಗ್ಗೆ ತೀರ್ಪನ್ನು ಕೊಡುತ್ತಾ ಹೋದರೆ ಬಹುಶಃ I don't want to attribute any motives to you.

ಆದರೆ ಇದು ಸರಿಯಲ್ಲ, ಆದರೆ ಇದು ರಾಜಕೀಯ ಕಾರಣವಲ್ಲ, ಇದು ವೈಯಕ್ತಿಕ ಕಾರಣ, ಇದು ವೈಯಕ್ತಿಕ ಕಾರಣವಲ್ಲ ಇದು ರಾಜಕೀಯ ಕಾರಣವೆಂದು ಹೇಳಿದರೆ ಇನ್‌ವೆಸ್ಟಿಗೇಷನ್‌ಗೆ ಡೈರೆಕ್ಷನ್‌ನನ್ನೇ ಕೊಟ್ಟಂತಾಯಿತು ಇನ್ನೇನು ಉಳಿಯಿತು? We don't expect any justice if this is the attitude. Even as a Minister you should also know your limits ಕೇಳಿರಬಹುದು. ತಾವು ಇನ್‌ವೆಸ್ಟಿಗೇಷನ್‌ಗೆ ಇಲ್ಲಿಂದಲೇ ಡೈರೆಕ್ಷನ್ ಕೊಡದೆ ಹೋದರೆ ತಾವು ಇದೇ ಧಾಟಿಯಲ್ಲಿ ಮಾತನಾಡಿದರೆ ನಮ್ಮದು ಏನು ಅಭ್ಯಂತರವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಈ ಸಭೆಯಲ್ಲಿ ಆಪಾದನೆ ಮಾಡಿದಾಗ ನೀವು ಇರಲಿಲ್ಲ; ತಾವೂ ಆಡಳಿತ ನಡೆಸಿದವರು; ಅವರು ತೀರ್ಪು ಕೊಡುತ್ತಿಲ್ಲ. ಅವರು ಹೇಳಿದಂತಹ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಸರ್ಕಾರದ ಮೇಲೆ ಆಪಾದನೆ ಮಾಡಿದ್ದಾರೆ. ಯಾವ ಯಾವ ಘಟನೆ ಬಗ್ಗೆ ಹೇಗೆ ನಡೆಯಿತು ಎಂಬುದನ್ನು ಇದೇ ಸದನದಲ್ಲಿ ಎಫ್.ಐ.ಆರ್. ನಂಬರ್ ಪ್ರತಿಯೊಂದನ್ನು ಕೋಟ ಮಾಡಿ. ಕಾಂಗ್ರೆಸ್ಸಿನ ಕಾರ್ಯಕರ್ತರ ಮೇಲೆ ಜನತಾದಳದ ಒಂದು ಹಲ್ಲೆ ನಡೆದವು, ಹೀಗೇ ಸತ್ತಿದ್ದಾರೆಂದು ವಿವರಣೆಯನ್ನು ಕೊಟ್ಟಿದ್ದಾರೆ. ತಾವು ಪ್ರೊಸೀಡಿಂಗ್ಸ್‌ನ್ನು ಓದಬೇಕು. ಆದ್ದರಿಂದ ಇದು ಕಾಂಗ್ರೆಸ್ ಮತ್ತು ಜನತಾ ದಳದ ಜಗಳ ಅಲ್ಲ, ಆದ್ದರಿಂದ ಇದು ಕೆಲವು ಕಡೆ ಜಮೀನು ಮತ್ತು ಆಸ್ತಿ ವ್ಯವಹಾರದಿಂದ ಹಿಂದಿನಿಂದ ಜಗಳ ನಡೆದುಕೊಂಡು ಬಂದಿತ್ತು. ಅವರು ಕೊಲೆ ಮಾಡಿದ್ದು ಸರಿ ಎಂದು ಸಮರ್ಥನೆ ಮಾಡುತ್ತಿಲ್ಲ, Prosecution has already taken charge and they are proceeding ahead. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ, ಯಾವ ಹಿನ್ನೆಲೆಯಲ್ಲಿ ಇದು ಆಯಿತು; ಇದು ರಾಜಕೀಯ ಅಲ್ಲ, ಇದು ಕೆಲವು ಕಡೆ ವೈಯಕ್ತಿಕವಾಗಿ ನಡೆದ ಘಟನೆ ಇರಬಹುದು. ಕೆಲವು ಕಡೆ ಒಬ್ಬರಿಗೊಬ್ಬರಿಗೆ ಹಿಂದಿನಿಂದ ಬಂದಂಥ ಮಸಲತ್ತುಗಳು ಇರಬಹುದು. ಈ ಕಾರಣದಿಂದ ಈ ಘಟನೆ ನಡೆದಿದೆ ಎಂದು ಹೇಳುತ್ತಿದ್ದಾರೆಯೇ ಹೊರತು ಅದು ಮಾಡಿದ್ದು ಸರಿ. ಅದರದ್ದು ಏನೂ ತಪ್ಪಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಗೃಹಮಂತ್ರಿಗಳು ಹೇಳುತ್ತಿಲ್ಲ.

ಏಕೆಂದರೆ ಈ ಸಭೆಯಲ್ಲಿ ಸ್ಪೆಸಿಫಿಕ್ ಚಾರ್ಜಸ್ ಮಾಡಿದ್ದಾರೆ. ಆದ್ದರಿಂದ ಪೋಲೀಸ್ ಇನ್‌ವೆಸ್ಟಿಗೇಷನ್‌ಗೆ ಅಪಾಯವಾಗುವುದಿಲ್ಲವೇ? ದಯಮಾಡಿ ತಾವು ಹೇಳಿ ತಾವು ಆಡಳಿತ ನಡೆಸಿದವರೇ. ವಿವರಣೆ ಕೊಡುವಾಗ ಪೋಲೀಸರು ಇದಕ್ಕೆ ಅಡ್ಡಿ ಬರಬೇಕೆಂದು ನಾವು ಹೇಳುತ್ತಿಲ್ಲ, ಏನು ಘಟನೆಗಳು ಆಗಿವೆ ಅದಕ್ಕೆ ನಾವು ಇನ್ನು ವಿವರಣೆ ಕೊಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಅಧ್ಯಕ್ಷರೇ, ವಿವರಣೆ ಕೊಡುವುದಕ್ಕೆ ತಾವು ಸ್ವತಂತ್ರರಿರುತ್ತೀರಿ, ವಿವರಣೆ ಕೊಡಬೇಕು. ನಾನು ಅದಕ್ಕೆ ಅಡ್ಡಿ ಬರುತ್ತಿಲ್ಲ. ತಾವು ದಯಮಾಡಿ ತಾವೇ ವಿಚಾರ ಮಾಡಿ ತಾವು ಯಾವ ತರಹ ಹೇಳಿಕೆ ಕೊಡುತ್ತಿದ್ದೀರಿ. ಏಕೆಂದರೆ ಒಂದು ಕೇಸ್‌ನಲ್ಲಿ ಎಫ್‌ಐಆರ್ ಇರುತ್ತದೆ; 162 ಸ್ಟೇಟ್‌ಮೆಂಟ್‌ಗಳು ಇರುತ್ತವೆ. allegations and motive for murder ಇರುತ್ತವೆ.

ಎಫ್‌ಐಆರ್‌ನಲ್ಲಿ ಸರ್ಟನ್ 162 statementಮತ್ತು ಸಿಆರ್‌ಪಿಸಿಯಲ್ಲಿ ಸ್ಟೇಟ್‌ಮೆಂಟ್‌ಗಳು ಇರುತ್ತವೆ. ಏನು ಕಾರಣ ಎಂದು. ಅದು ಅಲಿಗೇಷನ್ಸ್ ಆಗಿರುತ್ತದೆ. ಆಮೇಲೆ ಅದರ ಆಧಾರದ ಮೇಲೆ ಚಾರ್ಜ್‌ಶೀಟ್ ಹಾಕುತ್ತಾರೆ. ಅದೂ ಕೂಡ ಅಲಿಗೇಷನ್‌ಸ. ತಾವು ಈ ತರಹ ಹೇಳಿದರೆ ನಾವು ಒಪ್ಪಬಹುದು. ಆ ಎಫ್‌ಐಆರ್ ಪ್ರಕಾರ ೧೬೨ ಪ್ರಕಾರ if the motive which is attributed by the Complainant or the witnesses if it is a property or the political, ಇದು ಮುಖ್ಯ. ತಮ್ಮ ವಿಚಾರ ಮುಖ್ಯ ಅಲ್ಲ, What you say is not important. What is said in the 162 statement and Fir, that is important.

ಒಂದು ವೇಳೆ ತಮ್ಮ ಇನ್‌ಫರೆನ್ಸ್ ಇವು ಯಾವುವೂ it does not come here. You can say either property dispute or ಇಲ್ಲಿ ಪೊಲಿಟಿಕಲ್ ಎಂದು ಹೇಳಬಹುದು. It is only an allegation. what you say; what is alleged, I am not here to put words in your mouth. But, what you can say is there is no allegation of political motive; but there is allegation of property motive, if you say like that we will agree.

ಅದು ಒಪ್ಪುತ್ತೇವೆ. ಆದರೆ ಆ ಭಾಷೆಯಲ್ಲಿ ಹೇಳುತ್ತಿಲ್ಲ ತಾವು ನೇರವಾಗಿ ಹೇಳಿದ್ದೀರಿ. ಅದು ರಾಜಕೀಯ ಉದ್ದೇ ಅಲ್ಲ; ಅದು ವೈಯಕ್ತಿಕ ಉದ್ದೇಶ ಎಂದು ತಾವು ಹೇಳಿ ಬಿಟ್ಟರೆ that will amount to a direction to the investigation agency and they will have to go according to the lines which you have put forward.

ತಮ್ಮ ಮಾತು ಅವರು ಮೀರುವುದಕ್ಕೆ ಆಗುವುದಿಲ್ಲ, I do not want to go further on this. But, it is for you to analyse yourself whether we are going to do justice in a particular case.

ಶ್ರೀ ಆರ್.ಎಲ್. ಜಾಲಪ್ಪ : ತಮ್ಮ ಪಕ್ಷದವರೇ ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ನಾನು ಅದಕ್ಕೆ ಉತ್ತರ ಕೊಡಬಾರದೇ; ಮತ್ತೆ ನೀವು ಹೇಳಿದ್ದೆಲ್ಲಾ ಸರಿ ಎಂದು ಕುಳಿತುಬಿಡೋಣವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನು ಹೇಳುತ್ತೇನೆ, ಏಕೆಂದರ ಚುನಾವಣೆಯಾದ ಮೇಲೆ 11ನೇ ತಾರೀಖು ಆದ ಮೇಲೆ ಅನೇಕ ಘಟನೆಗಳು ಏನು ನಡೆದಿದೆ ನಾನು ಸ್ಪೆಸಿಫಿಕ್ ಆಗಿ ಹೇಳಿದ್ದೇನೆ. ಮಾಲೂರು ಆಗಲಿ, ಮಧುಗಿರಿಯಾಗಲಿ, ಗೋಕಾಕ್ ಆಗಲಿ, ರಾಮನಗರಮ್ ಆಗಲಿ, ಕೋಲಾರವಾಗಲಿ,

ಮತ್ತು ಚಿಂತಾಮಣಿಯಾಗಲಿ ಈ ಎಲ್ಲಾ ಘಟನೆಗಳು ತಾವು ಅಧಿಕಾರ ವಹಿಸಿಕೊಂಡ ಮೇಲೆ ಆಗಿವೆ. ಇದಕ್ಕೆ ಯಾರು ಪ್ರೇರಣೆ ಇದ್ದಾರೆ ಎನ್ನತಕ್ಕಂಥಾದ್ದು ನಾನು ಕೇಳಿದ್ದೇನೆಯೇ ಹೊರತಾಗಿ ನಿಮ್ಮ ಸರ್ಕಾರವೇ ಮಾಡಿದ್ದುದು ನಿಮ್ಮ ಪೋಲಿಸರೇ ಮಾಡಿದ್ದುದು ಎಂದು ಹೇಳಲಿಲ್ಲ.

ಈ ಕುಮ್ಮಕ್ಕು ಹೇಗೆ ಬಂತು. ಈ ಶಕ್ತಿ ಹೇಗೆ ಬಂತು? ಇಷ್ಟು ಇನ್ಸಿಡೆಂಟ್ಸ್ ಏಕೆ ಆದವು; ಅದರ ಬಗ್ಗೆ ಹೇಳಿ. ನಾವು ಗುಲ್ಬರ್ಗದ್ದು ಹೇಳಲಿಲ್ಲ, ರಾಯಚೂರಿನದ್ದು ಹೇಳಲಿಲ್ಲ, ಬೀದರ್‌ನದ್ದು ಹೇಳಲಿಲ್ಲ, ಧಾರವಾಡದ್ದು ಹೇಳಲಿಲ್ಲ, ಬಿಜಾಪುರದ್ದು ಹೇಳಲಿಲ್ಲ, ಈ ಒಂದೇ ಭಾಗದಲ್ಲಿ ಸತತವಾಗಿ ಆ ಒಂದು ಸಮಾಜಿಕವಾಗಿ ಅಶಕ್ತಿ ಇರತಕ್ಕಂಥ ಜನರ ಮನೆಗಳ ಮೇಲೆ ದೌರ್ಜನ್ಯ ಆಗತಕ್ಕಂಥಾದ್ದು, ಮರ್ಡರ್ ಆಗತಕ್ಕಂಥಾದ್ದು ಲೂಟಿಯಾಗತಕ್ಕದ್ದು ಏಕಾಯಿತು? ಅದನ್ನೇ ನಾನು ಸ್ಪೆಸಿಫಿಕ್ ಆಗಿ ಕೇಳಿದ್ದೇನೆ, ಇನ್ನೂ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ವೀರಪ್ಪ ಮೊಯಿಲಿಯವರು ನನ್ನ ಮೇಲೆ ಯಾವುದೇ ಒಂದು ಮೋಟಿವ್ಸ್‌ನ್ನು ಅಟ್ರಿಬ್ಯೂಟ್ ಮಾಡುತ್ತಾರೆ ಎಂದು ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ, ಅಥವಾ ನಾನು ತೀರ್ಪು ಕೊಡುವುದಕ್ಕೆ ಇಲ್ಲಿ ನಿಂತಿಲ್ಲ, ನನ್ನ ಬಗ್ಗೆ ನಾನು ಹೇಳಿಕೊಂಡೆ. ನಾನು ಏನಾದರೂ ಗೃಹ ಸಚಿವನಾಗಿ ತಪ್ಪು ಮಾಡಿದ್ದರೂ ಸಹ ಕಾನೂನಿಗೆ ಮೀರಿ ನಿಂತಿಲ್ಲ, ಕಾನೂನಿಗೆ ನಾವು ತಲೆ ಬಾಗಿಸಬೇಕಾಗುತ್ತದೆ. ಉದಾಹರಣೆಗೆ ತಾವು ಹೇಳಿದಿರಿ, ಮಧುಗಿರಿ ಪ್ರಕರಣದ ಬಗ್ಗೆ; ಮಧುಗಿರಿ ಪ್ರಕರಣದಲ್ಲಿ ನನಗೆ ಬಂದಿರತಕ್ಕಂಥ ಪೋಲೀಸ್ ಇಲಾಖೆಯ ಪ್ರಕಾರವಾಗಿ ಕೇಸ್‌ನ್ನು ಬುಕ್ ಮಾಡಿದ್ದಾರೆ. ಕೇಸ್‌ನ್ನು ಬುಕ್ ಮಾಡದೇ ಹೋಗಿದ್ದರೆ ಆಕ್ಯೂಸ್ಡ್‌ನ್ನು ಹಾಗೆಯೇ ಬಿಟ್ಟು ಬಿಟ್ಟಿದ್ದರೆ ಅಥವಾ ಅಕ್ಯೂಸ್ಡ್ ಜೊತೆಯಲ್ಲಿ ಕಲ್ಯೂಷನ್ ಆಗಿದ್ದರೆ ಆ ಸಂದರ್ಭದಲ್ಲಿ ನೀವು ಹೇಳಬಹುದಾಗಿತ್ತು; ನೀವು ಮಾಡುತ್ತಿರತಕ್ಕಂಥಾದ್ದು ತಪ್ಪು ಎಂದು. ತಾವು ಏನು ಹೇಳಬಹುದಾಗಿತ್ತು; ನೀವು ಮಾಡುತ್ತಿರತಕ್ಕಂಥಾದ್ದು ತಪ್ಪು ಎಂದು. ತಾವು ಏನು ಹೇಳುತ್ತಿದ್ದೀರಿ, ದುರ್ಬಲ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಅವರಿರತಕ್ಕಂಥ ಕೇರಿಗಳಲ್ಲಿ ದೌರ್ಜನ್ಯಗಳು ಜಾಸ್ತಿಯಾಗುತ್ತಿದೆ, ನಿಮ್ಮ ಸರ್ಕಾರ ಬಂದ ಮೇಲೆ ಎಂದು ಹೇಳಿದರೆ ಅದರ ಪೊಲಿಟಿಕಲ್ ಮೈಲೇಜ್ ಯಾರಿಗೆ ಸಿಗುತ್ತದೆ? ಅದರ ಪೊಲಿಟಿಕಲ್ ಮೈಲೇಜ್‌ನ್ನು ತೆಗೆದುಕೊಳ್ಳುವುದಕ್ಕೆ ನೀವು ಹೇಳುತ್ತಿದ್ದೀರಿ. ನಾವು ದುರ್ಬಲ ವರ್ಗಗಳ ಪರವಾಗಿ ಇದ್ದೇವೆ, ನಾವು ಹಿಂದುಳಿದ ವರ್ಗಗಳ ಪರವಾಗಿ ಇದ್ದೇವೆ, ಈ ಸರ್ಕಾರ ಇಲ್ಲ ಎಂದರು ಹೇಳುವುದಕ್ಕೆ ನೀವು ಹೊರಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :ನೀವು ವಿರೋಧ ಇದ್ದೀರಿ ಎಂದು ಹೇಳಲಿಲ್ಲ, ನಿಮ್ಮಲ್ಲಿ ೨೧-೨೩ ಜನ ಬಂದಿರಬಹುದು. ಆದರೆ ಯಾವುದ ಚುನಾವಣೆಯಲ್ಲಿ ಆಗಲಿಲ್ಲ, ಅದರ ಹಿಂದೆ ಆಗಲಿಲ್ಲ, ಅದೆಲ್ಲಾ 15 ದಿವಸದಲ್ಲಿ ಮಾತ್ರ ಸ್ಪೆಸಿಫಿಕ್ ಆಗಿ ಪರ್ಟಿಕ್ಯುಲರ್ ಏರಿಯಾದಲ್ಲಿ ಏಕಾಯಿತು ಎಂದು ಕೇಳುತ್ತಿದ್ದೇನೆ. ಅದನ್ನು ಹೇಳಿ;

ಶ್ರೀ ಪಿ.ಜಿ. ಆರ್. ಸಿಂಧ್ಯ : ಸ್ಪೆಸಿಫಿಕ್ ಏರಿಯಾದಲ್ಲಿ ಏಕಾಯಿತು ಎಂದು ಕೇಳುತ್ತಿದ್ದೀರಿ. ಅದಕ್ಕೆ ನಾನು ಹೇಳುತ್ತೇನೆ ಮಾನ್ಯ ಖರ್ಗೆಯವರೇ, ಗಂಡಸಿ ಕ್ಷೇತ್ರದ ಬಗ್ಗೆ ತಾವು ಹೇಳಿದಿರಿ. ಆ ಕ್ಷೇತ್ರದ ಶಾಸಕರೂ ಸಹ ಮಾತನಾಡಿದ್ದಾರೆ. ಅದರ ಬಗ್ಗೆ ವರದಿ ಬಂದಿದೆ ನಾನು ಮೆರಿಟ್ ಆಫ್‌ದಿ ಕೇಸ್ ಬಗ್ಗೆ ಗೊತ್ತಿಲ್ಲ, ಅಲ್ಲಿ ಜನತಾ ದಳದವರಿಗೆ ಅನ್ಯಾಯವಾಗಿದೆ ಎನ್ನುವಂತಹ ಮಾತನ್ನು ನಾನು ಹೇಳುತ್ತಿಲ್ಲ, ಏಕೆಂದರೆ ನಾನು ಜನತಾ ದಳದವರಿಗೆ ಮಾತ್ರ ಅಲ್ಲ ಗೃಹ ಸಚಿವನಾಗಿರುವುದು.

ಇಡೀ ರಾಜ್ಯದ ಜನತೆಗೆ ನಾನು ಗೃಹಸಚಿವನಾಗಿದ್ದೇನೆ. ರಾಜ್ಯದ ಜನತೆಗೆ ಕಾನೂನನ್ನು ಕಾರ್ಯಾಚರಣೆಗೆ ತರುವ ದೃಷ್ಟಿಯಿಂದ ನಾನು ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇನೆ, ಕಾನೂನಿನ ಪ್ರಕಾರ ನಾನು ನಡೆದುಕೊಳ್ಳುತ್ತೇನೆ ಎಂದು. ಅದು ಗಂಡಸಿ ಕ್ಷೇತ್ರದಲ್ಲಿ ಆಗಿರತಕ್ಕಂಥ ಅನ್ಯಾಯ ನಿಮ್ಮಿಂದ ಕಿಮ್ಮಕ್ಕು ಸಿಕ್ಕಿದೆ, ನಿಮ್ಮ ಸರ್ಕಾರದಿಂದ ಸಿಕ್ಕಿದೆ ಎಂದು ಹೇಳುವಂತಹ ಸಂದರ್ಭದಲ್ಲಿ ನಾನು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ ಹಾಗಾದರೆ? ಪ್ರೊಸಿಡಿಂಗ್ಸ್ ತೆಗೆದು ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಹೆಸರು ಹೇಳಿ ಮಾಡುತ್ತಿದ್ದಾರೆ.

ಛೇರ್‌ಮನ್: ನಿಮಗೆ ಅವಕಾಶ ಕೊಡುತ್ತೇನೆ, ಸಚಿವರು ಪೂರ್ತಿ ಮಾಡಲಿ, ಕ್ಲಾರಿಫಿಕೇಷನ್ ಇದೆ, ಏಕೆ ಆತುರ ಪಡುತ್ತೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನೇ ನಾನು ಹೇಳುತ್ತಿರುವುದು. ಏನು ಹೇಳಿದ್ದಾರೆ, ಗಂಡಸಿ ಕ್ಷೇತ್ರದ ಬಗ್ಗೆ, ಕಾಂಗ್ರೆಸ್ ಕಾರ್ಯಕರ್ತರು; ನಾನು ಯಾವುದೇ ತೀರ್ಪನ್ನು ಕೊಡುತ್ತಿಲ್ಲ, ಮತ್ತೆ ಏನು ಹೇಳಬೇಕು ನಾವು ನಿಮ್ಮ ಸರ್ಕಾರ ಬಂದಮೇಲೆ ಇದೆಲ್ಲಾ ದಬ್ಬಾಳಿಕೆ ಮಾಡುತ್ತಿದ್ದಾರೆ ನಿಮ್ಮ ಕುಮ್ಮಕ್ಕು ಇದೆ ಎಂದು ಹೇಳಿದಮೇಲೆ ನಾನು ಏನು ಉತ್ತರ ಕೊಡಬೇಕು? ನಾನು ಏನೂ ಉತ್ತರ ಕೊಡುತ್ತಿದ್ದೇನೆ ಎಂದರೆ ಒಂದು ಸಂದೇಶವನ್ನು ರಾಜ್ಯದ ಅಧಿಕಾರಿಗಳಿಗೆ ಆಡಳಿತಕ್ಕೆ ಈ ಒಂದು ಸದನದ ಮೂಲಕ ಕೊಡತಕ್ಕಂಥಾದ್ದು ಏನೆಂದರೆ ನಾನು ಪ್ರಾರಂಭದಲ್ಲಿ ಅದಕ್ಕೆ ಈ ಮಾತನ್ನು ಹೇಳಿದ್ದುದು. ಎಷ್ಟೇ ಎತ್ತರದ ವ್ಯಕ್ತಿಯಾಗಿರಲಿ, ಆಡಳಿತದ ಯಾರೇ ಕೆಳಮಟ್ಟದ ಅಧಿಕಾರಿಗಳಾಗಿರಲಿ ಕಾನೂನು ಪ್ರಕಾರವಾಗಿ ಕೆಲಸ ಮಾಡಬೇಕು. ಆದರೆ ಈ ಘಟನಾವಳಿಗಳ ಬಗ್ಗೆ ಏಕೆ ಹೋಗುತ್ತಿದ್ದೇನೆ ನಾನು; ರಾಮನಗರದ ಬಗ್ಗೆ ಏಕೆ ಹೋಗುತ್ತಿದ್ದೇನೆ ನಾನು ಅಥವಾ ಗಂಡಸಿ ಕ್ಷೇತ್ರದ ಬಗ್ಗೆ ಏಕೆ ಹೋಗುತ್ತಿದ್ದೇನೆ, ಚಿಂತಾಮಣಿ ಬಗ್ಗೆ ಏಕೆ ಹೋಗುತ್ತಿದ್ದೇನೆಂದರೆ, ಇಲ್ಲಿ ಎರಡೂ ಕಡೆಯವರನ್ನು ಜನತಾದಳದವರು ಇರಬಹುದು, ಕಾಂಗ್ರೆಸ್ಸಿನವರೇ ಇರಬಹುದು, ಬಿಜೆಪಿಯವರು ಇರಬಹುದು. ಎಲ್ಲರ ಮೇಲೂ ಸಹ ಕೇಸ್‌ಗಳನ್ನು ದಾಖಲಾತಿಯನ್ನು ಮಾಡಿಕೊಂಡಿದ್ದಾರೆ. ಯಾರನ್ನೂ ಸಹ ಬಿಟ್ಟಿಲ್ಲ. ಮಾನ್ಯ ಜಯಚಂದ್ರ ಅವರು ಅವರು ಇನ್ನು ಅಕ್ಯೂಸ್ಡ್ ಅನ್ನು ಅರೆಸ್ಟ್ ಮಾಡಿಲ್ಲವೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಕ್ಯೂಸ್ಡ್‌ನ್ನು ಅರೆಸ್ಟ್ ಮಾಡದೇ ಹೋದರೆ ನಾನು ಅವರಿಗೆ ಸೂಚನೆ ಕೊಡುತ್ತೇನೆ. ಅಕ್ಯೂಸ್ಡ್‌ನ್ನು ತಕ್ಷಣ ಅರೆಸ್ಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ನೀವು ಏನೂ ಹೇಳಲೇ ಬೇಡಿ ಎಂದು ಹೇಳಿದರೆ ಮತ್ತು ನೀವು ಹೇಳುವುದೆಲ್ಲಾ ಸರಿ ಇದಕ್ಕೆ ಸರ್ಕಾರದ ಕುಮ್ಮಕ್ಕು ಇದೆ ಎಂದು ಕೇಳಿಕೊಂಡು ಹೋಗಲೇ ನಾನು ಗೃಹಸಚಿವನಾಗಿ.

ನಾನು ಆಡಳಿತ ನಡೆಸಬೇಕಾದರೆ, ಈ ರಾಜ್ಯದಲ್ಲಿ ಶಾಂತಿ ನೆಮ್ಮದಿ ಇರಬೇಕಾದರೆ ನಾನು ಕೆಲವು ಸೂಚನೆಗಳನ್ನು ಅಧಿಕಾರಿಗಳಿಗೆ ಕೊಡಬೇಕಾಗುತ್ತದೆ. ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. ನಾನು ಇನ್ನೊಂದು ಹೇಳಿದೆ. ಕೆಲವು ಅಂಕಿ ಅಂಶಗಳನ್ನು ಕೊಟ್ಟೆ. 1989ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ೮ ಜನರು ಸತ್ತಿದ್ದಾರೆ. 1991ರಲ್ಲಿ ಸತ್ತಿದ್ದಾರೆ. ಇಷ್ಟೊಂದು ಘಟನಾವಳಿಗಳು ನಡೆದಿವೆ. after Poll and during Poll.

1991 ರಲ್ಲಿ ಪಂಚಾಯತ್ ಚುನಾವಣೆಯಲ್ಲಿ ಮುಖ್ಯಮಂತ್ರಿಗಳು ಇರಲಿಲ್ಲವೇ? ಆಗ 12 ಜನರು ಸತ್ತಿದ್ದಾರೆ. 500ಕ್ಕೂ ಹೆಚ್ಚು ಜನರು 1993-94 ರಲ್ಲಿ ಮಂಡಲ ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಗಾಯಾಳುಗಳಾಗಿದ್ದಾರೆ. ಅದುದರಿಂದ ನೀವು ಏನು ಹೇಳುತ್ತಿದ್ದೀರಿ ಎಂದರೆ ನಮ್ಮ

ಅರ್ಥ ಏನೋ ಈ ಚುನಾವಣೆ ಆದ ತಕ್ಷಣ ಈ ಸರ್ಕಾರ ಬಂತು, ಹೀಗೆ ಆಯಿತು ಎಂದು. ನಿಮ್ಮ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ. Why you are so unharitable to us? ಇನ್ನು ಸರ್ಕಾರ ರಚನೆಯಾಗಿ ೨೦ ದಿವಸಗಳು ಆಗಲಿಲ್ಲ, ಹಾಗೆ ನೀವು ನಮಗೆ ಸಮಯ ಕೊಡುವುದಕ್ಕೂ ಸಹಿತ ತಯಾರಿಲ್ಲ, ಏನೋ ಘಟನಾವಳಿಗಳು ನಡೆದು ಹೋಗಿವೆ; ಮಾನ್ಯ ದೇವೆಗೌಡರು ಮುಖ್ಯಮಂತ್ರಿಗಳು ಆಗಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದಂತಹ ಪ್ರೊಸಿಡಿಂಗ್ ಇದೆ; ಅದನ್ನು ನಾನು ಓದಬೇಕಾಗುತ್ತದೆ. ದುರ್ಬಲ ವರ್ಗದವರ ಕೇರಿಗಳಲ್ಲಿ ಹಿಂದುಳಿದ ವರ್ಗದವರ ಬೀದಿಗಳಲ್ಲಿ.....

ಛೇರ್‌ಮನ್ : ಪ್ರೊಸೀಡಿಂಗ್ಸ್ ಏಕೆ ಓದುತ್ತೀರಿ? ನಿಮ್ಮ ಮಾತು ಅವರು ನಂಬುತ್ತಾರೆ. ಸಮಯ ಹಾಳು ಮಾಡುವುದು ಬೇಡ, ನಿಮ್ಮ ಮಾತು ನಂಬುತ್ತಾರೆ, ನೀವು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಮೇಲೆ ವಿಶ್ವಾಸದಿಂದ, ಮಮತೆಯಿಂದ ಹೇಳಿದ್ದಾರೆ. ಏಕೆಂದರೆ ನಿಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ನಾನು ಎಲ್ಲರ ವಿಶ್ವಾಸವನ್ನು ತೆಗೆದುಕೊಂಡು ರಾಜ್ಯಭಾರ ಮಾಡುತ್ತೇನೆಂದು ಹೇಳಿದ್ದಾರೆ. ಹಾಗಿರುವಾಗ ಅವರು ವಿಶ್ವಾಸವಿಟ್ಟುಕೊಂಡು ಹೇಳಿದ್ದಾರೆ. ನೀವು ಅದನ್ನು ಸ್ವೀಕಾರ ಮಾಡುವುದಾದರೆ ಮಾಡಿ ಇಲ್ಲದಿದ್ದರೆ ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲ ಮಾಡುತ್ತೇನೆ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಧೀರ್ಘವಾದಂತಹ ಉತ್ತರವನ್ನು ಕೊಟ್ಟು, ಆ ಮನೆಯಲ್ಲೂ ಉತ್ತರ ಕೊಡಬೇಕಾಗಿರುವುದರಿಂದ ನಾನು ಭಾಷಣದ ಕೊನೆಯ ಹಂತಕ್ಕೆ ತಲುಪುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರು ಈ ಕಡೆ ಗಮನ ಕೊಡಬೇಕು. ಕೋಲಾರದಲ್ಲಿ ನಡೆದಂತಹ ಪ್ರಕರಣವೇನಿದೆ, ಇದು ಹರಟಿ, ಮಲದ ಪ್ರಕರಣ, ಇದು ತಮಗೆ ಗೊತ್ತಿರುವ ವಿಚಾರ. ಹರಟಿ ಎನ್ನುವಂತಹ ಗ್ರಾಮದಲ್ಲಿ ಹರಿಜನರಿಗೆ ಮಲವನ್ನು ತಿನ್ನಿಸಿದರು ಎಂಬ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲವು ದಾಖಲೆಗಳಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೊಡಿ ನಾನು ಎಲ್ಲಾ ಓದುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :ಆಮೇಲೆ ನಿಧಾನವಾಗಿ ಓದಿ, ನಿಮ್ಮ ಅನುಭವಕ್ಕೆ ಬರಲಿ, ಓದುವುದಕ್ಕೆ ಟೈಮ್ ತೆಗೆದುಕೊಳ್ಳುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಗ ಇನ್ನೂ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿರಲಿಲ್ಲ; ಆಗ ಮಾನ್ಯ ವೀರಪ್ಪಮೊಯಿಲಿಯವರೇ ಮುಖ್ಯಮಂತ್ರಿಗಳು.

ಒಬ್ಬ ಮಾನ್ಯ ಸದಸ್ಯರು : ಸುಮ್ಮನೆ ಇರಿ ಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನು ಸುಮ್ಮನೆ ಇರುವುದು? ಆಗ ಮಾನ್ಯ ವೀರಪ್ಪಮೊಯಿಲಿಯವರೇ ಮುಖ್ಯಮಂತ್ರಿಗಳು.

ಶ್ರೀ ಎಂ. ವೀರಪ್ಪಮೊಯಿಲಿ : ಹಾಗಾದರೆ ನಮ್ಮದೇ ತಪ್ಪು ಅಂಥಾ....

ಶ್ರೀ ಪಿ.ಜಿ.ಆರ್. ಸಿಂಧ್ಯ : 11ನೇ ತಾರೀಖು ಸಾಯಂಕಾಲ 6 ಗಂಟೆಯವರೆಗೂ ನೀವೇ ಮುಖ್ಯಮಂತ್ರಿಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗಾದರೆ ಒಂದು ಮಾಡಿ. ನಾನೇ ಮುಖ್ಯಮಂತ್ರಿಯಾಗಿದ್ದೆ. ನನ್ನ ಜವಾಬ್ದಾರಿಯಾದರೆ, ನನ್ನ ಜವಬ್ದಾರಿಯ ಬಗ್ಗೆ ತನಿಖೆ ಮಾಡುವುದಕ್ಕೆ ಕೇಂದ್ರದ ಜ್ಯೂಡಿಷಿಯಲ್ ಎನ್‌ಕ್ವೈಯರಿ ಮಾಡಿಬಿಡಿ, ನಾನೇ ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ತನಿಖೆ ಮಾಡಿಸುತ್ತಿದ್ದೇವೆ ಸ್ವಾಮಿ.

ಶ್ರೀ ಎಂ. ವೀರಪ್ಪಮೊಯಿಲಿ : ನನ್ನ ತಪ್ಪು ಆದರೆ, ಆ ದಿವಸ ಗಲಾಟೆ ಮಾಡಿ ವಿಧಾನಸೌಧದ ಗೇಟ್ ಒಡೆಯಲಿಕ್ಕೆ ಮತ್ತು ಫ್ಲಾಗ್ ಪೋಸ್ಟ್‌ಗೆ ಹೋಗಿ ಜನತಾದಳದ ಬಾವುಟವನ್ನು ಸುತ್ತಲಿಕ್ಕೆ ಕಾರಣರಾದವರು ಯಾರು? ಮಾನ್ಯ ರಾಮಕೃಷ್ಣ ಹೆಗಡೆಯವರು ಹಿರಿಯರು ಮತ್ತು ಗೌರವಾನ್ವಿತರು, ಸ್ವಾತಂತ್ರ್ಯಯೋಧರು, ಅವರ ಮೇಲೆ *ಎಸೆಯುವಂತಹ ಪ್ರಸಂಗ ಬಂದುದಕ್ಕೆ ಆಗಲಿ, ನಾನು ತಪ್ಪು ಒಪ್ಪಿಕೊಳ್ಳುತ್ತೇನೆ. ನೀವು ಜ್ಯುಡಿಷಿಯಲ್ ಪ್ರೋಬ್ ಮಾಡಿ That's what I have said ನೀವು ನಮ್ಮ ಮೇಲೆ ಜವಬ್ದಾರಿ ಹಾಕುವುದಾದರೆ, I want a Judicial Prode on this. Let me suffer for what I have done.

ಏಕೆಂದರೆ ಮಾನ್ಯ ನಾಣಯ್ಯನವರೂ ಕೂಡ ಇದೇ ಮಾತನ್ನು ಹೇಳಿದರು. ನೀವು ಜವಾಬ್ದಾರಿಗಳು ಅಂಥ ಆದರೆ ನಾನು ಜವಬ್ದಾರನಾಗುವುದಕ್ಕೆ ತಯಾರಿದ್ದೇನೆ. All the more, Judicial Inquiry become more important.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಜ್ಯೂಡಿಷಿಯಲ್ ಎರಿನ್‌ಕ್ವೈಯರಿ ಮಾಡುವುದು ಒಳ್ಳೆಯದು. ಸತ್ಯಾಂಶ ಏನು ಎಂಬುದು ಹೊರಗಡೆ ಬರಲಿ, ಅವರ ಸಲಹೆ ಸರಿಯಾಗಿದೆ.

ಛೇರ್‌ಮನ್ : ಮಾನ್ಯ ರಾಮಕೃಷ್ಣ ಹೆಗಡೆಯವರು ಸದನದಲ್ಲಿ ಇಲ್ಲದಂತಹ ಸಂದರ್ಭದಲ್ಲಿ ಅವರ ಬಗ್ಗೆ ಮಾತನಾಡುವುದು ಸರಿಯಲ್ಲ. * ಎನ್ನುವ ಪದವನ್ನು ಪ್ರಸ್ತಾಪ ಮಾಡಿದ್ದೀರಿ. ಆ ಪದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜವಾಬ್ದಾರಿ ನಮ್ಮ ಸರ್ಕಾರದ್ದಾದರೆ, ಅದು ನಿಷ್ಕರ್ಷೆ ಆಗಬೇಕಾಗುತ್ತದೆ. ಜನತೆಗೆ ಒಂದು ಕತ್ತಲೆ ನೀಡುವುದಕ್ಕೆ ಆಗುವುದಿಲ್ಲ. Please impose responsibility. I am making a demand. At that time, I was Chief Minister. I am prepared to own the responsibility. I am demanding a Judicial probe on that.

ಯಾರು ತಪ್ಪಿತಸ್ಥರು, ಯಾರು ಜನ ತಂದರು, ಹೇಗೆ ಜನ ತಂದರು ಇದರ ಮೇಲೆ ವಿಚಾರಣೆಯಾಗಲಿ; ಇಲ್ಲ ಎಂದು ನಾನು ಕೈಹಾಕುತ್ತಾ ಇರಲಿಲ್ಲ. I never wanted to comment on it. Since you are blaming me, I want a Judicial probe.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವತ್ತು ಯಾವುದೇ ಸರ್ಕಾರ ಇರಲಿ, ಮೊಯಿಲಿಯವರ ಸರ್ಕಾರ ಇರಲಿ, ದೇವೆಗೌಡರವರ ಸರ್ಕಾರ ಇರಲಿ ಪ್ರಶ್ನೆ ಅದಲ್ಲ. ಪ್ರಶ್ನೆ ಈ ರಾಜ್ಯದ ಜನರಿಗೆ ಏನಾಗಿದೆ ಎನ್ನುವುದು ಗೊತ್ತಾಗಬೇಕು, ಸತ್ಯ ಹೊರಗಡೆ ಬರಬೇಕು, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಇದೊಂದು ಅಕ್ಷಮ್ಯ ಅಪರಾಧ; ನಾವು ತಲೆ ತಗ್ಗಿಸುವಂಥ ಘಟನೆ ಹನ್ನೊಂದನೇ ತಾರೀಖು ನಡೆದಿದೆ. ಅದಕ್ಕಾಗಿ ನ್ಯಾಯಾಂಗ ತನಿಖೆ ಆಗಬೇಕೆಂದು ವೀರಪ್ಪಮೊಯಿಲಿಯವರು ಹೇಳಿದ್ದುದು ಸರಿ ಇದೆ. ದಯಮಾಡಿ ಸಭಾನಾಯಕರು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಬೇಕು.

ಛೇರ್‌ಮನ್ : ತಾವು ಅಪರಾಧವಾಗಿದೆ ಎಂದು ಹೇಳುವುದು ತಮ್ಮ ಹಕ್ಕಾದರೆ, ಯಾವ ರೀತಿ ತನಿಖೆ ಮಾಡಿಸಬೇಕು ಎಂಬುದು ಸರ್ಕಾರದ ಹಕ್ಕಾಗಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ ; ನಾವು ಹೇಳುತ್ತಿದ್ದೇವೆ ಮಾನ್ಯ ಅಧ್ಯಕ್ಷರೇ, ತಾವು ಈ ಪೀಠದಲ್ಲಿ ಕುಳಿತುಕೊಂಡು ಹಾಗೆ ಹೇಳಿದರೆ ಹೇಗೆ? ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಹಾಗೆ ಹೇಳುವುದಕ್ಕೆ ಆಗುವುದಿಲ್ಲ, ನಮಗೆ ಕೇಳುವ ಹಕ್ಕು ಇದೆ.

ಛೇರ್‌ಮನ್ : ತಮಗೆ ಕೇಳುವ ಹಕ್ಕು ಇದೆ, ಅದನ್ನು ತನಿಖೆ ಮಾಡುವ ಹಕ್ಕು ಸರ್ಕಾರಕ್ಕೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ : ಅಷ್ಟು ಸುಲಭವಾಗಿ ತಾವು ಪರಿಗಣಿಸಬಾರದು. ಅವರು ಆ ದಿವಸದ ಗಲಾಟೆಗೆ ಜವಾಬ್ದಾರಿ ವಹಿಸಿಕೊಳ್ಳಬೇಕು. They must own the responsibility. If they do not own the responsibility and want to shift the responsibility on the previous Government, I would like that I must suffer for it. I want a Judicial probe and there is no other via media. I never wanted to comment on these things.

ಆದರೆ ಈ ತರಹದ ಉತ್ತರವನ್ನು ಏಕೆ ಹೇಳುತ್ತೀರಿ. ಶ್ರೀಮಾನ್ ನಾಣಯ್ಯನವರು ಹೇಳಿದರು ನಮ್ಮ ಜವಾಬ್ದಾರಿಯಲ್ಲ ಹಿಂದಿನ ಸರ್ಕಾರ ಆಲ್‌ರೈಟ್ ಹಿಂದಿನ ಸರ್ಕಾರದ ಮೇಲೆ ಗೂಬೆ ಕೂಡಿಸತಕ್ಕಂಥ ಒಂದು ಅಪೇಕ್ಷೆ ನಿಮಗಿದ್ದರೆ, you do it. I have nothing to hide. If you have nothing to hide, order for a Judicial probe; otherwise, I will have to conclude that you have something to suppress or something to hide ಎಂದು ಹೇಳಿ ನಾನು ನಿರ್ಣಯ ಮಾಡಿಕೊಳ್ಳಬೇಕಾಗುತ್ತದೆ. ಅದರ್ ವೈಸ್ ಈ ನಿಮ್ಮ ವಿವಾದದಲ್ಲಿ ನಾವು ಅಡ್ಡ ಬರುವುದು ಬೇಡಾಂದು ನನ್ನ ಅಪೇಕ್ಷೆ ಇತ್ತು. ಆದರೆ ಯಾವಾಗ ಅಲ್ಲಿ ಸನ್ಮಾನ್ಯ ನಾಣಯ್ಯನವರು ಈ ಮಾತನ್ನು ಹೇಳಿದರು ತಾವು ಇವತ್ತು ರಿಪೀಟ್ ಮಾಡುತ್ತಿದ್ದೀರಿ, ನಮ್ಮ ಜವಾಬ್ದಾರಿಯಲ್ಲ ನಮ್ಮ ಸರ್ಕಾರ ಬರಲಿಲ್ಲ ಎಂದು, then it needs a judicial probe and not less than that, otherwise, please own the responsibility for it.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಕೋಲಾರದ ಪ್ರಕರಣದ ಬಗ್ಗೆ ಮಾತನಾಡುತ್ತಿದ್ದೆ. ತಮಗೆ ಗೊತ್ತಿರುವ ಹಾಗೆ ಕೋಲಾರದಲ್ಲಿ ಸುಮಾರು ಒಂದು ವರ್ಷದ ಹಿಂದೆ ಹರಟಿ ಗ್ರಾಮದಲ್ಲಿ ನಡೆದಂಥ ಪ್ರಕರಣ ಆಮೇಲೆ ದ್ವೇಷ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಆ ದ್ವೇಷ ಮತ್ತೆ ಅದೇ ವ್ಯಕ್ತಿಗಳು ಚುನಾವಣೆಯ ನಿಮಿತ್ತವಾಗಿ ಗಲಾಟೆ ಮಾಡಿರತಕ್ಕಂಥದ್ದು. ಮಾನ್ಯ ಅಧ್ಯಕ್ಷರೇ, ಇಷ್ಟನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಗೌರವಾನ್ವಿತ ಕೆಲವು ಸದಸ್ಯರುಗಳು ಈ ಸರ್ಕಾರದ ಮೇಲೆ ಆಪಾದನೆಯನ್ನು ಮಾಡಿದ್ದಾರೆ, ಈ ಸರ್ಕಾರ ಬಂದಮೇಲೆ ಪೊಲೀಸರು ನಿಷ್ಕ್ರಿಯವಾಗಿಲ್ಲ, ಯಾರು ಕಾನೂನನ್ನು ಬಿಟ್ಟು ನಡೆದಿದ್ದಾರೆ ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದು ಗಂಡಿಸಿ ಇರಬಹುದು, ಕೋಲಾರ ಇರಬಹುದು, ರಾಮನಗರ ಆಗಿರಬಹುದು, ಮತ್ತೊಂದು ಇರಬಹುದು ಪ್ರತಿಯೊಂದು ಊರಿನಲ್ಲಿಯೂ ಸಹಿತ ಕಾನೂನು ಪ್ರಕಾರವಾಗಿ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದುವರೆವಿಗೂ ನಾನು ಪ್ರಾಮಾಣಿಕವಾದ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಪ್ರತಿಯೊಂದು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ವಿಶೇಷವಾದ ಆಜ್ಞೆಯನ್ನು ಮಾಡಿದ್ದಾರೆ. ಅದು ನಮ್ಮದೆ ಪಕ್ಷದವರು ಆಗಿರಲಿ, ಅಥವಾ ಯಾವುದೇ ಪಕ್ಷದವರು ಆಗಿರಲಿ ಯಾರು ತಪ್ಪನ್ನು ಮಾಡಿದ್ದಾರೆ ಅವರಿಗೆ ಶಿಕ್ಷೆಯನ್ನು ಕೊಡಲೇಬೇಕು ಎನ್ನತಕ್ಕಂಥದ್ದನ್ನು

ಹೇಳಿದ್ದಾರೆ. ಗಂಡಸಿಯಲ್ಲಿ ನಡೆದಿರತಕ್ಕಂಥ ಘಟನೆಗಳು ಏನಿವೆ ಆ ಘಟನೆ ಬಗ್ಗೆ ಪ್ರತಿಯೊಂಬ ಅಕ್ಯೂಸ್ಡ್ ಅನ್ನೂ ಸಹಿತ ನಾವು ಅರೆಸ್ಟ್ ಮಾಡಿದ್ದೇವೆ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಎಸ್ಪಿ ಯವರು, ಡಿಸಿಯವರು ಅಲ್ಲಿಗೆ ತಕ್ಷಣ ಹೋಗಿದ್ದಾರೆ. ಅಸಿಸ್ಟೆಂಟ್ ಕಮೀಷನರ್ರವರು ಅಲ್ಲಿಯೇ ಇದ್ದಾರೆ. ಅದು ಮುಖ್ಯ ಮಂತ್ರಿಗಳ ಸ್ವಂತ ಜಿಲ್ಲೆ ಎಂದು ವಿಶೇಷವಾದ ಕ್ರಮವನ್ನು ತೆಗೆದುಕೊಂಡು ಮಾಡಿದ್ದೇವೆ. ರಾಮನಗರದಲ್ಲಿ ದಸ್ತಗಿರಿಯಾಗಿದೆ. ಬೇಲ್ ಮೇಲೆ ಅವರು ಹೊರಗಡೆ ಬಂದಿರಬಹುದು ಅದಕ್ಕೆ ನಾವೇನೂ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗ ಬಸವನಪುರ ಎನ್ನತಕ್ಕಂಥ ಗ್ರಾಮ, ಅದು ಹಳೇ ದ್ವೇಷ ಇರತಕ್ಕಂಥದ್ದೆ. ಅದೇ ಅಪರೂಪ, ಅದೇ ದೂರು. ಇದನ್ನು ಈ ರೀತಿ ಉಪಯೋಗಿಸಿಕೊಂಡಿದ್ದಾರೆ. ಆದ್ದರಿಂದಾಗಿ ಈ ಒಂದು ಚುನಾವಣೆಗಳ ನಂತರ, ಹಾಗೆ ನೋಡಿದರೆ ಮಾನ್ಯ ಅಧ್ಯಕ್ಷರೆ, ಹಿಂದೆ ನಡೆದಿರತಕ್ಕಂಥ ಚುನಾವಣೆಗಳು ಏನಿವೆ ಮಹಾಚುನಾವಣೆಗಳು, ಆ ಸಂದರ್ಭದಲ್ಲಿ ನಡೆದಿರತಕ್ಕಂಥ ಹಿಂಸಾಚಾರದ ಘಟನೆಗಳಿಗೆ ಹೋಲಿಕೆ ಮಾಡಿಕೊಂಡು ನೋಡಿದರೆ ಇದು ಏನೂ ಇಲ್ಲ ಎಂದು ಹೇಳಬಹುದು.

ಇದು ಸೊನ್ನೆ ಎಂದು ಹೇಳಿದರೂ ತಪ್ಪಾಗುವುದಿಲ್ಲ. ಆದರೆ ಅಲ್ಲಿ ನಡೆದಿರುವುದನ್ನು ನಾನು ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಇವತ್ತೂ ಅದನ್ನೇ ಹೇಳುತ್ತೇನೆ. ಮಾನ್ಯ ಸಭಾ-ನಾಯಕರೂ ಅದೇ ಕೆಲಸವನ್ನೇ ಮಾಡಿದ್ದಾರೆ. ನೀವು ಹೊಣೆ ಎಂದು ಹೇಳಿ ನಾನು ಜಾರಿಕೊಳ್ಳುವುದಕ್ಕೇ ತಯಾರಿಲ್ಲ. ತಾವು ಮುಖ್ಯ ಮಂತ್ರಿಗಳು, ಇದು ತಮ್ಮ ಜವಾಬ್ದಾರಿ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ತಾವು ಹೇಳಿದಂತೆ ಒಂದು ಆದೇಶ ಹೋಗಬೇಕಾಗುತ್ತದೆ. ಈ ರೀತಿಯ ಹಿಂಸಾಚಾರ, ದ್ವೇಷ ಮನೋಭಾವನೆಯನ್ನು ಬಿಟ್ಟು ದೇಶದ ಅಭಿವೃದ್ಧಿಯ ಕಡೆಗೆ ಗಮನವನ್ನು ಕೊಡಬೇಕಾಗುತ್ತದೆ. ಈಗ ಇದೆಲ್ಲಾ ಒಂದು ಹಂತಕ್ಕೆ ಬರುತ್ತಿದೆ ಎಂಬುದು ನನಗೂ ಗೊತ್ತಿದೆ. ಕಳೆದ 8-10 ದಿನಗಳಿಂದ ಈ ರಾಜ್ಯದಲ್ಲಿ ದ್ವೇಷ ಮನೋಭಾವನೆ ಕಡಿಮೆಯಾಗುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಈ ಕಡೆ ಮತ್ತು ಆ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರುಗಳ ಅನುಭವ ಇದು. ಪಂಚಾಯಿತಿ ಚುನಾವಣೆಗಳನ್ನು ನಾವು ಪಕ್ಷದ ಆಧಾರ ಮೇಲೆ ಮಾಡಲಿಲ್ಲ. ಆದರೂ ಪಕ್ಷದ ಹೆಸರಿನಲ್ಲೇ ಅದು ನಡೆಯಿತು. ಇಷ್ಟೊಂದು ದ್ವೇಷಾಸೂಯೆಗಳು ಆ ಸಂದರ್ಭದಲ್ಲಿ ಉಂಟಾದವು? ಸುಮಾರು ಒಂದೆರಡು ವರ್ಷಗಳ ಕಾಲ ನಾವು ಹಳ್ಳಿಗಳಿಗೇ ಹೋಗುವುದಕ್ಕಾಗುತ್ತಿರಲಿಲ್ಲ, ಅಂಥ ಪರಿಸ್ಥಿತಿ ಉದ್ಭವವಾಗಿತ್ತು.

ಶ್ರೀ ಎಂ.ವೈ. ಘೋರ್ಪಡೆ : ನಮ್ಮ ಕರ್ನಾಟಕದಲ್ಲಿ ಪಂಚಾಯಿತಿ ಚುನಾವಣೆಗಳು ಎಷ್ಟು ಶಾಂತಿಯುತವಾಗಿ ಕಳೆದ ಸಾರಿ ನಡೆಯಿತು. ಬಹುಶಃ ಈ ಹಿಂದೆ ಈ ರಾಜ್ಯದಲ್ಲಾಗಲಿ, ಬೇರೆ ರಾಜ್ಯಗಳಲ್ಲಾಗಲಿ. ಅಷ್ಟು ಶಾಂತಿಯುತವಾಗಿ ಚುನಾವಣೆಗಳು ನಡೆದಿಲ್ಲವೆಂಬುದು ತಮಗೆ ಗೊತ್ತಿರತಕ್ಕ ವಿಚಾರ. ಅಷ್ಟೊಂದು ಶಾಂತಿ, ಸಾಮರಸ್ಯದಿಂದ ಚುನಾವಣೆಗಳು ನಡೆದುವು. ಎಲ್ಲೋ ಒಂದೆರಡು ಕಡೆ ಘರ್ಷಣೆಗಳು ಆ ಸಂದರ್ಭದಲ್ಲಿ ಆಗಿರಬಹುದು. ಒಟ್ಟಾರೆ ಹೇಳುವುದಾದರೆ ಬಹಳ ಶಾಂತಿಯುತವಾಗಿ, ಉತ್ಸಾಹಪೂರಿತವಾಗಿ ಚುನಾವಣೆಗಳು ಏನು ನಡೆದುವು ಅದನ್ನು ನಾವು ಸ್ವಾಗತಿಸಬೇಕು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಆ ಪಂಚಾಯಿತಿ ಚುನಾವಣೆಗಳು ಪಕ್ಷಾತೀತವಾಗಿ ನಡೆದುದು. ತಾವು ಪದೇ ಪದೇ ಈ ಗ್ರಾಮಪಂಚಾಯಿತಿ ಚುನಾವಣೆಗಳ ಬಗ್ಗೆ ಮಾತನಾಡುವುದಾದರೆ ಅಥವಾ ಈ ರೀತಿ ಟೀಕೆ ಮಾಡುವುದು ಸಮಂಜಸವಾದುದಲ್ಲ ಮತ್ತು ವಸ್ತುಸ್ಥಿತಿಯೂ ಅಲ್ಲವೆಂದು ಹೇಳಬಯಸುತ್ತೇನೆ. ಆದರೆ ಕೇವಲ ಪ್ರಸಂಸೆಗೋಸ್ಕರ ಮಾತನಾಡಬಹುದೆಂದು ಹೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಘೋರ್ಪಡೆಯವರನ್ನಾಗಲಿ, ಅಥವಾ ಪಂಚಾಯಿತಿ ಚುನಾವಣೆಗಳನ್ನಾಗಲಿ ಟೀಕೆ ಮಾಡಲಿಲ್ಲ, ನಾನು ಇಲ್ಲಿ ಜನತಾ ದಳದ ವಕ್ತಾರನಾಗಿ ಮಾತನಾಡುತ್ತಿಲ್ಲ, ಈ ರಾಜ್ಯದ ಗೃಹ ಇಲಾಖೆಯ ಮಂತ್ರಿಯಾಗಿ ನಾನು ಮಾತನಾಡುತ್ತಿದ್ದೇನೆ. ಗೃಹ ಇಲಾಖೆಯಲ್ಲಿರತಕ್ಕ ಅಂಕಿಅಂಶಗಳ ಆಧಾರದಮೇಲೆ ನಾನು ಮಾತನಾಡಬೇಕಾಗಿದೆ. ಅದರ ಪ್ರಕಾರ ಇರತಕ್ಕ ವಿಚಾರವನ್ನು ನಾನು ಹೇಳಿದ್ದೇನೆ. ನಾವೂ ಕೂಡ ಪಕ್ಷಾತೀತವಾಗಿ ನಡೆದಿದೆ ಎಂದೇ ಹೇಳಿರತಕ್ಕದ್ದು. ಆದರೆ ಅಲ್ಲಿ ವಸ್ತುಸ್ಥಿತಿಯಾಗಿ ನಡೆದಿರುವುದಾದರೂ ಏನು? ಈ ಮಾತನ್ನು ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ.

ಇನ್ನು ಡಿಸೆಂಬರ್ 11ನೇ ತಾರೀಖು ಈ ಬೆಂಗಳೂರಿನ ವಿಧಾನ ಸೌಧದ ಮುಂದೆ ಹಾಗೂ ನಮ್ಮ ಪಕ್ಷದ ಕಾರ್ಯಾಲಯದ ಮುಂದೆ ನಡೆದಂಥ ಘಟನಾವಳಿಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ವೈಯುಕ್ತಿಕವಾಗಿ, ಮಾನ್ಯ ಸಭಾ ನಾಯಕರೂ ಅತ್ಯಂತ ವಿನಯದಿಂದ ಕ್ಷಮೆಯನ್ನು ಕೇಳಿದ್ದಾರೆ. ಅನೇಕ ಸಂದರ್ಭದಲ್ಲಿ ಅನೇಕ ಉದಾಹರಣೆಗಳನ್ನು ನಾವು ಕೊಡಬಹುದು. ಇದರ ಬಗ್ಗೆ ನಾನು ಏನನ್ನೂ ಹೇಳುವುದು ಸರಿಯಾಗುವುದಿಲ್ಲ, ಕಾರಣ ಈ ಘಟನೆ ವಿಚಾರಣಾ ಹಂತದಲ್ಲಿರುವಾಗ ನೀವು ಏನು ಫೈಂಡಿಂಗ್ಸ್ ಕೊಡುತ್ತೀರಿ ಎಂಬ ಮಾತೂ ಬರುತ್ತದೆ. ಇದರ ಬಗ್ಗೆ ಪೋಲೀಸ್ ಕಮೀಷನ್‌ರವರ ಮೂಲಕ ವಿಚಾರಣೆಯನ್ನು ನಡೆಸಿ ಒಂದು ವರದಿಯನ್ನು ಕಳುಹಿಸಿಕೊಡುವಂತೆ ನಾವು ಪೋಲೀಸ್ ಇಲಾಖೆಯ ಮಹಾ ನಿರ್ದೇಶಕರಿಗೆ ಹೇಳಿದ್ದೇವೆ. ಇದರಲ್ಲಿ ಮುಚ್ಚಿಡುವಂಥ ವಿಚಾರ ಏನೂ ಇಲ್ಲ, ಮಾನ್ಯ ಸದಸ್ಯರು ಈ ಸರ್ಕಾರದಲ್ಲಿ ವಿಶ್ವಾಸವನ್ನು ಇಡಬೇಕು. ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತೇವೆ. ಈಗಾಗಲೇ ಪೋಲೀಸ್ ಇಲಾಖೆಯ ಎಲ್ಲಾ ಮುಖ್ಯಸ್ಥರಿಗೂ ಆದೇಶ ನೀಡಿ ಕಾನೂನು ಪ್ರಕಾರ ಕೆಲಸ ಮಾಡಬೇಕೆಂದು ತಿಳಿಸಿದ್ದೇವೆ. ಅದರ ಪ್ರಕಾರ ನಾವು ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಗೃಹ ಇಲಾಖೆಯ ಬಗ್ಗೆ ಏನು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ ಅವೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಅದನ್ನು ಕಾರ್ಯ ರೂಪಕ್ಕೆ ತರುವುಗಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ ಇಷ್ಟು ಮಾತನಾಡಲು ಕಾಲಾವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಸವದತ್ತಿಯಲ್ಲಿ ನಡೆದ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಗೃಹ ಮಂತ್ರಿಗಳು ಏನನ್ನೂ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಗೌರವಾನ್ವಿತ ಸದಸ್ಯರು ಸವದತ್ತಿಯಲ್ಲಿ ಹಾಡುಹಾಗಲೇ ನಡೆದಂಥ ಕೊಲೆಯ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರುವ ಮಾನ್ಯ ಗೃಹ ಮಂತ್ರಿಗಳು ಈ ವಿಚಾರ ನನ್ನ ಗಮನಕ್ಕೆ ಬಂದಿದೆ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಒಂದೇ ಒಂದು ಶಬ್ದವನ್ನೂ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಸವದತ್ತಿಯಲ್ಲಿ ನಡೆದಿರತಕ್ಕ ಕೊಲೆಯ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಅದು ಚುನಾವಣೆಗೆ ಸಂಬಂಧಪಟ್ಟ ಘರ್ಷಣೆ ಅಲ್ಲ. ಒಂದು ವೇಳೆ ಅದು ಚುನಾವಣೆಗೆ ಸಂಬಂಧಪಟ್ಟ ವಿಚಾರವಾಗಿದ್ದರೆ ಅದರ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬಿಲ್ಲದ : ಅಲ್ಲಿನ ಜನರು ಇದರ ಬಗ್ಗೆ ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕೆಂದು ಮಾನ್ಯ ಗೃಹಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿಕೊಂಡಿರುವುದರಿಂದ ಇದನ್ನು ಸಿ.ಓ.ಡಿ ಯಿಂದ ತನಿಖೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಗೃಹ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದು ಚುನಾವಣೆಗೆ ಸಂಬಂಧಪಟ್ಟದ್ದುದೇ ಅಥವಾ ಅಲ್ಲ ಎಂದು ಯಾವುದನ್ನೂ ನಾವು ಮುಂಚಿತವಾಗಿಯೇ ಹೇಳುವುದಕ್ಕೆ ತಯಾರಿಲ್ಲ, ಆದರೂ ಸ್ಪಷ್ಟವಾದ ವಿಚಾರ ಗೊತ್ತಾಗಬೇಕಾದರೆ ಇದನ್ನು ಸಿ.ಓ.ಡಿ.ಗೆ ವಹಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾನಿರ್ಣಯಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಪರ ಮತ್ತು ವಿರೋಧವನ್ನು ಸೂಚಿಸಿ ಸುಮಾರು 24 ಜನ ಮಾನ್ಯ ಸದಸ್ಯರು ಹಲವರು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಸರ್ಕಾರದ ವೈಫಲ್ಯತೆಯನ್ನು ಬಗ್ಗೆ ಕಳೆದ 15-20 ದಿನಗಳಲ್ಲಿ ಈ ಸರ್ಕಾರ ಎಲ್ಲಿ ಎಡವಿದೆ ಎಂಬ ಬಗ್ಗೆ ಮತ್ತು ಸರ್ಕಾರಕ್ಕೆ ಒಳ್ಳೆಯ ಮಾರ್ಗದರ್ಶನವನ್ನು ಮಾಡುವ ಹಿನ್ನೆಲೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ದಿಸೆಯಲ್ಲಿ ಸರ್ಕಾರ ಕಳೆದ 15-20 ದಿನದಲ್ಲಿ ದಾರಿ ತಪ್ಪಿ ನಡೆದಿದೆ ಎಂದು ಅವರು ಕೊಟ್ಟಿರತಕ್ಕ ಎಲ್ಲಾ ಸಲಹೆಗಳನ್ನೂ ನಾನು ಸ್ವಾಗತ ಮಾಡುತ್ತೇನೆ.

(ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಹೆಚ್.ಡಿ. ದೇವೇಗೌಡ : ಕಳೆದ 20 ದಿನದಲ್ಲಿ ಈ ಸರ್ಕಾರ ಎಲ್ಲಾದರೂ ಎಡವಿದ್ದರೆ ಅವರು ಮಾಡಿರುವ ಟೀಕೆಯನ್ನು ಸ್ವಾಗತಿಸುವ ಉದ್ದೇಶ ಏನೆಂದರೆ, ಮುಂದೆ ನಾವು ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರದ ನೀತಿ ಏನೆಂದು ಕೇಳಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 20 ದಿನದಲ್ಲಿ ಸರ್ಕಾರದ ನೀತಿ ಏನೆಂಬುದನ್ನು ಸ್ಪಷ್ಟವಾಗಿ ಸಮಗ್ರವಾಗಿ ಜನತೆಯ ಮುಂದೆ ಇಡುವುದಕ್ಕೆ ಸಾಧ್ಯವಿಲ್ಲ, 1995-96ನೇ ಸಾಲಿನಲ್ಲಿ ಮತ್ತೆ ಈ ಸದನ ಸಮಾವೇಶಗೊಳ್ಳುತ್ತದೆ. ಅವತ್ತು ಈ ಸರ್ಕಾರ ತನ್ನ ಆಮೂಲಾಗ್ರ ನೀತಿಯನ್ನು ತಿಳಿಸುತ್ತದೆ. ಆದರೆ ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕದ್ದು ಮೊದಲನೇ ಜಂಟಿ ಅಧಿವೇಶದನಲ್ಲಿ ಮಾಡಬಹುದು, ಇಲ್ಲವೇ ಜನವರಿ ತಿಂಗಳಲ್ಲಿ ಬೇಕಾದರೂ ಮಾಡಬಹುದು. 1994-95ರ ಸಾಲಿನಲ್ಲಿ ಮಾನ್ಯ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ ಅದು ಇನ್ನೂ 3 ತಿಂಗಳ ಕಾಲ ಸ್ವಲ್ಪಮಟ್ಟಿಗೆ ಜೀವಂತವಾಗಿದೆ. ಆದರೆ ಇವತ್ತು ಈ ಸದನ ಸೇರಿರುವುದು ಹೊಸದಾಗಿ ಚುನಾವಣೆ ಆದ ಪ್ರಯುಕ್ತ ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ನೂತನವಾಗಿ ಆಯ್ಕೆಯಾಗಿರತಕ್ಕ ಎಲ್ಲಾ ಸದಸ್ಯರುಗಳ ಪ್ರಮಾಣವಚನವನ್ನು ಸ್ವೀಕಾರ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಸದನ ಸೇರಿದೆ. ಮಾನ್ಯ ರಾಜ್ಯಪಾಲರು ಎರಡೂ ಸದನಗಳ ಸದಸ್ಯರನ್ನುದ್ದೇಶಿಸಿ ಮಾತನಾಡಿದ್ದಾರೆ.